₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ
ಸೋಮವಾರ 26.08.2024 **ಸಂಪುಟ:** 09 **ಸಂಚಿಕೆ:** 245 **ಪುಟಗಳು:** 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕೃಷ್ಣಾಷ್ಟಮಿ ಶುಭಾಶಯಗಳು

ಪುಟ ತೆರೆದಂತೆ...

ವಿಜಯೇಂದ್ರ ವಿರುದ್ಧ ಅಕ್ಟೋಬರ್ ಕ್ರಾಂತಿ?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ಅರುಣಾ, ಅಭಯಾ, ಹೆಸರು ಮಾತ್ರ ಬೇರೆ!
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹೈನ್
ಸಂ.ಗಮ | 7

ಮಾತಂದ್ರೆ ಮಾತು

ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಪ್ರಶ್ನೆಯೇ ಇಲ್ಲ. ಸಿದ್ದರಾಮಯ್ಯ ಭ್ರಷ್ಟ ಎಂದರೆ ಯಾರೂ ನಂಬುವುದಿಲ್ಲ. ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳು ಜಾರಿಗೆ ಬಂದ ನಂತರ ಸಿದ್ದರಾಮಯ್ಯ ಅವರ ಜನಪ್ರಿಯತೆ ಹೆಚ್ಚಿದೆ. ಇದು ಬಿಜೆಪಿಯ ಭೀತಿಗೆ ಕಾರಣವಾಗಿದೆ.

ಕೆ.ಸಿ.ವೇಣುಗೋಪಾಲ್
ಎಐಸಿಸಿ ಪ್ರಧಾನ ಕಾರ್ಯದರ್ಶಿ

ದಾರಿದೀಪೋಕ್ತಿ

ನಾನು ಸೋಲುತ್ತೇನೆ ಎಂಬುದು ನಮಗೆ ಭಯವಾಗಿ ಕಾಡಬಾರದು. ಆದರೆ ನನಗೆ ಉಪಯುಕ್ತವಾಗದ ವಿಷಯ ಅಥವಾ ಕ್ಷೇತ್ರಗಳಲ್ಲಿ ಜಯ ಗಳಿಸುವುದು ನಮ್ಮ ಉದ್ದೇಶ ಅಥವಾ ಹೋರಾಟ ಆಗಬಾರದು. ಅದರಿಂದ ನಮಗೆ ಯಾವ ಪ್ರಯೋಜನವೂ ಇಲ್ಲ.

ವಕ್ರತುಂಡೋಕ್ತಿ

ಟಿವಿಯಲ್ಲಿ ಒಂದು ಸುದ್ದಿಯ ಮಹತ್ವ ಟಿವಿ ನಿರೂಪಕರು ಎಷ್ಟು ಗಟ್ಟಿ ಕಿರುಚುತ್ತಾರೆ ಎಂಬುದನ್ನು ಆಧರಿಸಿರುತ್ತದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಅನಾರೋಗ್ಯಕ್ಕಾಗಿ ಒಂದೇ ವರ್ಷದಲ್ಲಿ ಕೋಟ್ಯಂತರ ರೂ ಸರ್ಕಾರದಿಂದ ಕ್ಲೇಮ್ ಮಾಡಿಕೊಂಡ ಶಾಸಕರು



ಭರಚುಕ್ಕಿ ಜಲಪಾತದಲ್ಲಿ ರುದ್ರ ರಮಣೀಯ ದೃಶ್ಯ ಸೃಷ್ಟಿಯಾಗಿದ್ದು, ಹಾಲ್ನೊರೆಯಂತೆ ಧುಮ್ಮಿಕ್ಕುತ್ತಿರುವ ಜಲಸಿರಿಯ ವೈಭೋಗ ಡ್ರೋಣ್ ಕ್ಯಾಮೆರಾದಲ್ಲಿ ಸೆರೆಯಾಗಿದ್ದು ಹೀಗೆ. **ಚಿತ್ರ: ವಿಶ್ವೇಶ್ವರ ಭಟ್**

ರೌಡಿಶೀಟರ್‌ಗಳ ಜತೆ ದರ್ಶನ್ ಸಿಗರೇಟ್ ಸೇದುತ್ತಿರುವ ಫೋಟೊ ವೈರಲ್
ಆಂತರಿಕ ತನಿಖೆಗೆ ಆದೇಶ; ರಾಜಾತಿಥ್ಯ ನೀಡಿದ ಜೈಲಾಧಿಕಾರಿಗಳಿಗೆ ಸಂಕಷ್ಟ

ಪರಪ್ಪನ ಅಗ್ರಹಾರ ದಾಸನ ದರ್ಬಾರ್

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪ್ರಮುಖ ಆರೋಪಿ ದರ್ಶನ್‌ಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ರಾಜಾತಿಥ್ಯ ಸಿಗುತ್ತಿರುವ ಆರೋಪಕ್ಕೆ ಪುಷ್ಟಿ ನೀಡುವ ಫೋಟೋ ಇದೀಗ ಭಾರಿ ವಿವಾದಕ್ಕೆ ಕಾರಣವಾಗಿದೆ.

ಪರಪ್ಪನ ಅಗ್ರಹಾರ ಜೈಲಿ ನಲ್ಲಿ ಭಾನುವಾರ ದರ್ಶನ್ ಸ್ಪೆಷಲ್ ಬ್ಯಾರಕ್‌ನಿಂದ ಹೊರ ಬಂದು ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ, ನಾಗರಾಜ್ ಎಂಬುವವರೊಂದಿಗೆ ಕೈಯಲ್ಲಿ ಸಿಗರೇಟ್, ಕಾಫಿ ಹಿಡಿದು ಕುಳಿತಿರುವ ಫೋಟೋ ವೈರಲ್ ಆಗಿದೆ. ಕಾಫಿ, ಸಿಗರೇಟ್ ಜತೆಗೆ ಇನ್ನಾವ ಸೌಕರ್ಯಗಳು ದರ್ಶನ್‌ಗೆ ಸಿಗುತ್ತಿದೆ ಎನ್ನುವ ಅನುಮಾನ ಶುರುವಾಗಿದೆ. ಇದರ ಬೆನ್ನಲ್ಲೇ, ಈ ಪ್ರಕರಣ ಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆಗೆ ಕಾರಾಗೃಹ ಡಿಜಿ ಮಾಲಿನಿ ಕೃಷ್ಣಮೂರ್ತಿ ಆದೇಶ ಹೊರಡಿಸಿದ್ದಾರೆ.

ವಿಐಪಿ ಸೆಲ್‌ನಲ್ಲಿದ್ದರೂ ನಟ ದರ್ಶನ್ ಮತ್ತು ವಿಲ್ಸನ್ ಗಾರ್ಡನ್ ನಾಗ ಎಲ್ಲಿ ಬೇಕಾದರೂ ತಿರುಗಾಡಬಹುದಿತ್ತು. ಜತೆಗೆ ಕೆಲ ಕೈದಿಗಳನ್ನೂ ದರ್ಶನ್ ಸಹಾಯಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಜೈಲಾಧಿಕಾರಿಗಳು ಯಾರೂ ಪ್ರಶ್ನೆ ಮಾಡುತ್ತಿರಲಿಲ್ಲ ಎಂಬ ಮಾತುಗಳು ಇದೀಗ ಕೇಳಿಬರುತ್ತಿವೆ. ಆರಂಭದ ಕೆಲದಿನ ಜೈಲಿ ನಲ್ಲಿ ಮಂಕಾಗಿದ್ದ ದರ್ಶನ್ ಇತ್ತೀಚೆಗೆ, ಜೈಲಿಗೆ ಒಗ್ಗಿಕೊಳ್ಳುತ್ತಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿವೆ. ಆದರೀಗ ಕೈಯಲ್ಲಿರುವ ಸಿಗರೇಟ್ 'ಸಂಪೂರ್ಣ'ವಾಗಿ ಒಗ್ಗಿಕೊಂಡಿದ್ದಾರೆ ಎನ್ನುವ ಆರೋಪಕ್ಕೆ ಪುಷ್ಟಿ ಸಿಕ್ಕಿದೆ. ಈ ಫೋಟೋವನ್ನು ವೇಲು ಎಂಬ ಕೈದಿ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾನೆ. ಜೈಲಿನಲ್ಲಿರುವ ವೇಲು ತನ್ನ ಹೆಂಡತಿಗೆ ಫೋಟೊ ಕಳಿಸಿದ್ದು, ನಂತರ ಬಹಿರಂಗ ವಾಗಿದೆ ಎನ್ನಲಾಗಿದೆ.

ಫೋಟೊ ನೋಡಿ ಶಾಕ್ ಆಯ್ತು. ಅತನಿಗೆ, ತಪ್ಪು ಮಾಡಿದ್ದೇನೆ ಎಂಬ ಭಾವನೆ ಇಲ್ಲ. ಪೊಲೀಸರು ಹಾಗೂ ನ್ಯಾಯಾಂಗದ ಮೇಲೆ ನಂಬಿಕೆ ಇದೆ. ಆ ನಂಬಿಕೆ ಉಳಿಸಿಕೊಳ್ಳಬೇಕು. ಜೈಲು ಜೈಲಾಗಿರ ಬೇಕು, ರೆಸಾರ್ಟ್ ಆಗಬಾರದು. ಪ್ರಕರಣ ಸಿಬಿಐಗೆ ಕೊಟ್ಟಿದ್ದರೆ ವಾಸಿ ಎಂದು ಈಗ ಅನಿಸುತ್ತಿದೆ.
- ಕಾಶಿನಾಥಯ್ಯ ಶಿವನಗೌಡರ್
ರೇಣುಕಾಸ್ವಾಮಿ ತಂದೆ

ನಾಗನೇ ದರ್ಶನ್ ರಾಜಾತಿಥ್ಯಕ್ಕೆ ಉಸ್ತುವಾರಿ

ದರ್ಶನ್‌ನನ್ನು ವಿಐಪಿ ಸೆಕ್ಯುರಿಟಿ ಸೆಲ್-1ನಲ್ಲಿ ಹಾಗೂ ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗನನ್ನು ಬ್ಯಾರಕ್-3 ರಲ್ಲಿ ಇರಿಸಲಾಗಿದೆ. ಹೀಗಿದ್ದರೂ ಜೈಲಲ್ಲಿ ದರ್ಶನ್-ನಾಗನ ಭೇಟಿಯಾಗಿದೆ. ನಾಗನೇ ದರ್ಶನ್ ರಾಜಾತಿಥ್ಯಕ್ಕೆ ಉಸ್ತುವಾರಿಯಾಗಿದ್ದಾನೆ. ಸಾಮಾನ್ಯ ಕೈದಿಗಳಿಗೆ ಒಂದು ರೀತಿಯ ಊಟವಿದ್ದರೆ, ದರ್ಶನ್‌ಗೆ ವಿಶೇಷ ಊಟ, ಬಿಸಿ ನೀರು, ಮೊಟ್ಟೆ, ಹಾಲು, ಸಿಗರೇಟ್, ವಿಶೇಷ ಹಾಸಿಗೆ ಕೂಡ ವ್ಯವಸ್ಥೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ದರ್ಶನ್ ವಿಡಿಯೊ ಕರೆ ವೈರಲ್

ಫೋಟೋ ಬೆನ್ನಲ್ಲೆ ದರ್ಶನ್ ತನ್ನ ಆಪ್ತರೊಬ್ಬರಿಗೆ ವಿಡಿಯೊ ಕರೆ ಮಾಡಿರುವುದು ಬೆಳಕಿಗೆ ಬಂದಿರುವುದು ಕುತೂಹಲ ಮೂಡಿಸಿದೆ. ಇದರಿಂದ ನಟ ದರ್ಶನ್‌ಗೆ ಇನ್ನಷ್ಟು ಸಂಕಷ್ಟ ಎದುರಾಗಲಿದೆ. ಜೈಲಿನಲ್ಲಿದ್ದ ಮತ್ತೊಬ್ಬ ಕೈದಿ ವಿಡಿಯೊ ಕಾಲ್ ಮಾಡಿ ನಟ ದರ್ಶನ್ ಅವರಿಗೆ ಕೊಟ್ಟಿದ್ದಾರೆ. ಈ ವೇಳೆ ಅಭಿಮಾನಿ ಜತೆ ದರ್ಶನ್ ಕೂಡ ಮಾತಾಡಿದ್ದಾರೆ. ಇದರ ಸ್ಕ್ರೀನ್ ರೆಕಾರ್ಡ್ ಮಾಡಿಕೊಂಡ ಆತ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದು, ವಿಡಿಯೊ ವೈರಲ್ ಆಗಿದೆ.

ಆಂತರಿಕ ತನಿಖೆಗೆ ಆದೇಶ

ದರ್ಶನ್‌ಗೆ ರಾಜಾತಿಥ್ಯ ನೀಡುತ್ತಿ ರುವ ಮಾಹಿತಿ ಬೆಳಕಿಗೆ ಬಂದಿ ರುವ ಹಿನ್ನೆಲೆಯಲ್ಲಿ ಆಂತರಿಕ ತನಿಖೆಗೆ ಪರಪ್ಪನ ಅಗ್ರಹಾರ ಜೈಲಿನ ಡಿಜಿ ಮಾಲಿನಿ ಕೃಷ್ಣಮೂರ್ತಿ ಅವರು ಆದೇಶಿಸಿದ್ದಾರೆ. ಜೈಲಿಗೆ ತೆರಳಿ ಪರಿಶೀಲಿಸಿ ಎರಡು ದಿನಗಳಲ್ಲಿ ವರದಿ ನೀಡುವಂತೆ ಪೊಲೀಸ್ ಅಧಿಕಾರಿಗಳಾದ ಆನಂದ್ ರೆಡ್ಡಿ ಮತ್ತು ಸೋಮಶೇಖರ್ ಅವರಿಗೆ ಸೂಚಿಸಿದ್ದಾರೆ.

ಕಾಂಗ್ರೆಸ್ ಶಾಸಕರಿಗೆ ನೂರು ಕೋಟಿ ರು. ಬಿಜೆಪಿಯಿಂದ ಆಫರ್: ಶಾಸಕ ರವಿ ಗಣಿಗ
ಸಚಿವ ಶರಣಪ್ರಕಾಶ್ ಪಾಟೀಲ್ ಆರೋಪ

ಆಪರೇಷನ್ ಕಮಲ ಮತ್ತೆ ಮುನ್ನೆಲೆಗೆ?

ಬೆಂಗಳೂರು: ಕರ್ನಾಟಕದ ರಾಜಕೀಯ ದಿನದಿಂದ ದಿನಕ್ಕೆ ತಿರುವು ಪಡೆಯುತ್ತಿರುವ ನಡುವೆಯೇ, ಮತ್ತೆ 'ಆಪರೇಷನ್ ಕಮಲ'ದ ಆರೋಪಗಳು ಮುನ್ನೆಲೆಗೆ ಬಂದಿದ್ದು, ಬಿಜೆಪಿಯಿಂದ ಒಬ್ಬೊಬ್ಬ ಶಾಸಕರಿಗೆ ನೂರು ಕೋಟಿ ರುಪಾಯಿ ಆಫರ್ ಬಂದಿದೆ ಎನ್ನಲಾಗುತ್ತಿದೆ.

ಆಪರೇಷನ್ ಕಮಲದ ಬಗ್ಗೆ ಚರ್ಚೆ ಸತ್ಯ

ಇದಕ್ಕೆ ಪೂರಕವಾಗಿ ಸಚಿವ ಶರಣಪ್ರಕಾಶ್ ಪಾಟೀಲ್ ಮಾತನಾಡಿದ್ದು, ಆಪರೇಷನ್ ಕಮಲಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಚರ್ಚೆಯಾಗಿತ್ತು. ಬಿಜೆಪಿ ಮತ್ತು ಜೆಡಿಎಸ್‌ನ ಮಧ್ಯವರ್ತಿಗಳು ಕಾಂಗ್ರೆಸ್ ಶಾಸಕರನ್ನು ಭೇಟಿ ಮಾಡಿ 100 ಕೋಟಿ ಆಮಿಷವೊಡ್ಡುತ್ತಿರುವ ಬಗ್ಗೆ ನಡೆಯುತ್ತಿರುವ ಚರ್ಚೆಗಳು ಸತ್ಯ. ಬಿಜೆಪಿ ಹಲವು ದಿನಗಳಿಂದಲೂ ಪ್ರಯತ್ನ ಮಾಡುತ್ತಿದೆ. ಈಗಲೂ ಪ್ರಯತ್ನಗಳು ಮುಂದುವರಿಸಿದೆ. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರನ್ನು ಅಸ್ಥಿರಗೊಳಿಸುವ ಮೂಲಕ ರಾಜ್ಯ ಸರಕಾರವನ್ನು ಪತನಗೊಳಿಸುವ ಉದ್ದೇಶ ಹೊಂದಿದೆ. ನಮ್ಮ ಯಾವ ಶಾಸಕರೂ ಇದಕ್ಕೆ ಬಲಿಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸರಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ, ಜೆಡಿಎಸ್ ಪ್ರಯತ್ನಿಸುತ್ತಿದೆ ಎನ್ನುವ ಕಾಂಗ್ರೆಸ್ ನಾಯಕರ ಆರೋಪದ ನಡುವೆಯೇ, ಕಾಂಗ್ರೆಸ್ ಶಾಸಕರನ್ನು ಸೆಳೆಯುವ ಆಪರೇಷನ್ ಕಮಲಕ್ಕೆ ಪ್ರಯತ್ನಿಸಲಾಗುತ್ತಿದೆ ಎನ್ನುವುದು ಇದೀಗ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಕೆಲ ಶಾಸಕರು ಈ ವಿಷಯವನ್ನು ಬಹಿರಂಗಪಡಿಸಿದ್ದು, ಬಿಜೆಪಿಯ ನಾಯಕರು ಕಾಂಗ್ರೆಸ್ ಶಾಸಕರನ್ನು ಸಂಪರ್ಕಿಸಿ, ನೂರು ಕೋಟಿ ಆಮಿಷ ಒಡ್ಡಿದ್ದಾರೆ ಎನ್ನುವ ಆರೋಪ ಮಾಡಿದ್ದಾರೆ. ಆಪರೇಷನ್ ಕಮಲಕ್ಕೆ ಮುಂದಾಗಿಲ್ಲ ಎನ್ನುವ ಬಿಜೆಪಿ ನಾಯಕರ ಹೇಳಿಕೆಯ ನಡುವೆಯೂ, ಶಾಸಕರೇ ಈ ರೀತಿಯ ಆರೋಪ ಮಾಡುತ್ತಿರುವುದು ಇದೀಗ ವಿವಾದಕ್ಕೆ ಕಾರಣವಾಗಿದೆ. ಮಂಡ್ಯದ ಕಾಂಗ್ರೆಸ್ ಶಾಸಕ ರವಿಕುಮಾರ್ ಗಣಿಗ '100 ಕೋಟಿಯವರೆಗೆ ಹಣದ ಆಮಿಷ ಒಡ್ಡುತ್ತಿದ್ದಾರೆ. ನಾವು ಇದಕ್ಕೆಲ್ಲ ಬಲಿಯಾಗಲ್ಲ' ಎಂದು ಬಾಂಬ್ ಸಿಡಿಸಿರುವುದು ರಾಜ್ಯ ರಾಜಕೀಯದಲ್ಲಿ ಸಂಚಲ ಮೂಡಿಸಿದೆ.

ಈ ಬಗ್ಗೆ ಮಾತನಾಡಿರುವ ಅವರು, ಕಾಂಗ್ರೆಸ್ ಸರಕಾರವನ್ನು ಬೀಳಿಸಲು ಬಿಜೆಪಿ ನಾಯಕರು ಪ್ರಯತ್ನ ನಡೆಸಿದ್ದಾರೆ. ಆಪರೇಷನ್ ಕಮಲಕ್ಕಾಗಿ ಕಾಂಗ್ರೆಸ್‌ನ ಹಲವು ಶಾಸಕರನ್ನು ಸಂಪರ್ಕಿಸಿದ್ದಾರೆ. 50 ರಿಂದ 100 ಕೋಟಿವರೆಗೂ ಆಮಿಷ ಒಡ್ಡಿದ್ದಾರೆ. ನನ್ನನ್ನೂ ದೂರವಾಣಿಯಲ್ಲಿ ಬಿಜೆಪಿ ನಾಯಕರೊಬ್ಬರು ಸಂಪರ್ಕಿಸಿ 100 ಕೋಟಿ ಕೊಡುತ್ತೇವೆ. ಆಪರೇಷನ್ ಕಮಲಕ್ಕೆ ರೆಡಿಯಾಗು ಎಂದು ಹೇಳಿದ್ದರು. ಆದರೆ ಇದಕ್ಕೆ ನಾನು ಇಡ್ರೀ ಫೋನು ನನ್ನ ಹತ್ರ ಇದೆಲ್ಲ ನಡೆಯಲ್ಲ. ನಮ್ಗೆ ಐಟಿ-ಇಡಿ ಎಂದೆಲ್ಲ ಹೆದರಿಸುತ್ತಿರಿ. ಈ ಆಪರೇಷನ್ ಕಮಲ ಮಾಡುತ್ತಿರುವ ನಿಮಗೆ ಐಟಿ-ಇಡಿ ಭಯ ಇಲ್ವಾ, ನಾನೇ ಫೋನ್ ಮಾಡಿ ಹೇಳುತ್ತೇನೆ ಎಂದು ಹೇಳಿದ ತಕ್ಷಣ ಬಿಜೆಪಿ ನಾಯಕರು ಫೋನ್ ಕಟ್ ಮಾಡಿದರು ಎಂದು ಆರೋಪಿಸಿದರು.

ವಿಶ್ವವಾಣಿ
ಕೃಷ್ಣಾಷ್ಟಮಿ ಸಂಭ್ರಮ

ಆಗಸ್ಟ್ 26ರಂದು ಕೃಷ್ಣಾಷ್ಟಮಿ ಸಂಭ್ರಮ. ಶ್ರಾವಣ ಮಾಸದ ಅಷ್ಟಮಿಯಂದು ಶ್ರೀಹರಿ ದೇವಕಿಯ ಗರ್ಭದಲ್ಲಿ ಹುಟ್ಟಿ ಬಂದ ಎನ್ನುವುದು ಭಕ್ತರ ನಂಬಿಕೆ. ಕೃಷ್ಣನ ಬಾಲಲೀಲೆಗಳನ್ನು ಕೇಳದವರಿಲ್ಲ. ಈ ಬಾರಿಯ ಕೃಷ್ಣಾಷ್ಟಮಿ ದಿನ ಮಕ್ಕಳಲ್ಲಿ ಕೃಷ್ಣನನ್ನು ಕಾಣಲು ನಿಮ್ಮ ನೆಚ್ಚಿನ ವಿಶ್ವವಾಣಿ ಪತ್ರಿಕೆ ಅವಕಾಶ ಮಾಡಿಕೊಡುತ್ತಿದೆ. ನೀವು ಮಾಡಬೇಕಾದುದಿಷ್ಟೇ. 10 ವರ್ಷ ದೊಳಗಿನ ನಿಮ್ಮ ಮಕ್ಕಳಿಗೆ ಕೃಷ್ಣನ ವೇಷ ತೊಡಿಸಿ, ಅವರ ಫೋಟೋ ನಮಗೆ ವಾಟ್ಸ್ ಆ್ಯಪ್ ಮಾಡಿ. ಆಯ್ದ ಫೋಟೋಗಳನ್ನು ಪ್ರಕಟಿಸುತ್ತೇವೆ.

ನಿಬಂಧನೆಗಳು
- 10 ವರ್ಷದೊಳಗಿನ ಮಕ್ಕಳ ಫೋಟೋ ಮಾತ್ರ ಕಳಿಸಿ.
- ಫೋಟೋಗಳ ಗುಣಮಟ್ಟ ಚೆನ್ನಾಗಿರಲಿ.
- ಫೋಟೋದಲ್ಲಿ ಮಕ್ಕಳ ಸಹಜಭಾವಕ್ಕೆ ಆದ್ಯತೆ ಇರಲಿ.
- ಚಿತ್ರದ ಜತೆ ಮಗುವಿನ ಹೆಸರು, ತಾಯಿ/ತಂದೆಯ ಹೆಸರಿನೊಂದಿಗೆ ವಿಳಾಸ, ಮೊಬೈಲ್ ನಂಬರ್.
- 26-8-2024ರ ಸಂಜೆ 5 ರೊಳಗೆ ಚಿತ್ರಗಳನ್ನು ಕಳಿಸಿ.

63623 93988
ಮೇಲಿನ ನಂಬರಿಗೆ ವಾಟ್ಸ್ ಆ್ಯಪ್ ಮಾಡಿ

ನಿಗದಿತ ದಿನಾಂಕದಂದೇ ಕೆಎಎಸ್ ಪೂರ್ವಭಾವಿ ಪರೀಕ್ಷೆ

ಬೆಂಗಳೂರು: ಕೆಎಎಸ್ ಪರೀಕ್ಷೆ ದಿನಾಂಕದಲ್ಲಿ ಯಾವುದೇ ಬದಲಾವಣೆಯಿಲ್ಲ. ನಿಗದಿಯಂತೆ 27ರಂದೇ ಪರೀಕ್ಷೆ ನಡೆಸಲಾಗುವುದು ರಾಜ್ಯ ಸರಕಾರ ಸ್ಪಷ್ಟಪಡಿಸಿದೆ. ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಮುಖ್ಯಮಂತ್ರಿಗಳ ಅಪರಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕೆಎಎಸ್ ಆಕಾಂಕ್ಷಿಗಳ ಸಣ್ಣದೊಂದು ಗುಂಪು ಕೆಎಎಸ್ ಗೆಜೆಟೆಡ್ ಪ್ರೊಬೆಷನರಿ ಪರೀಕ್ಷೆಯನ್ನು ಮುಂದಕ್ಕೆ ಹಾಕುವ ಲಾಬಿ ನಡೆಸುತ್ತಿದೆ. ಆ ಗುಂಪು ಎಲ್ಲ ತರದ ಒತ್ತಡ ತಂತ್ರ ಬಳಸುತ್ತಿದ್ದಾರೆ. ಆ ಗುಂಪು ಕೆಪಿಎಸ್‌ಸಿ, ಡಿಪಿಎಆರ್ ಮತ್ತು ಸಿಎಂ ಕಚೇರಿಯ ಅಧಿಕಾರಿಗಳಿಗೆ ಕರೆಗಳು ಹಾಗೂ ವಾಟ್ಸ್ ಆ್ಯಪ್ ಮೆಸೇಜ್‌ಗಳನ್ನು ಹರಿ ಬಿಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಡಾ.ಘೋಷ್ ಮನೆ ಸೇರಿ 14 ಕಡೆ ಸಿಬಿಐ ಶೋಧ

ಕೋಲ್ಕತ್ತ: ಆರ್‌ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ವರ್ಷಗಳ ಕಾಲ ಅವ್ಯವಹಾರ, ಭ್ರಷ್ಟಾಚಾರ ನಡೆಸಿದ ಪ್ರಕರಣ ಎದುರಿಸುತ್ತಿರುವ ಮಾಜಿ ಪ್ರಾಂಶುಪಾಲ ಡಾ.ಸಂದೀಪ್ ಘೋಷ್ ಮನೆ ಮೇಲೆ ಸಿಬಿಐ ಭಾನುವಾರ ಮುಂಜಾನೆ ದಾಳಿ ನಡೆಸಿದೆ. ಅಲ್ಲದೇ, ಆಸ್ಪತ್ರೆಯ ವಿಧಿವಿಜ್ಞಾನ ವಿಭಾಗದ ಡಾ. ದೇಬಾಶಿಶ್ ಸೋಮ್ ನಿವಾಸ ಸೇರಿದಂತೆ ನಗರದ ಇತರ 14 ಕಡೆಗಳಲ್ಲಿ ಸಿಬಿಐ ದಾಳಿ ನಡೆದಿದೆ.

ಗೃಹಲಕ್ಷ್ಮೀ ಹಣದಲ್ಲಿ ಊರಿಗೇ ಹೋಳಿಗೆ

ಸಿಎಂಗೆ ಒಳಿತಾಗಲೆಂದು ಮುತ್ತೈದೆಯರಿಗೆ ಉಡಿ ತುಂಬಿದ ಮಹಿಳೆಯರು

ಬೆಳಗಾವಿ: ಗೃಹಲಕ್ಷ್ಮೀ ಯೋಜನೆಯಿಂದ ಬಂದ ಹಣದಲ್ಲಿ ಉಳಿತಾಯ ಮಾಡಿಕೊಂಡ ರಾಯಬಾಗ ತಾಲೂಕಿನ ಸುಟ್ಟಟ್ಟಿ ಗ್ರಾಮದ ಮಹಿಳೆಯರು ಸಿಎಂ ಸಿದ್ದರಾಮಯ್ಯ ಅವರಿಗೆ ಒಳಿತಾಗಲಿ ಎಂದು ಮುತ್ತೈದೆಯರಿಗೆ ಉಡಿ ತುಂಬಿ ಹೋಳಿಗೆ ಊಟ ಹಾಕಿಸಿದ್ದಾರೆ.

ಗೃಹಲಕ್ಷ್ಮೀ, ಅನ್ನಭಾಗ್ಯ ಯೋಜನೆಯಿಂದ ಮಹಿಳೆಯರ ಬದುಕು ಬದಲಾಗಿದೆ. ರಾಜ್ಯಕ್ಕೆ ಅನ್ನ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒಳಿತಾಗಲಿ ಎಂದು ಸುಟ್ಟಟ್ಟಿ ಗ್ರಾಮದ ವೃದ್ಧೆ ಅಕ್ಕಾತಾಯಿ ಲಂಗೋಟಿ ಜತೆ ಸೇರಿದ ಹತ್ತಾರು ಮಹಿಳೆಯರು ಪಂಚ ಮುತ್ತೈದೆಯರಿಗೆ ಉಡಿ ತುಂಬಿ ಹೋಳಿಗೆ ಊಟ ಹಾಕಿಸಿದ್ದಾರೆ. ಈ ಕುರಿತು ವೀಡಿಯೋ ಮೂಲಕ ತನ್ನ ಅಭಿಪ್ರಾಯ ಹಂಚಿ ಕೊಂಡ ಮಹಿಳೆ ಅಕ್ಕಾತಾಯಿ ಲಂಗೋಟಿ ಅವರು, ಗೃಹಲಕ್ಷ್ಮೀ ಯೋಜನೆಯಿಂದ ಈಗಾಗಲೇ 10 ಕಂತುಗಳಲ್ಲಿ ಹಣ ಜಮೆಯಾ ಗಿದೆ. ಅಷ್ಟೇ ಅಲ್ಲದೆ ಅನ್ನಭಾಗ್ಯದ ಅಕ್ಕಿಯಿಂದ ಮನೆ ನಡೆಸುವುದಕ್ಕೂ ಸಹಕಾರಿಯಾಗಿದೆ. ಸಿದ್ದರಾಮಯ್ಯ ಈ ರಾಜ್ಯಕ್ಕೆ ಒಳ್ಳೆಯದು ಮಾಡಿ ದ್ದಾರೆ. ಅವರಿಗೆ ಯಾವುದೇ ತೊಂದರೆಯಾಗದೆ ಅಧಿಕಾರ ನಡೆಸಲಿ. ನನಗೆ ದುಂಡವ್ವ ನೂಲಿ, ಲಕ್ಕವ್ವ ಹಟ್ಟಿಹೊಳಿ ಸಹಕಾರ ನೀಡಿದ್ದಾರೆ. ಸಿದ್ದರಾಮಯ್ಯ ನಮಗಾಗಿ ಇಷ್ಟೆಲ್ಲ ಯೋಜನೆ ಕೊಟ್ಟಿದ್ದಾರೆ. ಅವರ ಹೆಸರಿನಲ್ಲಿ ಊಟ ಹಾಕಿಸುವುದು ನಮ್ಮ ಕರ್ತವ್ಯ ಎಂದು ಅಜ್ಜಿ ತನ್ನ ಸಿದ್ದರಾಮಯ್ಯ ಮೇಲಿನ ಪ್ರೀತಿ ಹಂಚಿಕೊಂಡರು.

ಅಜ್ಜಿಗೆ ರೇಷ್ಮೆ ಸೀರೆ ಕಳುಹಿಸಿದ ಹೆಬ್ಬಾಳ್ಕರ್

ಅಕ್ಕಾತಾಯಿ ಲಂಗೋಟಿ ಅವರಿಗೆ ಫೋನ್ ಕರೆ ಮಾಡಿ ಸಂತಸ ವ್ಯಕ್ತಪಡಿಸಿರುವ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, 'ಇಡೀ ಊರಿಗೆ ಹೋಳಿಗೆ ಊಟ ಹಾಕಿಸಿದ್ದಿ, ನಿನ್ನ ಮಗಳಾದ ನನಗೆ ಯಾವಾಗ ಊಟ ಹಾಕಿಸುತ್ತೀ' ಎಂದು ಕೇಳಿದ್ದಾರೆ. ಸಚಿವರ ಪ್ರಶ್ನೆಗೆ, 'ಜರೂರೇ ಬಾ ನಿನಗೂ ಊಟ ಹಾಕಿಸ್ತೀನಿ, ನೀನೇ ನಮಗೆಲ್ಲ ಗೃಹಲಕ್ಷ್ಮೀ ಹಣ ಕೊಡುವ ಮನೆ ಮಗಳು.. ನಿನಗೆ ಇಲ್ಲ ಎನ್ನಲಾಗುವುದೇ' ಎಂದು ಅಜ್ಜಿ ಹೇಳಿದ್ದಾರೆ. ಅಜ್ಜಿ ಮಾತುಗಳಿಂದ ಬಹಳ ಸಂತಸಗೊಂಡ ಸಚಿವರು, ಅಧಿಕಾರಿಗಳ ಮೂಲಕ ಅಜ್ಜಿಗೆ ರೇಷ್ಮೆ ಸೀರೆ ಕಳುಹಿಸಿಕೊಟ್ಟಿದ್ದು, ಶಾಲು ಹೊದಿಸಿ ಸನ್ಮಾನ ಮಾಡಿಸಿದ್ದಾರೆ.

ಗೃಹಲಕ್ಷ್ಮಿ ಹಣ ಕೂಡಿಟ್ಟು ಸಿದ್ದರಾಮಯ್ಯನವರ ಶ್ರೇಯಸ್ಸಿಗಾಗಿ ಅಕ್ಕಾತಾಯಿ ಊರಿಗೆಲ್ಲ ಹೋಳಿಗೆ ಊಟ ಹಾಕಿಸಿ, ಐದು ಜನ ಮುತ್ತೈದೆಯರಿಗೆ ಉಡಿ ತುಂಬಿರುವುದು ಗೃಹಲಕ್ಷ್ಮಿ ಯೋಜನೆಯ ಸಾರ್ಥಕ ಕ್ಷಣಕ್ಕೆ ಮತ್ತೊಂದು ಉದಾಹರಣೆ. ತಾಯಿಯ ಜತೆ ಮಾತನಾಡಿ, ಅವರನ್ನು ಅಭಿನಂದಿಸಿ, ಗೌರವಿಸಿದ್ದೇನೆ. ಗೃಹಲಕ್ಷ್ಮೀ ಜಾರಿಗೆ ತಂದಿದ್ದು ಸಾರ್ಥಕವಾಯಿತು.
- ಲಕ್ಷ್ಮೀ ಹೆಬ್ಬಾಳ್ಕರ್ ಸಚಿವೆ

ರಾಜಕೀಯ ಕಾರಣಕ್ಕೆ ಸಿದ್ದರಾಮಯ್ಯ ವಿರುದ್ಧ ಆರೋಪ | ಕುಮಾರಸ್ವಾಮಿ ಅವರದ್ದು ಮೊದಲಿನಿಂದಲೂ ಹಿಟ್ ಆ್ಯಂಡ್ ರನ್ ಸ್ವಭಾವ | ವಿಶ್ವವಾಣಿ ಸಂದರ್ಶನದಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಆರೋಪ

ಸಿಎಂ, ಸರಕಾರ ಅಸ್ಥಿರಗೊಳಿಸಲಾಗಲ್ಲ

ರಂಜಿತ್ ಎಚ್. ಅಶ್ವತ್ಥ

ವಿಶ್ವವಾಣಿ ಸಂದರ್ಶನ

ಬೆಂಗಳೂರು: ಕರ್ನಾಟಕದಲ್ಲಿ ಕೆಟ್ಟ ಸಂಸ್ಕೃತಿಗೆ ನಾಂದಿ ಹಾಡಲು ಬಿಜೆಪಿ, ಜೆಡಿಎಸ್‌ನವರು ಮುಂದಾಗಿದ್ದಾರೆ. ರಾಜ್ಯದ ಜನರ ಆದೇಶಕ್ಕೆ ವಿರುದ್ಧವಾಗಿ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ರಾಜ್ಯ ರಾಜಕಾರಣದಲ್ಲಿ ಇದನ್ನು ಹಿಂದೆಂದೂ ನೋಡಿರಲಿಲ್ಲ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಟೀಕಿಸಿ ದರು.

'ವಿಶ್ವವಾಣಿ'ಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಸ್ಥಿರಗೊಳಿಸುವ ಮೂಲಕ ಸರಕಾರವನ್ನು ಅಸ್ಥಿರಗೊಳಿಸುವ ಕೆಟ್ಟ ಸಂಸ್ಕೃತಿಗೆ ಪ್ರತಿಪಕ್ಷಗಳು ಮುಂದಾಗಿದ್ದಾರೆ. ಆದರೆ 136 ಶಾಸಕರನ್ನು ಖರೀದಿಸಲು ಯಾವುದೇ ಕಾರಣಕ್ಕೂ ಸಾಧ್ಯವಿಲ್ಲ. ರಾಜಕೀಯ ಕಾರಣಕ್ಕಾಗಿ ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಹೆಸರನ್ನು ತಂದಿರುವ ಬಿಜೆಪಿ-ಜೆಡಿಎಸ್ ನಾಯಕರಿಗೆ ಕಾಲವೇ ಉತ್ತರಿಸಲಿದೆ ಎಂದು ಸವಾಲು ಹಾಕಿದರು.

- ದೇವೇಗೌಡರ ಕುಟುಂಬ ಯಾರೊಂದಿಗೂ ವಿಶ್ವಾಸ ಉಳಿಸಿಕೊಂಡಿಲ್ಲ
- ಸ್ವಂತ ಬಲದಲ್ಲಿ ಜೆಡಿಎಸ್, ಬಿಜೆಪಿ ಎಂದಿಗೂ ಅಧಿಕಾರಕ್ಕೆ ಬಂದಿಲ್ಲ
- ಕುಸಿಯುತ್ತಿರುವ ಜೆಡಿಎಸ್ ಹಿಡಿತ ಉಳಿಸಿಕೊಳ್ಳಲು ಎಚ್‌ಡಿಕೆ ಯತ್ನ
- 18 ಸ್ಥಾನದೊಂದಿಗೆ ಪಿಎಂ, 25ರಿಂದ 38 ಸ್ಥಾನದೊಂದಿಗೆ ಸಿಎಂ ಆಗುವುದು ಜೆಡಿಎಸ್ ಇತಿಹಾಸ



136 ಶಾಸಕರ ಬಲವಿದ್ದರೂ ಅಸ್ಥಿರತೆಯ ಆತಂಕವೇಕೆ?: ನಮಗೆ ನಮ್ಮ ಶಾಸಕರು ಹೋಗುತ್ತಾರೆ ಎನ್ನುವ ಆತಂಕವಿಲ್ಲ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ರೀತಿ ಅಸ್ಥಿರಗೊಳಿಸಲು ಪ್ರಯತ್ನಿಸುವುದೇ ಅಪರಾಧ. ಏನಾದರೂ ಲೋಪವಾಗಿದ್ದರೆ, ತಪ್ಪಾಗಿದ್ದರೆ ಅದರ ವಿರುದ್ಧ ಹೋರಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಯಾರೋ ಒಬ್ಬ ಸಚಿವ, ಶಾಸಕ ಮಾಡಿದ ತಪ್ಪಿಗೆ ಮುಖ್ಯಮಂತ್ರಿ ರಾಜೀನಾಮೆ ಕೇಳುವುದು ಎಷ್ಟು ಸರಿ? ಒಬ್ಬರು ಮಾಡಿರುವ ತಪ್ಪಿಗೆ ಇಡೀ ಸರಕಾರವನ್ನೇ ಉರುಳಿಸುತ್ತೇವೆ ಎನ್ನುವುದು ಎಷ್ಟು ಸರಿ? ಇದು ಪೂರ್ವಾಗ್ರಹ ಪೀಡಿತ ಎನಿಸುವುದಿಲ್ಲವೇ? ಕೇಂದ್ರ ಸರಕಾರವನ್ನು ಬಳಸಿಕೊಂಡು ಸರಕಾರವನ್ನು ತೆಗೆಯಬೇಕು ಎಂದು ಯೋಚಿಸಿದರೂ ಅದು ಜನ ಹಾಗೂ ಜನತಂತ್ರಕ್ಕೆ ವಿರುದ್ಧದ ನಿಲುವು ಎಂದು ಹೇಳಿದರು.

ಮೋದಿ ಪ್ರಧಾನಿಯಾಗಿ, ಅಮಿತ್ ಶಾ ಬಿಜೆಪಿಯ ಚುಕ್ಕಾಣಿ ಹಿಡಿದ ಬಳಿಕ ಪ್ರತಿಪಕ್ಷಗಳನ್ನು ಅಸ್ಥಿರಗೊಳಿಸುವುದೇ ಬಿಜೆಪಿಯ ಮೂಲ ಉದ್ದೇಶವಾಗಿದೆ ಎನಿಸುತ್ತಿದೆ. ಈ ಗುರಿ ಸಾಧಿಸುವುದಕ್ಕೆ ಸಿಬಿಐ, ಐಟಿ, ಇಡಿ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಪ್ರತಿಪಕ್ಷ ಹಾಗೂ ನಾಯಕರನ್ನು ಅಸ್ಥಿರಗೊಳಿಸುತ್ತಿದ್ದಾರೆ. ಇದರ ಮುಂದುವರಿದ ಭಾಗವೇ ಕರ್ನಾಟಕದಲ್ಲಿಯೂ ನಡೆಯುತ್ತಿದೆ.
- ಚಲುವರಾಯಸ್ವಾಮಿ ಕೃಷಿ ಸಚಿವ

ಸಂದರ್ಶನ ಪೂರ್ಣಪಾಠ → 5

ಬಾಡಿಗೆದಾರರನ್ನು ಹುಡುಕಿಕೊಡುವ ನೆಪದಲ್ಲಿ ಮನೆ ಮಾಲೀಕರಿಗೆ ಮೋಸ

ಮನೆ ಭೋಗ್ಯಕ್ಕೆ ನೀಡುವ ಮೂಲಕ ವಂಚನೆ: ದಂಪತಿ ಬಂಧನ

ಬೆಂಗಳೂರು: ನಗರದಲ್ಲಿ ಬಾಡಿಗೆಗೆ ಮನೆಗಳನ್ನು ಪಡೆದು ನಂತರ ಅದೇ ಮನೆಗಳನ್ನು ಇತರರಿಗೆ ಭೋಗ್ಯಕ್ಕೆ ನೀಡುವ ಮೂಲಕ ಹಲವರಿಗೆ ವಂಚಿಸಿದ್ದ ದಂಪತಿಯನ್ನು ಸಿಸಿಬಿಯ ಆರ್ಥಿಕ ಅಪರಾಧ ದಳದ ಪೊಲೀಸರು ಬಂಧಿಸಿದ್ದಾರೆ.

ಜಿಯೂ ಹೋಮ್ಸ್ ಪ್ರೈವೇಟ್ ಲಿಮಿಟೆಡ್ ಹೆಸರಿನ ಕಂಪನಿ ನಡೆಸುತ್ತಿದ್ದ ಅಹಮದ್ ಅಲಿ ಬೇಗ್ ಹಾಗೂ ಪತ್ನಿ ಮುಯಿದಾ ಸಮ್ನಾನಿ ಬಾನು ಬಂಧಿತ ಆರೋಪಿಗಳು. ಜಿಯೂ ಹೋಮ್ಸ್ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ ಪ್ರಾಪರ್ಟಿ ಮ್ಯಾನೇಜ್‌ಮೆಂಟ್ ಕಂಪನಿ ತೆರೆದಿದ್ದ ಆರೋಪಿಗಳು, ಎಚ್.ಬಿ.ಆರ್ ಲೇಔಟ್‌ನಲ್ಲಿ ಕಚೇರಿ ಹೊಂದಿದ್ದರು. ಖಾಲಿ ಇರುವ ಮನೆ, ಫ್ಲ್ಯಾಟ್‌ಗಳ ಮಾಲೀಕರನ್ನು ಮಧ್ಯವರ್ತಿಗಳ ಮೂಲಕ ಸಂಪರ್ಕಿಸುತ್ತಿದ್ದ ಆರೋಪಿಗಳು, ತಾವು ಬಾಡಿಗೆದಾರರನ್ನು ಹುಡುಕಿಕೊಡುವ ಮೂಲಕ ನಿರ್ವಹಣೆ ಮಾಡುವುದಾಗಿ ನಂಬಿಸುತ್ತಿದ್ದರು. ಬಾಡಿಗೆಗೆ ಎಂದು ಕರಾರು ಮಾಡಿಕೊಂಡು ಬಳಿಕ ಅವುಗಳನ್ನು

ಅಹಮದ್ ಅಲಿ ಬೇಗ್ ಹಾಗೂ ಮುಯಿದಾ ಸಮ್ನಾನಿ ಬಾನು ಬಂಧಿತ ಆರೋಪಿಗಳು

ಬೇರೆಯವರಿಗೆ ಭೋಗ್ಯಕ್ಕೆ ನೀಡುತ್ತಿದ್ದರು.

ಒಂದೆರಡು ತಿಂಗಳುಗಳ ಬಳಿಕ ಮಾಲೀಕರಿಗೆ ಬಾಡಿಗೆ ನೀಡುತ್ತಿರಲಿಲ್ಲ. ಮಾಲೀಕರು ಮನೆ ಬಳಿ ಹೋಗಿ ನೋಡಿದಾಗ ಮನೆಯಲ್ಲಿರುವವರು ಭೋಗ್ಯಕ್ಕೆ ಪಡೆದಿರುವುದು ತಿಳಿಯುತ್ತಿತ್ತು. ಮನೆ ಮಾಲೀಕರು ಹಾಗೂ ಬಾಡಿಗೆದಾರರನ್ನು ಏಕಕಾಲಕ್ಕೆ ವಂಚಿಸುತ್ತಿದ್ದ ಜಿಯೂ ಹೋಮ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸ್ಥಾಪಕ ಅಹಮದ್ ಅಲಿ ಬೇಗ್, ನೂರ್ ಅಹಮದ್ ಅಲಿ ಬೇಗ್, ಅಕ್ರಂ ಪಾಶಾ, ಅಬ್ದುಲ್ ರಹೀಂ ಹಾಗೂ ಸೈಯ್ಯದ್ ಮತ್ತಿತರರ ವಿರುದ್ಧ ಕಳೆದ ಏಪ್ರಿಲ್‌ನಲ್ಲಿ ಬಾಣಸವಾಡಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣ ಬಯಲಾಗುತ್ತಿದ್ದಂತೆ ಆರೋಪಿಗಳು ತಲೆಮರೆಸಿಕೊಂಡಿದ್ದರು.

ವಂಚನೆಗೊಳಗಾದ ಮನೆಗಳ ಮಾಲೀಕರು, ಭೋಗ್ಯಕ್ಕೆ ವಾಸವಿದ್ದವರು ಸೇರಿದಂತೆ ನೂರಾರು ಜನರು ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಜೂನ್‌ನಲ್ಲಿ ಕ್ವೀನ್ಸ್ ಸರ್ಕಲ್ ಬಳಿ ಪ್ರತಿಭಟನೆ ನಡೆಸಿದ್ದರು. ಬಳಿಕ ಸಿಸಿಬಿಯ ಆರ್ಥಿಕ ಅಪರಾಧ ದಳಕ್ಕೆ ಪ್ರಕರಣದ ತನಿಖೆಯನ್ನು ವರ್ಗಾಯಿಸಲಾಗಿತ್ತು. ಸದ್ಯ ಸಿಸಿಬಿ ಅಧಿಕಾರಿಗಳು ಹೈದರಾಬಾದ್‌ನಲ್ಲಿದ್ದ ಅಹಮದ್ ಅಲಿ ಬೇಗ್ ಹಾಗೂ ಆತನ ಪತ್ನಿ ಮುಯಿದಾ ಸಮ್ನಾನಿ ಬಾನು ಅವರನ್ನು ಬಂಧಿಸಿದ್ದಾರೆ. ತಲೆಮರೆಸಿಕೊಂಡಿರುವ ಇನ್ನೂ ಕೆಲ ಆರೋಪಿಗಳಿಗಾಗಿ ಹುಡುಕಾಟ ಮುಂದುವರಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಕೆರೆಗಳಿಗೆ ಕಟ್ಟಡಗಳಿಂದ ತ್ಯಾಜ್ಯನೀರು ಹರಿಸದಂತೆ ಸೂಚನೆ

ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಗರದ ಅಕ್ರಮ ಕಟ್ಟಡಗಳ ಪರಿಶೀಲನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಹದೇವಪುರ ವಲಯದಲ್ಲಿರುವ 19 ಕಟ್ಟಡಗಳನ್ನು ಅಕ್ರಮ ಎಂದು ಬಿಬಿಎಂಪಿ ಗುರುತಿಸಿದ ಬೆನ್ನಲ್ಲೇ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಕಟ್ಟಡಗಳ ಪರಿಶೀಲನೆಗೆ ಮುಂದಾಗಿದೆ.

ಕಟ್ಟಡಗಳಲ್ಲಿ ಅನುಮತಿಗೆ ವಿರುದ್ಧವಾಗಿ ಹೆಚ್ಚುವರಿ ಮಹಡಿ ಮನೆ, ಶೌಚಾಲಯ, ಸ್ನಾನ ಗೃಹಗಳನ್ನು ಕಟ್ಟಲಾಗಿದ್ದು, ಇವುಗಳಿಂದ ಸಂಸ್ಕರಿಸಿದ ತ್ಯಾಜ್ಯ ನೀರು ಕೆರೆಗಳಿಗೆ ಸೇರದಂತೆ ನೋಡಿಕೊಳ್ಳುವುದು ಮಂಡಳಿಯ ಕರ್ತವ್ಯವಾಗಿದೆ. ಹೆಚ್ಚಿನ ತ್ಯಾಜ್ಯ ನೀರು ಎಲೆಮಲ್ಲಪ್ಪ ಶೆಟ್ಟಿ ಕೆರೆಗೆ ಸೇರುತ್ತಿರುವುದರಿಂದ ಪರಿಶೀಲನೆಗೆ ಮಂಡಳಿ ಮುಂದಾಗಿದೆ. ಕೆರೆಗೆ ತ್ಯಾಜ್ಯ ನೀರು ಹರಿಯುವಿಕೆ ತಡೆಯಲು ಕ್ರಮ ಕೈಗೊಳ್ಳಲಿದೆ ಎಂದು ಮಂಡಳಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೆರೆ ಕಲುಷಿತಗೊಳಿಸಿದರೆ ಕ್ರಮ

ಕೆಎಸ್‌ಪಿಸಿಬಿಯ ಪರಿಸರ ಕಚೇರಿಯ ಅಧಿಕಾರಿ ಮಾತನಾಡಿ, ಬಸವನಪುರ ವಾರ್ಡ್‌ನ ನಿರ್ದಿಷ್ಟ ಬಡಾವಣೆಯಲ್ಲಿ ಕೆಲ ಕಟ್ಟಡಗಳಿಂದ ಸಂಸ್ಕರಿಸದ ತ್ಯಾಜ್ಯನೀರನ್ನು ಕೆರೆಗೆ ಬಿಡಲಾಗುತ್ತಿವೆ. ಕೆಲವು ಕಟ್ಟಡಗಳಿಗೆ ನಾಲ್ಕು ಮಹಡಿ ನಿರ್ಮಾಣಕ್ಕೆ ಅನುಮತಿ ನೀಡಿದ್ದರು, ಹೆಚ್ಚಿನ ಮಹಡಿ ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಇದರಿಂದ ತ್ಯಾಜ್ಯನೀರು ಕೆರೆಗೆ ಸೇರುತ್ತಿದೆ. ಸೆಪ್ಟೆಂಬರ್ ತಿಂಗಳಿನಲ್ಲಿ ಪರಿಶೀಲನೆ ನಡೆಸಲು ಯೋಜನೆ ರೂಪಿಸಲಾಗಿದ್ದು, ವರದಿ ಸಿದ್ಧಪಡಿಸಲಾಗುವುದು. ದೋಷಗಳು ಕಂಡು ಬಂದರೆ ಕೆರೆಯನ್ನು ಕಲುಷಿತಗೊಳಿಸುವುದಕ್ಕೆ ನಿವೇಶನದ ಮಾಲೀಕರು ಅಥವಾ ಬಿಲ್ಡರ್ ಹೊಣೆಯಾಗಬೇಕಾಗುತ್ತದೆ. ಇದಕ್ಕೆ ಕಾರಣರಾದವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುವುದು ಎಂದರು.

ಕೆರೆಗೆ ಬೇಲಿ ಹಾಕಬೇಕು

ಕೆರೆಗಳಿಗೆ ಮರು ಜೀವ ನೀಡಲು ಮುಂದಾಗಿರುವ ಕೆಲ ಸ್ವಯಂಸೇವಕರು ಈ ಕುರಿತು ಮಾತನಾಡಿ, ಕಟ್ಟಣ ನಿರ್ಮಾಣ ಅವಶೇಷಗಳು, ತ್ಯಾಜ್ಯನೀರು ಚರಂಡಿಯ ಮೂಲಕ ಕೆರೆಗೆ ಸೇರುತ್ತಿವೆ. ಸಣ್ಣ ನೀರಾವರಿ ಇಲಾಖೆ ಮತ್ತು ಜಲಮಂಡಳಿಗೆ ಈ ಬಗ್ಗೆ ಮಾಹಿತಿಯಿದ್ದು, ಸಾಯಿ ಸೆರಿನಿಟಿ, ಸಾಯಿ ಗಾರ್ಡನ್‌ನಂತಹ ಬಡಾವಣೆಗಳಲ್ಲಿನ ಕೆಲವು ಕಟ್ಟಡಗಳು ಕೊಳಚೆ ನೀರನ್ನು ಕೆರೆಗೆ ಬಿಡುತ್ತಿವೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ವೀಕ್ಷಣೆ ಹಿನ್ನೆಲೆ ಮಡಿವಾಳ ಹಾಗೂ ಎಲೆ ಮಲ್ಲಪ್ಪ ಶೆಟ್ಟಿ ಕೆರೆಗಳ ಪುನಶ್ಚೇತನಕ್ಕೆ ರಾಜ್ಯ ಸರಕಾರ 120 ಕೋಟಿ ರು.ಗಳ ವಿಶೇಷ ಅನುದಾನ ಮಂಜೂರು ಮಾಡಿದೆ. ಆದರೆ, ಅಧಿಕಾರಿಗಳು ಕೆರೆಗೆ ಬೇಲಿ ಹಾಕುವಲ್ಲಿ ವಿಫಲರಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

- ಅನುಮತಿಗೆ ವಿರುದ್ಧವಾಗಿ ಕಟ್ಟಡಗಳ ನಿರ್ಮಾಣ
- ತ್ಯಾಜ್ಯನೀರು ಕೆರೆ ಸೇರದಂತೆ ಮಂಡಳಿ ಕಟ್ಟೆಚ್ಚರ
- ಸೆಪ್ಟೆಂಬರ್‌ನಲ್ಲಿ ಕಟ್ಟಡಗಳ ಪರಿಶೀಲನೆಗೆ ಸಜ್ಜು
- ಕೆರೆ ಕಲುಷಿತಗೊಳಿಸಿದರೆ ಬಿಲ್ಡರ್ ಅಥವಾ ಮಾಲೀಕರೇ ಹೊಣೆ
- ತಪ್ಪಿತಸ್ಥರ ವಿರುದ್ಧ ಎಫ್‌ಐಆರ್ - ಮಂಡಳಿ ಎಚ್ಚರಿಕೆ
- ಕೆರೆಗಳಿಗೆ ಬೇಲಿ ಹಾಕಲು ಅಧಿಕಾರಿಗಳು ವಿಫಲ - ಸ್ವಯಂಸೇವಕರ ಆರೋಪ

ಮಗನ ಮೃತದೇಹದ ಮುಂದೆ ಪ್ರಾಣಬಿಟ್ಟ ತಾಯಿ

ಬೆಂಗಳೂರು: ಕ್ಯಾಬ್ ಚಾಲಕರೊಬ್ಬರು ತಮ್ಮ ಮನೆಯಲ್ಲಿ ನೇಣುಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದು, ಮಗನ ಮೃತದೇಹದ ಮುಂದೆ ಕಣ್ಣೀರಿಡುತ್ತಾ ತಾಯಿಯೂ ಸಹ ಸಾವನ್ನಪ್ಪಿದ ಹೃದಯವಿದ್ರಾವಕ ಘಟನೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಕಾವೇರಿಪುರದಲ್ಲಿ ನಡೆದಿದೆ.

ಅರುಣ್ ಕುಮಾರ್ (37) ಆತ್ಮಹತ್ಯೆಗೆ ಶರಣಾದ ಕ್ಯಾಬ್ ಚಾಲಕ. ಸರಸ್ವತಿ (78) ಮೃತ ತಾಯಿ. ಕ್ಯಾಬ್ ಚಾಲಕನಾಗಿದ್ದ ಅರುಣ್ ಕುಮಾರ್ ಸಾಲ ಮಾಡಿಕೊಂಡಿದ್ದರು. ಅಲ್ಲದೆ ಕಳೆದ 1 ವರ್ಷದ ಹಿಂದೆ ಬೆನ್ನುಮೂಳೆ ಮುರಿತಕ್ಕೊಳಗಾಗಿದ್ದ ತಾಯಿ ಹಾಸಿಗೆ ಹಿಡಿದಿದ್ದರು. ಸಹೋದರರು ಬೇರೆಡೆ ವಾಸವಿದ್ದುದರಿಂದ ತಾಯಿಯ ಯೋಗಕ್ಷೇಮವನ್ನ ತಾನೇ ನೋಡಿಕೊಳ್ಳುತ್ತಿದ್ದ ಅರುಣ್ ಕುಮಾರ್ ಖಿನ್ನತೆಗೊಳಗಾಗಿದ್ದರು.

ಭಾನುವಾರ ಮಧ್ಯಾಹ್ನ ಡೆತ್‌ನೋಟ್ ಬರೆದಿಟ್ಟು, ಮನೆಯ ರೂಮಿನಲ್ಲಿ ಅರುಣ್‌ಕುಮಾರ್ ನೇಣಿಗೆ ಶರಣಾಗಿದ್ದಾರೆ. ಬಳಿಕ ಮಗನ ಮೃತದೇಹದ ಮುಂದೆ ತಾಯಿಯೂ ಕೊನೆಯುಸಿರೆಳೆದಿದ್ದಾರೆ. ಮೃತನ ಸಹೋದರ ನೀಡಿರುವ ದೂರಿನನ್ವಯ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವಿನ ಪ್ರಕರಣ ವರದಿಯಾಗಿದೆ. ಅರುಣ್ ತಾಯಿ ಸರಸ್ವತಿ ಒಂದು ವರ್ಷದ ಹಿಂದೆ ಬಿದ್ದು ಬೆನ್ನಿನ ಮೂಳೆ ಮುರಿದುಕೊಂಡಿದ್ದರು. ಹಾಗಾಗಿ ಬೆಡ್ ರೆಸ್ಟ್ ನಲ್ಲಿದ್ದರು. ಕುಮಾರ್‌ಗೆ ಸಹೋದರರು ಕೂಡ ಇದ್ದಾರೆ, ಆದರೆ ತಾಯಿಯ ಕಷ್ಟದ ದಿನದಲ್ಲಿ ನೆರಳಾಗೊ ಬದಲು ಮನೆಯಿಂದಲೇ ದೂರ ಹೋಗಿದ್ದರು. ತಾಯಿಯ ಸಂಪೂರ್ಣ ಜವಾಬ್ದಾರಿ ಅರುಣ್ ಮೇಲೆಯೇ ಇತ್ತು. ಹಾಗಾಗಿ ಒಂದು ವರ್ಷದಿಂದ ತಾನೇ ತಾಯಿಯ ಆರೈಕೆ ಮಾಡುತ್ತಿದ್ದ. ಜತೆಗೆ ಕ್ಯಾಬ್ ಕೂಡ ಓಡಿಸುತ್ತಿದ್ದ.

ನಕಲಿ ಪತ್ರ ನೀಡಿ ಪಿಎ ಹುದ್ದೆ ಪಡೆದ ಚಾಲಾಕಿ

ಬೆಂಗಳೂರು: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಸಹಿ ಮತ್ತು ಲೆಟರ್ ಹೆಡ್ ದುರ್ಬಳಕೆ ಮಾಡಿಕೊಂಡು ಆಪ್ತ ಸಹಾಯಕರ ಹುದ್ದೆ ಪಡೆಯಲು ಯತ್ನಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ವಿಧಾನಸಭಾ ಸಚಿವಾಲಯದ ಅಧೀನ ಕಾರ್ಯದರ್ಶಿ ನೀಡಿದ ದೂರಿನನ್ವಯ ವಿನುತಾ ಕೆ.ಸಿ ಎಂಬುವರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದೆ.

ವಾಹನ ಚಾಲಕರಿಂದ ಹಣ ಸುಲಿಗೆಗೆ ಅಪಘಾತ ನಾಟಕ

ಬೆಂಗಳೂರು: ವಾಹನ ಚಾಲಕರಿಂದ ಹಣ ಸುಲಿಗೆ ಮಾಡಲು ಅಪಘಾತದ ನಾಟಕವಾಡುತ್ತಿದ್ದ ಆರೋಪಿಯನ್ನು ಜಯನಗರ ಠಾಣಾ ಪೊಲೀಸರು ಬಂಧಿಸಿದ್ದಾರೆ. ಜಮೀಲ್ ಬಂಧಿತ ಆರೋಪಿ. ದಾರಿಯಲ್ಲಿ ಹೋಗುವ ಕಾರು ಚಾಲಕರನ್ನೇ ಟಾರ್ಗೆಟ್ ಮಾಡುತ್ತಿದ್ದ ಆರೋಪಿ, ಬೇಕಂತಲೇ ತನ್ನ ದ್ವಿಚಕ್ರ ವಾಹನವನ್ನು ಕಾರಿಗೆ ಟಚ್ ಮಾಡುತ್ತಿದ್ದ. ನಂತರ ಆ ಕಾರನ್ನು ಅಡ್ಡಗಟ್ಟಿ 'ಅಪಘಾತವೆಸಗಿದ್ದೀರಿ, ಸರಿಪಡಿಸಲು ದುಡ್ಡು ಕೊಡಿ' ಅಂತಾ ಜಗಳವಾಡುತ್ತಿದ್ದ. ಹಣ ಕೊಡದೆ ಹೋದರೆ ಪೊಲೀಸರಿಗೆ ದೂರು ಕೊಡುವುದಾಗಿ, ಬಲಪ್ರಯೋಗದ ಮಾಡಿ ಬೆದರಿಸುತ್ತಿದ್ದ. ಇದೇ ರೀತಿ ಕಾರು ಚಾಲಕರೊಬ್ಬರನ್ನು ಅಡ್ಡಗಟ್ಟಿ 30 ಸಾವಿರ ರು. ಪಡೆದುಕೊಂಡಿದ್ದ ಆರೋಪಿಯ ವಿರುದ್ಧ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸದ್ಯ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿಯ ವಿರುದ್ಧ ರಾಜ್ಯದ ವಿವಿಧ ಠಾಣೆಗಳಲ್ಲಿ 17 ಪ್ರಕರಣ ದಾಖಲಾಗಿರುವುದು ತನಿಖೆ ವೇಳೆ ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದರು.

ಸರಗಳ್ಳತನಕ್ಕೆ ಇಳಿದಿದ್ದ ಆರೋಪಿ ಬಂಧನ

ಬೆಂಗಳೂರು: ಆನ್‌ಲೈನ್ ಬೆಟ್ಟಿಂಗ್ ಹುಚ್ಚಾಟಕ್ಕೆ ಬಿದ್ದು ಮೈತುಂಬ ಸಾಲ ಮಾಡಿಕೊಂಡು ಸಾಲ ತೀರಿಸಲು ಸರಗಳ್ಳತನಕ್ಕೆ ಇಳಿದಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಕತ್ರಿಗುಪ್ಪೆ ನಿವಾಸಿ ಸುರೇಶ್ ಬಂಧಿತ ಆರೋಪಿ. ಸುರೇಶ್ ಆನ್‌ಲೈನ್‌ನಲ್ಲಿ ಬೆಟ್ಟಿಂಗ್ ಗೇಮ್ ಆಡುತ್ತಿದ್ದನು. ಈ ವೇಳೆ ಸುರೇಶ್ ಸಾಕಷ್ಟು ಹಣ ಕಳೆದುಕೊಂಡಿದ್ದನು. ಅಲ್ಲದೇ, ಬೆಟ್ಟಿಂಗ್ ಗೇಮ್‌ಗಾಗಿ ಐದು ಲಕ್ಷ ಸಾಲ ಮಾಡಿಕೊಂಡಿದ್ದನು. ಆರೋಪಿ ಸುರೇಶ್ ವೃತ್ತಿಯಲ್ಲಿ ಆಟೋಚಾಲಕನಾಗಿದ್ದ. ಮಾಡಿದ ಸಾಲ ತೀರಿಸಲು ಆಟೋ ಸಹ ಅಡವಿಟ್ಟಿದ್ದ. ಆದರೂ, ಸಾಲ ತೀರಿರಲಿಲ್ಲ. ಹೀಗಾಗಿ, ಸಾಲ ತೀರಿಸಲು ದಾರಿ ಕಾಣದೆ ಸರಗಳ್ಳತನಕ್ಕಿಳಿದಿದ್ದ.

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ACRE MAKING ASSETS WORK
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ-110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿ. (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **18.11.2021** ರಂದು ಕರೆದು ಸಾಲಗಾರ **ಕೇಶವ ಮೂರ್ತಿ ಎಚ್ಟಿ ಮತ್ತು ಸೀತಾ ಲಕ್ಷ್ಮಿ ಎಚ್‌ಕೆ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 9,03,904.94 (ರೂಪಾಯಿ ಒಂಬತ್ತು ಲಕ್ಷ ಮೂರು ಸಾವಿರದ ಒಂಬೈನೂರ ನಾಲ್ಕು ಮತ್ತು ತೊಂಬತ್ನಾಲ್ಕು ಪೈಸೆ ಮಾತ್ರ)** ಲೋನ್ ಅಕೌಂಟ್ ನಂ. **K1904OXXVII-2** ಮೇಲೆ (ಹಿಂದಿನ ಲೋನ್ ಅಕೌಂಟ್ ನಂ. ಐಎಚ್‌ಎಫ್‌ಎಲ್‌ನ **HHEBEC00302680**) ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತೆ, ಸದರಿ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **18.11.2021** ರ ವರೆಗಿನ ಮೊತ್ತ ಮತ್ತು ಆದರ ಮೇಲಿನ ಬಡ್ಡಿ. ಈ ಹಿಂದೆ, **ಇಂಡಿಯಾಬುಲ್ಸ್ ಏಆರ್‌ಸಿ- XXVII, ಟ್ರಸ್ಟ್‌ನ ಟ್ರಸ್ಟಿಯಾಗಿ** ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು **23.03.2022** ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ **ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ.-ನ** ಹೆಸರಿಗೆ ನಿಯುಕ್ತಿಪಡಿಸಿದೆ. ಅಲ್ಲದೆಯೆ, **ಇಂಡಿಯಾಬುಲ್ಸ್ ಏಆರ್‌ಸಿ-XXVII, ಟ್ರಸ್ಟ್‌ನ ಟ್ರಸ್ಟಿಯಾಗಿ** ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ. **ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು 29.06.2022 ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ('ಎಸಿಆರ್‌ಇ') ಹೆಸರಿಗೆ ನಿಯುಕ್ತಿಪಡಿಸಿದೆ.** ಇದರ ಹೆಸರಿಗೆ ಅಸೈನ್ ಮಾಡಿದೆ ಮತ್ತು **ಎಸಿಆರ್‌ಇ** ಪುಸ್ತಕಗಳಲ್ಲಿ ಸಾಲ ಖಾತೆಯನ್ನು ಸಾಲ ಖಾತೆ ನಂ. **K1904OXXVII-2** ಎಂದು ಪುನರ್ ನಂಬರ್ ಹಾಕಲಾಗಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **21.08.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ಬಾಕಿ ಇರುವ ಮೊತ್ತ ರೂ. 9,03,904.94 (ರೂಪಾಯಿ ಒಂಬತ್ತು ಲಕ್ಷ ಮೂರು ಸಾವಿರದ ಒಂಬೈನೂರ ನಾಲ್ಕು ಮತ್ತು ತೊಂಬತ್ನಾಲ್ಕು ಪೈಸೆ ಮಾತ್ರ) 18.11.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಸೈಟ್ ಸಂಖ್ಯೆ-334, ಕಥಾ ನಂ 401/334, ಕೆತ್ತಿದ ಪರಿವರ್ತನೆ, ಆಸ್ತಿ ಸೈ ನಂ-59 (59/1 ಮತ್ತು 59/2), 60,61,62, 63, ಆಸ್ತಿ ಸೋಯಾ ನಂ. 59(59/1 ಮತ್ತು 59/2), 60, 61, 62, 63, 64, 65, 68, 69 / 2,70/1,70/2,70/3, 70/4 ಕನ್ಯಾಸಂದ್ರ ವಲ್ಲಜ್ , ಜಿಗಣಿ ಹೋಬಳಿಕಲ್ ತಾಲೂಕು, ಬೆಂಗಳೂರು, ಕರ್ನಾಟಕ - 560099.

ಅಧಿಕಾರವಿರುವ ಅಧಿಕಾರಿ
ದಿನಾಂಕ: 21.08.2024 **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.**
ಸ್ಥಳ : ಬೆಂಗಳೂರು (102-ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011-66115609, ಇಮೇಲ್: complaint@acreindia.in. ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ACRE MAKING ASSETS WORK
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ-110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ. (CIN:U65993DL2002PLC115769) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **04.08.2023** ರಂದು ಕರೆದು ಸಾಲಗಾರ **ಕೇಶವ ಮೂರ್ತಿ ಎಚ್‌ಟಿ ಅಲಿಯಾಸ್ ಶ್ರೀ ಕೇಶವ ಮೂರ್ತಿ ಎಚ್‌ಟಿ ಮತ್ತು ಸೀತಾ ಲಕ್ಷ್ಮಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 12,42,837.28 (ರೂಪಾಯಿ ಹನ್ನೆರಡು ಲಕ್ಷ ನಲವತ್ತೆರಡು ಸಾವಿರದ ಎಂಟು ನೂರ ಮೂವತ್ತೇಳು ಮತ್ತು ಇಪ್ಪತ್ತೆಂಟು ಪೈಸೆ ಮಾತ್ರ)** ಸಾಲ ಖಾತೆ ನಂ. **K1904OXXVII-1** ಮೇಲೆ (ಹಿಂದಿನ ಲೋನ್ ಅಕೌಂಟ್ ನಂ. ಐಎಚ್‌ಎಫ್‌ಎಲ್‌ನ **HHLBAN00181421**) ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **01.08.2023** ರ ವರೆಗಿನ ಮೊತ್ತ ಮತ್ತು ಆದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **21.08.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.ನ** (ಈಗಿನ ಹೆಸರು: **ಸಮ್ಮಾನ್ ಕ್ಯಾಪಿಟಲ್ ಲಿ.**)ಬಾಕಿ ಇರುವ ಮೊತ್ತ **ರೂ. 12,42,837.28 (ರೂಪಾಯಿ ಹನ್ನೆರಡು ಲಕ್ಷ ನಲವತ್ತೆರಡು ಸಾವಿರದ ಎಂಟು ನೂರ ಮೂವತ್ತೇಳು ಮತ್ತು ಇಪ್ಪತ್ತೆಂಟು ಪೈಸೆ ಮಾತ್ರ) 01.08.2023** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಸ್ಥಿರವಾಗಿ ಪರಿವರ್ತಿಸಲಾದ ಆಸ್ತಿಯ ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ಸೈಟ್ ನಂ. 334, ಕಥಾ ನಂ. 401/334 ಪ್ರದೇಶವು ಸಂಪೂರ್ಣವಾಗಿ 1,200 ಚದರ ಅಡಿ ಆಳತೆಯಲ್ಲಿ ''ಅಕೃತಿ ಗ್ರೀನ್ ವುಡ್ಸ್'' ನಲ್ಲಿ, ಖಾತಾ ನಂ.401/334, ಪರಿವರ್ತಿತ ಆಸ್ತಿಯನ್ನು ಕೆತ್ತಲಾಗಿದೆ. ಸಂ. 59 (59/1 ಮತ್ತು 59/2), 60, 61, 62, 63, 64, 65, 68, 69/2, 70/1, 70/2, 70/3, 70/4 ಕೋನಸಂದ್ರ ಗ್ರಾಮದ ಜಿಗಣಿ ಹೋಬಳಿ , ತಾಲ್ ಆನೇಕಲ್, ಬೆಂಗಳೂರು ನಗರ ಜಿಲ್ಲೆ, ಆನೇಕಲ್ ಯೋಜನಾ ಪ್ರಾಧಿಕಾರ, ಬಿಎಂಆರ್‌ಡಿಎ ಯಿಂದ ಅನುಮೋದಿಸಲಾದ ಲೇಔಟ್ ಯೋಜನೆಯ ಪ್ರಕಾರ, (ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 12.19 ಮೀ (40''-0'' ಅಡಿ), ಉತ್ತರದಿಂದ ದಕ್ಷಿಣಕ್ಕೆ: 9.14 ಮೀ (30''-0'' ಅಡಿ), ಬೆಂಗಳೂರು - 560102 (ಕರ್ನಾಟಕ).

ಪೂರ್ವದಲ್ಲಿ ಇದರಿಂದ : ರಸ್ತೆ,	ಪಶ್ಚಿಮದಲ್ಲಿ ಇದರಿಂದ : ಸೈಟ್ ನಂ. 337
ಉತ್ತರದಲ್ಲಿ ಇದರಿಂದ : ಸೈಟ್ ನಂ. 333	ದಕ್ಷಿಣದಲ್ಲಿ ಇದರಿಂದ : ಸೈಟ್ ನಂ. 335

ಅಧಿಕಾರವಿರುವ ಅಧಿಕಾರಿ
ದಿನಾಂಕ: 21.08.2024 **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.**
ಸ್ಥಳ : ಬೆಂಗಳೂರು (102-ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011-66115609, ಇಮೇಲ್: complaint@acreindia.in. ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **13.05.2021** ರಂದು ಕರೆದು ಸಾಲಗಾರ **ಕೇಶವ ಮೂರ್ತಿ ಎಚ್ಟಿ ಮತ್ತು ಸೀತಾ ಲಕ್ಷ್ಮಿ ಎಚ್‌ಕೆ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 27,93,913.37 (ರೂಪಾಯಿ ಇಪ್ಪತ್ತೇಳು ಲಕ್ಷ ತೊಂಬತ್ತ ಮೂರು ಸಾವಿರದ ಒಂಬೈನೂರ ಹದಿಮೂರು ಮತ್ತು ಮೂವತ್ತೇಳು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBGM00235597** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **01.05.2021** ರ ವರೆಗಿನ ಮೊತ್ತ ಮತ್ತು ಆದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **21.08.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 27,93,913.37 (ರೂಪಾಯಿ ಇಪ್ಪತ್ತೇಳು ಲಕ್ಷ ತೊಂಬತ್ತ ಮೂರು ಸಾವಿರದ ಒಂಬೈನೂರ ಹದಿಮೂರು ಮತ್ತು ಮೂವತ್ತೇಳು ಪೈಸೆ ಮಾತ್ರ) 01.05.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಸೈಟ್ ಸಂಖ್ಯೆ-334, ಕಥಾ ನಂ 401/334, ಕೆತ್ತಿದ ಪರಿವರ್ತನೆ, ಆಸ್ತಿ ಸೈ ನಂ-59(59/1 ಮತ್ತು 59/2), 60,61,62, 63, 64, 65, 68, 69/2, 70/2 , 70/3, 70/4 ಕೋನಸಂದ್ರ ಗ್ರಾಮ, ಜಿಗಣಿ ಹೋಬಳಿ, ಆನೇಕಲ್, ತಾಲೂಕು ಬೆಂಗಳೂರು -560099, ಕರ್ನಾಟಕ.

ಅಧಿಕಾರವಿರುವ ಅಧಿಕಾರಿ
ದಿನಾಂಕ: 21.08.2024 **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**
ಸ್ಥಳ : ಬೆಂಗಳೂರು (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**)

ಇಜ್ಮೋ ಲಿಮಿಟೆಡ್
CIN-L72200KA1995PLC018734
ನೋಂದಾಯಿತ ಕಛೇರಿ: ನಂ.177/2ಸಿ, ಬಿಳೇಕಹಳ್ಳಿ ಕೈಗಾರಿಕಾ ಪ್ರದೇಶ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076,
E-Mail-info@izmoltd.com www.izmoltd.com

29ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ಎ. ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ('ಎಂಸಿಎ') ಹೊರಡಿಸಿದ ಸುತ್ತೋಲೆ ಸಂಖ್ಯೆ 14/2020, ನಂ.17/2020, ನಂ.20/2020, ನಂ.20/2021, ಮತ್ತು ನಂ.02/2021 ಗಳಿಗೆ ಕ್ರಮವಾಗಿ ದಿನಾಂಕ ಏಪ್ರಿಲ್ 8, 2020, ಏಪ್ರಿಲ್ 13, 2020 ಮೇ 5, 2020, ಡಿಸೆಂಬರ್ 08. 2021, ಜನವರಿ 13, 2021, ಡಿಸೆಂಬರ್ 14, 2021, ಮೇ 05, 2022 ಮತ್ತು ಡಿಸೆಂಬರ್ 28. 2022 ರಂತೆ ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ. 09/2023 ದಿನಾಂಕ 25ನೇ ಸೆಪ್ಟೆಂಬರ್, 2023 ಕ್ರಮವಾಗಿ (ಇನ್ನು ಮುಂದೆ "ಎಂಸಿಎ ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುವುದು) ಹಾಗೂ ಸೆಬಿ ಸುತ್ತೋಲೆ ನಂ. SEBI/HO/CFD/CMD1/ CIR/P/2020/79 ದಿನಾಂಕ ಮೇ 12, 2020 ಮತ್ತು ಸುತ್ತೋಲೆ ನಂ. SEBI/HO/CFD/CMD2/ CIR/P/2021/11 ದಿನಾಂಕ ಜನವರಿ 15, 2021, ಸುತ್ತೋಲೆ ಸಂಖ್ಯೆ. SEBI/HO/DDHS/P/CIR/2022/0063 ದಿನಾಂಕ 13ನೇ ಮೇ, 2022 ಮತ್ತು ಸುತ್ತೋಲೆ ಸಂಖ್ಯೆ SEBI/HO/CFD/PoD/-2/P/CIR/2023/4 ದಿನಾಂಕ ಜನವರಿ 5, 2023 ಮತ್ತು ಸುತ್ತೋಲೆ ನಂ.SEBI/HO/CFD/CFD-PoD2/P/CIR/2023/167 ದಿನಾಂಕ ಅಕ್ಟೋಬರ್ 07, 2023 ಅನ್ನು ಓದಿಕೊಂಡಂತೆ (ಇನ್ನು ಮುಂದೆ "ಸೆಬಿ ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುವುದು) ಕಂಪನಿಗಳು ಅವರ ವಿಶೇಷ ಸಾಮಾನ್ಯ ಸಭೆಯನ್ನು ವೀಡಿಯೊ ಕಾನ್ಫರೆನ್ಸಿಂಗ್('ವಿಸಿ') ಮೂಲಕ ಅಥವಾ ಇತರ ಆಡಿಯೊ-ವಿಷುಯಲ್ ಸಾಧನಗಳು ('ಒಎವಿಎಂ') ಮೂಲಕ ನಡೆಸಲು ಅನುಮತಿಸಲಾಗಿರುತ್ತದೆ. ಆ ಮೂಲಕ, ಸದಸ್ಯರ ಭೌತಿಕ ಹಾಜರಾತಿಯ ಬದಲಾಗಿ ಅದಕ್ಕೆ ಅನುಗುಣವಾಗಿ ಕಂಪನಿಗಳ ಕಾಯ್ದೆ, 2013 ರ (ತಿದ್ದುಪಡಿಯಂತೆ) ("ಕಾಯಿದೆ") ಸೆಬಿಯ ನಿಯಮಗಳು (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗ ಪಡಿಸುವಿಕೆ ಅವಶ್ಯಕತೆಗಳು) ನಿಯಮಗಳು, 2015 (ತಿದ್ದುಪಡಿಯಂತೆ) (ಲಿಸ್ಟಿಂಗ್ ವಿಧೇಯಕ) ಅಡಿಯಲ್ಲಿ ಸಭೆ ನಡೆಸಲು ಸೂಚಿಸಿದೆ. ನೋಟೀಸಿನಲ್ಲಿ ತಿಳಿಸಿರುವಂತೆ ಸಭೆಯಲ್ಲಿ ವ್ಯಾಪಾರ ವಹಿವಾಟು ಮಾಡುವ ಸಲುವಾಗಿ ಇಜ್ಮೋ ಲಿಮಿಟೆಡ್ (ದಿ "ಕಂಪೆನಿ")ನ **29ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ("ಎಜಿಎಂ") ಗುರುವಾರ ಸೆಪ್ಟೆಂಬರ್ 26ನೇ, 2024ರಂದು ಮಧ್ಯಾಹ್ನ 12.30ಗೆ (ಐಎಸ್‌ಟಿ)** ಸಭೆಯನ್ನು ವೀಡಿಯೊ ಕಾನ್ಫರೆನ್ಸಿಂಗ್('ವಿಸಿ') ಮೂಲಕ ಅಥವಾ ಇತರ ಆಡಿಯೊ-ವಿಷುಯಲ್ ಸಾಧನಗಳು ('ಒಎವಿಎಂ') ಮೂಲಕ ನಡೆಸಲಾಗುವುದೆಂದು ಈ ಮೂಲಕ ನೋಟೀಸ್ ನೀಡಲಾಗಿದೆ.

ಬಿ. ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ('ಎಂಸಿಎ') ಮತ್ತು ಸೆಬಿ ಹೊರಡಿಸಿದ ಸುತ್ತೋಲೆ ಅನುಸಾರ 28ನೇ ಎಜಿಎಂ ಮತ್ತು **ಮಾರ್ಚ್ 31, 2024ರಂದು ಅಂತ್ಯವಾಗುವಂತೆ** ಆರ್ಥಿಕ ವರ್ಷದ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಯನ್ನು, ರಿಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟ್ / ಕಂಪನಿ/ ಠೇವಣಿದಾರರು ಅವರೊಂದಿಗೆ ನೊಂದಾಯಿಸಲಾದ ಸದಸ್ಯರ ಇ-ಮೇಲ್ ಐಡಿಗಳಿಗೆ ರವಾನಿಸಲಾಗಿದೆ. ಷೇರುದಾರರ ಗಮನಕ್ಕೆ ತರುವುದೇನೆಂದರೆ ಎಜಿಎಂ ಸೂಚನೆ ಜೊತೆಗೆ ವಾರ್ಷಿಕ ವರದಿ, ಇ-ಮತದಾನದ ಸೂಚನೆಗಳು ಮತ್ತು ವಿಸಿ/ಒಎವಿಎಂ ಮೂಲಕ ಎಜಿಎಂ'ನಲ್ಲಿ ಭಾಗವಹಿಸುವಿಕೆ ಬಗ್ಗೆ ವಿವರಗಳು ಕಂಪೆನಿ ವೆಬ್‌ಸೈಟ್ ಮತ್ತು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್,. ಅಂದರೆ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (ಆರ್‌ಟಿಎ)'ರವರಾದ ಮೆ॥ ಕೆಮಿಯೋ ಕಾರ್ಪೋರೇಟ್ ಸರ್ವಿಸಸ್ ಲಿಮಿಟೆಡ್ ರಲ್ಲಿ ಲಭ್ಯವಿರುತ್ತದೆ ಎಂದು ಷೇರುದಾರರಿಗೆ ತಿಳಿಸಲಾಗಿದೆ. ವಿಸಿ ಅಥವಾ ಒಎವಿಎಂ ಮೂಲಕ ಎಜಿಎಂಗೆ ಸೇರ್ಪಡೆಗೊಳ್ಳುವ ಸೂಚನೆ ಮತ್ತು ಇ-ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ ವಿಧಾನವನ್ನು ಸೂಚನೆ ಮತ್ತು ವಾರ್ಷಿಕ ವರದಿಯೊಂದಿಗೆ ಒದಗಿಸಲಾಗುವುದು.

ಸಿ. ಭೌತಿಕ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಅಥವಾ ಅವರ ಇ-ಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರು, ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸಿದ ನಂತರ, ಈ ಕೆಳಗಿನ ದಾಖಲೆಗಳನ್ನು ಕಂಪನಿಗೆ *company.secretary@izmoltd.com* ಅಥವಾ ಆರ್‌ಟಿಎ ಗೆ *jessy@cameoindia.com* ನಲ್ಲಿ ಕಳುಹಿಸುವ ಮೂಲಕ ತಮ್ಮ ಮತಗಳನ್ನು ಇ-ಮತದಾನ ವ್ಯವಸ್ಥೆಯ ಮೂಲಕ ಸಲ್ಲಿಸಬಹುದು.

1. ಹೆಸರು, ಫೋಲಿಯೊ ಸಂಖ್ಯೆ / ಡಿಪಿ ಐಡಿ, ಕ್ಲೈಂಟ್ ಐಡಿ ಮತ್ತು ಷೇರುಗಳ ಸಂಖ್ಯೆ ಮತ್ತು ಸಂಪೂರ್ಣ ಅಂಚೆ ವಿಳಾಸವನ್ನು ನಮೂದಿಸಿ ಸಹಿ ಮಾಡಿದ ವಿನಂತಿಯ ಪತ್ರವನ್ನು ಸ್ಕ್ಯಾನ್ ಮಾಡಲಾದ ಪ್ರತಿಗಳು.
2. ಪಾನ್‌ಕಾರ್ಡ್'ನ ಸ್ವಯಂ ದೃಢೀಕೃತ ಪ್ರತಿ.
3. ಷೇರು ಹೂಡಿಕೆಯಲ್ಲಿ ನೋಂದಾಯಿಸಿರುವಂತೆ ಸದಸ್ಯರುಗಳ ಮಾನ್ಯವಾದ ವಿಳಾಸ ಪುರಾವೆಗಳು (ಆಧಾರ್ ಕಾರ್ಡ್ / ಇತ್ತೀಚಿನ ವಿದ್ಯುತ್ ಬಿಲ್ / ಇತ್ತೀಚಿನ ದೂರವಾಣಿ ಬಿಲ್ / ಪಾಸ್‌ಪೋರ್ಟ್ /ಮತದಾರರ ಗುರುತಿನ ಚೀಟಿ /ಬ್ಯಾಂಕ್ ಪಾಸ್‌ಬುಕ್ ವಿವರಗಳು) ಇವುಗಳ ಸ್ವಯಂ ದೃಢೀಕರಿಸಿದ ಸ್ಕ್ಯಾನ್ ಮಾಡಿದ ಪ್ರತಿ.

ಡಿ. ಕಂಪೆನಿಗಳ ಕಾಯ್ದೆ, 10 ರ ಸೆಕ್ಷನ್ 91 ರ ಅನುಸಾರ, ಕಂಪೆನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 (ತಿದ್ದುಪಡಿ ಅನುಸಾರ) ರ ಪ್ರಕಾರ ನಿಯಮಾವಳಿಗಳ ನಿಯಮ 42 ರೊಂದಿಗೆ ತಿದ್ದುಪಡಿ ಮಾಡಿದಂತೆ. ಸದಸ್ಯರ ನೋಂದಣಿ ಮತ್ತು ಕಂಪನಿಯ ಷೇರು ವರ್ಗಾವಣೆ ರಿಜಿಸ್ಟರ್ ಅನ್ನು **ಶುಕ್ರವಾರ ಸೆಪ್ಟೆಂಬರ್ 20, 2024 ರಿಂದ ಗುರುವಾರ, ಸೆಪ್ಟೆಂಬರ್ 26, 2024 (ಎರಡೂ ದಿನಗಳನ್ನು ಒಳಗೊಂಡಂತೆ)**ರವರೆಗೆ ಮುಚ್ಚಲಾಗುತ್ತದೆ.

ಇ. ಷೇರುದಾರರು ತಮ್ಮ ಮತಗಳನ್ನು ಚಲಾಯಿಸಲು ಅರ್ಹತೆಯನ್ನು ನಿರ್ಧರಿಸಲು **ದಿನಾಂಕ 19, ಸೆಪ್ಟೆಂಬರ್ 2024ರ ಗುರುವಾರ**ವನ್ನು ಕಟ್-ಆಫ್ ದಿನಾಂಕವೆಂದು ನಿಗದಿಪಡಿಸಲಾಗಿದೆ.

ಎಫ್. ಮಾರ್ಚ್ 31, 2024 ಕ್ಕೆ ಕೊನೆಗೊಂಡ ಹಣಕಾಸು ವರ್ಷದ ವಿವರಣಾತ್ಮಕ ಹೇಳಿಕೆ ಮತ್ತು ವಾರ್ಷಿಕ ವರದಿಯೊಂದಿಗೆ ಸೂಚನೆಯು ಕಂಪನಿಯ ವೆಬ್‌ಸೈಟ್ **viz. www.izmoltd.com** ನಲ್ಲಿ ಲಭ್ಯವಿರುತ್ತದೆ. ಮತ್ತು ಕಂಪನಿಯ ಇಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾಗಿರುವ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ನಲ್ಲಿ ಅಂದರೆ **www.bseindia.com** ಮತ್ತು **www.nseindia.com.** ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್‌ನ ವೆಬ್‌ಸೈಟ್ (CDSL) **https://www.evotingindia.com/PageDownload.jsp**

ಇಜ್ಮೊ ಲಿಮಿಟೆಡ್ ಪರವಾಗಿ
ಸಹಿ/-
ಸ್ಥಳ : ಬೆಂಗಳೂರು **ಸೊನಾಲ್ ಜಾಜು**
ದಿನಾಂಕ: ಆಗಸ್ಟ್ 26, 2024 **ಕಂಪನಿ ಕಾರ್ಯದರ್ಶಿ**

Muthoot Finance

ಚಿನ್ನದ ಹರಾಜಿನ ಸೂಚನಾ ಪತ್ರ

GSTN - 29AABCT0343B1ZU

Registered Office: 2nd Floor, Muthoot Chambers, Banerji Road, Kochi-682 018, Kerala, India. CIN:L65910KL1997PLC011300, Ph:+91 484 2396478. 2394712, Fax:+91 484 2396506. mails@muthootgroup.com, www.muthootfinance.com

ಈ ಮೂಲಕ ಎಚ್ಚರಿಕೆ ಮಾಹಿತಿಯನ್ನು ನೀಡುತ್ತಿದ್ದು ನೀವು ನಿಮ್ಮ ಚಿನ್ನಾಭರಣವನ್ನು ಈ ಕೆಳಕಂಡ ಶಾಖೆಗಳಲ್ಲಿ ಗಿರಿವಿ ಇಟ್ಟಿದ್ದು, ಪುನರಾವರ್ತಿತ ಪ್ರಕಟಣೆಗಳನ್ನು ನೀಡಿದ್ದರೂ ಸಹ ಪಡೆದುಕೊಂಡ ಬಾಕಿ ಮೊತ್ತವನ್ನು ನೀಡಲು ವಿಫಲರಾಗಿದ್ದಿರಿ. ಆದ್ದರಿಂದ ಕಂಪನಿಯು ಸಂಬಂಧಪಟ್ಟ ಶಾಖೆಗಳಲ್ಲಿ ದಿನಾಂಕ 30.08.2024 ರಂದು ಬೆಳಿಗ್ಗೆ 10.00 ಗಂಟೆಗೆ ಹರಾಜು ಮಾಡಲು ನಿರ್ಧರಿಸಿರುತ್ತಾರೆ. ಮೇಲ್ಕಂಡ ದಿನಾಂಕದಂದು ಯಾವುದೇ ಕಾರಣದಿಂದ ಹರಾಜು ನಡೆಯದಿದ್ದರೆ, ಹರಾಜುಗಾರರು ಹರಾಜು ಪ್ರಕ್ರಿಯೆಯನ್ನು ಮುಂದೂಡುವ ಹಕ್ಕನ್ನು ಹೊಂದಿರುತ್ತಾರೆ ಹಾಗೂ ಯಾವುದೇ ಸೂಚನಾ ಪತ್ರ ನೀಡದೆ ಎರಡನೇ ಹರಾಜಿನ ದಿನಾಂಕದಂದು ಅಥವಾ ಅನಂತರದ ದಿನಾಂಕಗಳಂದು ಹರಾಜು ಪ್ರಕ್ರಿಯೆಯನ್ನು ಈ ಕೆಳಗೆ ನೀಡಿರುವ ವಿಳಾಸದಲ್ಲಿ ನಡೆಸಲಾಗುತ್ತಾದೆ. ಹಾರಾಜು ಹಾಕುವ ದಿನಾಂಕದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ,ಬದಲಾದ ದಿನಾಂಕವನ್ನು ಹರಾಜು ನಡೆಯುವ ಸ್ಥಳದಲ್ಲಿ, ಸೂಚಿಸಲಾಗುವುದು.

ಎರಡನೇ ಹರಾಜು ದಿನಾಂಕ : **06.09.2024,10:00AM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, # 474/418, 3ನೇ ವಿಭಾಗ ವೀರ ಮದಕರಿ ನಾಯಕ ರಸ್ತೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹತ್ತಿರ ಗುಂಡ್ಲುಪೇಟೆ - 571 111 (ಚಾಮರಾಜನಗರ ಜಿಲ್ಲೆ) (3477)

ಚಾಮರಾಜನಗರ(KA)(3334)- MLM- 6, MSL- 12391, 12398, 12422, 12424, 12921, 13259, ಗುಂಡ್ಲುಪೇಟೆ VMN ರಸ್ತೆ(3477)- MHL- 966, MSL- 9108, 9176, 9815, SRS- 17, ZIP- 68, ಗುಂಡ್ಲುಪೇಟೆ(KA)(1797)- BTB- 31, MAL- 10719, SRS- 11, ಹನೂರು(KA)(3902)- MAL- 8448, 9193, 9195, 9473, 9487, MHL- 127, 166, 550, MSL- 11556, 11857, 11915, 11921, 12229, 12287, SRS- 191, ಕೊಳ್ಳೇಗಾಲ(KA)(3054)- MAL- 13662, 14748, 14749, 15190, 15445, MDL- 439, MHL- 204, 570, 1168, 1416, 1791, MLM- 13, MSL- 20000, 20096, 20127, 20208, 20330, 20482, 20573, 21070, 21202, 21203, 21240, 21247, 21354, 21428, 21905, 22066, 22465, SRS- 150, 243, 399, 401, 422, 424, ZIP- 80, 84, ತೆರಕಣಾಂಬಿ(KA)(4065)- MSL- 5297,
Low Quality/Low touch/Insufficient weight deduction accounts details:- ಗುಂಡ್ಲುಪೇಟೆ VMN ರಸ್ತೆ(3477)- MHL- 1410, MSL- 10903,

ಎರಡನೇ ಹರಾಜು ದಿನಾಂಕ : **05.09.2024,02:00PM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, #31, ಎಂಐಜಿ, ಅಕ್ಷಯ ಭಂಡಾರ್ ಸರ್ಕಲ್ ಕುವೆಂಪುನಗರ ಮೈಸೂರು-570 023 (ಮೈಸೂರು ಜಿಲ್ಲೆ) (1908)

ಬನ್ನೂರು(KA)(3973)- MDL- 270, MSL- 8681, SRS- 89, 94, 95, ಬಿಳಿಕೆರೆ(KA)(4657)- LMS- 6, 12, MAL- 1569, 1585, MDL- 118, MHL- 159, 227, 386, MSL- 2848, 2993, ಎಚ್.ಡಿ ಕೋಟೆ(KA)(2152)- MSL- 20860, 21257, ಕೆಆರ್ ನಗರ(KA)(3424)- MSL- 10715, 10718, ಮೈಸೂರು - ದೇವರಾಜ್ ಯುಆರ್ಎಸ್ ರಸ್ತೆ(0221)- MAL- 10442, MHL- 718, 867, MSL- 46236, SRS- 43, ಮೈಸೂರು - ಎನ್.ಆರ್. ಮೊಹಲ್ಲಾ ರಸ್ತೆ(1031)- MAL- 8994, MBL- 9535, MSL- 20093, ಮೈಸೂರು - ಇನ್ಫೋಸಿಸ್ ರಸ್ತೆ(3607)- MHL- 854, MSL- 12039, 12061, 12099, 12102, 12116, 12117, 12179, 12210, SRS- 14, 58, 62, ಮೈಸೂರು-ಕನಕದಾಸ ನಗರ್(4178)- MHL- 656, 705, ಮೈಸೂರು-ವಿದ್ಯಾರಣ್ಯಪುರ(0438)- MHL- 882, 1086, MSL- 18560, 18706, 18839, SRS- 81, ಮೈಸೂರು-ಭೋಗಾದಿ(2088)- MAL- 3706, MHL- 632, 853, MSL- 9657, 9798, 9846, SRS- 110, TON- 12, ಮೈಸೂರು-(1694)- BVS- 190, MAL- 6745, MHL- 738, MSL- 16076, SRS- 123, ಮೈಸೂರು-ಉದಯಗಿರಿ(1702)- MHL- 789, MLM- 9, MSL- 15070, 15105, 15269, 15290, TOS- 10, ಮೈಸೂರು-ಹೆಬ್ಬಾಲ್(1695)- LMS- 255, MBL- 13963, MHL- 1471, MML- 8511, MSL- 23440, 23748, 24134, 24307, 24309, ಮೈಸೂರು-ಹಿನಕಲ್(2405)- MHL- 496, 1198, 1272, 1596, MSL- 18539, 18971, SRS- 260, 261, TOS- 41, ಮೈಸೂರು-ಹುಣಸೂರ್(2501)- MAL- 6335, 6371, MHL- 424, 566, MSL- 9936, TMS- 259, 277, ಮೈಸೂರು-ಜೆಪಿ ನಗರ್(2036)- MAL- 6758, 6849, 7146, MHL- 600, 743, MSL- 11936, 12143, 12514, 12665, ಮೈಸೂರು-ಕಾಳಿದಾಸ ರಸ್ತೆ(1319)- LMS- 133, MAL- 8728, 9074, MDL- 543, MHL- 226, 811, 1235, 1254, 1410, 1443, 1639, 1710, 1715, 2087, MHP- 682, MLM- 85, 86, MSL- 22868, 23112, 23163, 23439, 23573, SRS- 15, 61, 198, 203, 208, TMS- 189, ಮೈಸೂರು-(1908)- MAL- 5034, MDL- 327, MHL- 477, 504, MLM- 3, MSL- 13486, 13634, 13669, SRS- 9, 40, 149, 174, 179, ಮೈಸೂರು-ಯುಆರ್ಎಸ್ ರಸ್ತೆ-ಎನ್‌ಎಸ್ ರಸ್ತೆ ಜಂಕ್ಷನ್(2224)- MDL- 171, MSL- 8434, 8515, 8661, TOS- 8, ಮೈಸೂರು-ವಿವೇಕಾನಂದ ನಗರ್(1980)- MHL- 116, 118, MLM- 61, MSL- 12024, 12181, 12300, SRS- 64, 93, ನಂಜನಗೂಡು(1270)- LMS- 73, MAL- 21087, MHL- 947, 1498, MSL- 30115, SRS- 102, 103, TMS- 24, ನಂಜನಗೂಡು - ಆರ್ಪಿ ರಸ್ತೆ(3660)- MAL- 5421, MSL- 7168, ಪಿರಿಯಾಪಟ್ಟಣ(KA)(3102)- LMS- 40, 41, MAL- 7357, 7358, 7359, MSL- 10467, 10587, 10624, 10714, 11003, SRS- 90, ಸರಗೂರು(KA)(3285)- MAL- 12182, 12203, 12523, MHL- 14, 580, MSL- 11727, 11860, 11939, 12052, 12065, 12101, 12255, 12284, 12422, 12488, 12536, SRS- 68, 78, WBP- 257, ತಿ.ನರಸೀಪುರ(KA)(3962)- MAL- 7159, MHL- 717, MSL- 6236, ಯೆಲ್ವಾಲ್(KA)(3121)- MAL- 8100, 8101, MBL- 5607, MHL- 1026, 1671, MSL- 11543, 11570, 11635, 11665, TMS- 136, ZIP- 14,
Low Quality/Low touch/Insufficient weight deduction accounts details:- ಮೈಸೂರು - ದೇವರಾಜ್ ಯುಆರ್ಎಸ್ ರಸ್ತೆ(0221)- MAL- 10990, MHL- 2122, MSL- 47008, ಮೈಸೂರು-ಹೆಬ್ಬಾಲ್(1695)- MLM- 1078, ತಿ.ನರಸೀಪುರ(KA)(3962)- MHL- 1941,

ಎರಡನೇ ಹರಾಜು ದಿನಾಂಕ : **06.09.2024,05:00PM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ ಕೆಎಫ್‌ಎಸ್‌ಸಿ ಕ್ರಾಸ್, ಆರ್.ಸಿ. ರಸ್ತೆ ಹಾಸನ-573 201 (ಹಾಸನ ಜಿಲ್ಲೆ) (0747)

ಅರಕಲಗೂಡು(KA)(4390)- LMS- 5, MAL- 8907, MSL- 7471, 7892, 7957, 7985, SRS- 100, ಅರಸೀಕೆರೆ(KA)(2363)- LMS- 116, MAL- 14200, 14386, 15131, 15310, 15330, 15346, 15367, MHL- 444, 763, 772, 894, 1074, 1376, MSL- 14931, 15044, 15095, 15130, 15131, 15267, 15725, 15840, 15886, 16097, 16275, 16340, 16572, 16615, 16754, SRS- 68, TCB- 4, TMS- 90, ಬೇಲೂರು-(4046)- MDL- 217, 218, MHL- 581, 635, MSL- 6255, 6521, 6562, 6862, 7029, 7072, 7139, 7286, 7371, 7457, 7466, 7491, 7496, 7530, ಚನ್ನರಾಯಪಟ್ಟಣ(KA)(2781)- MAL- 12519, 12820, MDD- 57, MHL- 640, 961, MSL- 13364, 13399, 13493, 13494, 13511, 13629, 13918, 13984, 14105, SRS- 24, 128, 134, ಹಾಸನ - ಸಾಲಗಾಮೆ ರಸ್ತೆ(KA)(3957)- MAL- 9017, 9246, MDL- 766, MHL- 1093, 1487, 1718, 2025, MSL- 14965, 15146, 15238, 15291, 15827, SRS- 81, ಹಾಸನ(0747)- MAL- 26863, MHL- 677, 2336, 2661, 2707, MLM- 13, MSL- 57860, 58781, 59043, 59075, 59108, 59186, 59197, 59465, 59466, 59563, 59720, 59915, 59957, SRS- 33, ಹಾಸನ-ಬಿಎಂ ರಸ್ತೆ(2336)- MAL- 16231, 16327, MSL- 20215, 20357, 20375, 20443, 20445, SRS- 210, ಕೊಣನೂರ(KA)(3734)- MAL- 11421, MSL- 7984, 8425, 8540, SRS- 36, ಸಕಲೇಶಪುರ(KA)(4270)- MAL- 8556, 9114, 10424, 10433, 10477, 10674, MHL- 931, MSL- 11979, 12252, 12751, 13749, 13821, 13994, 14110, 14273, 14696, 14754, 15057, 15651, 15682, 15955, 16072, 16304, SRS- 54, 106,
Low Quality/Low touch/Insufficient weight deduction accounts details:- ಬೇಲೂರು-(4046)- MSL- 9155,

ಎರಡನೇ ಹರಾಜು ದಿನಾಂಕ : **05.09.2024,04:00PM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, ಎಬಿಜೆ ಕಾಂಪ್ಲೆಕ್ಸ್, ಬಸ್ ನಿಲ್ದಾಣದ ಹತ್ತಿರ ಬಿ.ಎಂ. ರಸ್ತೆ ಶ್ರೀರಂಗಪಟ್ಟಣ-571 438 (ಮಂಡ್ಯ ಜಿಲ್ಲೆ) (1869)

ಹಲಗೂರು(KA)(4828)- MHL- 606, MSL- 2452, 2615, 2665, SRS- 173, ಕೆ.ಎಂ. ದೊಡ್ಡಿ-ಕೆಮ್ ದೊಡ್ಡಿ(KA)(4096)- MAL- 7983, MDL- 319, MHL- 123, 697, 979, MSL- 8879, 8881, 8944, 9022, 9106, 9126, 9159, 9250, SRS- 157, ಕೃಷ್ಣರಾಜಪೇಟೆ(KA)(2212)- MBL- 7175, MHL- 434, MSL- 15060, 15095, 15177, 15391, ಮದ್ದೂರು(KA)(2626)- MAL- 6895, MDL- 32, 89, MHL- 236, 266, 356, 437, 841, MML- 1350, MSL- 10283, 10344, 10365, 10459, 10491, 10652, 10716, SRS- 94, 110, 240, ZIP- 44, ಮಳವಳ್ಳಿ(KA)(2182)- MAL- 9897, 10070, MSL- 11444, 11472, ಮಂಡ್ಯ-100 ಅಡಿ ರಸ್ತೆ(1993)- LMS- 9, MAL- 5991, 6170, MDD- 12, MHL- 496, 498, 501, 832, MLM- 18, MSL- 9863, 9916, 10045, 10100, 10117, 10174, 10177, 10179, SRS- 14, 23, 34, 153, 154, 178, TCB- 10, TMS- 19, TON- 4, ಮಂಡ್ಯ-ಬಂಡೀಗೌಡ ಲೇಔಟ್(1844)- MAL- 4834, 4968, MDL- 117, MHL- 471, 629, MSL- 9236, 9238, 9269, 9573, SRS- 94, TMS- 58, ನಾಗಮಂಗಲ(KA)(4102)- MHL- 383, 516, MSL- 3639, 3643, 3784, 3795, 3796, 3805, TMS- 227, TON- 8, ಪಾಂಡವಪುರ(KA)(3357)- MAL- 8702, MHL- 124, 401, 582, MLM- 7, MSL- 9848, 9889, 10114, 10290, 10392, 10542, SRS- 122, ಶ್ರೀರಂಗಪಟ್ಟಣ(KA)(1869)- MSL- 10946, 11107, 11118, 11214, 11238, SRS- 106, 231,
Low Quality/Low touch/Insufficient weight deduction accounts details:- ಮಂಡ್ಯ-100 ಅಡಿ ರಸ್ತೆ(1993)- MHL- 2364, 2495,

ಎರಡನೇ ಹರಾಜು ದಿನಾಂಕ : **05.09.2024,10:00AM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ ಸೈಟ್ ಸಂ 3, ಖಾತಾ, 4702/3A, ಚನ್ನಪ್ಪ ಬಡಾವಣೆ, ಬೆಂಗಳೂರು ನಗರ, ಕರ್ನಾಟಕ, 562123 (ಬೆಂಗಳೂರು ಗ್ರಾಮಾಂತರ ಜಿಲ್ಲೆ) (4254)

ಚೆನ್ನಪಟ್ಟಣ ಪಟ್ಟಣ(1793)- BTN- 57, MAL- 16008, 16179, 16216, 16238, 17133, MDL- 515, MHL- 143, 493, 671, 931, 1077, 1180, 1226, 1244, 1256, 1327, MSL- 14402, 14757, 15296, 15319, 15324, 15369, 15389, 15432, 15461, 15478, 15559, 15590, 15599, 15750, 15819, 15991, 16009, 16164, SRS- 38, 58, TMS- 304, ಕುವೆಂಪುನಗರ ಶಾಖೆ(3286)- MAL- 7431, 7573, 7617, MHL- 140, 312, 332, 342, MSL- 11328, NCA- 19, SRS- 37, 40, 116, 130, 131, 139, 239, 240, TCB- 18,

ಟಿಪ್ಪಣಿ:- ಹರಾಜು ದಿನಾಂಕಕ್ಕೂ (30.08.2024) ಮೊದಲು ಚಿನ್ನದ ಆಭರಣಗಳನ್ನು ಗ್ರಾಹಕರು ಬಿಡುಗಡೆ ಮಾಡಿಕೊಳ್ಳಬಹುದು.
ಟಿಪ್ಪಣಿ:- ಐಡೆಂಟಿಟಿ ಕಾರ್ಡ್/ಪ್ಯಾನ್ (PAN) ಕಾರ್ಡ್ ಸಂ./ಜಿಎಸ್ಟಿ ಸರ್ಟಿಫಿಕೇಟ್ ಅನ್ನು ಸಲ್ಲಿಸುವಂತೆ ಬಿಡ್ದರ್ಗಳಿಗೆ ವಿನಂತಿ ಮಾಡಲಾಗಿದೆ.
(ನೋಂದಾಯಿತ ಡೀಲರ್ಗಳಾಗಿದ್ದರೆ) ಯಶಸ್ವಿಯಾದ ಬಿಡ್ದರ್ಗಳು ಸಂಪೂರ್ಣ ಹರಾಜು ಮೊತ್ತವನ್ನು RTGS ಮೂಲಕ ವರ್ಗಾವಣೆ ಮಾಡಬೇಕು

For Muthoot Finance,
Mr. Sam George, Advocate, No 313, # 3 in 2nd Floor, Bhaskar Arcade,
Opp.Durgaparameshwari Temple Arch, Narasipura Layout, Vidyaranyapura Main Road, Vidyaranyapura, Bengaluru-560097

Place : ಮೈಸೂರು
Date : 25.08.2024

ಸಮಾಚಾರ ಸಣ್ಣದಲ್ಲ

ಶ್ರೀಕೃಷ್ಣ ಜನ್ಮಾಷ್ಟಮಿ ಸಂಚಾರದಲ್ಲಿ ಬದಲು

ಬೆಂಗಳೂರು: ನಗರದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಆ.26 ಹಾಗೂ 27ರಂದು ಕೆಲ ರಸ್ತೆಗಳಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಿ ಸಂಚಾರ ಪೊಲೀಸರು ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದ್ದಾರೆ. ನಗರದ ದೇವೇಂದ್ರ ಮುಖ್ಯ ರಸ್ತೆಯಲ್ಲಿರುವ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುವುದರಿಂದ ಸಂಚಾರ ದಟ್ಟಣೆಯುಂಟಾಗುವ ಸಾಧ್ಯತೆಯಿದೆ. ಈ ಹಿನ್ನೆಲೆ ಪೊಲೀಸರು ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದ್ದಾರೆ. ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ದೇವಸಂದ್ರ ಮುಖ್ಯರಸ್ತೆಯಲ್ಲಿರುವ ವೇಣು ಗೋಪಾಲ ಸ್ವಾಮಿ ದೇವಸ್ಥಾನದ ಟ್ರಸ್ಟ್ ವತಿಯಿಂದ ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಪೂಜಾ ಮತ್ತು ರಥೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ. ಈ ರಸ್ತೆಯಲ್ಲಿ ವಾಹನ ಸಂಚಾರವನ್ನು ಸೋಮವಾರ ಬೆಳಗ್ಗೆ 8 ರಿಂದ ಮಂಗಳವಾರ ಬೆಳಗ್ಗೆ 6 ಗಂಟೆವರೆಗೆ ನಿರ್ಬಂಧಿಸಲಾಗಿದೆ. ವಾಹನ ಸವಾರರ ಅನುಕೂಲಕ್ಕಾಗಿ ಸಂಚಾರ ಪೊಲೀಸರು ಮಾರ್ಗ ಸೂಚಿಸಿದ್ದಾರೆ.

ಬೆಲ್ಲದ ಆರೋಪ ನಿರಾಧಾರ: ಎಂಬಿಪಿ

ಬೆಂಗಳೂರು: ಜಿಂದಾಲ್ ಕಂಪನಿ ಹೈಕೋರ್ಟ್ ಮೊರೆಹೋಗಿದ್ದು, ಆದೇಶದಂತೆ ಜಮೀನು ನೀಡಲು ಸರಕಾರ ತೀರ್ಮಾನಿಸಿದ್ದು, ಪ್ರತಿಪಕ್ಷದ ಉಪನಾಯಕ ಅರವಿಂದ ಬೆಲ್ಲದ ಆರೋಪ ನಿರಾಧಾರ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ ಪಾಟೀಲ ಸ್ಪಷ್ಟಪಡಿಸಿದ್ದಾರೆ. ಈ ಕುರಿತು ಪ್ರಕಟಣೆ ಮೂಲಕ ತಿಳಿಸಿರುವ ಅವರು, ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರ ಜಿಂದಾಲ್ ಕಂಪನಿಗೆ 3,666 ಎಕರೆ ಕೊಡಲು ತೀರ್ಮಾನಿಸಿ, ಅದರಂತೆ ಸರಕಾರಿ ಆದೇಶವನ್ನೂ ಹೊರಡಿಸಿತ್ತು. ಹೀಗಾಗಿ ಮಾ.12 ರಂದು ಹೈಕೋರ್ಟ್ ಸೂಚನೆಯಂತೆ ಸಚಿವ ಸಂಪುಟ ಸಭೆ ತೀರ್ಮಾನಿಸಿದ್ದು, ಇದರಲ್ಲಿ ಯಾವ ಅಕ್ರಮವೂ ನಡೆದಿಲ್ಲ ಎಂದು ತಿಳಿಸಿದ್ದಾರೆ. ಈ ವಿಷಯದಲ್ಲಿ ಸರಕಾರ ಒಳ ಒಪ್ಪಂದ ಮಾಡಿಕೊಂಡಿದೆ ಎನ್ನುವ ವಿಧಾನಸಭೆ ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ ಆರೋಪ ನಿರಾಧಾರ. ಆಗೊಂದು ವೇಳೆ ಒಳ ಒಪ್ಪಂದ ಆಗಿದ್ದರೆ ಅದು ಅವರದ್ದೇ ಪಕ್ಷದ ಸರಕಾರದ ಜತೆ ಆಗಿರಬೇಕು ಎಂದು ತಿರುಗೇಟು ನೀಡಿದರು. ಇಷ್ಟಕ್ಕೂ ಜಿಂದಾಲ್ ಕಂಪನಿ ರಾಜ್ಯದಲ್ಲಿ 90 ಸಾವಿರ ಕೋಟಿ ಹೂಡಿಕೆ ಮಾಡಿ, 50 ಸಾವಿರ ಜನರಿಗೆ ಉದ್ಯೋಗ ನೀಡಿದೆ. ಸರಕಾರದ ಷರತ್ತುಗಳನ್ನು ಪಾಲಿಸಿದ ನಂತರವೂ ಅವರಿಗೆ ಜಮೀನಿನ ಗುತ್ತಿಗೆ ಮಾರಾಟ ಮಾಡದಿದ್ದರೆ ಹೂಡಿಕೆ ವಲಯಕ್ಕೆ ಕೆಟ್ಟ ಸಂದೇಶ ಕೊಟ್ಟಂತಾಗುತ್ತದೆ. ಬಿಜೆಪಿ ಸರಕಾರ ಚಾಣಕ್ಯ ವಿಶ್ವವಿದ್ಯಾಲಯಕ್ಕೆ ಕೊಟ್ಟ ಹಾಗೆ ನಮ್ಮ ಸರಕಾರ ಜಿಂದಾಲ್ ಕಂಪನಿಗೆ ಯಾವ ರಿಯಾಯಿತಿಯನ್ನೂ ಕೊಟ್ಟಿಲ್ಲ. 20 ವರ್ಷದ ಹಿಂದೆ ಇದ್ದ ಮಾರುಕಟ್ಟೆ ದರವನ್ನು ಆಧರಿಸಿಯೇ ಭೂಮಿ ದರ ನಿಗದಿಪಡಿಸಲಾಗಿದೆ ಎಂದು ಸ್ಪಷ್ಟಪಡಿಸಿದರು. ಹಿಂದಿನ ಬಿಜೆಪಿ ಸರಕಾರ ಚಾಣಕ್ಯ ವಿಶ್ವವಿದ್ಯಾಲಯಕ್ಕೆ ದೇವನಹಳ್ಳಿ ಬಳಿ ಕೆಐಎಡಿಬಿಯ 116 ಎಕರೆ ಜಮೀನನ್ನು ಕೇವಲ 50 ಕೋಟಿಗೆ ಭಾರಿ ರಿಯಾಯಿತಿ ದರದಲ್ಲಿ ಕೊಟ್ಟಿದೆ. ಅದರ ನೈಜ ಬೆಲೆ ಅಂದು 187 ಕೋಟಿ. ಇದರಲ್ಲಿ 137 ಕೋಟಿ ರು. ಮೇಲ್ನೋಟಕ್ಕೇ ನಷ್ಟವಾಗಿದೆ. ಈ ಹಣ ಇಲ್ಲಿಯವರೆಗೂ ಕೆಐಎಡಿಬಿಗೂ ಸಂದಾಯವಾಗಿಲ್ಲ. ಇದರ ಬಗ್ಗೆ ಬೆಲ್ಲದ ಜಾಣಮೌನ ಯಾಕೆ ಎಂದು ಎಂ.ಬಿ.ಪಾಟೀಲ ಪ್ರಶ್ನಿಸಿದ್ದಾರೆ.

ಕಾರ್ಯಕರ್ತರ ಮೇಲೆ ಪೊಲೀಸರ ಹಲ್ಲೆ-ಆರೋಪ

ಬೆಂಗಳೂರು: ನ್ಯಾಯಯುತ ಬೇಡಿಕೆ ಮುಂದಿಟ್ಟು ತೆರಳುತ್ತಿದ್ದ ವಿದ್ಯಾರ್ಥಿಗಳನ್ನು ಬಂಧಿಸಿದ್ದಲ್ಲದೆ, ಬಳಿಕ ಯುವ ಮೋರ್ಚಾ ಕಾರ್ಯಕರ್ತರ ಮೇಲೆ ದೌರ್ಜನ್ಯ ಮಾಡಿರುವ ಪೊಲೀಸರ ವರ್ತನೆ ಖಂಡನೀಯ ಎಂದು ಬಿಜೆಪಿ ಯುವಮೋರ್ಚಾ ಅಧ್ಯಕ್ಷ ಧೀರಜ್ ಮುನಿರಾಜು ಆರೋಪಿಸಿದ್ದಾರೆ. ಫ್ರೀಡಂ ಪಾರ್ಕ್‌ನಲ್ಲಿ ಕೆಪಿಎಸ್‌ಸಿ ಪರೀಕ್ಷೆ ಮುಂದೂಡುವಂತೆ ಆಗ್ರಹಿಸುತ್ತಿದ್ದ ಪ್ರತಿಭಟನಾನಿರತ ಕೆಪಿಎಸ್ಸಿ ವಿದ್ಯಾರ್ಥಿಗಳ ಬಂಧನ ಖಂಡಿಸಿ ವಿಜಯನಗರ ಪೊಲೀಸ್ ಠಾಣೆ ಮುತ್ತಿಗೆಗೆ ಯತ್ನಿಸಿದ ಸಂದರ್ಭದಲ್ಲಿ ಮಾತನಾಡಿದ ಅವರು, ಫ್ರೀಡಂ ಪಾರ್ಕಿನಲ್ಲಿ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿ ಠಾಣೆಯಲ್ಲಿ ಇಡಲಾಗಿರುವ ಕ್ರಮ ಸರಿಯಿಲ್ಲ. ಅಲ್ಲದೇ, ಪ್ರತಿಭಟನೆಗೆ ಮುಂದಾಗಿದ್ದ ಕಾರ್ಯಕರ್ತರ ಮೇಲೆ ಪೆಲೀಸರು ಹಲ್ಲೆ ನಡೆಸಿದ್ದು, ಈ ಮೂಲಕ ಪ್ರತಿಭಟನೆಯನ್ನು ಪೊಲೀಸ್ ಬಲದ ಮೂಲಕ ಹತ್ತಿಕ್ಕುವ ಕೆಲಸ ಸರಕಾರ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ.

{ಶಂಕರ್ ಗುಹಾ ದ್ವಾರಕಾನಾಥ್} ಕಾಂಗ್ರೆಸ್ ಮುಖಂಡ

ಲಂಗೋಟಿ ಮ್ಯಾನ್ ಸಿನಿಮಾದ ಟೀಸರ್‌ನಲ್ಲಿ ಬ್ರಾಹ್ಮಣ ಸಮುದಾಯವನ್ನು ಅವಹೇಳನ ಮಾಡಲಾಗಿದೆ. ಈ ಬಗ್ಗೆ ಚಿತ್ರ ತಂಡ ಕ್ಷಮೆಯಾಚಿಸಬೇಕು. ಜನಿವಾರ ಧರಿಸಿರುವ ವ್ಯಕ್ತಿ ಓಡುತ್ತಿರುವ ಹಾಗೇ ಚಿತ್ರೀಕರಿಸಲಾಗಿದೆ. ಈ ಮೂಲಕ ಬ್ರಾಹ್ಮಣರು ಮತ್ತು ಬ್ರಾಹ್ಮಣ ಧಾರಕವನ್ನು ಟೀಕಿಸಲಾಗಿದೆ.



ದಕ್ಷಿಣ ಭಾರತದ ಪ್ರಥಮ ಹವಾನಿಯಂತ್ರಿತ ಬಜಾರ್ ಲೋಕಾರ್ಪಣೆಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪಾಲಿಕೆ ಬಜಾರ್ ಜನಪರ ಚಿಂತನೆಯ ಯೋಜನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇಡೀ ದಕ್ಷಿಣ ಭಾರತದಲ್ಲಿಯೇ ಪ್ರಪ್ರಥಮ ಹವಾನಿಯಂತ್ರಿತ ಪಾಲಿಕೆ ಬಜಾರ್ ಬೆಂಗಳೂರಿನಲ್ಲಿ ನಿರ್ಮಿಸಲಾಗಿದ್ದು, ನಗರದ ವಿವಿಧ ಸ್ಥಳಗಳಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಅನುಕೂಲವಾಗುವಂತೆ ಹವಾನಿಯಂತ್ರಿತ ಪಾಲಿಕೆ ಬಜಾರ್ ನಿರ್ಮಾಣ ಮಾಡುವಂತೆ ಪಾಲಿಕೆ ಮುಖ್ಯ ಆಯುಕ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ಬಿಬಿಎಂಪಿ ವಿಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿಜಯನಗರ ಬಸ್, ಮೆಟ್ರೋ ನಿಲ್ದಾಣದ ಬಳಿ ನಗರೋತ್ಥಾನ ಯೋಜನೆಯಲ್ಲಿ ಹವಾನಿಯಂತ್ರಿತ ಮಾರುಕಟ್ಟೆಯನ್ನು ಕೃಷ್ಣದೇವರಾಯ ಪಾಲಿಕೆ ಬಜಾರ್ ಲೋಕಾರ್ಪಣೆ ಮಾಡಿ ಮಾತನಾಡಿ, ಪಾಲಿಕೆ ಬಜಾರ್ ಸರಕಾರದ ಜನಪರ ಚಿಂತನೆಯ ಯೋಜನೆಯಾಗಿದ್ದು, ಬೀದಿಬದಿ ವ್ಯಾಪಾರಿಗಳ ಅನುಕೂಲಕ್ಕಾಗಿ ಹವಾನಿಯಂತ್ರಿತ ಪಾಲಿಕೆ ಬಜಾರ್‌ನ್ನು ನಿರ್ಮಾಣ ಮಾಡಲಾಗಿದೆ. ಇಲ್ಲಿ 79 ಮಳಿಗೆಗಳಿದ್ದು, ದಕ್ಷಿಣ ಭಾರತದಲ್ಲಿಯೇ ಇಂತಹ ಹವಾನಿಯಂತ್ರಿತ ಪಾಲಿಕೆ ಬಜಾರ್ ನಿರ್ಮಾಣ ಮಾಡಲಾಗಿರುವುದು ಇದೇ ಮೊದಲು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ರಾಜ್ಯದ ಅಭಿವೃದ್ಧಿಗೆ ಕೊಡುಗೆ ನೀಡಿದ್ದರು. ಅವರಿಗೆ ಗೌರವ ಸೂಚಿಸುವಂತೆ ಬಜಾರ್ ಅನ್ನು ಕೃಷ್ಣದೇವರಾಯ ಪಾಲಿಕೆ ಎಂದು ನಾಮಕರಣ ಮಾಡಿರುವುದು ಶ್ಲಾಘನೀಯ ಎಂದರು.

ಪಾಲಿಕೆ ಬಜಾರ್ ಸರಕಾರದ ಜನಪರ ಚಿಂತನೆಯ ಯೋಜನೆಯಾಗಿದ್ದು, ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ 13 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇಂತಹ ಬಜಾರ್‌ಗಳು ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ ವಿಶೇಷವಾಗಿ ಗಾಂಧಿಬಜಾರ್‌ನಂತಹ ಜನನಿಬಿಡ ಪ್ರದೇಶಗಳಲ್ಲಿ ನಿರ್ಮಿಸುವ ಅಗತ್ಯವಿದೆ ಎಂದರು.

ವಿಜಯನಗರ ನನಗೆ ಚಿರಪರಿಚಿತ:

ಈ ಹಿಂದೆಯೂ ವಿಜಯನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ನೆನಪನ್ನು ಮೆಲುಕು ಹಾಕುತ್ತಾ, ಈ ಪ್ರದೇಶ ನನಗೆ ಬಹಳ ಚಿರಪರಿಚಿತವಾಗಿದೆ. ವ್ಯಾಪಾರಿಗಳ ಪರಿಸ್ಥಿತಿಯನ್ನು ಅಂದಿನಿಂದಲೂ ಗಮನಿಸಿದ್ದ ನನಗೆ, ಶಾಸಕ ಕೃಷ್ಣಪ್ಪನವರ ಬೇಡಿಕೆ ಸಮಂಜಸವಾಗಿದೆ ಎನಿಸಿತ್ತು ಎಂದು ತಿಳಿಸಿದರು.

ವಿಜಯನಗರ ವಿಧಾನಸಭಾಕ್ಷೇತ್ರದಲ್ಲಿ ಕೃಷ್ಣದೇವರಾಯ ಪಾಲಿಕೆ ಬಜಾರ್ ಯೋಜನೆ ಇಲ್ಲಿನ ಶಾಸಕ ಎಂ.ಕೃಷ್ಣಪ್ಪರ ಕನಸು. ಇಲ್ಲಿನ ಬೀದಿ ವ್ಯಾಪಾರಿಗಳು ಬಿಸಿಲು ಗಾಳಿ -ಮಳೆಯಲ್ಲಿ ವ್ಯಾಪಾರ ಮಾಡಬೇಕಾಗಿದ್ದು, ಅವರಿಗೆ ವ್ಯಾಪಾರ ಮಾಡಲು ಸ್ಥಳಾವಕಾಶ ಮಾಡಿಕೊಡಲು ಬೇಡಿಕೆಯಿರಿಸಿದ್ದರು. ನಾನು 2017 ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ, ಪಾಲಿಕೆ ಬಜಾರ್‌ಗಳ ನಿರ್ಮಾಣಕ್ಕೆ 5 ಕೋಟಿ ರು.ಗಳ ಅನುದಾನಕ್ಕೆ ಅನುಮೋದನೆ ನೀಡಿದ್ದು, ಈಗ ನಾನೇ ಈ ಬಜಾರ್ ಉದ್ಘಾಟಿಸುತ್ತಿದ್ದು ಸಂತೋಷ ತಂದಿದೆ ಎಂದರು.

ಬೆಂಗಳೂರು ನಗರ ಬಹಳ ವೇಗವಾಗಿ ಬೆಳೆಯುತ್ತಿರುವ ನಗರವಾಗಿದ್ದು, ಬಸ್ ನಿಲ್ದಾಣ ಹಾಗೂ ಮೆಟ್ರೋ ರೈಲು ನಿಲ್ದಾಣವಿರುವ ಸೂಕ್ತ ಸ್ಥಳದಲ್ಲಿ ಪಾಲಿಕೆ ಬಜಾರ್ ನಿರ್ಮಾಣವಾಗಿರುವುದರಿಂದ ಒಂದೇ ಕಡೆ ಎಲ್ಲಾ ವ್ಯಾಪಾರ ಮಾಡುವವರಿಗೆ ವ್ಯವಸ್ಥೆ ಕಲ್ಪಿಸಿದ್ದು, ಬಹಳ ಜನರಿಗೆ ಅನುಕೂಲವಾಗಲಿದೆ ಎಂದರು.

ಈ ವೇಳೆ ಶಾಸಕ ಎಂ. ಕೃಷ್ಣಪ್ಪ, ಪ್ರಿಯಾಕೃಷ್ಣ, ಆಡಳಿತಾಧಿಕಾರಿ ಎಸ್.ಆರ್ ಉಮಾಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಲಯ ಆಯುಕ್ತೆ ವಿನೋತ್ ಪ್ರಿಯಾ ಇನ್ನಿತರರು ಇದ್ದರು.

ಯಾವ ಕಾರಣಕ್ಕೂ ಗ್ಯಾರಂಟಿ ಯೋಜನೆ ನಿಲ್ಲಿಸುವುದಿಲ್ಲ

ನಮ್ಮ ಸರಕಾರ ಜನರಿಗೆ ಮಾತು ನೀಡಿದ್ದಂತೆ ಎಲ್ಲ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದು, ಅಧಿಕಾರಕ್ಕೆ ಬಂದು ಒಂದು ವರ್ಷ ಮೂರು ತಿಂಗಳಿನಲ್ಲೇ ಐದು ಕಾರ್ಯಕ್ರಮಗಳನ್ನು ಜಾರಿ ಮಾಡಲಾಗಿದೆ. ಎಲ್ಲಾ ಧರ್ಮ, ಜಾತಿಯ ಬಡವರಿಗೂ ಈ ಕಾರ್ಯಕ್ರಮಗಳನ್ನು ತಲುಪಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಪ್ರತಿಪಕ್ಷದವರು ಈ ಎಲ್ಲಾ ಕಾರ್ಯಕ್ರಮಗಳು ಜಾರಿಯಾಗುವುದಕ್ಕೂ ಮೊದಲು ಹಾಗೂ ಬಳಿಕ ಬಹಳ ಟೀಕಿಸಿದ್ದಾರೆ. ಲೋಕಸಭಾ ಚುನಾವಣೆ ನಂತರ ಯೋಜನೆಗಳನ್ನು ನಿಲ್ಲಿಸುವುದಾಗಿಯೂ ಹೇಳಿದ್ದರು. ಯಾವ ಕಾರಣಕ್ಕೂ ಕೂಡ ಐದು ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಪ್ರತಿಪಕ್ಷದವರು ಈ ಕಾರ್ಯಕ್ರಮಗಳ ವಿರುದ್ಧವಾಗಿದ್ದಾರೆ. ಶಕ್ತಿ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ, ಯುವನಿಧಿ ಯೋಜನೆಗಳು ಮಹಿಳೆಯರಿಗೆ ಸಾಮಾಜಿಕ, ಆರ್ಥಿಕವಾಗಿ ಶಕ್ತಿ ತುಂಬುವ ಕಾರ್ಯಕ್ರಮಗಳಾಗಿವೆ. ರಾಜಕೀಯ ಸ್ವಾತಂತ್ರ್ಯದ ಜತೆಗೆ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ದೊರೆತಾಗ ಮಾತ್ರ ದೇಶದಲ್ಲಿ ಬಡತನ ತೊಲಗಿಸಲು , ಸಾಮಾಜಿಕ ಸಮಾನತೆ ತರಲು ಸಾಧ್ಯವಾಗುತ್ತದೆ ಎಂದರು. ನಗರವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವ ಪ್ರಯತ್ನ ಅಭಿವೃದ್ಧಿ ಯೋಜನೆಗಳಿಗೆ 1 ಲಕ್ಷದ 60 ಸಾವಿರ ಕೋಟಿ ರು.ಗಳನ್ನು ವೆಚ್ಚ ಮಾಡಲಾಗುತ್ತಿದೆ. ಗ್ಯಾರಂಟಿ ಯೋಜನೆಗಳಿಗೆ 56 ಸಾವಿರ ಕೋಟಿ ರು.ಗಳನ್ನು ವೆಚ್ಚ ಮಾಡಲಾಗುತ್ತಿದೆ. ಬೆಂಗಳೂರಿನ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಸಚಿವ ಸಂಪುಟ ಸಭೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಮಂಜೂರು ಮಾಡಿದ್ದೇವೆ. ಬೆಂಗಳೂರು ನಗರವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯಲು ಹಾಗೂ ಬ್ರ್ಯಾಂಡ್ ಬೆಂಗಳೂರು ಮಾಡುವುದು ನಮ್ಮ ಉದ್ದೇಶ. ಆ ದಿಕ್ಕಿನಲ್ಲಿ ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು ಎಂದರು.

ಪಾಲಿಕೆ ಬಜಾರ್ ವಿಶೇಷತೆಗಳು

- ಈ ಮಾರುಕಟ್ಟೆಯಲ್ಲಿ 79 ಕ್ಕೂ ಹೆಚ್ಚು ಮಳಿಗೆಗಳು ಇರಲಿದೆ.
- ಎರಡು ಎಸ್ಕಲೇಟರ್, ಒಂದು ಲಿಫ್ಟ್ ಇರಲಿದೆ.
- 7-8 ಪ್ರವೇಶ ಹಾಗೂ ನಿರ್ಗಮನ ಪಾಯಿಂಟ್‌ಗಳಿರಲಿವೆ.
- 7-8 ಸ್ಕೈಲೈಟ್‌ಗಳೂ ಇರಲಿದೆ.
- ಒಂದು ಎಲೆಕ್ಟ್ರಿಕ್ ಕೋಣೆ
- ಒಂದು ಸ್ಟೋರ್ ಆಫೀಸ್
- 26 ಒಳಾಂಗಣ ಎಸಿ ಯುನಿಟ್
- ಐದು ಹೊರಾಂಗಣ ಯುನಿಟ್
- ಎಂಟು ಆಗಮನ-ನಿರ್ಗಮನ ಪಾಯಿಂಟ್
- ಎರಡು ಎಸ್ಕಲೇಟರ್
- ಒಂದು ಗೂಡ್ಸ್ ಅಥವಾ ವ್ಯಕ್ತಿಗಳ ಲಿಫ್ಟ್

ರಾಜಸ್ಥಾನ ಯುವಕ ಸಂಘ ಶಿಕ್ಷಣ ಮತ್ತು ಸಾರ್ವಜನಿಕ ಸೇವಾ ಟ್ರಸ್ಟ್‌ನ 50 ವರ್ಷಗಳ ಸ್ಮರಣಾರ್ಥ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ವಿತರಿಸಲಾಯಿತು. ಸಂಸದ ಡಾ.ಸಿ.ಎನ್.ಮಂಜುನಾಥ್, ಚಾರ್ಟರ್ಡ್ ಅಕೌಂಟೆಂಟ್ ಪದಜ್ ಕಿಂಚಾ, ಭಗವಾನ್ ಮಹಾವೀರ ಆಸ್ಪತ್ರೆಯ ಅಧ್ಯಕ್ಷ ಮೋಹನ್‌ಲಾಲ್ ರಂಕಾ ಇದ್ದರು.

ಗ್ರೇಟರ್ ಬೆಂಗಳೂರು; ಜಂಟಿ ಪರಿಶೀಲನಾ ಸಮಿತಿ ರಚನೆ

ಬೆಂಗಳೂರು: ದಿ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ ಕುರಿತ ಜಂಟಿ ಪರಿಶೀಲನಾ ಸಮಿತಿ ರಚಿಸಲಾಗಿದೆ. ಸಮಿತಿಗೆ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ 13 ಸದಸ್ಯರನ್ನು ನೇಮಕ ಮಾಡಿದ್ದು, ಇಬ್ಬರು ಸಚಿವರನ್ನು ಸಮಿತಿಯ ಸದಸ್ಯರಾಗಿ ನಾಮನಿರ್ದೇಶನ ಮಾಡಿದ್ದಾರೆ.

ವಿಧಾನಸಭೆಯ 10 ಮತ್ತು ವಿಧಾನಪರಿಷತ್‌ನ ಮೂವರು ಸದಸ್ಯರನ್ನೊಳಗೊಂಡ ಜಂಟಿ ಪರಿಶೀಲನಾ ಸಮಿತಿಯನ್ನು ರಚನೆ ಮಾಡಲಾಗಿದೆ. ಇದರೊಂದಿಗೆ ವಿಧೇಯಕಕ್ಕೆ ಸಂಬಂಧಪಟ್ಟ ಇಲಾಖೆಯ ಸಚಿವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲರನ್ನು ಸಮಿತಿಯ ಸದಸ್ಯರಾಗಿ ನಾಮನಿರ್ದೇಶನ ಮಾಡಲಾಗಿದೆ.

2024ನೇ ಸಾಲಿನ ದಿ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಸಮಗ್ರವಾಗಿ ಪರಿಶೀಲಿಸಿ ವರದಿ ನೀಡಲು ಸಮಿತಿಗೆ ಮೂರು ತಿಂಗಳ ಕಾಲಾವಕಾಶ ನಿಗದಿಪಡಿಸಲಾಗಿದೆ. ಆದರೆ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 260ರ ಪ್ರಕಾರ, ಜಂಟಿ ಪರಿಶೀಲನಾ ಸಮಿತಿಯು ತನ್ನ ಅಧ್ಯಕ್ಷನನ್ನು ತಾನೇ ಚುನಾಯಿಸಿಕೊಳ್ಳಬೇಕಿದೆ.

ಸಮಿತಿಯಲ್ಲಿ ವಿಧಾನಸಭಾ ಸದಸ್ಯರಾದ ರಿಜ್ವಾನ್ ಅರ್ಷದ್, ಎನ್.ಎ.ಹ್ಯಾರಿಸ್, ಬಿ.ಶಿವಣ್ಣ, ಎಸ್.ಟಿ.ಸೋಮಶೇಖರ್, ಪ್ರಿಯಕೃಷ್ಣ, ಎ.ಸಿ.ಶ್ರೀವಾಸ್, ಎಸ್. ಸುರೇಶ್‌ಕುಮಾರ್, ಎಸ್.ಆರ್.ವಿಶ್ವನಾಥ್, ಎಸ್.ರಘು, ಜಿ.ಟಿ.ದೇವೇಗೌಡರು, ವಿಧಾನಪರಿಷತ್ ಸದಸ್ಯರಾದ ಪುಟ್ಟಣ್ಣ, ಯು.ಬಿ.ವೆಂಕಟೇಶ್, ಎಚ್.ಎಸ್. ಗೋಪಿನಾಥ್ ಅವರನ್ನು ಸಭಾಧ್ಯಕ್ಷರನ್ನು ಸದಸ್ಯರನ್ನಾಗಿ ನೇಮಕ ಮಾಡಿದ್ದಾರೆ.

ಕರ್ನಾಟಕ ವಿಧಾನ ಪರಿಷತ್ ಸದಸ್ಯ ಟಿ ಎ ಶರವಣ ತಮ್ಮ ಜನ್ಮದಿನದ ಪ್ರಯುಕ್ತ ತಿರುಮಲ-ತಿರುಪತಿಯಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಾಡಿನ ಸಮಸ್ತ ಜನತೆಯ ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಅವಧೂತ ವಿನಯ್ ಗುರೂಜಿ ಇದ್ದರು.

ಶ್ರೀ ಕೃಷ್ಣ ಜನ್ಮಾಷ್ಟಮಿ: ಪ್ರೆಸ್‌ಕ್ಲಬ್‌ನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

ಪ್ರೆಸ್ ಕ್ಲಬ್‌ನಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣ ವಸ್ತ್ರಧಾರಿಗಳಾಗಿ ಕಂಡು ಬಂದ ಮಕ್ಕಳು. ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ, ಸಾಂಸ್ಕೃತಿಕ ಸಮಿತಿ ಸಹ ಸಂಚಾಲಕಿ ರೋಹಿಣಿ ಅಡಿಗ ಹಾಗೂ ಕ್ಲಬ್ ನ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಬೆಂಗಳೂರು: ಪ್ರೆಸ್ ಕ್ಲಬ್‌ನಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ವಿವಿಧ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮವನ್ನು ವಂದೇ ಕರ್ನಾಟಕ ಮಾಸಪತ್ರಿಕೆ ಹಾಗೂ ನಳಪಾಕ ಹೋಟೆಲ್ ವ್ಯವಸ್ಥಾಪಕ ನಿರ್ದೇಶಕ ಲಿಂಗಯ್ಯ ಕಾಡದೇವರಮಠ ಉದ್ಘಾಟಿದರು.

ಸಮಾರಂಭದಲ್ಲಿ ಪ್ರೆಸ್ ಕ್ಲಬ್‌ನ ಸದಸ್ಯರು, ಪತ್ರಕರ್ತರ ಮಕ್ಕಳು ಭಾಗವಹಿಸಿದ್ದು ವಿಶೇಷವಾಗಿತ್ತು. ಮಕ್ಕಳು ಶ್ರೀ ರಾಧಾಕೃಷ್ಣರಾಗಿ ಭಾಗವಹಿಸಿದ್ದಲ್ಲದೇ, ರ್‍ಯಾಂಪ್ ವಾಕ್ ನಡೆಸಿದ್ದು ನೋಡುಗರ ಕಣ್ಮನ ಸೆಳೆಯಿತು. ಮಕ್ಕಳು ಗಾಯನ ಮತ್ತು ಭರತನಾಟ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಭಾಗವಸಿದ್ದು ಕಂಡು ಬಂದಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಳಪಾಕ ಹೋಟೆಲ್ ಮಾಲೀಕರಾದ ಕವಿತಾ ಲಿಂಗಯ್ಯ ಕಾಡದೇವರಮಠ, ಅಖಿಲ ಕರ್ನಾಟಕ ರಾಜ್ಯ ಸರಕಾರಿ ಮಹಿಳಾ ನೌಕರರ ಸಂಘದ ಅಧ್ಯಕ್ಷ ರೋಶನಿ ಗೌಡ, ಗೋಕುಲ್ ಗ್ರೂಪ್ ಮಾಲೀಕರಾದ ಎಂ. ಮಂಜುನಾಥ್, ಬೆಂಗಳೂರು ಪ್ರೆಸ್‌ಕ್ಲಬ್ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ, ಸಾಂಸ್ಕೃತಿಕ ಸಮಿತಿ ಸಹ ಸಂಚಾಲಕಿ ರೋಹಿಣಿ ಅಡಿಗ ಹಾಗೂ ಕ್ಲಬ್ ನ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಬಿಬಿಎಂಪಿ ಕೇಂದ್ರ ಕಚೇರಿ ಮುಂದೆ ರಸ್ತೆ ಕುಸಿತ

ಬೆಂಗಳೂರು: ನಗರದಲ್ಲಿ ಸುರಿದ ಭಾರೀ ಮಳೆಗೆ ಹಲವಾರು ಅವಾಂತರಗಳು ಸೃಷ್ಟಿಯಾಗಿದ್ದು, ಬಿಬಿಎಂಪಿ ಕೇಂದ್ರ ಕಚೇರಿಯ ಮುಂಭಾಗದಲ್ಲಿರುವ ರಸ್ತೆಯೇ ಕುಸಿದಿದೆ.

ಬಿಬಿಎಂಪಿ ಕೇಂದ್ರ ಕಚೇರಿ ಮುಂಭಾಗದ ರಸ್ತೆಯಲ್ಲಿ 5-6 ಅಡಿ ಆಳದಲ್ಲಿ ರಸ್ತೆ ಕುಸಿತವಾಗಿದ್ದು, ದೇವಾಂಗ ಹಾಸ್ಟೆಲ್ ಕಡೆಗೆ ಹೋಗುವ ರಸ್ತೆ ಕುಸಿತವಾಗಿ ಬಿರುಕು ಬಿಟ್ಟಿದೆ. ಮಳೆ ಆರಂಭವಾದ ಬಳಿಕ ಹಲವು ರಸ್ತೆಗಳಲ್ಲಿ ಕುಸಿತ ಕಂಡು ಬಂದಿದ್ದು, ಸದ್ಯ ಪಾಲಿಕೆ ಮುಂಭಾಗದಲ್ಲಿಯೇ ಗುಂಡಿ ಕಂಡು ಬಂದಿರುವುದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ. ರಸ್ತೆ ಕುಸಿದಿರುವಲ್ಲಿ ಚರಂಡಿ ನೀರು ಹೊರ ಬರುತ್ತಿದ್ದು, ಸದ್ಯ ಸಂಚಾರಿಮ ಪೊಲೀಸರು ಈ ಗುಂಡಿಯ ಸುತ್ತಮುತ್ತ ಬ್ಯಾರಿಕೇಡ್ ಅಳವಡಿಸಿರುವುದು ಕಂಡು ಬಂದಿದೆ. ಇದರಿಂದ ಸಾರ್ವಜನಿಕರು ಬಿಬಿಎಂಪಿ ನಿರ್ಲಕ್ಷದ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದಾರೆ. ಸಹಜವಾಗಿ ರಸ್ತೆ ಚರಂಡಿ ವಿದ್ಯುತ್ ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳನ್ನು ಬಿಬಿಎಂಪಿ ನಗರದ ಜನರಿಗೆ ಒದಗಿಸುತ್ತದೆ. ಎಲ್ಲೇ ರಸ್ತೆಗಳಲ್ಲಿ ತೆಗ್ಗು ಗುಂಡಿ ಬಿದ್ದರೂ ಸಹ ಬಿಬಿಎಂಪಿ ಸಿಬ್ಬಂದಿ ಬಂದು ಸರಿ ಪಡಿಸುತ್ತಿದ್ದರು. ಆದರೆ ಇದೀಗ ಬಿಬಿಎಂಪಿ ಕಚೇರಿಯ ಮುಂಭಾಗದಲ್ಲಿಯೇ ರಸ್ತೆ ಕುಸಿದಿದ್ದರಿಂದ ಸಹಜವಾಗಿ ಸಾರ್ವಜನಿಕರು ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ.

ಸಮಾಚಾರ ಸಣ್ಣದಲ್ಲ

ನಮ್ಮದು ರೈತಪರ ಜನಪರ ಸರಕಾರ

ಚಿಕ್ಕಬಳ್ಳಾಪುರ: ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಜನಪರವಾರ, ರೈತಪರವಾದ ಸರಕಾರವಾಗಿದೆ. ಜಿಲ್ಲೆಯಲ್ಲಿ ಕೈಗಾರಿಕಾ ವಲಯದ ಸ್ಥಾಪನೆಯಿಂದಾಗಿ ರೈತಾಪಿ ವರ್ಗದ ಮಕ್ಕಳಿಗೆ ತಾವಿದ್ದಲ್ಲಿಯೇ ಉದ್ಯೋಗ ದೊರೆಯುವ ಸುವರ್ಣಾವಕಾಶ ಸಿಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ ಸುಧಾಕರ ಹೇಳಿದರು. ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಭಾಗದಲ್ಲಿ ಕೈಗಾರಿಕಾ ವಲಯದ ನಿರ್ಮಾಣಕ್ಕೆ ಒಳಗಾಗಲಿರುವ ರೈತರ ಭೂಮಿಯನ್ನು ಉಳಿಸಿ ಅವರ ಹಿತ ಕಾಯಬೇಕೆಂದು ಸಚಿವರನ್ನು ಭೇಟಿಯಾಗಿದ್ದ ರೈತಪರ ಸಂಘಟನೆಯ ಮುಖಂಡರ ನಿಯೋಗದಿಂದ ಮನವಿ ಸ್ವೀಕರಿಸಿದ ನಂತರ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಕೆಲ ರೈತ ಸಂಘಟನೆ ಮುಖಂಡರು ಕೈಗಾರಿಕಾಭಿವೃದ್ಧಿ ವಿಚಾರದಲ್ಲಿ ತಪ್ಪು ಮಾಹಿತಿ ನೀಡುತ್ತಿದ್ದಾರೆ.ನಾವು ಕೃಷಿ ಆಧಾರಿತ ಯಾವುದೇ ಭೂಮಿಯನ್ನು ಒತ್ತಾಯ ಪೂರ್ವಕವಾಗಿ ಕೆಐಎಡಿಬಿಗೆ ನೀಡುವಂತೆ ಎಲ್ಲಿಯೂ ಹೇಳಿಲ್ಲ. ಇಷ್ಟವಿದ್ದರೆ ನೀಡಬಹುದು. ಕೆಲ ರಾಜಕೀಯ ಪ್ರೇರಿತ ಶಕ್ತಿಗಳು ತಪ್ಪು ಮಾಹಿತಿ ನೀಡುತ್ತಿದ್ದು ಇಂತಹ ಯಾವುದೇ ವದಂತಿಗಳಿಗೆ ಕಿವಿಗೊಡಬಾರದು ಎಂದರು. ಪರಿಹಾರ ಧನ ಸರ್ಕಾರದ ನಿಗದಿತ ಮೌಲ್ಯಕ್ಕಿಂತ 4 ಪಟ್ಟು ಅಧಿಕವಾಗಿರಲಿದ್ದು ಜಿಲ್ಲಾಧಿಕಾರಿಗಳು ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವರು. ರೈತರು ಪರ್ಯಾಯ ಭೂಮಿ ಖರೀದಿಸುವಾಗ ನೋಂದಣಿ ಶುಲ್ಕದಿಂದ ವಿನಾಯ್ತಿ ಮತ್ತು ಬೆಳೆಗೆ ಸೂಕ್ತ ಪರಿಹಾರ ಕಲ್ಪಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದರು.

ಕರಾವಳಿಯಲ್ಲಿ ಮುಂಗಾರು ಅಬ್ಬರ

ಬೆಂಗಳೂರು: ಕರಾವಳಿ ಕರ್ನಾಟಕ ಭಾಗದಲ್ಲಿ ಮುಂಗಾರು ಮಳೆಯ ಅಬ್ಬರ ಮುಂದುವರೆದಿದೆ. ಈ ಹಿನ್ನಲೆ ಮುಂದಿನ 48 ಗಂಟೆಗಳಿಗೆ ಉಡುಪಿ, ಉತ್ತರ ಕನ್ನಡಕ್ಕೆ ಆರೆಂಜ್ ಅಲರ್ಟ್ ಘೋಷಣೆ ಮಾಡಲಾಗಿದೆ. ಕರಾವಳಿ ಜಿಲ್ಲೆಗಳಾದ ಉಡುಪಿ, ಉತ್ತರ ಕನ್ನಡಕ್ಕೆ ಆಗಸ್ಟ್ 27, 28 ಮತ್ತು 30, 31ರಂದು ಯೆಲ್ಲೋ ಅಲರ್ಟ್ ಹಾಗೂ ಆಗಸ್ಟ್ 29 ರಂದು ಆರೆಂಜ್ ಅಲರ್ಟ್ ನೀಡಲಾಗಿದೆ. ಆ.26ಮತ್ತು 29 ರಂದು ಉತ್ತರ ಒಳನಾಡಿನ ಬೆಳಗಾವಿ ಜಿಲ್ಲೆಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಇನ್ನು ಮಲೆನಾಡು ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ ಆಗಸ್ಟ್ 29 ಮತ್ತು 30 ರಂದು ಯೆಲ್ಲೋ ಅಲರ್ಟ್‌ನ್ನು ಹವಾಮಾನ ಇಲಾಖೆ ಘೋಷಿಸಿದೆ.

ಬೆಂಗಳೂರಲ್ಲಿ ಹಗುರ ಮಳೆ: ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ಆಕಾಶ ಇರಲಿದ್ದು, ಹಗುರ ಮಳೆಯಾಗುವ ಸಾಧ್ಯತೆ ಇದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಕ್ರಮವಾಗಿ 30 ಡಿಗ್ರಿ ಮತ್ತು 21 ಡಿಗ್ರಿ ದಾಖಲಾಗಲಿದೆ ಎಂದು ಹೇಳಿದೆ.

ಕಾರ್ಕಳ ಅತ್ಯಾಚಾರ ಪ್ರಕರಣ ಖಂಡನೀಯ

ಬೆಂಗಳೂರು: ಉಡುಪಿ ಜಿಲ್ಲೆ ಕಾರ್ಕಳದಲ್ಲಿ ನಡೆದ ಯುವತಿಯ ಅಪಹರಣ ಹಾಗೂ ಅತ್ಯಾಚಾರ ಪ್ರಕರಣ ಪೈಶಾಚಿಕ ಕೃತ್ಯ ಎಂದು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅವರು, ಘಟನೆ ಅತ್ಯಂತ ಖಂಡನೀಯ; ಘಟನೆ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಜಿಲ್ಲಾಡಳಿತ ಕಠಿಣ ಕ್ರಮ ಕೈಗೊಳ್ಳಲಿದೆ. ಪೊಲೀಸರೊಂದಿಗೆ ಸತತ ಸಂಪರ್ಕದಲ್ಲಿದ್ದೇನೆ ಎಂದು ತಿಳಿಸಿದ್ದಾರೆ. ಮಾಹಿತಿ ಬಂದ ತಕ್ಷಣ ಘಟನೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಪೊಲೀಸರಿಗೆ ದಿಟ್ಟತನದ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಪೊಲೀಸರು ಕೂಡ ಘಟನೆ ಸಂಬಂಧಿಸಿದಂತೆ ಕೂಲಂಕಷ ತನಿಖೆ ನಡೆಸುತ್ತಿದ್ದಾರೆ. ಈಗಾಗಲೇ ಪ್ರಕರಣ ಸಂಬಂಧ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಇದರ ಹಿಂದೆ ಯಾರೇ ಇದ್ದರೂ ಮುಲಾಜಿಲ್ಲದೇ ಬಂಧಿಸಲಾಗುವುದು ಎಂದು ತಿಳಿಸಿದ್ದಾರೆ.

ಜಲಾಶಯಗಳ ಮಟ್ಟ

ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
ಕೆಆರ್‌ಎಸ್	124.80	123.72	4695
ಕಬಿನಿ	2284	2282.28	2176
ಹಾರಂಗಿ	2859	2857.70	576
ಹೇಮಾವತಿ	2922	2921	5172
ತುಂಗಭದ್ರಾ	1633	1627.87	23725
ಆಲಮಟ್ಟಿ	1704.81	1704.70	28838
ನಾರಾಯಣಪುರ	1615	1613.83	28480
ಲಿಂಗನಮಕ್ಕಿ	1819.12	1816.90	14970

ವಿರಾಮ
ಪ್ರತಿ ಭಾನುವಾರ

{ಲೆಹರ್ ಸಿಂಗ್ } ಬಿಜೆಪಿ ಸಂಸದ

ಕೆಐಎಡಿಬಿ ಭೂಮಿ ಪಡೆಯಲು ಖರ್ಗೆ ಕುಟುಂಬ ಯಾವಾಗ ಏರೋಸ್ಪೇಸ್ ಉದ್ಯಮಿಗಳಾಗಿದ್ದು? ಮಾರ್ಚ್ 2024ರಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಈ ಹಂಚಿಕೆಗೆ ಒಪ್ಪಿಗೆ ನೀಡಿದ್ದು ಹೇಗೆ? ಇದು ಅಧಿಕಾರ ದುರುಪಯೋಗ, ಸ್ವಜನಪಕ್ಷಪಾತ ಮತ್ತು ಸ್ವಹಿತಾಸಕ್ತಿ ಸಂಘರ್ಷವಲ್ಲವೇ..?

ಆಯೋಗಕ್ಕೆ ಈ ಬಾರಿ ಸುಧಾರಣೆ ಯೋಗ, ಮುಖ್ಯಮಂತ್ರಿ ಗಟ್ಟಿ ಸಂಕಲ್ಪ

ನಾಳೆಯೇ ಮಾಹಿತಿ ಆಯುಕ್ತರ ನೇಮಕಕ್ಕೆ ರಾಜ್ಯ ಸರಕಾರ ಸಜ್ಜು

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು



ಬಹುತೇಕ ವರ್ಷದಿಂದಲೂ ಖಾಲಿ ಇರುವ ರಾಜ್ಯ ಮಾಹಿತಿ ಆಯೋಗಕ್ಕೆ ನೂತನ ಆಯುಕ್ತರು ಹಾಗೂ ಮುಖ್ಯ ಆಯುಕ್ತರ ಹುದ್ದೆಗೆ ಆ.27ರಂದು ಆಯ್ಕೆ ನಡೆಯಲಿದೆ. ಅಷ್ಟೇ ಅಲ್ಲ, ಈ ಬಾರಿ ಆಯೋಗಕ್ಕೆ ಸಮಗ್ರ ಸುಧಾರಣಾ ಯೋಗ ಕೂಡಿಬರುವ ಸಾಧ್ಯತೆ ಯೂ ಇದೆ. ಕಾರಣ ಸರಕಾರದ ಮೇಲೆ ಈ ಬಾರಿ ಆಯೋಗಕ್ಕೆ ಸಚ್ಚಾರಿತ್ರ್ಯದ ಅಭ್ಯರ್ಥಿಗಳನ್ನು ನೇಮಕ ಮಾಡಬೇಕು. ಹಾಗೆಯೇ ಮುಖ್ಯ ಆಯುಕ್ತರ ಹುದ್ದೆಗೆ ಹಿರಿಯ ಐಎಎಸ್ ಅಧಿಕಾರಿಗಳನ್ನೇ ನೇಮಕ ಮಾಡಬೇಕೆನ್ನುವ ಸಲಹೆಗಳು ಬಂದಿದ್ದು, ಇದನ್ನು ಸರಕಾರ ಗಂಭೀರವಾಗಿ ಪರಿಗಣಿಸಿದೆ.

ಅಂದರೆ, ಹಿಂದಿನ ಸರಕಾರಗಳ ಅವಧಿಯಲ್ಲಿ ಅಮಾನತುಗೊಂಡಿದ್ದ ಅಧಿಕಾರಿಗಳು ಹಾಗೂ ವಿವಿಧ ಆರೋಪಗಳನ್ನು ಹೊತ್ತವರನ್ನು ನೇಮಕ ಮಾಡಿ ಆಯೋಗ ಹೆಚ್ಚು ಸಾರ್ವಜನಿಕ ಟೀಕೆಗೆ ಗುರಿಯಾಗಿತ್ತು. ಆದ್ದರಿಂದ ಈ ಬಾರಿ ಹೆಚ್ಚಿನ ಎಚ್ಚರಿಕೆ ವಹಿಸಬೇಕೆಂದು ಕಾನೂನು ತಜ್ಞರು ಹಾಗೂ ಕೆಲವು ಪಕ್ಷದ ಹಿರಿಯರು ಮುಖ್ಯಮಂತ್ರಿ ಅವರಿಗೆ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಾರಿ ಮುಖ್ಯ ಆಯುಕ್ತರ ಹುದ್ದೆಗೆ ಹಿರಿಯ ಐಎಎಸ್ ಅಧಿಕಾರಿಯನ್ನೇ ನೇಮಕ ಮಾಡುವ ಸಾಧ್ಯತೆ ಹೆಚ್ಚಾಗಿದ್ದು, ಉಳಿದ ಆಯುಕ್ತರ ಹುದ್ದೆಗೆ ಉತ್ತಮ ಚಾರಿತ್ರಿಕ ಹಿನ್ನೆಲೆಯ ಆಡಳಿತ ಮತ್ತು ವಿವಿಧ ಕ್ಷೇತ್ರಗಳ ಅನುಭವಿಗಳನ್ನು ನೇಮಕ ಮಾಡುವ ಸಾಧ್ಯತೆ ಇದೆ. ಈ ಮೂಲಕ ಆಯೋಗದಲ್ಲಿ ಹೆಚ್ಚಿನ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸಲು ಮುಖ್ಯಮಂತ್ರಿ ಮುಂದಾಗಿದ್ದಾರೆ .

ಇಷ್ಟೇ ಅಲ್ಲದೆ, ಈ ಬಾರಿ ಸಮಾಜ ಸೇವಕರು ಹಾಗೂ ಸಾಮಾಜಿಕ ಕಾರ್ಯಕರ್ತರ ಹೆಸರಿನಲ್ಲಿ ಪಕ್ಷಗಳ ಮುಖಂಡರಿಗೆ ಮಣೆ ಹಾಕುವ ಬದಲು ಜನಸಾಮಾನ್ಯರಿಗೆ ಸ್ಪಂದಿಸುವ ಹಾಗೂ ಮಾಹಿತಿ ಕೊಡಿಸುವ ಅಭ್ಯರ್ಥಿಗಳನ್ನು ಗುರುತಿಸಿ ನೇಮಕ ಮಾಡುವ ಸಂಭವವಿದೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

ಸರಕಾರದ ಸುಧಾರಣಾ ಚಿಂತನೆಗಳು

- ಸರಕಾರದಲ್ಲಿ ಆಡಳಿತ ನಡೆಸಿದ ಅನುಭವ ಇರಬೇಕು
- ಕಾಯಿದೆ ದುರ್ಬಳಕೆ ಮಾಡಿಕೊಳ್ಳದೆ ಜನರಿಗೆ ಸ್ಪಂದಿಸಬೇಕು
- ಆರೋಪಗಳು ಮತ್ತು ಅಪರಾಧಗಳ ಹಿನ್ನೆಲೆ ಇಲ್ಲದವರಿಗೆ ಮಣೆ
- ರಾಜಕೀಯ, ಸಮಾಜಸೇವೆ, ನ್ಯಾಯಾಂಗ ಕ್ಷೇತ್ರ ಮಾತ್ರವಲ್ಲದೆ ಇತರ ಕ್ಷೇತ್ರಕ್ಕೂ ಆದ್ಯತೆ

ಆಯುಕ್ತರ ನೇಮಕ ಹೇಗೆ? ಏಕೆ?

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳ ಮೂಲಕ ಆಡಳಿತ ನಡೆಸುವ ಜನರು, ಆಯ್ಕೆಯಾದ ಪ್ರತಿನಿಧಿಗಳು ನಡೆಸುವ ಆಡಳಿತವನ್ನು ಸುಲಭವಾಗಿ ಪ್ರಶ್ನಿಸಲು ಹಿಂದಿನ ಕಾಂಗ್ರೆಸ್ ನೇತೃತ್ವದ ಸರಕಾರ ಮಾಹಿತಿಹಕ್ಕು ಕಾಯಿದೆಯನ್ನು ಜಾರಿಗೊಳಿಸಿತ್ತು. ಹೀಗಾಗಿ ಎಲ್ಲ ರಾಜ್ಯಗಳಲ್ಲೂ ಮಾಹಿತಿ ಆಯೋಗಗಳು ಸ್ಥಾಪನೆಯಾದವು. ಅದರಂತೆ ರಾಜ್ಯದಲ್ಲೂ ಮಾಹಿತಿ ಆಯೋಗವಿದೆ. ಇದೊಂದು ರೀತಿಯ ಅರೆ ನ್ಯಾಯಿಕ ಸಂಸ್ಥೆಯಂತೆ ಕಾರ್ಯ ನಿರ್ವಹಿಸಲಿದೆ. ಆಯೋಗದಲ್ಲಿ ಒಬ್ಬ ಮುಖ್ಯ ಆಯುಕ್ತರಿದ್ದು, 10 ಆಯುಕ್ತರಿರುತ್ತಾರೆ. ಇವರ ಅವಧಿ 6 ವರ್ಷಗಳು. ಆದರೆ ಬಹುತೇಕ ಒಂದು ವರ್ಷದಿಂದ ಆ ಹುದ್ದೆಗಳು ಪೂರ್ಣ ಪ್ರಮಾಣದ ನೇಮಕವೇ ನಡೆದಿಲ್ಲ. ಆದ್ದರಿಂದ ಸದ್ಯ ಆಯೋಗದಲ್ಲಿ ಒಂದು ಮುಖ್ಯ ಆಯುಕ್ತ ಹಾಗೂ 7 ಆಯುಕ್ತ ಹುದ್ದೆಗಳು ಖಾಲಿಯಾಗಿವೆ. ಇವುಗಳ ಪೈಕಿ ಮುಖ್ಯ ಆಯುಕ್ತರ ಹುದ್ದೆಗೆ 109 ಮಂದಿ ಅರ್ಜಿ ಸಲ್ಲಿಸಿದ್ದು, 7 ಆಯುಕ್ತರ ಹುದ್ದೆಗಳಿಗೆ 300ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಇವುಗಳಲ್ಲಿ ಅನೇಕ ನಿವೃತ್ತ ಐಎಎಸ್ ಅಧಿಕಾರಿಗಳು, ಐಪಿಎಸ್ ಅಧಿಕಾರಿಗಳು ಹಾಗೂ ನಿವೃತ್ತ ನ್ಯಾಯಾಧೀಶರೂ ಅರ್ಜಿ ಸಲ್ಲಿಸಿದ್ದಾರೆ. ಇದೆಲ್ಲವುಗಳ ಪರಿಶೀಲನೆ ನಡೆಯುತ್ತಿದ್ದು, ಆ.27ರ ಬೆಳಗ್ಗೆ 11 ಗಂಟೆಗೆ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲ ಆಯ್ಕೆ ನಡೆಯಲಿದೆ. ಈ ಸಭೆಯಲ್ಲಿ ಪ್ರತಿಪಕ್ಷ ನಾಯಕ ಆರ್.ಅಶೋಕ ಹಾಗೂ ಸಂಪುಟದ ಸದಸ್ಯರೊಬ್ಬರು (ಸಚಿವ ಕೆ.ಜೆ.ಜಾರ್ಜ್) ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

> **ಈ ಬಾರಿ ಮಾಹಿತಿ ಆಯೋಗಕ್ಕೆ ಆಡಳಿತ ಹಿನ್ನೆಲೆಯ ಹಾಗೂ ಉತ್ತಮ ಚಾರಿತ್ರಿಕ ಹಿನ್ನೆಲೆಯವರನ್ನು ನೇಮಿಸಬೇಕು. ಸಾಮಾನ್ಯ ಜನರ ಸಮಸ್ಯೆ ಅರಿತು, ಅವರ ಸ್ಥಾನದಲ್ಲಿ ನಿಂತು ಯೋಚಿಸಿ ಆಡಳಿತ ಮಾಡುವವರಿಗೆ ಅವಕಾಶ ನೀಡಬೇಕು. ಇದರಿಂದ ಭ್ರಷ್ಟಾಚಾರ ತಡೆಯಬಹುದು.**
> **-ಸುಧಾಮ್ ದಾಸ್**
> ನಿವೃತ್ತ ಮಾಹಿತಿ ಆಯುಕ್ತ, ವಿಧಾನ ಪರಿಷತ್ ಸದಸ್ಯ

ರಾಜ್ಯ ಸರಕಾರದಿಂದ ಗೊಂದಲಕ್ಕೆ ತೆರೆ

ನಿಗದಿತ ದಿನಾಂಕದಂದೇ ಕೆಎಎಸ್ ಪ್ರಿಲಿಮ್ಸ್ ಪರೀಕ್ಷೆ



ಬೆಂಗಳೂರು: ತೀವ್ರ ವಿವಾದಕ್ಕೆ ಕಾರಣವಾಗಿರುವ ಕೆಎಎಸ್ ಪರೀಕ್ಷೆ ದಿನಾಂಕದಲ್ಲಿ ಯಾವುದೇ ಬದಲಾವಣೆಯಿಲ್ಲ. ನಿಗದಿಯಂತೆ 27ರಂದೇ ಪರೀಕ್ಷೆ ನಡೆಸಲಾಗುವುದು ರಾಜ್ಯ ಸರಕಾರ ಸ್ಪಷ್ಟಪಡಿಸಿದೆ.

ಕೆಎಎಸ್ ಪರೀಕ್ಷೆಯನ್ನು ಮುಂದೂಡಬೇಕು ಎನ್ನುವ ಒತ್ತಡವನ್ನು ಅಭ್ಯರ್ಥಿಗಳು ಸರಕಾರದ ಮೇಲೆ ಹೇರಿದ್ದರು. ಮುಖ್ಯಮಂತ್ರಿ ಕಚೇರಿ ಸೇರಿದಂತೆ ಪ್ರಮುಖ ನಾಯಕರಿಗೆ ಒತ್ತಡವನ್ನು ಹೇರುವ ಪ್ರಯತ್ನವನ್ನು ಮಾಡಿದ್ದರು. ಆದರೆ ಈ ಯಾವ ಲಾಭಿಗೂ ಮಣಿಯದೇ ಸರಕಾರ, 27ರಂದೇ ಪರೀಕ್ಷೆ ನಡೆಸಲು ತೀರ್ಮಾನಿಸಿದೆ.

ಪರೀಕ್ಷೆ ಮುಂದೂಡಿಕೆಗೆ ಒತ್ತಡ : ಅತೀಕ್ ಆರೋಪ: ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕೆಎಎಸ್ ಆಕಾಂಕ್ಷಿಗಳ ಸಣ್ಣದೊಂದು ಗುಂಪು ಕೆಎಎಸ್ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಯನ್ನು ಮುಂದಕ್ಕೆ ಹಾಕುವ ಲಾಬಿ ನಡೆಸುತ್ತಿದ್ದು, ಪರೀಕ್ಷೆ ನಿಗದಿಯಂತೆ ನಡೆಯಲಿದೆ. ಆ.27ಕ್ಕೆ ನಿಗದಿಯಾಗಿರುವ ಕೆಎಎಸ್ ಪರೀಕ್ಷೆಯನ್ನು ಮುಂದೂಡಲು ಲಾಬಿ ನಡೆಸುತ್ತಿದೆ. ಈ ನಿಟ್ಟಿನಲ್ಲಿ ಆ ಗುಂಪು ಎಲ್ಲಾ ತರದ ಒತ್ತಡ ತಂತ್ರ ಬಳಸುತ್ತಿದ್ದಾರೆ. ಆ ಗುಂಪು ಕೆಪಿಎಸ್‌ಸಿ, ಡಿಪಿಎಆರ್ ಮತ್ತು ಸಿಎಂ ಕಚೇರಿಯ ಅಧಿಕಾರಿಗಳಿಗೆ ಕರೆಗಳು ಹಾಗೂ ವಾಟ್ಸ್ ಆ್ಯಪ್ ಸಂದೇಶಗಳನ್ನು ಹರಿಯಬಿಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಮುಂದೂಡಿದರೆ ಪರೀಕ್ಷಾರ್ಥಿಗಳಿಗೆ ಅನ್ಯಾಯ : ಕೆಪಿಎಸ್‌ಸಿ ಸುತ್ತ ಅನುಮಾನದ ಹುತ್ತ ಎಂದು ಹೇಳುವ ಮೂಲಕ ತಪ್ಪು ಮಾಹಿತಿ ಹರಡುತ್ತಿದ್ದಾರೆ. ಈ 1500 ಗುಂಪಿನ ವಿದ್ಯಾರ್ಥಿಗಳ ಗುಂಪಿನ ಒತ್ತಡಕ್ಕೆ ಮಣಿದರೆ 2.5 ಲಕ್ಷ ಪರೀಕ್ಷಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಅವರೆಲ್ಲರೂ ಪರೀಕ್ಷೆಗೆ ತಯಾರಿ ನಡೆಸಿದ್ದು, ಪರೀಕ್ಷಾ ಕೇಂದ್ರಗಳಿಗೆ ತಮ್ಮ ಪ್ರವೇಶ ಪತ್ರ ನೋಂದಾಯಿಸಿದ್ದಾರೆ. ಮೊದಲಿಗೆ ಫೆ.26ಗೆ ಪರೀಕ್ಷೆಯ ಅಧಿಸೂಚನೆ ಹೊರಡಿಸಲಾಗಿತ್ತು. ಮೇ 5ಕ್ಕೆ ಪೂರ್ವಭಾವಿ ಪರೀಕ್ಷೆ ದಿನಾಂಕ ನಿಗದಿಗೊಳಿಸಲಾಗಿತ್ತು. ಆದರೆ ಮೇ 7ರ ಚುನಾವಣೆ ಹಿನ್ನೆಲೆ ಅದನ್ನು ಜು.21ಗೆ ಮುಂದೂಡಲಾಯಿತು. ಇತ್ತ ವಯೋಮಿತಿಯ ನಿರ್ಬಂಧವಿದ್ದ 2017-18 ಅಭ್ಯರ್ಥಿಗಳಿಗೆ ಹೆಚ್ಚುವರಿ ಅವಕಾಶ ನೀಡಲು ಜೂ.21ರಂದು ಆದೇಶ ಹೊರಡಿಸಲಾಯಿತು. ಹೀಗಾಗಿ ಪರೀಕ್ಷೆ ದಿನಾಂಕವನ್ನು ಆ.25ಕ್ಕೆ ಬದಲಾವಣೆ ಮಾಡಲಾಯಿತು. ಜೂ. 26ರಂದು ಇದನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಯಿತು. 2017-18 ಬ್ಯಾಚ್ ಅಭ್ಯರ್ಥಿಗಳಿಂದ ಅರ್ಜಿ ಪಡೆಯಲು ಸುಲಭ ಆವೃತ್ತಿಯ ಸಾಫ್ಟ್‌ವೇರ್ ಜು.6ಕ್ಕೆ ಅಭಿವೃದ್ಧಿಪಡಿಸಲಾಯಿತು. ಜು.21 ಅರ್ಜಿ ಹಾಕಲು ಕೊನೆಯ ದಿನವಾಗಿದ್ದು, ಸುಮಾರು 1,560 ಅರ್ಜಿಗಳು ಸ್ವೀಕರಿಸಲಾಗಿತ್ತು ಎಂದು ಮಾಹಿತಿ ನೀಡಿದ್ದಾರೆ.

4 ತಿಂಗಳಲ್ಲಿ ಸಂಸದ ಶ್ರೇಯಸ್ ಅನರ್ಹ

ಹಾಸನ: ಕಾಂಗ್ರೆಸ್‌ನ ಹಾಸನ ಲೋಕಸಭಾ ಕ್ಷೇತ್ರದ ಸದಸ್ಯ ಶ್ರೇಯಸ್ ಪಟೇಲ್ ಇನ್ನು 3-4 ತಿಂಗಳಲ್ಲಿ ಅನರ್ಹರಾಗುತ್ತಾರೆ ಎಂದು ವಕೀಲ ದೇವರಾಜೇಗೌಡ ಹೇಳಿದ್ದಾರೆ. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಸ್ತಿಯ ಬಗ್ಗೆ ಅಸಮರ್ಪಕ ಮಾಹಿತಿ ಮತ್ತು ಚುನಾವಣಾ ವೆಚ್ಚದ ಬಗ್ಗೆ ತಪ್ಪು ಮಾಹಿತಿ ಪ್ರಕರಣದಲ್ಲಿ ಹೈಕೋರ್ಟ್ ನೋಟೀಸ್ ಜಾರಿ ಮಾಡಿದೆ. ವಿಚಾರಣೆಗೆ ಶ್ರೇಯಸ್ ನ್ಯಾಯಾಲಯಕ್ಕೆ ಹಾಜರಾಗುತ್ತಾರೆ ಎಂಬ ವಿಶ್ವಾಸವಿದೆ. ಪ್ರಜ್ವಲ್ ರೇವಣ್ಣ ಅಶ್ಲೀಲ ಪೆನ್‌ಡ್ರೈವ್ ಬಿಡುಗಡೆ ಮಾಡಿ ಶ್ರೇಯಸ್ ಪಟೇಲ್ ಲಾಭ ಪಡೆದುಕೊಂಡಿದ್ದಾರೆ. ಈ ಬಗ್ಗೆಯೂ ಕೋರ್ಟ್‌ಗೆ ಮಾಹಿತಿ ನೀಡಲಾಗಿದೆ ಎಂದರು.

ಜನರ ಅನುಕಂಪಕ್ಕಾಗಿ ಭಾರಿ ಬೆಲೆಬಾಳುವ ಆಸ್ತಿಯನ್ನು ಕಡಿಮೆ ಬೆಲೆ ಎಂದು ಮಾಹಿತಿ ನೀಡಿದ್ದಾರೆ. ಚುನಾವಣಾ ಖರ್ಚು- ವೆಚ್ಚದ ಬಗ್ಗೆ ಕೂಡ ತಪ್ಪುಮಾಹಿತಿ ನೀಡಿದ್ದಾರೆ. ಚುನಾವಣೆಗೆ ಹೆಚ್ಚುವರಿಯಾಗಿ 21 ಲಕ್ಷ ಖರ್ಚು ಮಾಡಿದ್ದಾರೆ. ಈ ಬಗ್ಗೆ ಮಾಹಿತಿ ನೀಡಿಲ್ಲ ಎಂದ ದೇವರಾಜೇಗೌಡ, ಅಂದಿನ ಚುನಾವಣಾಧಿಕಾರಿ ಜೊತೆ ಶಾಮೀಲಾಗಿ ವೆಚ್ಚದ ವಿವರ ಮುಚ್ಚಿಡಲಾಗಿದೆ ಎಂದು ಆರೋಪಿಸಿದರು.

ಚುನಾವಣಾ ಆಯೋಗಕ್ಕೂ ದೂರು

ಆದಾಯ ತೆರಿಗೆ ಇಲಾಖೆಗೂ ಕೂಡ ತಪ್ಪು ಮಾಹಿತಿ ನೀಡಿದ್ದಾರೆ. ಈ ರೀತಿ ಮಾಡುವುದು ಅಕ್ರಮವಾಗಿದೆ. ಶ್ರೇಯಸ್ ಪಟೇಲ್ ಆಯ್ಕೆ ಅಸಿಂಧು ಕೋರಿ ನನ್ನ ಪುತ್ರನಿಂದ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ಕೊಡಿಸಿದ್ದೇನೆ. ಯಾವುದೇ ಆಮಿಷಕ್ಕೆ ಬಲಿಯಾಗಬಾರದೆಂದು ಹೀಗೆ ಮಾಡಿದ್ದೇನೆ ಎಂದು ಅವರು ಸ್ಪಷ್ಟಪಡಿಸಿದರು.

ಬಿಜೆಪಿ ಪ್ರಭಾವದಿಂದ ಪ್ರಾಸಿಕ್ಯೂಷನ್ ಅನುಮತಿ



ಶಿರಸಿ: ರಾಜ್ಯದಲ್ಲಿ ಕೇವಲ ಮುಡಾ ಹಗರಣ ಮಾತ್ರ ಚರ್ಚೆಯಾಗುತ್ತಿಲ್ಲ. ಮುಡಾ ಹಗರಣದ ಜೊತೆಗೆ ಕುಮಾರಸ್ವಾಮಿ, ಯಡಿಯೂರಪ್ಪ ಅವರ ವಿಷಯವೂ ಚರ್ಚೆ ನಡೆಯುತ್ತಿದೆ ಎಂದು ಯಲ್ಲಾಪುರ ಕ್ಷೇತ್ರದ ಬಿಜೆಪಿಯ ಬಂಡಾಯ ಶಾಸಕ ಶಿವರಾಮ ಹೆಬ್ಬಾರ್ ಹೇಳಿದ್ದಾರೆ. ಅಲ್ಲದೆ, ಬಿಜೆಪಿಯ ಪ್ರಭಾವದಿಂದಲೇ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆಂದು ಪರೋಕ್ಷವಾಗಿ ಕುಟುಕಿದ್ದಾರೆ.

ಶಿರಸಿ ತಾಲೂಕಿನ ಸ್ವರ್ಣವಲ್ಲಿ ಮಠಕ್ಕೆ ಭಾನುವಾರ ಭೇಟಿನೀಡಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಹೆಬ್ಬಾರ್ , ಹಲವು ಸಚಿವರ ಹಗರಣದ ಬಗ್ಗೆಯೂ ಚರ್ಚೆಯಿದೆ. ಇನ್ನು ನಾಲ್ಕು ದಿನದಲ್ಲಿ ಮತ್ತಷ್ಟು ಜನರ ಹಗರಣಗಳು ಮುಡಾ ಹೆಸರಿನಲ್ಲಿ ಹೊರಬರಲಿದೆ. ಅದರಲ್ಲಿ ಯಾವುದು ಸತ್ಯ, ಯಾವುದು ಸುಳ್ಳು ಎಂದು ಹೇಳುವುದಕ್ಕೆ ನ್ಯಾಯಾಲಯವಿದೆ ಎಂದರು.

ಅಧಿಕಾರದಲ್ಲಿರಬೇಕೆಂದರೆ ಅನುಮತಿ ನೀಡಬೇಕು: ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ಕುರಿತು ಪ್ರತಿಕ್ರಿಯಿಸಿದ ಶಾಸಕರು, ಅಧಿಕಾರದಲ್ಲಿ ಇರಬೇಕು. ರಾಜ್ಯಪಾಲ ರಾಗಿ ಮುಂದುವರಿಯಬೇಕು ಎಂದಾಗ ಬಿಜೆಪಿ ಹೇಳಿದ ಹಾಗೆ ಕೇಳಬೇಕು. ಇಲ್ಲದಿದ್ದಲ್ಲಿ ಅಧಿಕಾರ ಇರುವುದಿಲ್ಲ ಎಂದು ಮಾರ್ಮಿಕವಾಗಿ ಹೇಳಿದರು. ನಾನು ಈಗ ಯಾರ ಜೊತೆಯಲ್ಲಿಯೂ ಇಲ್ಲ. ವಿಧಾನಸಭೆಯ ಸದಸ್ಯನಾಗಿದ್ದೇನೆ. , ನನ್ನ ಪಕ್ಷದವರೇ ಈ ಹಿಂದೆ ಸೋಲಿಸಲು ಪ್ರಯತ್ನ ನಡೆಸಿದ್ದರು. ಆದರೆ ಮಾಡಿದ ಕೆಲಸ, ಬಡವರು, ದೇವರು, ಗುರುಗಳ ಆಶೀರ್ವಾದದಿಂದ ಗೆಲುವು ಸಾಧಿಸಿದ್ದೇನೆ ಎಂದು ಶಿವರಾಮ್ ಹೆಬ್ಬಾರ್ ನುಡಿದರು.

ಕೊಡಗಿನ ಮಾನಹಳ್ಳಿಯಲ್ಲಿ ಸಂಘಟಿತ ಜನರ ಮೆಚ್ಚುಗೆಯ ಕಾರ್ಯ

ಗ್ರಾಮಸ್ಥರಿಂದ ತುರ್ತು ಸೇತುವೆ ನಿರ್ಮಾಣ

ಮಾನಹಳ್ಳಿಯಲ್ಲಿ ಗ್ರಾಮಸ್ಥರೇ ಒಟ್ಟಾಗಿ ನಿರ್ಮಿಸಿದ ಕಿರು ಸೇತುವೆ

ಮಡಿಕೇರಿ: ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯದಿಂದ ಬೇಸತ್ತ ಗ್ರಾಮಸ್ಥರು ತಮ್ಮ ಸ್ವಂತ ಖರ್ಚಿನಿಂದ ತಾವೇ ಸೇತುವೆ ನಿರ್ಮಿಸಿಕೊಂಡ ಅಪರೂಪದ ಬೆಳವಣಿಗೆ ಹಾರಂಗಿ ಸಮೀಪದ ಮಾನಹಳ್ಳ ಗ್ರಾಮದಲ್ಲಿ ನಡೆದಿದೆ.

ಇಲ್ಲಿ ಇದ್ದ ಕಿರುಸೇತುವೆ ಮೂರು ವರ್ಷಗಳ ಹಿಂದೆ ಸುರಿದ ಅಧಿಕ ಮಳೆಯಿಂದಾಗಿ ನೀರಿನ ರಭಸಕ್ಕೆ ಕುಸಿದು ಹೋಗಿತ್ತು. ಸಂಪರ್ಕ ಕಡಿತಗೊಂಡ ಕಾರಣ ಮಾನಹಳ್ಳ, ಯಡವನಾಡು, ಐಗೂರು, ಹಾರಂಗಿ ಸೇರಿದಂತೆ ಐದು ಗ್ರಾಮಗಳ ಗ್ರಾಮಸ್ಥರು ಮುಖ್ಯರಸ್ತೆಯನ್ನು ಸೇರಲು ಐದು ಕಿಮೀ ದೂರ ಬಳಸಿ ಬರಬೇಕಾಗಿತ್ತು.

ಸೇತುವೆಯ ಕೊರತೆ ಮತ್ತು ಸಂಚಾರದ ಸಂಕಷ್ಟದ ಕುರಿತು ಹಿರಿಯ ಅಧಿಕಾರಿಗಳ ಗಮನ ಸೆಳೆದು ಮೂರು ವರ್ಷ ಕಳೆದರೂ ಯಾವುದೇ ಸ್ಪಂದನೆ ದೊರೆತ್ತಿರಲಿಲ್ಲ. ಎಂಜಿನಿಯರ್‌ಗಳು ಸ್ಥಳ ಪರಿಶೀಲನೆ ಮಾತ್ರ ಮಾಡಿದರು. ಆದರೆ ಇಲ್ಲಿಯವರೆಗೆ ಯಾರೂ ಸೇತುವೆ ನಿರ್ಮಿಸುವ ಇಚ್ಛಾಶಕ್ತಿಯನ್ನು ಪ್ರದರ್ಶಿಸಲಿಲ್ಲ. ಇದರಿಂದ ಅಸಮಾಧಾನಗೊಂಡ ಗ್ರಾಮಸ್ಥರು ತಾವೇ ಸೇತುವೆ ಕಟ್ಟಲು ಮುಂದಾದರು. ಗ್ರಾಮಸ್ಥರೆಲ್ಲರು ಒಗ್ಗೂಡಿ ಹಣ ಸಂಗ್ರಹಿಸಿ ಅಡಿಕೆ ಮರದ ದಿಮ್ಮಿಗಳನ್ನು ತಂದು ಕಿರು ಸೇತುವೆ ನಿರ್ಮಿಸಿದರು.

ಇದೀಗ ತಾವೇ ಕಟ್ಟಕೊಂಡ ಸೇತುವೆಯಲ್ಲಿ ಗ್ರಾಮಸ್ಥರು ಸಂಚಾರ ಆರಂಭಿಸಿದ್ದಾರೆ. ಮಾನಹಳ್ಳ ಸುತ್ತಮುತ್ತಲ ಗ್ರಾಮಗಳ ಸಮಸ್ಯೆ ಜನಪ್ರತಿನಿಧಿಗಳು ಗಂಭೀರವಾಗಿ ಪರಿಗಣಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಜಿಂದಾಲ್ ಭೂಮಿ ಬೇಕಾಬಿಟ್ಟಿ ಪರಭಾರೆಗೆ ವಿಶ್ವನಾಥ್ ಟೀಕೆ

ಸರಕಾರದ ಮರ್ಜಿಯಲ್ಲಿ ಸಾಹಿತಿಗಳು

ಮೈಸೂರು: ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ನೀಡಿರುವುದನ್ನು ಖಂಡಿಸಿದ ಸಾಹಿತಿಗಳ ನಡೆಯನ್ನು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಟೀಕಿಸಿದ್ದು, ಇವರೆಲ್ಲ ಸರಕಾರಿ ಸಾಹಿತಿಗಳು ಎಂದು ಲೇವಡಿ ಮಾಡಿದ್ದಾರೆ.

ಸರಕಾರದ ತಪ್ಪು ನಡೆ ಬಗ್ಗೆ ನಾಡಿಗೆ ತಿಳಿಸಬೇಕಿದೆ. ತಪ್ಪನ್ನು ತಪ್ಪು ಎಂದು ಹೇಳಬೇಕು. ಆದರೆ, ಇವರೆಲ್ಲ ಸರಕಾರದ ಮರ್ಜಿಯಲ್ಲಿ ಇದ್ದಾರೆ. ಚಿಂತಕರು ಈಗ ಎಲ್ಲಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಅವರು ಮಾರ್ಮಿಕವಾಗಿ ಪ್ರಶ್ನಿಸಿದರು.

ಬೇಕಾಬಿಟ್ಟಿ ಪರಭಾರೆ: ಸರಕಾರ 3667 ಎಕರೆ ಗಣಿ ಭೂಮಿಯನ್ನು ಎಕರೆಗೆ 1 ಲಕ್ಷದ 15 ಸಾವಿರ ರು.ಗೆ ಜಿಂದಾಲ್ ಕಂಪನಿಗೆ ಮಾರಾಟ ಮಾಡಿದೆ. ಬೆಲೆ ಬಾಳುವ ಕಬ್ಬಿಣ, ಖನಿಜದ ಅಂಶಗಳು ಭೂಮಿಯಲ್ಲಿವೆ. ಉತ್ತಮ ಅದಿರು ಸಿಗುವ 62% ಇಳುವರಿಯಿರುವ ಭೂಮಿಯನ್ನು ಜಿಂದಾಲ್ ಗೆ ಮಾರಾಟ ಮಾಡಿದ್ದಾರೆ ಎಂದು ಎಚ್.ವಿಶ್ವನಾಥ್ ಆರೋಪಿಸಿದರು.

ಈ ಭೂಮಿಗೆ ಯಾವುದೇ ರೀತಿಯ ಮೌಲ್ಯ ಕಟ್ಟಲು ಆಗುವುದಿಲ್ಲ. 2017ರಲ್ಲಿ ಕಾನೂನು ಇಲಾಖೆಯು ಭೂಮಿಯ ಮೌಲ್ಯ ಹಾಗೂ ಒಳಗಿರುವ ಅದಿರು ಪ್ರಮಾಣ ನೋಡಿ ಮಾರಬೇಕು ಎಂದು ವರದಿ ನೀಡಿತ್ತು. ಆದರೆ ಸರಕಾರ ಏಕಾಏಕಿ ಭೂಮಿ ಪರಭಾರೆ ಮಾಡಿದೆ ಎಂದು ದೂರಿದರು.

ಕುಮಾರಕೃಪಾದಿಂದ ಸಮಿತಿ ಕಾರ್ಯನಿರ್ವಹಣೆ

ಇದು ಜನವಿರೋಧಿ ನೀತಿ, ಈ ಬಗ್ಗೆ ಸಿದ್ದರಾಮಯ್ಯ ಮಾತನಾಡಬೇಕು. ಒಟ್ಟಾರೆ ಭೂಮಿಯನ್ನು 52 ಕೋಟಿಗಳಿಗೆ ಮಾರಾಟ ಮಾಡಿದ್ದಾರೆ. ಆದರೆ, ಇವರು ತಮ್ಮ 14 ಸೈಟ್ ಗೆ 62 ಕೋಟಿ ಕೇಳುತ್ತಾರೆ. ಇದ್ಯಾವ ನ್ಯಾಯ ಎಂದು ಕಟಕಿಯಾಡಿದರು. ಇದನ್ನು ಆಯ್ಕೆ ಸಮಿತಿ ಮುಂದಿಟ್ಟು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು. ಮುಡಾ ಹಗರಣಕ್ಕಾಗಿ ಏಕವ್ಯಕ್ತಿ ಸಮಿತಿ ಮಾಡಿದ್ದೀರಿ ಸಿದ್ದರಾಮಯ್ಯ ಅವರೇ, ಒನ್ ಮ್ಯಾನ್ ಕಮಿಷನ್ ಕುಮಾರಕೃಪಾದಿಂದ ಆಪರೇಟ್ ಆಗ್ತಾ ಇದೆ. ಕಮಿಷನ್‌ಗಾಗಿಯೇ ಮೇಜು-ಕುರ್ಚಿ ಅಂತಾ 1.5 ಕೋಟಿ ರು. ವೆಚ್ಚವಾಗಿದೆ ಎಂದು ವಿಶ್ವನಾಥ್ ಟೀಕಿಸಿದರು.

ರೆಸಾರ್ಟ್‌ನಲ್ಲಿ ಕುಳಿತಂತೆ ಇದೆ | ರೇಣುಕಾಸ್ವಾಮಿ ತಂದೆಯ ಆಕ್ರೋಶ

ದರ್ಶನ್‌ಗೆ ರಾಜಾತಿಥ್ಯ: ಅಸಮಾಧಾನ

ಚಿತ್ರದುರ್ಗ: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಸೆರೆಯಾಗಿರುವ ನಟ ದರ್ಶನ್‌ಗೆ ಜೈಲಿನಲ್ಲಿ ರಾಜಾತಿಥ್ಯ ದೊರೆತಿರುವ ಬಗ್ಗೆ ರೇಣುಕಾಸ್ವಾಮಿ ಕುಟುಂಬದವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದರ್ಶನ್‌ಗೆ ಜೈಲಿನಲ್ಲಿ ರಾಜಾತಿಥ್ಯ ನೀಡಿದ್ದಾರೆ ಎನ್ನಲಾದ ಫೋಟೋ ಬೆಳಕಿಗೆ ಬಂದ ಬೆನ್ನಲ್ಲೇ ಕೊಲೆಯಾದ ರೇಣುಕಾಸ್ವಾಮಿ ತಂದೆ ಕಾಶೀನಾಥ್ ಶಿವನಗೌಡ ಹಾಗೂ ಸಮಾಜದ ಮುಖಂಡರ ಸಮ್ಮುಖದಲ್ಲಿ ಸುದ್ದಿಗೋಷ್ಠಿ ನಡೆಸಲಾಯಿತು.

ಈ ವೇಳೆ ರೇಣುಕಾಸ್ವಾಮಿ ತಂದೆ ಕಾಶೀನಾಥ ಶಿವನಗೌಡ ಮಾತನಾಡಿ, ಜೈಲಿನಲ್ಲಿದ್ದಾರೋ ಇಲ್ಲವೋ ಎಂಬ ಭಾವನೆ ಮೂಡುತ್ತಿದೆ. ಸಾಮಾನ್ಯ ಕೈದಿಯಂತೆ ನಟ ದರ್ಶನ್ ಸಹ ಇರಬೇಕು. ಆದರೆ ರೆಸಾರ್ಟ್‌ನಲ್ಲಿ ಕುಳಿತಂತೆ ನಟ ದರ್ಶನ್ ಕುಳಿತಿರುವುದು ಕಂಡು ಗಾಬರಿ ಆಯಿತು. ಪೊಲೀಸ್ ತನಿಖೆ, ನ್ಯಾಯಾಂಗ ಬಗ್ಗೆ ನಮಗೆ ಇನ್ನೂ ನಂಬಿಕೆ ಇದೆ. ಒಟ್ಟಿನಲ್ಲಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಆಗಬೇಕು. ನಟ ದರ್ಶನ್‌ಗೆ ವ್ಯವಸ್ಥೆ ಕಲ್ಪಿಸಿದವರಿಗೂ ಶಿಕ್ಷೆ ಆಗಬೇಕು. ಸರ್ಕಾರವನ್ನು ನಾವು ನಂಬಿದ್ದೇವೆ. ಸಿಎಂ, ಗೃಹ ಮಂತ್ರಿಗಳು ಈ ಬಗ್ಗೆ ಗಮನಹರಿಸಬೇಕು. ಮಗನನ್ನು ಕಳೆದುಕೊಂಡು ಕಣ್ಣೀರಲ್ಲಿ ಕೈತೊಳೆಯುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು

ದರ್ಶನ್‌ಗೆ ಅಪರಾಧಿ ಭಾವನೆ ಇಲ್ಲ: ನಮಗಿಲ್ಲಿ ನೋವು, ಸಂಕಟ ಆಗ್ತಿದೆ. ತಪ್ಪು ಮಾಡಿದ ಭಾವನೆ ದರ್ಶನ್‌ಗೆ ಇದ್ದಂತೆ ಕಾಣುತ್ತಿಲ್ಲ. ಆರೋಪಿಗಳು ಜೈಲಿನಲ್ಲಿ ಚೈನಿ ಹೊಡೆಯುತ್ತಿದ್ದಾರೆ ಎಂದು ಕಣ್ಣೀರು ಹಾಕಿದರು. ಸರಿಯಾದ ತನಿಖೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕು. ಹೀಗಾದರೆ ಸಿಬಿಐ ತನಿಖೆಗೆ ವಹಿಸಬೇಕೆಂದು ಅನಿಸುತ್ತದೆ. ಇಲ್ಲಿಯವರೆಗೆ ಉತ್ತಮ ರೀತಿಯಲ್ಲಿ ತನಿಖೆ ನಡೆದಿದೆ. ಇನ್ಮುಂದೆಯೂ ಸರಿಯಾದ ರೀತಿಯಲ್ಲಿ ತನಿಖೆ ನಡೆಯಲಿ ಎಂದು ಒತ್ತಾಯಿಸಿದರು.

ನಂತರ, ರೇಣುಕಾಸ್ವಾಮಿ ಚಿಕ್ಕಪ್ಪ ಷಡಕ್ಷರಿ ಮಾತನಾಡಿ, ಮಾಧ್ಯಮಗಳ ಮೂಲಕ ವಿಷಯ ತಿಳಿದು ಗಾಬರಿ ಆಯಿತು. ಸರಿಯಾದ ದಿಕ್ಕಿನಲ್ಲಿ ತನಿಖೆ ನಡೆಯುತ್ತಿದೆ ಎಂದು ನಾವು ಭಾವಿಸಿದ್ದೆವು. ಯಾಕೆ ಈ ರೀತಿ ಆಗುತ್ತಿದೆ ಎಂಬ ಅನುಮಾನ ಮೂಡಿದೆ. ಸರ್ಕಾರದ ಮೇಲೆ ನಮಗೆ ಇನ್ನೂ ನಂಬಿಕೆಯಿದೆ. ಜೈಲಿನಲ್ಲಿ ನಟ ದರ್ಶನ್‌ಗೆ ಸಕಲ ವ್ಯವಸ್ಥೆ ಕಲ್ಪಿಸಿದ್ದರ ಬಗ್ಗೆ ತನಿಖೆ ಆಗಲಿ. ಈ ರೀತಿಯ ಘಟನೆಗಳು ಮರುಕಳಿಸದಿರಲಿ. ನಟ ದರ್ಶನ್‌ಗೆ ಸಿಗರೆಟ್ ನೀಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ ಎಂದು ಆಗ್ರಹಿಸಿದರು.

ಕೃಷಿಭೂಮಿ ಸ್ವಾಧೀನ ಮರುಪರಿಶೀಲನೆ ಭರವಸೆ



ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆ.ಐ.ಎ.ಡಿ.ಬಿ ಮಾಡುತ್ತಿರುವ 500 ಎಕರೆ ಭೂ ಸ್ವಾಧೀನವನ್ನು ತಡೆಹಿಡಿಯಬೇಕೆಂದು ಕೋರಿ ಸಂಸದ ಡಾ.ಕೆ.ಸುಧಾಕರ ಮಾಡಿದ್ದ ಮನವಿಗೆ ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಸ್ಪಂದಿಸಿದ್ದಾರೆ.

ನೆಲಮಂಗಲ ತಾಲೂಕಿನ ಸೋಂಪುರ ಹೋಬಳಿಯ ಹನುಮಂತಪುರ ಹಾಗೂ ತ್ಯಾಮಗೊಂಡ್ಲು ಹೋಬಳಿಯ ಕೋಡಿಪಾಳ್ಯ ಮತ್ತು ಬಿದಲೂರು ಗ್ರಾಮದ 500 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕೆ.ಐ.ಎ.ಡಿ.ಬಿ. ರೈತರಿಗೆ ನೋಟಿಸ್ ನೀಡಿತ್ತು.

ಈ ಸಮಸ್ಯೆಯನ್ನು ಸಂಸದ ಡಾ.ಕೆ.ಸುಧಾಕರ ಸಚಿವರ ಗಮನಕ್ಕೆ ತಂದಿದ್ದರು. ಇದು ಸಂಪೂರ್ಣ ಕೃಷಿಜಮೀನುಗಳಾಗಿದ್ದು, ತೆಂಗು, ಅಡಿಕೆ, ಬಾಳೆ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗಿದೆ. ಇದಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ. ಈ ರೈತರು ಕೃಷಿಯನ್ನೇ ನಂಬಿ ಬದುಕುತ್ತಿದ್ದು, ಬೇರೆ ಆದಾಯವಿಲ್ಲ. ಆದ್ದರಿಂದ ಸಚಿವರು ಕೂಡಲೇ ಮಧ್ಯಪ್ರವೇಶಿಸಿ ಸ್ವಾಧೀನ ತಡೆಹಿಡಿದು, ಪರ್ಯಾಯ ಮಾರ್ಗೋಪಾಯಗಳ ಬಗ್ಗೆ ಚರ್ಚೆ ನಡೆಸಬೇಕು ಎಂದು ಸಂಸದ ಸುಧಾಕರ್ ಪತ್ರದಲ್ಲಿ ಕೋರಿದ್ದರು. ಇದಕ್ಕೆ ಸ್ಪಂದಿಸಿದ ಸಚಿವ ಎಂ.ಬಿ. ಪಾಟೀಲ್ ಸಚಿವರು, ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಈ ಕುರಿತು ಸಂಸದರು ಟ್ವೀಟ್ ಮಾಡಿ ಧನ್ಯವಾದ ಸಲ್ಲಿಸಿದ್ದಾರೆ.

ಆಸ್ತಿಗಾಗಿ ನಿವೃತ್ತ ಶಿಕ್ಷಕನ ಕೊಲೆ | ಅಳಿಯ, ಮೊಮ್ಮಗನ ಬಂಧನ

ಕೊಲೆ ನಡೆದ 3 ದಿನದಲ್ಲಿ ಆರೋಪಿಗಳ ಸೆರೆ



ಬೆಳ್ತಂಗಡಿ: ಬೆಳಾಲು ನಿವಾಸಿ ನಿವೃತ್ತ ಶಿಕ್ಷಕ ಎಸ್ ಪಿ ಬಾಲಕೃಷ್ಣ ಭಟ್ (83) ಕೊಲೆ ಪ್ರಕರಣ ಸಂಬಂಧ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಕೇರಳದ ಕಾಸರಗೋಡು ಜಿಲ್ಲೆಯ ಮುಳ್ಳೇರಿಯಾ ನಿವಾಸಿ, ವೃತ್ತಿಯಲ್ಲಿ ಜ್ಯೋತಿಷಿಯಾಗಿರುವ ರಾಘವೇಂದ್ರ ಕೆದಿಲಾಯ (53) ಹಾಗೂ ಆತನ ಪುತ್ರ ಮುರಳೀಕೃಷ್ಣ (20) ಬಂಧಿತರು.

ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಈ ಕೊಲೆ ನಡೆದಿದ್ದು, ಬಾಲಕೃಷ್ಣ ಭಟ್ ಅವರ ಪುತ್ರಿಯ ಗಂಡ ಹಾಗೂ ಮಗ ಸೇರಿ ಹತ್ಯೆ ಮಾಡಿದ ಸಂಗತಿ ಪೊಲೀಸ್ ತನಿಖೆಯಿಂದ ಬಯಲಾಗಿದೆ. ಧರ್ಮಸ್ಥಳ ಪೊಲೀಸರು ಸಿ.ಸಿ ಕ್ಯಾಮರಾಗಳು, ಮೊಬೈಲ್ ಲೊಕೇಶನ್ ಸೇರಿದಂತೆ ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ ಆರೋಪಿಗಳನ್ನು ಮೂರೇ ದಿನಗಳಲ್ಲಿ ಪತ್ತೆಹಚ್ಚಿದ್ದಾರೆ. ಇದೀಗ ಇಬ್ಬರು ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದೆ.

ಘಟನೆಯ ವಿವರ

ಬೆಳಾಲುವಿನಲ್ಲಿ ಆ.20ರಂದು ಮಧ್ಯಾಹ್ನ ಎಸ್.ಪಿ ಬಾಲಕೃಷ್ಣ ಬಡೆಕ್ಕಿಲ್ಲಾಯ ಅವರನ್ನು ಮನೆಯ ಅಂಗಳದಲ್ಲೇ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು. ಕೊಲೆ ನಡೆದ ರೀತಿ ಹಾಗೂ ಮನೆಯಲ್ಲಿ ಯಾವುದೇ ಕಳ್ಳತನ ನಡೆಯದಿರುವುದನ್ನು ಗಮನಿಸಿದ ಪೊಲೀಸರು ಇದು ಪರಿಚಿತರಿಂದಲೇ ನಡೆದ ಕೃತ್ಯ ಎಂದು ಖಚಿತಪಡಿಸಿಕೊಂಡರು. ಅದಕ್ಕೆ ಪೂರಕವಾಗಿ ಊಟಮಾಡಿ ಎಸೆದಿದ್ದ ಎರಡು ಎಲೆಗಳು ಅಲ್ಲಿ ಕಂಡುಬಂದಿದ್ದವು. ಈ ಹಿನ್ನೆಲೆಯಲ್ಲಿ ಬಾಲಕೃಷ್ಣ ಬಡೆಕ್ಕಿಲ್ಲಾಯ ಸಂಬಂಧಿಕರ ವಿಚಾರಣೆ ನಡೆಸಿದಾಗ ಕೊಲೆ ಪ್ರಕರಣದ ಹಿನ್ನೆಲೆ ಬಹಿರಂಗಗೊಂಡಿದೆ.

ಆಸ್ತಿ ನೀಡದಿದ್ದಕ್ಕೆ ಹತ್ಯೆ

ನಿವೃತ್ತ ಶಿಕ್ಷಕ ಬಾಲಕೃಷ್ಣ ಬಡೆಕಿಲ್ಲಾಯ ಅವರು, ತಮ್ಮ ಮೃತ ಪತ್ನಿಯ ಚಿನ್ನಾಭರಣಗಳನ್ನು ಪುತ್ರಿ ವಿಜಯಲಕ್ಷ್ಮಿಗೆ ನೀಡದೆ ಲಾಕರ್‌ನಲ್ಲಿ ಇರಿಸಿದ್ದರು. ಅಲ್ಲದೆ ಆಸ್ತಿಯಲ್ಲೂ ಪಾಲು ನೀಡಿರಲಿಲ್ಲ. ತಾನು ಬದುಕಿರುವವರೆಗೂ ಪಾಲು ಮಾಡುವುದಿಲ್ಲ ಎಂದು ಹೇಳುತ್ತಿದ್ದರು ಎನ್ನಲಾಗಿದೆ. ಇದೇ ಕಾರಣಕ್ಕಾಗಿ ಅಳಿಯ ಮತ್ತು ಮೊಮ್ಮಗ ಸೇರಿ ಸಂಚು ರೂಪಿಸಿ ಹತ್ಯೆಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾಸರಗೋಡಿನಿಂದ ಮಾರಕಾಸ್ತ್ರದೊಂದಿಗೆ ಸ್ಕೂಟರಿನಲ್ಲಿ ಬಂದ ಅಪ್ಪ- ಮಗ ಬೆಳಾಲುವಿನ ಮನೆಗೆ ಬಂದು ಊಟ ಮಾಡಿದ್ದಾರೆ. ಬಳಿಕ ಬಾಲಕೃಷ್ಣ ಬಡೆಕ್ಕಿಲ್ಲಾಯ ಮೇಲೆ ದಾಳಿ ನಡೆಸಿದ್ದಾರೆ. ಈ ವೇಳೆ ಮನೆಯಿಂದ ಹೊರಗೋಡಿದ ಅವರನ್ನು ಅಟ್ಟಿಸಿಕೊಂಡು ಹೋಗಿ ಕೊಲೆಗೈದು ಸ್ಕೂಟರ್‌ನಲ್ಲಿ ಪರಾರಿಯಾಗಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಬಾಲಕಿಯ ಮೇಲೆ ಅತ್ಯಾಚಾರ ಯತ್ನ

ರಾಯಬಾಗ: ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಎಸಗಲು ಪ್ರಯತ್ನಿಸಿದ ಯುವಕನನ್ನು ಸಾರ್ವಜನಿಕರು ಧರ್ಮದೇಟು ನೀಡಿ ಪೋಲೀಸರಿಗೆ ಒಪ್ಪಿಸಿದ ಘಟನೆ ರಾಯಬಾಗ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಶನಿವಾರ ನಡೆದಿದೆ.

6 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ ಶಾಲೆ ಬಿಟ್ಟ ನಂತರ ತನ್ನ ಸ್ವಗ್ರಾಮ ತಾಲೂಕಿನ ಕಂಚಕಾರವಾಡಿಗೆ ಹೋಗಲು ಬಸ್ಸಿನ ದಾರಿ ಕಾಯುತ್ತ ನಿಂತಾಗ ರಾಯಬಾಗ ಖೈರಕೋಡಿ ನಿವಾಸಿ ಸುನೀಲ ಧೀಪಾಳಿ (28) ತಾನೂ ಕಂಚಕಾರವಾಡಿಗೆ ಹೋಗುತ್ತಿದ್ದೇನೆ. ನಿನಗೆ ಅಲ್ಲಿ ಬಿಡುವದಾಗಿ ಹೇಳಿ ಮೋಟರ ಬೈಕ್ ಮೇಲೆ ಕುಳ್ಳಿರಿಸಿಕೊಂಡು ಹೋಗಿದ್ದಾನೆ. ಮಾರ್ಗಮಧ್ಯದಲ್ಲಿ ದಾರಿತಪ್ಪಿಸಿ ಬೇರೆ ಕಡೆಗೆ ಹೊರಟಾಗ ನಮ್ಮೂರ ದಾರಿ ಇದಲ್ಲ ಎಂದು ಬಾಲಕಿ ಹೇಳಿದಾಗ ಸುಮ್ಮನೇ ಕುಳಿತುಕೋ ಎಂದು ಆವಾಜ ಹಾಕಿ ಭೀಮನಗರದ ಹತ್ತಿರ ತಗ್ಗು ಪ್ರದೇಶಕ್ಕೆ ಎಳೆದುಕೊಂಡು ಹೋಗಿ ಅತ್ಯಾಚಾರಕ್ಕೆ ಪ್ರಯತ್ನಿಸಿದ್ದಾನೆ. ಆಗ ಆಕೆಯ ಕಿರಿಚಾಟ ಕೇಳಿದ ಸ್ಥಳೀಯರು ಆತನನ್ನು ಹಿಡಿದು ಧರ್ಮದೇಟು ನೀಡಿದ್ದಾರೆ.

ಸಿದ್ದರಾಮಯ್ಯ ಅವರನ್ನು ಅಸ್ಥಿರಗೊಳಿಸುವ ಪ್ರಯತ್ನ ಫಲಿಸಲ್ಲ | ಅಧಿಕಾರಕ್ಕಾಗಿ ಬಿಜೆಪಿ-ಜೆಡಿಎಸ್ ಮೈತ್ರಿ

ಗೌಡರ ಕುಟುಂಬವೆಂದೂ ವಿಶ್ವಾಸ ಉಳಿಸಿಕೊಂಡಿಲ್ಲ

ವಿಶ್ವವಾಣಿ ಸಂದರ್ಶನ

ರಂಜಿತ್ ಎಚ್. ಅಶ್ವತ್ಥ

ದೇವೇಗೌಡರ ಕುಟುಂಬ ಯಾವುದೇ ವ್ಯಕ್ತಿ ಅಥವಾ ರಾಜಕೀಯ ಪಕ್ಷದೊಂದಿಗೆ ವರ್ಷಕ್ಕಿಂತ ಹೆಚ್ಚು ದಿನ ವಿಶ್ವಾಸ ಉಳಿಸಿಕೊಂಡಿಲ್ಲ. ಕುಮಾರಸ್ವಾಮಿ ಅವರು ಜೆಡಿಎಸ್ ನಾಯಕತ್ವದ ಪಡೆದ ಬಳಿಕ ಜೆಡಿಎಸ್ ಬಲ ಕುಸಿದಿರುವುದನ್ನು ನೋಡಿದರೆ, ಯಾರ ತಪ್ಪು ಎನ್ನುವುದು ಸ್ಪಷ್ಟವಾಗುತ್ತದೆ. ಹಳೇ ಮೈಸೂರು ಭಾಗದಲ್ಲಿಯೂ ಕುಸಿಯುತ್ತಿರುವ ಹಿಡಿತವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಜೆಡಿಎಸ್ ಇದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

'ವಿಶ್ವವಾಣಿ'ಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ ಮಾತನಾಡಿರುವ ಅವರು, ಬಿಜೆಪಿ- ಜೆಡಿಎಸ್‌ನಿಂದ ಸರಕಾರ ಅಸ್ಥಿರಗೊಳಿಸುವ ಪ್ರಯತ್ನ, ಮುಡಾ ಪ್ರಕರಣದಲ್ಲಿ ಅನವಶ್ಯ ಆರೋಪ, ಕುಮಾರಸ್ವಾಮಿ ಅವರ ಕುಟುಂಬ ಹಾಗೂ ಹಿಟ್ ಆ್ಯಂಡ್ ರಾಜಕೀಯ ಸೇರಿದಂತೆ ಹಲವು ವಿಷಯದ ಬಗ್ಗೆ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣಪಾಠ ಇಲ್ಲಿದೆ.

● ಸದ್ಯ ರಾಜಕೀಯ ಪರಿಸ್ಥಿತಿ ಹೇಗಿದೆ?

ಕರ್ನಾಟಕದಲ್ಲಿ ಸದ್ಯದ ರಾಜಕೀಯ ಪರಿಸ್ಥಿತಿ ಈ ಹಿಂದೆ ಎಂದಿಗೂ ನಾವು ನೋಡಿರಲಿಲ್ಲ. ಪ್ರತಿಪಕ್ಷ ಸ್ಥಾನದಲ್ಲಿರುವ ಪಕ್ಷಗಳು ಸಾಮಾನ್ಯವಾಗಿ, ಸರಕಾರದ ತಪ್ಪು ನಡೆಯನ್ನು ಎತ್ತಿಹಿಡಿಯುವುದು, ತಿದ್ದುಕೊಳ್ಳುವುದಕ್ಕೆ ಮಾರ್ಗದರ್ಶನ ಮಾಡುವುದನ್ನು ನೋಡಿಕೊಂಡು ಬಂದಿದ್ದೇವೆ. ಆದರೆ ನರೇಂದ್ರ ಮೋದಿ ದೇಶದ ಪ್ರಧಾನಿಯಾಗಿ, ಅಮಿತ್ ಶಾ ಬಿಜೆಪಿಯ ಚುಕ್ಕಾಣಿ ಹಿಡಿದ ಬಳಿಕ, ಪ್ರತಿಪಕ್ಷಗಳನ್ನು 'ಅಸ್ಥಿರ'ಗೊಳಿಸುವುದೇ ಬಿಜೆಪಿಯ ಮೂಲ ಉದ್ದೇಶವಾಗಿದೆ ಎನಿಸುತ್ತಿದೆ. ಈ ಗುರಿ ಸಾಧಿಸುವುದಕ್ಕೆ, ಸಿಬಿಐ, ಐಟಿ, ಇಡಿ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ವಿರೋಧ ಪಕ್ಷ ಹಾಗೂ ನಾಯಕರನ್ನು ಅಸ್ಥಿರಗೊಳಿಸುತ್ತಿದ್ದಾರೆ. ಇದರ ಮುಂದುವರಿದ ಭಾಗವೇ ಕರ್ನಾಟಕದಲ್ಲಿಯೂ ನಡೆಯುತ್ತಿದೆ.

● ಅಂದರೆ ಈವರೆಗೆ ದೇಶದಲ್ಲಿ ಸರಕಾರಗಳು ಅಸ್ಥಿರಗೊಂಡ ಇತಿಹಾಸವಿಲ್ಲವೇ?

ಸ್ವಾತಂತ್ರ್ಯ ಭಾರತದಲ್ಲಿ ಆಡಳಿತ ಪಕ್ಷಗಳು ಅಸ್ಥಿರಗೊಂಡೇ ಇಲ್ಲ ಎನ್ನಲು ಬರುವುದಿಲ್ಲ. ಈ ಹಿಂದೆಯೂ ಹಲವು ಭಾರಿ ಸರಕಾರಗಳು ಬಿದ್ದು ಹೋಗಿರುವ ಉದಾಹರಣೆಯಿದೆ. ಆದರೆ ಆ ಎಲ್ಲ ಸಮಯದಲ್ಲಿ ಒಂದು ಸ್ಥಾನದ ಸರಳ ಬಹುಮತವಿದ್ದಾಗ, ಪಕ್ಷೇತರರೊಂದಿಗೆ ಅಧಿಕಾರದ ಚುಕ್ಕಾಣಿ ಹಿಡಿದಾಗ ಸಮಸ್ಯೆಗಳಾಗಿವೆ. ಆದರೆ ಇದೇ ಮೊದಲ ಬಾರಿಗೆ 136 ಶಾಸಕರ ಬೃಹತ ಸಂಖ್ಯಾಬಲದೊಂದಿಗೆ ಅಧಿಕಾರದ ಗದ್ದುಗೆ ಹಿಡಿದಿರುವ ಪಕ್ಷದ ಸರಕಾರವನ್ನು ಅಸ್ಥಿರಗೊಳಿಸುವ ನೀಚ ಕೆಲಸವನ್ನು ಪ್ರತಿಪಕ್ಷಗಳು ಮುಂದಾಗಿದೆ. ಈ ರೀತಿಯ ಕೆಟ್ಟ ರಾಜಕೀಯ ಕರ್ನಾಟಕದಲ್ಲಿ ಎಂದೆಂದೂ ನೋಡಿರಲಿಲ್ಲ.

● ಸಿದ್ದರಾಮಯ್ಯ ಅವರನ್ನು ಅಸ್ಥಿರಗೊಳಿಸುವ ನಡೆದಿದೆಯೇ?

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 136 ಶಾಸಕರ ಬಲವಿದೆ. ಆದರೂ ಅಸ್ಥಿರಗೊಳಿಸುವ ಪ್ರಯತ್ನವನ್ನು ಬಿಜೆಪಿಗರು ಮಾಡುತ್ತಿದ್ದಾರೆ. ಇಂದಿನ ರಾಜಕೀಯದಲ್ಲಿ ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರಂತಹ ಉತ್ತಮ ಆಡಳಿತ ಹಾಗೂ ಬದ್ಧತೆಯಿರುವ ಮತ್ತೊಬ್ಬ ನಾಯಕರಲಿಲ್ಲ. ಈ ಹಿಂದೆ ರಾಮಕೃಷ್ಣ ಹೆಗಡೆ, ದೇವರಾಜ ಅರಸು, ವೀರೇಂದ್ರ ಪಾಟೀಲ್, ದೇವೇಗೌಡ ಅವರನ್ನುನೋಡಿದ್ದೇವೆ. ಆದರೆ ಇಂದಿನ ರಾಜಕೀಯದಲ್ಲಿ ಸಿದ್ದರಾಮಯ್ಯ ಅವರೇ ಉತ್ತಮ ನಾಯಕ ಎನ್ನುವುದರಲ್ಲಿ ಅನುಮಾನ ಬೇಡ. ಸಿದ್ದರಾಮಯ್ಯ ಅವರ ವಿಷಯದಲ್ಲಿ ಬಹಿರಂಗವಾಗಿ ಏನೇ ಹೇಳಬಹುದು. ಆದರೆ ಪ್ರತಿಪಕ್ಷದಲ್ಲಿರುವ ಶಾಸಕರು, ನಾಯಕರೂ ಸಹ 'ಆಫ್ ದಿ ರೆಕಾರ್ಡ್' ಮಾತನಾಡುವಾಗ ಪ್ರಶಂಸೆ ವ್ಯಕ್ತಪಡಿಸುತ್ತಾರೆ. ಇಂತಹ ನಾಯಕರನ್ನು ಯಾವುದೇ ಇಲ್ಲಸಲ್ಲದ ಪ್ರಕರಣದಲ್ಲಿ ಸಿಲುಕಿಸುವುದು ಸರಿಯಲ್ಲ. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಪಾತ್ರವೇ ಇಲ್ಲದಿದ್ದರೂ, ಅವರ ಹೆಸರನ್ನು ಮುಂದಿಟ್ಟುಕೊಂಡು ಆರೋಪಿಸುವುದು ಎಷ್ಟು ಸರಿ..? ಆಧಾರರಹಿತ ಆರೋಪವನ್ನು ಮುಂದಿಟ್ಟುಕೊಂಡು ಅಸ್ಥಿರಗೊಳಿಸಲು ಹೊರಟಿರುವವರು ಪ್ರಜಾಪ್ರಭುತ್ವವನ್ನು ಗೌರವಿಸುತ್ತಾರೆಯೇ..? ಸಂವಿಧಾನವನ್ನು ಒಪ್ಪುತ್ತಾರೆಯೇ..?

> ದೇವೇಗೌಡರ ಬಗ್ಗೆ ಸಮುದಾಯಕ್ಕೆ ಅಭಿಮಾನವಿದೆ. ಮುತ್ಸದ್ದಿ, ಮಾಜಿ ಪ್ರಧಾನಿ ದೇವೇಗೌಡರ ಬಲವಿದೆ. ಕುಮಾರಸ್ವಾಮಿ ಅವರ ಬಲ ಏನು ಎನ್ನುವುದು ದೇವೇಗೌಡರ 'ಗೈರುಹಾಜರಿ'ಯಲ್ಲಿ ತಿಳಿಯುತ್ತದೆ. ಆದ್ದರಿಂದ ಈಗಲೇ ಈ ಬಗ್ಗೆ ಹೇಳಲಾಗುವುದಿಲ್ಲ.
> -ಚಲುವರಾಯಸ್ವಾಮಿ, ಸಚಿವ

- ಜೆಡಿಎಸ್, ಬಿಜೆಪಿ ಎಂದಾದರೂ ಸ್ವಂತಬಲದಲ್ಲಿ ಅಧಿಕಾರಕ್ಕೆ ಬಂದಿದೆಯೇ?
- 18 ಸ್ಥಾನದೊಂದಿಗೆ ಪ್ರಧಾನಿಯಾದರೆ, 25ರಿಂದ 38 ಸ್ಥಾನದಲ್ಲಿಯೇ ಮುಖ್ಯಮಂತ್ರಿಯಾಗುವುದು ಜೆಡಿಎಸ್ ಇತಿಹಾಸ
- ಬಿಜೆಪಿ, ಜೆಡಿಎಸ್‌ನವರು ಅಧಿಕಾರ ಸಿಕ್ಕಾಗ ಎಂದಿಗೂ ಸರಿಯಾಗಿ ಆಡಳಿತ ಮಾಡಿಲ್ಲ.
- ಇನ್ನೊಬ್ಬರ ಮೇಲೆ ಅಧಿಕಾರಕ್ಕೆ ಬಂದಿರುವದು ದೊಡ್ಡದಲ್ಲ, ಸಿಂಗಲ್ ಮೆಜಾರಿಟಿ ಮೇಲೆ ಅಧಿಕಾರಕ್ಕೆ ಬರಲಿ.
- ಬಿಎಸ್‌ವೈ ನಿವೃತ್ತಿಯ ಅಂಚಿನಲ್ಲಿದ್ದಾರೆ. ಮಗನನ್ನು ಬೆಳೆಸುವುದು ತಪ್ಪಲ್ಲ, ಆದರೆ ಫಾಸ್ಟ್ ಮಾಡುವುದು ಒಳ್ಳೆಯದಲ್ಲ.
- ಬಿಜೆಪಿ-ಜೆಡಿಎಸ್ ಒಂದಾಗಿರೋದು ಸರಕಾರವನ್ನು ಅಸ್ಥಿರಗೊಳಿಸುವುದಕ್ಕೆ ಮಾತ್ರ
- ಕುಮಾರಸ್ವಾಮಿ ಅವರೊಂದಿಗೆ ಹಣಕಾಸು, ಅಧಿಕಾರ ಅಥವಾ ಇನ್ಯಾವುದೇ ವೈಯಕ್ತಿಕ ಭಿನ್ನಾಭಿಪ್ರಾಯವಿಲ್ಲ.

● 136 ಶಾಸಕರಿದ್ದರೂ ಆತಂಕವೇಕೆ..?

ನಮಗೆ ನಮ್ಮ ಶಾಸಕರು ಹೋಗುತ್ತಾರೆ ಎನ್ನುವ ಆತಂಕವಿಲ್ಲ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ರೀತಿ ಅಸ್ಥಿರಗೊಳಿಸಲು ಪ್ರಯತ್ನಿಸುವುದೇ ಅಪರಾಧ. ಏನಾದರೂ ಲೋಪವಾಗಿದ್ದರೆ, ತಪ್ಪಾಗಿದ್ದರೆ ಅದರ ವಿರುದ್ಧ ಹೋರಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಯಾರೋ ಒಬ್ಬ ಸಚಿವ, ಶಾಸಕ ಮಾಡಿದ ತಪ್ಪಿಗೆ ಮುಖ್ಯಮಂತ್ರಿ ರಾಜೀನಾಮೆ ಕೇಳುವುದು ಎಷ್ಟು ಸರಿ..? ಒಬ್ಬರು ಮಾಡಿರುವ ತಪ್ಪಿಗೆ ಇಡೀ ಸರಕಾರವನ್ನೇ ಉರುಳಿಸುತ್ತೇವೆ ಎನ್ನುವುದು ಎಷ್ಟು ಸರಿ? ಇದು ಪೂರ್ವಾಗ್ರಹ ಪೀಡಿತ ಎನಿಸುವುದಿಲ್ಲವೇ..? ಕೇಂದ್ರ ಸರಕಾರವನ್ನು ಬಳಸಿಕೊಂಡು ಸರಕಾರವನ್ನು ತೆಗೆಯಬೇಕು ಎಂದು ಯೋಚಿಸಿದರೂ ಅದು ಜನ ಹಾಗೂ ಜನತಂತ್ರಕ್ಕೆ ವಿರುದ್ಧದ ನಿಲುವು.

● ಮುಡಾ ಪ್ರಕರಣದಲ್ಲಿ ಸಿಎಂ ರಾಜೀನಾಮೆಗೆ ಬಿಜೆಪಿ ಆಗ್ರಹಿಸುತ್ತಿದೆಯಲ್ಲ?

ರಾಜೀನಾಮೆ ಬಗ್ಗೆ ಮಾತನಾಡುವ ಮೊದಲು ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಪಾತ್ರವೇನು ಎನ್ನುವುದನ್ನು ಯಾರೂ ಹೇಳುತ್ತಿಲ್ಲ. ಹಾಗೇ ನೋಡಿದರೆ, ಸಿದ್ದರಾಮಯ್ಯ ಪತ್ನಿಗೆ ನಿವೇಶನ ಹಂಚಿಕೆಯಾಗಿರುವುದು ಬಿಜೆಪಿಯ ಅವಧಿಯಲ್ಲಿ. ಸಿದ್ದರಾಮಯ್ಯ ಅವರು ನಿವೇಶನವನ್ನು ಕೋರಿ ಅರ್ಜಿ ಸಲ್ಲಿಸಿಲ್ಲ. ಆದರೂ ರಾಜೀನಾಮೆ ಕೇಳುತ್ತಿರುವುದು ಯಾವ ರೀತಿಯಲ್ಲಿ ಸರಿ? ಒಂದು ವೇಳೆ ನಿವೇಶನ ಹಂಚಿಕೆ ವಿಷಯದಲ್ಲಿ ತಪ್ಪಾಗಿದ್ದರೆ, ಅದು ಸಿದ್ದರಾಮಯ್ಯ ತಪ್ಪು ಹೇಗೆ ಆಗುತ್ತದೆ..? ತಪ್ಪಾಗುತ್ತಿದ್ದರೂ, ಅಧಿಕಾರಿಗಳು ಏಕೆ ಪರಿಶೀಲನೆ ನಡೆಸಿಲ್ಲ..? ಅರ್ಜಿ ಕೊಟ್ಟಿರುವುದು ತಪ್ಪಾಗಿದ್ದರೆ ಆಗಲೇ ತಿರಸ್ಕರಿಸಬೇಕಿತ್ತು. ಆಗ ಅಧಿಕಾರದಲ್ಲಿದ್ದ ಬಿಜೆಪಿ ಸರಕಾರವೇ ಇತ್ತು. ಬಿಜೆಪಿಯವರೇ ಮುಡಾ ಅಧ್ಯಕ್ಷರಾಗಿದ್ದರು. ಆಗ ಕ್ರಮವಹಿಸದೇ ಈ ಸಿದ್ದರಾಮಯ್ಯ ತಪ್ಪು ಎಂದರೆ ಒಪ್ಪಲು ಹೇಗೆ ಸಾಧ್ಯ? ಆದ್ದರಿಂದ ಈ ಎಲ್ಲವನ್ನು ಗಮನಿಸದರೆ, ಬಿಜೆಪಿ ಮತ್ತು ಜೆಡಿಎಸ್‌ನವರು ಮಾಡುತ್ತಿರುವ ಈ ಆರೋಪ ರಾಜಕೀಯ ಪ್ರೇರಿತ. ಸಿದ್ದರಾಮಯ್ಯ ಅವರನ್ನು ಅಸ್ಥಿರಗೊಳಿಸುವ ಮೂಲಕ ಸರಕಾರವನ್ನು ಅಸ್ಥಿರಗೊಳಿಸುವುದು ಅವರ ಲೆಕ್ಕಾಚಾರವಾಗಿದೆ.

● ನಿಜವಾಗಿಯೂ ಅಸ್ಥಿರಗೊಳಿಸಲು ಸಾಧ್ಯವೇ

ಸಿದ್ದರಾಮಯ್ಯ ಅವರನ್ನು ಅಸ್ಥಿರಗೊಳಿಸಲು ಸಾಧ್ಯವಿಲ್ಲ. ಹೀಗಿರುವಾಗ ಸರಕಾರವನ್ನು ಅಸ್ಥಿರಗೊಳಿಸಲು ಹೇಗೆ ಸಾಧ್ಯ? ಬಿಜೆಪಿ, ಜೆಡಿಎಸ್‌ನವರು ಕಾನೂನಾತ್ಮಕ ವಾಗಿ ಮಾತನಾಡುವುದಿಲ್ಲ. ಮುಡಾಕ್ಕೂ ಮೊದಲು ವಾಲ್ಮೀಕಿ ಹಗರಣದ ಬಗ್ಗೆ ಮಾತನಾಡುತ್ತಾರೆ. ಪ್ರಕರಣ ದಲ್ಲಿ ಬ್ಯಾಂಕ್ ಸಿಬ್ಬಂದಿಯಿದ್ದಾರೆ. ಪ್ರಕರಣವನ್ನು ಎಸ್‌ಐಟಿ, ಇಡಿ ತನಿಖೆ ನಡೆಸುತ್ತಿದೆ. ಆದರೂ ಸಿದ್ದ ರಾಮಯ್ಯ ರಾಜೀನಾಮೆ ನೀಡಬೇಕು ಎನ್ನುತ್ತಿದ್ದಾರೆ. ಹಾಗಾದರೆ ಬಿಜೆಪಿ ಸರಕಾರದ ಅವಧಿಯಲ್ಲಿ ಯಾವುದೇ ತಪ್ಪಾಗಿಲ್ಲವೇ? ದೇವರಾಜ ಅರಸು ಟರ್ಮಿನಲ್ ಪ್ರಕರಣದಲ್ಲಿ ಬೊಮ್ಮಾಯಿ, ವಾಲ್ಮೀಕಿ ನಿಗಮದಲ್ಲಿ ಕೋಟಾ ಜೈಲಿಗೆ ಹೋಗಬೇಕಲ್ಲವೇ? ಎಲ್ಲದಕ್ಕೂ ಸಿಎಂ ಹೊಣೆ ಮಾಡಲು ಸಾಧ್ಯವಿಲ್ಲ. ರಾಜಕೀಯ ಪ್ರೇರಿತವಾಗಿ ಮಾಡುತ್ತಿರುವ ಈ ನಡೆ ದೇಶದ ದೃಷ್ಟಿಯಿಂದ ಒಳ್ಳೆಯದಲ್ಲ.

● ಹಾಗಾದರೆ ಮುಂದಿನ ನಿಮ್ಮ ಹೋರಾಟ ಹೇಗಿರಲಿದೆ..?

ಬಿಜೆಪಿ-ಜೆಡಿಎಸ್‌ನವರು ಮಾಡುತ್ತಿರುವ ಪ್ರಯತ್ನಗಳೆಲ್ಲ ಉಪಯೋಗಕ್ಕೆ ಬರುವುದಿಲ್ಲ. ಅಶೋಕ್, ವಿಜಯೇಂದ್ರ, ಯತ್ನಾಳ್ ರೀತಿಯಲ್ಲಿ ನಾಲ್ಕು ಬಣಗಳಿವೆ. ಅವರ ತಟ್ಟೆಯಲ್ಲಿರುವ ಹೆಗ್ಗಣ ತೆಗೆಯುವುದು ಬಿಟ್ಟು, ಪಕ್ಕದ ತಟ್ಟೆಯಲ್ಲಿರುವ ಇಲಿಯ ಬಗ್ಗೆ ಚಿಂತಿಸುತ್ತಿದ್ದಾರೆ. ಜೆಡಿಎಸ್‌ಗೆ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಆದರೆ ನಮ್ಮಲ್ಲಿ ಆ ಪರಿಸ್ಥಿತಿಯಿಲ್ಲ. ದಲಿತರಲ್ಲಿ ಮಲ್ಲಿಕಾರ್ಜುನ ಖರ್ಗೆ, ಡಾ.ಜಿ. ಪರಮೇಶ್ವರ್, ಎಸ್.ಸಿ. ಮಹದೇವಪ್ಪ, ಒಬಿಸಿಯಲ್ಲಿ ಸಿದ್ದರಾಮಯ್ಯ, ಒಕ್ಕಲಿಗರಲ್ಲಿ ಡಿ.ಕೆ.ಶಿವಕುಮಾರ್, ನಾನು ಸೇರಿದಂತೆ ಅನೇಕರಿದ್ದಾರೆ. ಲಿಂಗಾಯತರಲ್ಲಿ ಎಂ.ಬಿ. ಪಾಟೀಲ್, ಈಶ್ವರ್ ಖಂಡ್ರೆ ಸೇರಿದಂತೆ ಅನೇಕರಿದ್ದಾರೆ. ಆದ್ದರಿಂದ ಬಿಜೆಪಿ-ಜೆಡಿಎಸ್ ಹೋರಾಟಕ್ಕೆ ಹೆದರುವ ಅಗತ್ಯವಿಲ್ಲ.



● ಜೆಡಿಎಸ್‌ನೊಂದಿಗೆ ಕಾಂಗ್ರೆಸ್ ವಿಶ್ವಾಸ ಉಳಿಸಿಕೊಳ್ಳಲಿಲ್ಲವೇಕೆ..?

ಅದಕ್ಕೂ ಮೊದಲು ಜೆಡಿಎಸ್‌ನವರು ಯಾರೊಂದಿಗೂ ವಿಶ್ವಾಸ ಉಳಿಸಿಕೊಂಡಿದ್ದಾರೆ ಎನ್ನುವುದು ಹೇಳಿ. ಜನತಾದಳ ಇಬ್ಭಾಗವಾದ ಬಳಿಕ ದೇವೇಗೌಡರ ಕುಟುಂಬ ನಡೆಸುತ್ತಿರುವ ಜೆಡಿಎಸ್ ಯಾರೊಂದಿಗೆ ವಿಶ್ವಾಸದಲ್ಲಿದೆ? ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ ಅವರಿಂದ ಹಿಡಿದು ಇತ್ತೀಚಿನ ವರ್ಷದವರೆಗೆ ಯಾರೊಂದಿಗೂ ವರ್ಷಕ್ಕಿಂತ ಹೆಚ್ಚು ಕಾಲ ವಿಶ್ವಾಸವನ್ನು ಉಳಿಸಿಕೊಂಡಿಲ್ಲ.

ಅಟಲ್ ಬಿಹಾರಿ ವಾಜಪೇಯಿ ಅವರು 18 ಪಕ್ಷಗಳ ಮೈತ್ರಿ ಸರಕಾರವನ್ನು ಐದು ವರ್ಷ ಪೂರೈಸಿದರು. ಆದರೆ ದೇವೇಗೌಡರು ಏಕೆ 11 ತಿಂಗಳಿಗೆ ಪ್ರಧಾನ ಹುದ್ದೆ ಬಿಟ್ಟು ಬಂದರು. ವಿಶ್ವಾಸವನ್ನು ಉಳಿಸಿಕೊಳ್ಳುವುದೂ ಅವರ ಧರ್ಮವಲ್ಲವೇ? ದೇವೇಗೌಡರ ಕುಟುಂಬ ಆ ವಿಶ್ವಾಸಕ್ಕೆ ಪಡೆಯುವ ಕೆಲಸವನ್ನೇ ಮಾಡುವುದಿಲ್ಲ, ಕೇವಲ ಕಾಂಗ್ರೆಸ್‌ನೊಂದಿಗೆ ಕಿತ್ತಾಡಿಕೊಂಡು ಬಂದಿದ್ದರೆ, ಅದನ್ನು ಒಪ್ಪಬಹುದಾಗಿತ್ತು. ಆದರೆ ಅವರು ಯಾರೊಂದಿಗೆ ಹೋದರೂ ವರ್ಷದಲ್ಲಿ ಈ ರೀತಿ ಹೊರಬರುತ್ತಾರಲ್ಲವೇ?

> **● ಕುಮಾರಸ್ವಾಮಿ ಕೇಸ್ ರಾಜಕೀಯ ಪ್ರೇರಿತ ಎನ್ನುತ್ತಿದ್ದಾರಲ್ಲ?**
>
> ಕುಮಾರಸ್ವಾಮಿ ಅವರ ಗಣಿ ಪ್ರಕರಣವನ್ನು ಲೋಕಾಯುಕ್ತ ತನಿಖೆ ನಡೆಸಿ ನೀಡಿರುವ ಪ್ರಕರಣವಲ್ಲವೇ..? ಸಿದ್ದರಾಮಯ್ಯ ಅವರ ಪ್ರಕರಣದಲ್ಲಿ ಯಾರೋ ಖಾಸಗಿ ವ್ಯಕ್ತಿಗಳ ದೂರಿನ ಮೇರೆಗೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲಾಗಿದೆ. ಆದರೆ ಕುಮಾರಸ್ವಾಮಿ ಅವರ ಪ್ರಕರಣದಲ್ಲಿ ತನಿಖಾ ಸಂಸ್ಥೆಯೇ ತನಿಖೆ ನಡೆಸಿ, ಅಭಿಯೋಜನೆಗೆ ಅನುಮತಿ ಕೇಳಿದ್ದಾರೆ. ಅದನ್ನು ರಾಜಕೀಯ ಪ್ರೇರಿತ ಎನ್ನಲು ಹೇಗೆ ಸಾಧ್ಯ..? ಜನಾರ್ದನ ರೆಡ್ಡಿ, ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ ಕುಮಾರಸ್ವಾಮಿ ವಿರುದ್ಧ ವರ್ಷದಿಂದ ಪ್ರಾಸಿಕ್ಯೂಷನ್‌ಗೆ ಕೇಳಿದ್ದರೂ ಅನುಮತಿ ನೀಡಿಲ್ಲ. ಆದರೆ ಸಿದ್ದರಾಮಯ್ಯ ಅವರ ಪ್ರಕರಣದಲ್ಲಿ ವಾರದಲ್ಲಿ ಅವಸರಕ್ಕೆ ಬಿದ್ದು ಅವಕಾಶ ನೀಡಿದ್ದು ಏಕೆ..? ಕಾನೂನು ಎಲ್ಲರಿಗೂ ಒಂದೇ ಅಲ್ಲವೇ?

● ನೀವು ಗೌಡರ ಕುಟುಂಬದಿಂದ ದೂರಾಗಲು ಇದೇ ಕಾರಣವೇ?

ನನಗೆ ಈಗಲೂ ವೈಯಕ್ತಿಕವಾಗಿ ದೇವೇಗೌಡರ ಬಗ್ಗೆ ಈಗಲೂ ಪೂಜ್ಯಭಾವವಿದೆ. ಆದರೆ ಕುಮಾರಸ್ವಾಮಿ ಅವರೊಂದಿಗಿನ ಸ್ನೇಹ ಹೊಂದಾಣಿಕೆಯಾಗಲಿಲ್ಲ. ಬಿಜೆಪಿ-ಜೆಡಿಎಸ್ ಮೈತ್ರಿ ಸರಕಾರದ ಸಮಯದಲ್ಲಿ ದೇವೇಗೌಡರು, ನನ್ನ ಮುಂದೆಯೇ ಕುಮಾರಸ್ವಾಮಿ ಅವರಿಗೆ 'ಮುಖ್ಯಮಂತ್ರಿಯಾಗುವುದು ಬೇಡ' ಎಂದರೂ ಅದನ್ನು ಕೇಳದೇ ಎಚ್‌ಡಿಕೆಗೆ ಬೆಂಬಲ ನೀಡಿದೆ. ಆದರೆ 20 ತಿಂಗಳ ಬಳಿಕ ಅಧಿಕಾರವನ್ನು ಏಕೆ ಬಿಟ್ಟುಕೊಡಲಿಲ್ಲ? ಯಡಿಯೂರಪ್ಪ ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡದಿದ್ದಾಗಲೇ ನಾನು ಹೊರಬೇಕು ಎಂದುಕೊಂಡಿದ್ದೆ. ಆದರೆ ಆಗಿರಲಿಲ್ಲ. ವಿಶ್ವಾಸ ದ್ರೋಹ ಪದೇಪದೇ ನಡೆದಿದ್ದರಿಂದ ಹೊರಬರುವುದು ಅನಿವಾರ್ಯವಾಗಿತ್ತು.

● ಜೆಡಿಎಸ್ ನಾಯಕತ್ವ ಕುಸಿಯುತ್ತಿದೆಯೇ?

ಹೌದು, ದೇವೇಗೌಡರು, ಸಿದ್ದರಾಮಯ್ಯ ಅವರಿದ್ದಾಗ ಜೆಡಿಎಸ್‌ಗೆ 58 ಸೀಟುಗಳು ಬಂದಿದ್ದವು. ಅದಾದ ಬಳಿಕ ಕಳೆದ 20 ವರ್ಷದ ಅವಧಿಯಲ್ಲಿ ಒಮ್ಮೆಯೂ 40 ಸೀಟುಗಳನ್ನು ಜೆಡಿಎಸ್ ದಾಟಿಲ್ಲ. ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ 2018ರಲ್ಲಿ 38 ಸೀಟು ಬಂದಿರುವುದು ಬಿಟ್ಟರೆ, ಇನ್ನುಳಿದ ಎಲ್ಲ ಚುನಾವಣೆಯಲ್ಲಿಯೂ 20, 30 ಸೀಟಿನ ಆಸುಪಾಸಿನಲ್ಲಿದೆ. ಆಂಧ್ರ ಪ್ರದೇಶದಲ್ಲಿ ರಾಜಶೇಖರ್ ರೆಡ್ಡಿ ಬಳಿಕ ಪುತ್ರ ಜಗನ್ ಸ್ವಂತಬಲದ ಮೇಲೆ ಅಧಿಕಾರವನ್ನು ರಚಿಸಿದರು. ತಮಿಳುನಾಡಿನಲ್ಲಿ ಕರುಣಾನಿಧಿ ಪುತ್ರ ಸ್ಟಾಲಿನ್ ಅಧಿಕಾರಕ್ಕೆ ಬಂದಿರುವ ಉದಾಹರಣೆಯಿದೆ. ಆದರೆ ದೇಶವನ್ನು ಆಳಿದ ದೇವೇಗೌಡರ ಪುತ್ರ ಕುಮಾರಸ್ವಾಮಿ ಮಾತ್ರ, ಸ್ವಂತಬಲದಲ್ಲಿ ಅಧಿಕಾರಕ್ಕೆ ಏಕೆ ಬಂದಿಲ್ಲ..? ಬರೀ ಚಲುವರಾಯಸ್ವಾಮಿ, ಸಿದ್ದರಾಮಯ್ಯ, ಡಿಕೆಶಿ ಮೇಲೆ ಆರೋಪಿಸುವ ಬದಲು ತಾವು ಮಾಡಿರುವ ತಪ್ಪುಗಳನ್ನು ತಿದ್ದಿಕೊಳ್ಳಲಿ.

● ಎಚ್‌ಡಿಕೆಗೆ ಒಕ್ಕಲಿಗ ನಾಯಕತ್ವದ್ದೇ ಆತಂಕವೇ?

ಸದ್ಯ ಕುಮಾರಸ್ವಾಮಿಗೆ ಉಳಿದಿರುವುದೇ ಹಳೇ ಮೈಸೂರು ಭಾಗ. ಮಂಗಳೂರು, ಬೆಳಗಾವಿ, ಮಧ್ಯ ಕರ್ನಾಟಕ ಎಲ್ಲಿಯೇ ಹೋದರು ಸ್ಥಾನ ಗೆಲ್ಲಲು ಸಾಧ್ಯವಿಲ್ಲ. ಅದಕ್ಕೆ ಏನಾದರೂ ಮಾಡಿ ಒಕ್ಕಲಿಗರನ್ನು ಒಟ್ಟಿಗೆ ಇಟ್ಟುಕೊಳ್ಳಬೇಕು ಎಂದು ಹೋರಾಡುತ್ತಿದ್ದಾರೆ. ಆದರೆ ಒಕ್ಕಲಿಗ ಸಮುದಾಯಕ್ಕೆ ಕೇವಲ ದೇವೇಗೌಡರ ಕುಟುಂಬ ಮಾತ್ರ ಕೆಲಸ ಮಾಡುತ್ತಿಲ್ಲ. ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಾವೆಲ್ಲರೂ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇವೆ. ಆದರೂ ಏಕೆ ಸಮುದಾಯದ ಜನ ಈ ಮನಸ್ಥಿತಿಯಿಂದ ಹೊರ ಬಂದಿಲ್ಲ ಎನ್ನುವುದು ತಿಳಿಯುತ್ತಿಲ್ಲ.

● ಮುಡಾ ದಾಖಲೆ ಬಿಡುಗಡೆ ಮಾಡುತ್ತೇವೆ ಎಂದಿದ್ದಾರಲ್ಲ..?

ಕುಮಾರಸ್ವಾಮಿ ಅವರು ಕಳೆದ ಎರಡು ದಶಕದ ಸಕ್ರಿಯ ರಾಜಕಾರಣದಲ್ಲಿ ಎಂದಾದರೂ ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆಯೇ..? ಹಿಟ್ ಆ್ಯಂಡ್ ರನ್ ಮಾಡಿಕೊಂಡೇ ಅವರು ಈವರೆಗೆ ರಾಜಕೀಯ ಮಾಡಿದ್ದಾರೆ. ಮುಡಾ ಹಗರಣದಲ್ಲಿ ಏನಿದೆ ಎಂದು ಹೇಳಲಿ ಅವರ ಬಳಿ ದಾಖಲೆಗಳಿದ್ದರೆ ಬಹಿರಂಗ ಪಡಿಸಬೇಡಿ ಎಂದರೆ ಅವರು ಸುಮ್ಮನೆ ಇರುವರೇ?

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಕೆಪಿಎಸ್‌ಸಿ ಪರೀಕ್ಷೆ ಮುಂದೂಡಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದ ಪರೀಕ್ಷಾರ್ಥಿಗಳನ್ನು ಪೊಲೀಸರು ಬಂಧಿಸಿದ ಕ್ರಮ ವಿರೋಧಿಸಿ ಬಿಜೆಪಿ ಯುವಮೋರ್ಚಾ ವತಿಯಿಂದ ಠಾಣೆ ಎದುರು ಪ್ರತಿಭಟನೆ ನಡೆಸುತ್ತಿದ್ದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿರುವ ಪೊಲೀಸರ ಕ್ರೌರ್ಯದ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ರಂಗ ಪ್ರತಾಪಸಿಂಹ, ಬೆಂಗಳೂರು

ಕೆಎಎಸ್ ಪರೀಕ್ಷೆ ಆದ ಮೇಲೆ ಬರಬೇಕಿತ್ತು ನೀವು (ಬಿಜೆಪಿ). ಶನಿವಾರ ಪ್ರತಿಭಟನೆ ಮಾಡುವಾಗ ಎಲ್ಲಿ ಹೋಗಿದ್ದಿರಿ ಸ್ವಾಮಿ ನೀವು..?

ತಾಲೀಮಿನಲ್ಲಿ ಪಾಲ್ಗೊಂಡ ದಸರಾ ಗಜಪಡೆ.

ಗಜಪಡೆ ತಾಲೀಮು ಆರಂಭ

ಮೈಸೂರು: ಮೈಸೂರಿನ ಅರಮನೆ ಆವರಣದಲ್ಲಿರುವ ದಸರಾ ಗಜಪಡೆಗೆ ಭಾನುವಾರದಿಂದ ತಾಲೀಮು ಆರಂಭವಾಗಿದೆ. ಅರಮನೆಯಿಂದ ಹೊರಟ 8 ಆನೆಗಳ ತಂಡ ಆಯುರ್ವೇದ ಸರ್ಕಲ್‌ವರೆಗೂ ಸಾಗಿದವು. ಕಂಜನ್ ಆನೆಗೆ ಕಾಲು ಊತವಿದ್ದ ಕಾರಣ ಎಂಟು ಆನೆಗಳು ಮಾತ್ರ ಭಾಗವಹಿಸಿದ್ದವು.

ಅರಮನೆಯ ಬಲರಾಮ ದ್ವಾರದಿಂದ ಹೊರಟ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಆನೆಗಳ ತಂಡ ಕೋಟೆ ಆಂಜನೇಯಸ್ವಾಮಿ ದೇವಾಲಯ, ಚಾಮರಾಜ ವೃತ್ತ, ಕೆ.ಆರ್.ವೃತ್ತ ಹಾಗೂ ಆಯುರ್ವೇದ ಸರ್ಕಲ್‌ವರೆಗೂ ಹೋಗಿ ವಾಪಸ್ ಬಂದವು.

ಆನೆಗಳಿಗೆ ಪೌಷ್ಟಿಕ ಆಹಾರ: ಸಂಪ್ರದಾಯದಂತೆ ಆನೆಗಳಿಗೆ ಅರಣ್ಯ ಇಲಾಖೆ ಪೌಷ್ಟಿಕ ಆಹಾರ ನೀಡಲು ಶುರು ಮಾಡಿದೆ. ಒಂಬತ್ತು ಆನೆಗಳಿಗೆ ಹೊಟ್ಟೆ ತುಂಬುವಷ್ಟು ಹುಲ್ಲು, ಸೊಪ್ಪು ನೀಡಲಾಗುತ್ತಿದೆ. ಬೆಳಗ್ಗೆ 6.30 ಮತ್ತು ರಾತ್ರಿ 7ಕ್ಕೆ ಹಸಿರುಕಾಳು, ಕುಸುಬಲಕ್ಕಿ, ಉದ್ದಿನಕಾಳು, ಈರುಳ್ಳಿ, ಗೋಧಿ, ಅವಲಕ್ಕಿ, ತರಕಾರಿ ಮಿಶ್ರಣದ ಆಹಾರ ನೀಡಲಾಗುತ್ತಿದೆ. ಸಂಜೆ ಸ್ವಲ್ಪ ಪ್ರಮಾಣದಲ್ಲಿ ಭತ್ತ, ತೆಂಗಿನಕಾಯಿ, ಬೆಲ್ಲ, ಭತ್ತದ ಒಣಹುಲ್ಲಿನ ಜತೆ ಹಿಂಡಿ, ಅಲ್ಪ ಪ್ರಮಾಣದಲ್ಲಿ ಬೆಣ್ಣೆ ಬೆರೆಸಲಾಗುತ್ತಿದೆ.

ಸಾಲದ ಕೂಪ: ದಂಪತಿ ಆತ್ಮಹತ್ಯೆ

ಕೋಲಾರ: ಸಾಲ ಹಾಗೂ ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತಿ-ಪತ್ನಿ ನಗರದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕನಕನ ಪಾಳ್ಯದ ಸಂತೋಷ್ (35) ಹಾಗೂ ಭಾವನಾ (25) ಆತ್ಮಹತ್ಯೆಗೆ ಶರಣಾದ ದಂಪತಿ. ಶನಿವಾರ ರಾತ್ರಿ ಮನೆಯ ಕೋಣೆಯಲ್ಲಿ ವಯರ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಶರಣಾಗಿದ್ದಾರೆ. ಕುಟುಂಬದಲ್ಲಿ ಸಾಲ ಹಾಗೂ ಇನ್ನಿತರ ಕಾರಣದಿಂದ ಕಲಹ ನಡೆಯುತ್ತಿತ್ತು. ಚಿಕ್ಕ ಮಗನ ಹೃದಯದಲ್ಲಿ ಸಣ್ಣ ರಂಧ್ರ ಬಿದ್ದು ಆರೋಗ್ಯ ಹದಗೆಟ್ಟಿತ್ತು. ಚಿಕಿತ್ಸೆಗಾಗಿ ದಂಪತಿ ಲಕ್ಷಾಂತರ ರು. ಸಾಲ ಮಾಡಿದ್ದು ಬಡ್ಡಿ ಕಟ್ಟಲು ಪರದಾಡುತ್ತಿದ್ದರು. ಹೀಗಾಗಿ ನೊಂದು ದಂಪತಿ ಆತ್ಮಹತ್ಯೆಗೆ ನಿರ್ಧಾರ ಮಾಡಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಎಸ್‌ಪಿ ನಿಖಿಲ್ ಅವರು ಭೇಟಿ ನೀಡಿದ್ದರು. ಕೋಲಾರ ನಗರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಎಸ್ ಎನ್ ಆರ್ ಜಿಲ್ಲಾ ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿದ ನಂತರ ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು.

ಕಾಲರಾಗೆ ಮಹಿಳೆ ಸಾವು, 7 ಜನರು ಅಸ್ವಸ್ಥ

ದಾವಣಗೆರೆ: ಹೊನ್ನಾಳಿ ತಾಲೂಕಿನ ಸಾಸ್ವೆಹಳ್ಳಿ ಹೋಬಳಿಯ ಹುಣಸಘಟ್ಟ ಗ್ರಾಮದಲ್ಲಿ ವಾಂತಿ-ಬೇಧಿಯಿಂದಾಗಿ ಮಹಿಳೆಯೊಬ್ಬರು ಮೃತಪಟ್ಟು ,ಆರು ಜನರು ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಹುಣಸಘಟ್ಟದಲ್ಲಿ ಆ.21 ರಂದು ಕಲುಷಿತ ನೀರು ಸೇವನೆಯಿಂದ ಈ ಘಟನೆ ನಡೆದಿದೆ ಅಸ್ವಸ್ಥಗೊಂಡ ಏಳು ಜನರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಚಂದ್ರಮ್ಮ (60) ಎಂಬುವರು ಮೃತಪಟ್ಟಿದ್ದಾರೆ. ವಾಂತಿಬೇಧಿ ಹಾಗೂ ಜ್ವರದಿಂದ ಬಳಲುತ್ತಿದ್ದ ಚಂದ್ರಮ್ಮ ಅಂಗಾಂಗ ವೈಫಲ್ಯದಿಂದ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಶಾಸಕ ಪ್ರದೀಪ್ ಈಶ್ವರ್ ಅಮ್ಮ ಆಂಬ್ಯುಲೆನ್ಸ್ ನೆರವು

ಜಾರಿಬಿದ್ದ ಟೆಕ್ಕಿಯ ರಕ್ಷಣೆ

ಚಿಕ್ಕಬಳ್ಳಾಪುರ: ತಾಲೂಕಿನ ಕೇತೇನಹಳ್ಳಿ ಜಲಪಾತ ವೀಕ್ಷಣೆಗೆ ಬಂದಿದ್ದಾಗ ಕಾಲು ಜಾರಿ ಬಿದ್ದ ಮಹಿಳಾ ಟೆಕ್ಕಿಯನ್ನು ಶಾಸಕ ಪ್ರದೀಪ್ ಈಶ್ವರ ಅವರ ಅಮ್ಮ ಆಂಬ್ಯುಲೆನ್ಸ್ ಸಿಬ್ಬಂದಿ ತಕ್ಷಣ ಧಾವಿಸಿ 2 ಕಿಲೋ ಮೀಟರ್ ದೂರ ಸಾಗಿಸಿ ಮಾನವೀಯತೆ ಮೆರೆದಿದ್ದಾರೆ.

ಕೇತೇನಹಳ್ಳಿ ಬಳಿ ತಾತ್ಕಾಲಿಕ ಜಲಪಾತ ಸೃಷ್ಟಿಯಾಗಿದೆ. ಪ್ರವಾಸಿ ತಾಣಗಳಿಗೆ ಭೇಟಿನೀಡಿದ್ದ ಮುಂಬೈ ಮೂಲದ ಬೆಂಗಳೂರಿನಲ್ಲಿ ಟೆಕ್ಕಿ ಯುವತಿ ಹಾಗೂ ಆಕೆಯ ಸ್ನೇಹಿತರು ಈಶ ಫೌಂಡೇಷನ್ ನೋಡಿದ ಬಳಿಕ ಜಲಾಶಯಕ್ಕೂ ಭೇಟಿ ನೀಡಿದ್ದರು.

ಈ ವೇಳೆ ಟೆಕ್ಕಿ ಅರ್ಪಿತಾ ಆಕಸ್ಮಿಕವಾಗಿ ಜಾರಿ ಹಳ್ಳಕ್ಕೆ ಬಿದ್ದು ಕಾಲು ಮುರಿದುಕೊಂಡಿದ್ದಾಳೆ. ಕೂಡಲೇ ಅಲ್ಲಿನ ಮಂದಿ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಅವರ ಉಚಿತ ಅಮ್ಮ ಆಂಬ್ಯುಲೆನ್ಸ್‌ಗೆ ಕರೆ ಮಾಡಿದ್ದಾರೆ. ತಕ್ಷಣವೇ ಆಗಮಿಸಿದ ಆಂಬ್ಯುಲೆನ್ಸ್ ಸಿಬ್ಬಂದಿ ಕಡಿದಾದ ಕಾಲುದಾರಿಯಲ್ಲಿ 2 ಕಿಮೀ ಸ್ಟ್ರೆಚರ್ ಮೇಲೆ ಹೊತ್ತು ಸಾಗಿಸಿ ಆಂಬ್ಯುಲೆನ್ಸ್‌ನಲ್ಲಿ ಜೀವನ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಟೌನ್ ಎಸ್‌ಐ ನಂಜುಂಡಪ್ಪ ಮತ್ತು ಸಿಬ್ಬಂದಿ ಕೂಡ ಯುವತಿಯನ್ನು ಕರೆತರುವಲ್ಲಿ ನೆರವಾಗಿದ್ದಾರೆ. ಶಾಸಕರ ಉಚಿತ ಅಮ್ಮ ಆಂಬ್ಯುಲೆನ್ಸ್ ಸಿಬ್ಬಂದಿ ಕಾರ್ಯಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ.

ಸಮಾಚಾರ ಸಣ್ಣದಲ್ಲ

ವ್ಯಕ್ತಿ ಕಾಣೆ

ಬೆಂಗಳೂರು: ಕೆಂಗೇರಿಯ ಗ್ಲೋಬಲ್ ವಿಲೇಜ್ ನಲ್ಲಿರುವ ಸತ್ವ ಕಂಪನಿಯಲ್ಲಿ ಸೆಕ್ಯೂರಿಟಿ ಕೆಲಸ ಮಾಡಿಕೊಂಡಿದ್ದ ಸಚಿನ್ ಕುಮಾರ್ (ವಯಸ್ಸು 22) ಆಗಸ್ಟ್ 21 ರಂದು ಕಾಣೆಯಾಗಿದ್ದಾರೆ. ಮಾನಸಿಕ ಅಸ್ವಸ್ಥನಾಗಿರುವ ಸಚಿನ್ ಕುಮಾರ್ 5.8 ಅಡಿ ಎತ್ತರವಿದ್ದು, ಸಾಧಾರಣ ಮೈಕಟ್ಟು ಗೋಧಿ ಬಣ್ಣ, ಕೋಲು ಮುಖ ಹೊಂದಿದ್ದಾರೆ. ಎರಡು ಕಾಲಿನ ಮಂಡಿಯ ಮೇಲೆ ಹಳೇ ಗಾಯದ ಗುರುತುಗಳಿವೆ. ಈ ಮೇಲ್ಕಂಡ ಚಹರೆ ಗುರುತುಗಳುಳ್ಳ ವ್ಯಕ್ತಿಯನ್ನು ಹುಡುಕಿಕೊಟ್ಟರೆ 10 ಸಾವಿರ ರುಪಾಯಿ ಬಹುಮಾನ ನೀಡಲಾಗುವುದು. ಚಹರೆಯಲ್ಲಿರುವ ವ್ಯಕ್ತಿ ಕಂಡಲ್ಲಿ ರಘುನಾಥ್ ಪಟೇಲ್-9901292188, ರಾಜು ಪಟೇಲ್ ಪಟೇಲ್-7033041177 ಈ ನಂಬರ್ ಸಂಪರ್ಕಿಸಬೇಕು.

ಕರಡಿ ಸೆರೆ: ಆತಂಕ ದೂರ

ಶಿವಮೊಗ್ಗ: ಭದ್ರಾವತಿ ತಾಲ್ಲೂಕಿನ ತಟ್ಟೀಹಳ್ಳಿಯಲ್ಲಿ ಕಳೆದ ಕೆಲ ದಿನಗಳಿಂದ ಗ್ರಾಮಸ್ಥರಿಗೆ ಭಯ ಹುಟ್ಟಿಸಿದ್ದ ಕರಡಿಯನ್ನು ಸೆರೆಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಚೌಡೇಶ್ವರಿ ದೇವಸ್ಥಾನದ ಬಳಿ ಇರಿಸಿದ್ದ ಬೋನಿಗೆ ಶನಿವಾರ ರಾತ್ರಿ, ಕರಡಿ ಸಿಕ್ಕಿಬಿದ್ದಿದೆ. ಇದರಿಂದ ಆತಂಕದಲ್ಲಿದ್ದ ಸುತ್ತಮುತ್ತಲ ಗ್ರಾಮಸ್ಥರು ನೆಮ್ಮದಿನ ನಿಟ್ಟುಸಿರು ಬಿಡುವಂತಾಗಿದೆ. ತಎಂಟು ಗ್ರಾಮಗಳ ವ್ಯಾಪ್ತಿಯಲ್ಲಿ ಕರಡಿ ಕಾಣಿಸಿಕೊಂಡು ಜನರಲ್ಲಿ ಭಯ ಹುಟ್ಟಿಸಿತ್ತು.

ಗೋವಾ ರಾಜ್ಯಪಾಲ ಶ್ರೀಧರನ್ ಪಿಳ್ಳೈ ಪ್ರತಿಪಾದನೆ | ಸುತ್ತೂರು ಶಿವರಾತ್ರಿ ರಾಜೇಂದ್ರ ಶ್ರೀಗಳ 109ನೇ ಜಯಂತಿ

ಭಾರತದ ನೆಲದಲ್ಲಿ ಧರ್ಮವೇ ಸರ್ವಶ್ರೇಷ್ಠ

ಮೈಸೂರು: ನಮ್ಮ ದೇಶದ ನೆಲದಲ್ಲಿ ಧರ್ಮವೇ ಶ್ರೇಷ್ಠ ಎಂದು ಗೋವಾ ರಾಜ್ಯಪಾಲ ಶ್ರೀಧರನ್ ಪಿಳ್ಳೈ ಪ್ರತಿಪಾದಿಸಿದರು.

ಸುತ್ತೂರು ಶ್ರೀಮಠದಲ್ಲಿ ಆಯೋಜಿಸಿದ್ದ ಶಿವರಾತ್ರಿ ರಾಜೇಂದ್ರ ಶ್ರೀಗಳ 109ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ವಿಶ್ವದ ಇತರ ಪ್ರಜಾಪ್ರಭುತ್ವ ದೇಶಗಳಲ್ಲಿ ಧರ್ಮದ ಮೇಲಿನ ನಂಬಿಕೆ ಕಡಿಮೆಯಾಗುತ್ತಿದ್ದರೆ ನಮ್ಮಲ್ಲಿ ಹೆಚ್ಚಾಗುತ್ತಿದೆ. ಅಮೆರಿಕಾದಲ್ಲಿ ಶೇ.23 ಯುಕೆಯಲ್ಲಿ ಶೇ.48ರಷ್ಟು ಜನ ನಮಗೆ ಧರ್ಮ, ಆಧ್ಯಾತ್ಮದಲ್ಲಿ ನಂಬಿಕೆಯಿಲ್ಲ ಎಂದಿದ್ದಾರೆ. ಆದರೆ, ಭಾರತದಲ್ಲಿ 2011ರ ಗಣಪತಿಯ ಪ್ರಕಾರ ಶೇ.1ರಷ್ಟು ಜನರೂ ನಮಗೆ ನಂಬಿಕೆ ಇಲ್ಲ ಎಂದು ಹೇಳಿಲ್ಲ. ನಮ್ಮ ಜನ್ಮಭೂಮಿಯಲ್ಲಿ ಇಂದಿಗೂ ದೇವರ ಮೇಲೆ ನಂಬಿಕೆಯಿದ್ದು, ಸರ್ವಧರ್ಮ ಸಮಭಾವ ಹೊಂದಿದ್ದಾರೆ. ನಮ್ಮಲ್ಲಿ ಧರ್ಮವೇ ಶ್ರೇಷ್ಠ ಎಂದರು. ಸುತ್ತೂರು ಮಠದ ಪರಂಪರೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸಮಾಜ ಸೇವೆಗೆ ತನ್ನದೆ ಆದ ಕೊಡುಗೆ ನೀಡುತ್ತಿದೆ. ಪುರಾತನ, ಆಧುನಿಕ ಶಿಕ್ಷಣ ಪದ್ಧತಿ ಅಳವಡಿಸಿಕೊಂಡು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಸುತ್ತೂರು ಮಠದ ಬೆಂಬಲ: ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ ಮಾತನಾಡಿ, ನನಗೆ ಗುರುವಿನ ಸ್ಥಾನ, ತಾಯಿ ಪ್ರೀತಿ ತೋರಿದವರು ಶ್ರೀಮಠ, ಸ್ವಾಮೀಜಿ. ನನಗೆ ನೈತಿಕ ಬಲ ತುಂಬಿದ್ದಾರೆ. ಏಳು -ಬೀಳು ಕಂಡಾಗ, ಸೋತಾಗ ಧೈರ್ಯ ತುಂಬಿದ್ದಾರೆ ಎಂದರು.

> ### ಮದ್ಯ-ಮಾಂಸ ನಿಷೇಧ
>
> ಈ ಮಣ್ಣಿನಲ್ಲಿ ಬೆಳೆದ ವ್ಯಕ್ತಿ ನಿಮ್ಮ ಹಾರೈಕೆಯಿಂದ ಮೇಘಾಲಯದ ರಾಜ್ಯಪಾಲನಾಗಿದ್ದೇನೆ. ಇದು ಈ ಜನ್ಮದ ಪುಣ್ಯ. ಎಲ್ಲಿಯ ಮೈಸೂರು ಎಲ್ಲಿಯ ಮೇಘಾಲಯ. ನಾನು ರಾಜಭವನ ಪ್ರವೇಶ ಕೂಡಲೇ ಉನ್ನತಾಧಿಕಾರಿಗಳ ಸಭೆಯಲ್ಲಿ ತೆಗೆದುಕೊಂಡ ಮೊದಲ ನಿರ್ಣಯ ಏನೆಂದರೆ ರಾಜಭವನದ ಪಾವಿತ್ರ್ಯ ಕಾಪಾಡಲು ಮಾಂಸಾಹಾರ ಹಾಗೂ ಮದ್ಯಪಾನ ನಿಷೇಧ ಮಾಡಿದ್ದೇನೆ ಎಂದು ವಿಜಯಶಂಕರ್ ನುಡಿದರು.

ಋಣ ತೀರಿಸುವೆ: ರಾಜ್ಯದಲ್ಲಿ ಜನಪ್ರತಿನಿಧಿ ಆದಾಗ ರಾಜ್ಯದ ಋಣ ತೀರಿಸಿಲ್ಲ. ಆದರೆ, ಮೇಘಾಲಯದಿಂದ ವಾಪಸ್ ಬರುವಾಗ ಅಲ್ಲಿನ ಋಣ ಇಟ್ಟುಕೊಂಡು ಬರಬೇಡಿ ಎಂದು ನನ್ನ ಪತ್ನಿ ಹೇಳಿದ್ದು, ಅದನ್ನು ಖಂಡಿತಾ ಮಾಡುತ್ತೇನೆ. ರಾಜಭವನದ ಎಲ್ಲ ಬಾಗಿಲು ತೆರೆದಿದ್ದು, ಅಲ್ಲಿನ ಜನರು ಮುಕ್ತವಾಗಿ ಭೇಟಿಯಾಗಬಹುದು ಎಂದರು.

ಸರಕಾರ-ಮಠಗಳು ಒಗ್ಗಟ್ಟಾಗಬೇಕು: ಮುದ್ದೇನಹಳ್ಳಿ ಸತ್ಯಸಾಯಿ ಮಂದಿರದ ಮಧುಸೂದನ ಸಾಯಿ ಮಾತನಾಡಿ, ಸುತ್ತೂರು ಮಠಕ್ಕೆ ಸಾವಿರ ವರ್ಷಗಳ ಇತಿಹಾಸವಿದೆ. ರಾಜೇಂದ್ರ ಶ್ರೀಗಳು ಸೇವೆಯ ಪರಂಪರೆಯನ್ನು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಶಿಕ್ಷಣ, ಆಹಾರ, ಆರೋಗ್ಯ ನೀಡಬೇಕಾದರೆ ಸರಕಾರ, ಮಠ, ಸಂಘ-ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡಬೇಕು ಎಂದರು.

ತ್ಯಾಗ-ಸೇವೆಯ ಸಂಗಮ: ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಮಾತನಾಡಿ, ರಾಜೇಂದ್ರ ಶ್ರೀಗಳು ತಮ್ಮ ಇಡೀ ಬದುಕನ್ನೇ ಸಮಾಜಕ್ಕೆ, ಸೇವೆಗೆ ಸಮರ್ಪಿಸಿದವರು. ಶ್ರೀಗಳ ಬದುಕು ತ್ಯಾಗ ಮತ್ತು ಸೇವೆಯ ಸಂಗಮ ಎಂದರು. ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ವಿಜಯಶಂಕರ್ ಅವರ ಪತ್ನಿ ಬಬಿತಾ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಉಪಸ್ಥಿತರಿದ್ದರು.

ಸುತ್ತೂರಿನಲ್ಲಿ ನಡೆದ ಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತಿಯಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೇಘಾಲಯ ರಾಜ್ಯಪಾಲ ಸಿ.ಎಚ್. ವಿಜಯಶಂಕರ್, ಗೋವಾ ರಾಜ್ಯಪಾಲ ಶ್ರೀಧರನ್ ಪಿಳ್ಳೈ, ಮುದ್ದೇನಹಳ್ಳಿ ಸತ್ಯಸಾಯಿ ಮಂದಿರದ ಮಧುಸೂದನ ಸಾಯಿ, ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಶಾಸಕ ತನ್ವೀರ್ ಸೇಠ್ ಹಾಗೂ ಇತರ ಗಣ್ಯರು ಪಾಲ್ಗೊಂಡಿದ್ದರು.

ಜಮೀನಿಗೆ ಕಾಲುವೆ ನೀರು: ಭತ್ತದ ಬೆಳೆ ನಾಶ

ಯಳಂದೂರು: ತಾಲೂಕಿನ ಮೆಳ್ಳಹಳ್ಳಿ ಗ್ರಾಮದ ಕೃಷಿ ಜಮೀನಿನಲ್ಲಿ ಕಬಿನಿ ಕಾಲುವೆ ನೀರು ಹರಿದ ಪರಿಣಾಮ ಭತ್ತದ ನಾಟಿ ಮಾಡಲು ಸಜ್ಜಾಗಿದ್ದ ರೈತರಿಗೆ ಸಂಕಷ್ಟ ಎದುರಾಗಿದೆ. ಕಾಲುವೆಯ ನೀರು ಹರಿದು ಹೋಗದೆ ಗದ್ದೆಯಲ್ಲೇ ನಿಂತಿದ್ದು 60ಕ್ಕೂ ಹೆಚ್ಚು ಎಕರೆ ಕೃಷಿ ಭೂಮಿಯಲ್ಲಿ ಸಣ್ಣ ರೈತರು ಈ ಬಾರಿ ವ್ಯವಸಾಯವನ್ನೇ ಮಾಡದೆ ಇರುವ ಪರಿಸ್ಥಿತಿ ನಿರ್ಮಾಣವಾಗಿದೆ.

ದುಗ್ಗಹಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೆಳ್ಳಹಳ್ಳಿ ಕೆರೆಯ ಬದಿಯಲ್ಲಿರುವ 50 ರಿಂದ 60 ಜಮೀನಿನ ನೂರಾರು ಸಣ್ಣ ರೈತರು ಭತ್ತದ ಫಸಲನ್ನು ಬೆಳೆಯಲು ತಮ್ಮ ಭೂಮಿ ಹಸನು ಮಾಡಿಕೊಂಡಿದ್ದರು. ಆದರೆ ಕಳೆದ ಒಂದು ವಾರದಿಂದ ಈ ಭಾಗದಲ್ಲಿ ಬಿರುಸಿನ ಮಳೆಯಾಗಿದ್ದರಿಂದ ಕಬಿನಿ ಜಲಾಶಯದಿಂದ ಕಾಲುವೆಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಡಲಾಗುತ್ತಿದೆ.

ಕಾಲುವೆ ಹೂಳು ಸಮಸ್ಯೆಗೆ ಕಾರಣ: ಮೆಳ್ಳಹಳ್ಳಿ ಪ್ರದೇಶದ ಜಮೀನುಗಳು ಕೆರೆ ಹಾಗೂ ಕಬಿನಿ ಕಾಲುವೆಯ ತಳಭಾಗದಲ್ಲಿದೆ. ಕಾಲುವೆಯಲ್ಲಿ ಹೂಳು ತುಂಬಿಕೊಂಡಿರುವುದರಿಂದ ನೀರು ಕಾಲುವೆಯಲ್ಲಿ ಹರಿಯದೆ ಹೊರಕ್ಕೆ ಹರಿಯುತ್ತದೆ. ಹಾಗಾಗಿ ತಗ್ಗು ಪ್ರದೇಶದಲ್ಲಿರುವ ಜಮೀನಿಗೆ ನೀರು ನುಗ್ಗುತ್ತದೆ. ಕಳೆದ ಬಾರಿ ಮಳೆ ಅಭಾವದಿಂದ ಕೆರೆಯಲ್ಲಿ ನೀರಿಲ್ಲದೆ, ಕಾಲುವೆಯಲ್ಲಿ ನೀರು ಹರಿದಿರಲಿಲ್ಲ. ಈಗ ಕಾಲುವೆಯಲ್ಲೂ ನೀರು ಹರಿಯುತ್ತಿದೆ. ಆದರೆ ಹೂಳು ತುಂಬಿರುವ ಕಾಲುವೆಯಿಂದಾಗಿ ಭತ್ತದ ಪೈರು ಕೊಳೆಯುತ್ತಿದೆ. ನೀರು ಜಮೀನಿನಲ್ಲೇ ನಿಂತಿದ್ದು ವ್ಯವಸಾಯ ಮಾಡಲು ಸಾಧ್ಯವಾಗದ ಕಾರಣ ಹೂಳೆತ್ತಿ ಎಂದು ಹಲವು ಬಾರಿ ಮನವಿ ಮಾಡಿದ್ದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಬಸ್ ಪ್ರಯಾಣ ದರ ಏರಿಕೆ ಬೇಡ

ಪ್ರಸಕ್ತ ವರ್ಷದಲ್ಲಿ ರಾಜ್ಯದ ಒಂದೆಡೆ ಬರಗಾಲದ ಛಾಯೆ ಆವರಿಸಿದ್ದರೆ, ಇನ್ನೊಂದೆಡೆ ಅತಿವೃಷ್ಟಿಯಾಗಿ ಬೆಳೆ, ಆಸ್ತಿಪಾಸ್ತಿಗಳು ಹಾನಿಗೀಡಾಗಿವೆ. ಜನಸಾಮಾನ್ಯರು ಆರ್ಥಿಕ ಸಂಕಷ್ಟಕ್ಕೀಡಾಗಿದ್ದು, ದಿನನಿತ್ಯದ ವಸ್ತುಗಳ ಬೆಲೆ ಏರಿಕೆಗೆ ನಲುಗಿದ್ದಾರೆ. ಈ ನಡುವೆ ರಾಜ್ಯ ಸರಕಾರ ಹಾಲಿನ ದರ ಹೆಚ್ಚಳ ಮಾಡಿದೆ. ಇದೀಗ ಬೆಂಗಳೂರಿನಲ್ಲಿ ನೀರಿನ ದರ ಹೆಚ್ಚಳ ಮಾಡುವುದು ಅನಿವಾರ್ಯ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ನೀಡಿದ್ದಾರೆ. ಬೆಂಗಳೂರಿನಲ್ಲಿ ನೀರಿನ ದರ ಹೆಚ್ಚಳವಾಗುತ್ತಿದ್ದಂತೆ ತಾವೂ ನೀರಿನ ದರ ಹೆಚ್ಚಳ ಮಾಡಬಹುದು ಎಂಬುವುದನ್ನೇ ಇತರ ನಗರ ಸಂಸ್ಥೆಗಳು ಕಾದು ಕುಳಿತಿವೆ. ಈ ನಡುವೆಯೇ ಸಾರಿಗೆ ಬಸ್ ಪ್ರಯಾಣ ದರವನ್ನೂ ಹೆಚ್ಚಳ ಮಾಡುವಲ್ಲಿ ರಾಜ್ಯ ಸರಕಾರ ಚಿಂತನೆ ನಡೆಸುತ್ತಿದೆ. ಹೀಗಾಗಿ ರಾಜ್ಯದ ಜನತೆಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಮಹಿಳೆಯರಿಗೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸುವ ರಾಜ್ಯ ಸರಕಾರದ ಮಹಾತ್ವಾಕಾಂಕ್ಷೆಯ ಶಕ್ತಿ ಯೋಜನೆಯಿಂದ ಪ್ರಯಾಣಿಕರ ಸಂಖ್ಯೆ ಸಾಕಷ್ಟು ಹೆಚ್ಚಿದೆ. ಆದರೆ, ಇದೀಗ ಪ್ರಯಾಣ ದರ ಏರಿಕೆ ಮಾಡಿದರೆ ಮಹಿಳೆಯರಿಗೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ. ಪುರುಷರಿಗೆ ಹೊರೆಯಾಗಲಿದೆ. ಇದು ಒಂದೆಡೆ ಕೊಟ್ಟು ಇನ್ನೊಂದೆಡೆ ಕಿತ್ತುಕೊಂಡಂತಾಗಿದೆ. ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆಯಿಂದಾಗಿ ಸಾರಿಗೆ ಸಂಸ್ಥೆಗಳು ನಷ್ಟದಲ್ಲಿದ್ದು, ಲಾಭದತ್ತ ತರಲು ಬಸ್ ಪ್ರಯಾಣ ದರ ಅನಿವಾರ್ಯ ಎಂದು ಹೇಳಲಾಗುತ್ತಿದೆ. ಕೇಂದ್ರ ಸರಕಾರ ಪೆಟ್ರೋಲ್, ಡಿಸೇಲ್ ಬೆಲೆ ಹೆಚ್ಚಿಸಿದರೆ ಅದರ ಪರಿಣಾಮ ರಾಜ್ಯದ ಜನಸಾಮಾನ್ಯರ ಮೇಲೆ ಹೇರಿದಂತಾಗುತ್ತಿದೆ. ಇದು ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ ಹಾಕಿದಂತಿದೆ. ಆದ್ದರಿಂದ ಕೇರಳ, ತಮಿಳುನಾಡಿನಲ್ಲಿ ಸಾರಿಗೆ ಸಂಸ್ಥೆಗಳಿಗೆ ರಾಜ್ಯ ಸರಕಾರವು ಸಬ್ಸಿಡಿ ನೀಡುತ್ತಿರುವಂತೆ ನಮ್ಮ ರಾಜ್ಯ ಸರಕಾರವು ಸಬ್ಸಿಡಿ ನೀಡಿ ಪ್ರಯಾಣ ದರ ಇಳಿಸಿ ಜನಸಾಮಾನ್ಯರ ಹೊರೆ ಇಳಿಸಬೇಕು. ಸಾರಿಗೆ ಸಂಸ್ಥೆಗಳಿಗೆ ಆಗುತ್ತಿರುವ ನಷ್ಟ ತಪ್ಪಿಸಲು ಅನಗತ್ಯ ಹೊಸ ಬಸ್ ಖರೀದಿ ನಿಲ್ಲಬೇಕು. ಹಲವು ರೂಟ್‌ಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಬಸ್‌ಗಳು ಒಂದೇ ವೇಳೆಗೆ ಹೊರಟು ಖಾಲಿ ಓಡಾಡುತ್ತಿವೆ. ಅಂತಹ ಕಡೆಗಳಲ್ಲಿ ಬಸ್‌ಗಳ ಸಂಖ್ಯೆ ಕಡಿಮೆ ಮಾಡಬೇಕು.

ಸೊಂಪಾದಕೀಯ

ದರ್ಶನ್ ಭಾಗ್ಯ?

ಕನ್ನಡ ಚಿತ್ರರಂಗದ ಸ್ಟಾರ್ ನಟ ದರ್ಶನ್ ತೂಗುದೀಪ್ ಕೊಲೆ ಆರೋಪದ ಮೇಲೆ ಪರಪ್ಪನ ಅಗ್ರಹಾರದಲ್ಲಿ ಕಾಲ ಕಳೆಯುತ್ತಿರುವುದು ಎಲ್ಲರಿಗೂ ಗೊತ್ತು. ಆದರೆ ಅಲ್ಲಿನ ಅವರ ದೈನಂದಿನ ಲೈಫ್‌ಸ್ಟೈಲ್ ಬಗ್ಗೆ ಅನುಮಾನ ಮೂಡಿಸುವಂಥ ಫೋಟೋ ಒಂದು ಈಗ ಲೀಕ್ ಆಗಿ ಎಲ್ಲೆಡೆ ಸದ್ದು ಮಾಡುತ್ತಿದೆ. ಪರಪ್ಪನ ಅಗ್ರಹಾರದಲ್ಲಿ ದರ್ಶನ್ ತೂಗುದೀಪ್ ಇತರ ಖೈದಿಗಳ ಜತೆ ಕೂತು ಕಾಫಿ ಕುಡಿಯುತ್ತಾ ಸಿಗರೇಟ್ ಸೇದುತ್ತಿರುವ ದೃಶ್ಯ ಯಾರದ್ದೋ ಕ್ಯಾಮರಾದಲ್ಲಿ ಸೆರೆಯಾಗಿ ಈಗ ವೈರಲ್ ಆಗಿದೆ. ಜೈಲು ಸೇರಿದ ಮೇಲೆ ದರ್ಶನ್ 'ನನಗೆ ಅದು ಬೇಕು, ಇದು ಬೇಕು' ಎಂದು ಕ್ಯಾತೆ ತೆಗೆಯುತ್ತಿದ್ದುದು ಎಲ್ಲರಿಗೂ ಗೊತ್ತು. ನನಗೆ ಜೈಲಿನ ಊಟ ಸೇರುತ್ತಿಲ್ಲ ಮನೆಯಿಂದ ಊಟ ಬೇಕು, ಹೊದಿಕೆಗಳು ಮತ್ತು ಇನ್ನಿತರ ಸವಲತ್ತುಗಳನ್ನು ನಾನು ಮನೆಯಿಂದ ತರಿಸಿಕೊಳ್ಳುತ್ತೇನೆ ಎಂದು ದರ್ಶನ್ ಮನವಿ ಮಾಡಿದ್ದರು. ಆದರೆ ಅದಕ್ಕೆ ಪೊಲೀಸ್, ಕೋರ್ಟ್‌ನಿಂದ ಸಹಕಾರ ಸಿಕ್ಕಿರಲಿಲ್ಲ. ಹಾಗಾಗಿ ದರ್ಶನ್ ಜೈಲಿನಲ್ಲಿ ಸಾಮಾನ್ಯ ಖೈದಿಗಳಂತೆ ಇದ್ದಾರೆ ಅನ್ನೋದೇ ಎಲ್ಲರ ಅನಿಸಿಕೆಯಾಗಿತ್ತು. ತೀರಾ ಅವರ ಆಪ್ತರಿಗೂ 'ದರ್ಶನ ಭಾಗ್ಯ' ಸಿಗುವುದು ಕಷ್ಟ ಎಂದು ಎಲ್ಲರೂ ಅಂದುಕೊಂಡಿದ್ದಾಗ ದರ್ಶನ್‌ಗೆ ಸಿಕ್ಕಿರುವ ಸ್ಪೆಷಲ್ ಭಾಗ್ಯದ ಫೋಟೋ ಈಗ ಜೈಲಿನ ಒಳಗಿನ ವಿದ್ಯಮಾನಗಳ ಬಗ್ಗೆ ಅನುಮಾನ ಮೂಡಿಸಿದೆ. ವಿಗ್ ಇಲ್ಲದ ದರ್ಶನ್ ಕುರ್ಚಿ, ಟೇಬಲ್ ಹಾಕಿಕೊಂಡು ಎಗ್ಗಿಲ್ಲದೆ ಸಿಗರೇಟ್ ಸೇದುತ್ತಾ ಮಗ್‌ನಲ್ಲಿ ಕಾಫಿ ಕುಡಿಯುತ್ತಿರುವ ಫೋಟೋ ನೋಡಿ ಎಲ್ಲರೂ ಆಶ್ಚರ್ಯಚಕಿತರಾಗಿದ್ದಾರೆ. ಟಿವಿ ಚಾನೆಲ್‌ಗಳಲ್ಲಿ ಇದು ಸಾಕಷ್ಟು ಸೌಂಡ್ ಮಾಡುತ್ತಿದೆ. ಕೆಲವು ವರದಿಗಾರರು, 'ಅದು ಕಾಫಿ ಮಗ್‌ನಂತೆ ಕಂಡರೂ ಅದ್ರಲ್ಲಿ ಕಾಫಿಯೇ ಇದೆ ಅಂತ ಏನು ಗ್ಯಾರಂಟಿ? ಅದರಲ್ಲಿ ಮದ್ಯ ಕೂಡ ಇರಬಹುದು' ಎಂದು ಈ ಮಧ್ಯ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಮೊದಮೊದಲು ದರ್ಶನ್ ಅವರನ್ನು ಎಲ್ಲ ಖೈದಿಗಳಂತೆ ನಡೆಸಿಕೊಳ್ಳುತ್ತಿದ್ದಾರೆ ಎಂಬಂತೆ ಕಾಣಿಸಿದರೂ ಈಗ ಹೊರಗೆ ಬಂದಿರುವ ಫೋಟೋ ನೋಡಿ ಚಾಲೆಂಜಿಂಗ್ ಸ್ಟಾರ್ ಎನಿಸಿಕೊಂಡಿರುವ ನಟನಿಗೆ ಜೈಲಿನಲ್ಲಿ ರಾಯಲ್ ಆಗಿರುವ ಟ್ರೀಟ್‌ಮೆಂಟ್ ಸಿಗುತ್ತಿದೆ ಅನ್ನಿಸಿದರೆ ತಪ್ಪೇನಿಲ್ಲ ಬಿಡಿ. ಆದರೆ ಈ ಫೋಟೋದ ಅಸಲಿಯತ್ತಿನ ಬಗ್ಗೆ ಇನ್ನಷ್ಟೇ ಗೊತ್ತಾಗಬೇಕಿದೆ.

ಸಂಪಾದಕರ ಸದ್ಯಶೋಧನೆ

ನಾರಿ ಹಿರಾ ನೆನಪು

ಭಾರತದ 'ಮ್ಯಾಗಜಿನ್ ದೊರೆ' ಎಂದು ಕರೆಯಿಸಿಕೊಂಡಿದ್ದ ನಾರಿ ಹಿರಾ ಮೊನ್ನೆ ತಮ್ಮ 86ನೇ ವಯಸ್ಸಿಗೆ ನಿಧನರಾಗಿದ್ದಾರೆ. 'ಸ್ಟಾರ್ ಡಸ್ಟ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾಗಿದ್ದ ಹಿರಾ, ತಮ್ಮ ಮ್ಯಾಗ್ನ ಪಬ್ಲಿಷಿಂಗ್ ಸಂಸ್ಥೆ ಮೂಲಕ 'ಸ್ಯಾವಿ', 'ಶೋಟೈಮ್', 'ಸೊಸೈಟಿ', ಮತ್ತು 'ಹೆಲ್ತ್' ನಿಯತಕಾಲಿಕಗಳನ್ನು ಯಶಸ್ವಿಯಾಗಿ ನಡೆಸಿದವರು. ಅವರು ಆರಂಭಿಸಿದ ನಿಯತಕಾಲಿಕಗಳೆಲ್ಲ ವಿಶಿಷ್ಟ ಕಾರಣಗಳಿಗೆ ಜನಪ್ರಿಯವಾಗಿದ್ದವು. ಅವು 90ರ ದಶಕದಲ್ಲಿ ಸುದ್ದಿ ಮಾಡಿದ್ದವು. 1938ರಲ್ಲಿ ಕರಾಚಿಯಲ್ಲಿ ಜನಿಸಿದ ಹಿರಾಚಂದಾನಿ, ದೇಶ ವಿಭಜನೆಯ ನಂತರ, ಮುಂಬೈಗೆ ಬಂದು ನೆಲೆಸಿದರು. ಆರಂಭದಲ್ಲಿ ಅವರು ಪತ್ರಕರ್ತರಾಗಿ ಕೆಲಸ ಮಾಡಿದರು. ತಮಗೆ ಅನಿಸಿದ್ದನ್ನು ಬರೆದರೂ ಆ ದಿನಗಳಲ್ಲಿ ಮಡಿವಂತಿಕೆಯಿಂದ ಹೆದರಿ, ಯಾರೂ ಅವರ ವಿಚಾರಗಳನ್ನು ಪ್ರಕಟಿಸಲು ಧೈರ್ಯ ತೋರುತ್ತಿರಲಿಲ್ಲ. ಅದರಿಂದ ಬೇಸತ್ತ ಹಿರಾ, ತಾವೇ ನಿಯತಕಾಲಿಕವನ್ನು ಪ್ರಕಟಿಸಲು ಮುಂದಾದರು. ಆಗ ಹುಟ್ಟಿದ್ದೇ ಸ್ಟಾರ್ ಡಸ್ಟ್'. ಅವರು ಅಲ್ಲಿ ತನಕ ಪ್ರಕಟವಾಗುತ್ತಿದ್ದ 'ಫಿಲಂ ಫೇರ್', 'ಸ್ಕ್ರೀನ್' ಸೇರಿದಂತೆ ಎಲ್ಲ ಪತ್ರಿಕೆಗಳ ಮಾಲೀಕ 'ರಿಗೆ ಸಿಂಹಸಪ್ನ ರಾದರು. 'ಸ್ಟಾರ್ ಡಸ್ಟ್'ನ 5ನೇ ಸಂಚಿಕೆ ಮಾರುಕಟ್ಟೆಗೆ ಬರುವ ಹೊತ್ತಿಗೆ ಹಿಂದಿ ಚಿತ್ರರಂಗದಲ್ಲಿ ದೊಡ್ಡ ಸಂಚಲನವನ್ನೇ ಉಂಟು ಮಾಡಿತು. 'ಹಿಂದಿ ಸಿನಿಮಾರಂಗದ ಯಾರೇ ನಟ, ನಟಿ, ನಿರ್ದೇಶಕ, ನಿರ್ಮಾಪಕ ಇರಬಹುದು, ಅವರನ್ನು ಮೆಚ್ಚಿಸುವುದಕ್ಕಾಗಿ ಬರೆಯಬೇಕಿಲ್ಲ. ಎಲ್ಲರ ಬಗ್ಗೆಯೂ ಗೌರವದ ತಿರಸ್ಕಾರ ಇಟ್ಟುಕೊಳ್ಳಿ' ಎಂದು ಹಿರಾ ತಮ್ಮ ಸಂಪಾದಕೀಯ ಸಹೋದ್ಯೋ ಗಿಗಳಿಗೆ ಹೇಳುತ್ತಿದ್ದರು. ಸಿನಿಮಾ ನಟರನ್ನು ಚೋದ್ಯದಿಂದ ಬೇರೆ ಹೆಸರು ಗಳಿಂದ ಕರೆಯುವ ಸಂಪ್ರದಾಯವನ್ನು ಆರಂಭಿಸಿದವರು ಹಿರಾ ಅವರೇ. ಧರ್ಮೇಂದ್ರ ಅವರನ್ನು ಗರಂ ಧರಮ್, ಹೇಮಾ ಮಾಲಿನಿಯನ್ನು ಇಡ್ಲಿ ಮಾಲಿನಿ, ಶತ್ರುಘ್ನ ಸಿನ್ಹಾ ಅವರನ್ನು ಶಾಟ್‌ಗನ್ ಸಿನ್ಹಾ ಎಂಬ ಹೆಸರುಗಳಿಂದ ಕರೆದವರು ಇವರೇ. ಎಲ್ಲ ನಟ-ನಟಿಯರಿಗೆ ಹೀಗೆ ಪುನರ್‌ನಾಮಕರಣ ಮಾಡಿ ಚುಡಾಯಿಸುತ್ತಿದ್ದರು. ಇವರಿಗೆ ಸಾಥ್ ನೀಡಲು ಸಂಪಾದಕೀಯ ಮಂಡಳಿಯಲ್ಲಿ ಶೋಭಾ ಡೇ ಅವರಂಥ ಕಿಲಾಡಿ ಬರಹಗಾರ್ತಿ ಇದ್ದರು. ಅಲ್ಲಿಯತನಕ ಡೇ, ಹಿರಾ ಅವರ 'ಕ್ರಿಯೇಟಿವ್ ಯೂನಿಟ್' ಎಂಬ ಜಾಹೀರಾತು ಸಂಸ್ಥೆಯಲ್ಲಿ ಕಾಪಿ ರೈಟರ್ ಆಗಿ ಕೆಲಸ ಮಾಡುತ್ತಿದ್ದರು. ಉತ್ತಮವಾಗಿ ಬರೆಯುವ, ಭಿನ್ನವಾಗಿ ಆಲೋಚಿಸುವ ಟ್ಯಾಲೆಂಟ್ ಶೋಧಿಸುವುದರಲ್ಲಿ ಹಿರಾ ನಿಷ್ಣಾತರಾಗಿದ್ದರು. ಪ್ರತಿದಿನದ ಸಂಪಾದಕೀಯ ಸಭೆಯಲ್ಲಿ, 'ಪತ್ರಿಕೆಯಲ್ಲಿ ಬರಹ ಶಾರ್ಪ್ ಆಗಿರಲಿ. ನಿಮ್ಮ ಬರಹ ಕಡಿಮೆ ಮೆಚ್ಚಿಸುವಂತಿರಲಿ ಮತ್ತು ಹೆಚ್ಚು ಚುಚ್ಚುವಂತಿರಲಿ' ಎಂದು ಹೇಳುತ್ತಿದ್ದ ಹಿರಾ, ವಿವಾದಗಳನ್ನು ಸ್ವಾಗತಿಸುತ್ತಿದ್ದರು. 'ಜನರಿಗೆ ಸಿನಿಮಾ ನಟ- ನಟಿಯರ ಖಾಸಗಿ ಜೀವನದ ಬಗ್ಗೆ ತಿಳಿದುಕೊಳ್ಳುವ ಆಸಕ್ತಿಯಿರುತ್ತದೆ. ಅದರಲ್ಲೂ ಯಾವ ನಟ, ಯಾವ ನಟಿಯೊಂದಿಗೆ ತಿರುಗಾಡುತ್ತಿದ್ದಾನೆ, ಯಾರೊಂದಿಗೆ ಅಫೇರ್ ಇಟ್ಟುಕೊಂಡಿದ್ದಾನೆ, ಯಾರ ಮನೆಗೆ ಯಾರು ಭೇಟಿ ಕೊಡುತ್ತಾರೆ, ಯಾರ ಸಂಬಂಧ ಕಿತ್ತುಹೋಗಿದೆ.. ಇಂಥ ವಿಷಯಗಳನ್ನು ರಸವತ್ತಾಗಿ ಬರೆಯಬೇಕು. ಇದೇ ಸಿನಿಮಾ ಪತ್ರಿಕೋದ್ಯಮ' ಎಂದು ಹಿರಾ ಬಲವಾಗಿ ಪ್ರತಿಪಾದಿಸುತ್ತಿದ್ದರು. ಸಿನಿಮಾ ನಟಿಯರಿಗೆ ಭಾರಿ ಸಂಭಾವನೆ ಕೊಟ್ಟು ಮಾದಕ ಭಂಗಿಗಳಲ್ಲಿ ಫೋಟೋಶೂಟ್ ಮಾಡಿಸುತ್ತಿದ್ದರು. ಇಂಟರ್ನೆಟ್ ಇಲ್ಲದ ಆ ದಿನಗಳಲ್ಲಿ, ನಟಿಯರ ಮಾದಕ ಫೋಟೋಗಳನ್ನು ನೋಡಲೆಂದೇ ಓದುಗರು 'ಸ್ಟಾರ್ ಡಸ್ಟ್' ಖರೀದಿಸುತ್ತಿದ್ದರು. ಅಲ್ಲಿ ತನಕ ಆಚರಣೆಯಲ್ಲಿದ್ದ ಸಾಂಪ್ರದಾಯಿಕ ಸಿನಿಮಾ ವರದಿಗಾರಿಕೆಯನ್ನು ಮುರಿದ ಹಿರಾ, ಹೊಸ ಮಾದರಿಯನ್ನು ಕಟ್ಟಿದರು. 'ಸ್ಟಾರ್ ಡಸ್ಟ್' ಯಶಸ್ಸಿನಿಂದ ಅವರು ಸೊಸೈಟಿ, ಸ್ಯಾವಿ, ಶೋಟೈಮ್ ಮ್ಯಾಗಜಿನ್‌ಗಳನ್ನೂ ಆರಂಭಿಸಿದರು. ನಿಯತಕಾಲಿಕಗಳ ಯಶಸ್ಸು ಅವರನ್ನು ಸಿನಿಮಾ ನಿರ್ಮಾಣಕ್ಕೂ ಪ್ರೇರೇಪಿಸಿತು. ತಮ್ಮದೇ 'ಹಿಬಾ ಫಿಲಂಸ್' ಸಂಸ್ಥೆಯಿಂದ ಸುಮಾರು 15 ವಿಡಿಯೋ ಸಿನಿಮಾಗಳನ್ನು ನಿರ್ಮಿಸಿದರು. ಅದು ವಿಡಿಯೋ ಸಿನಿಮಾಗಳ ಭರಾಟೆಯ ದಿನಗಳು. ಅಲ್ಲಿಯೂ ಹಿರಾ ಯಶಸ್ವಿಯಾದರು. ಮ್ಯಾಗಜಿನ್ ಪತ್ರಿಕೋದ್ಯಮ ಕಳೆಗುಂದುತ್ತಿದ್ದಂತೆ ನಿಧಾನವಾಗಿ ಅವರು ನೇಪಥ್ಯಕ್ಕೆ ಸರಿದಿದ್ದರು. ಭಾರತೀಯ ಮ್ಯಾಗಜಿನ್ ಪತ್ರಿಕೋದ್ಯಮ ಹಿರಾ ಅವರ ಕೊಡುಗೆಯನ್ನು ಸದಾ ಸ್ಮರಿಸಲೇಬೇಕು.

ವಿಜಯೇಂದ್ರ ವಿರುದ್ಧ ಅಕ್ಟೋಬರ್ ಕ್ರಾಂತಿ?

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಕಳೆದ ವಾರ ದಿಲ್ಲಿಗೆ ಹೋದರು. ಹೀಗೆ ಹೋದವರು ಪಕ್ಷದ ವರಿಷ್ಠರಾದ ಅಮಿತ್ ಶಾ ಮತ್ತು ನಡ್ಡಾ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿದರು. ಈ ಭೇಟಿಯ ಸಂದರ್ಭದಲ್ಲಿ ಕರ್ನಾಟಕದ ಬಿಜೆಪಿಯಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಪ್ರಸ್ತಾಪಿಸಿದ ಗೌಡರು, 'ಕರ್ನಾಟಕದಲ್ಲಿ ನಮ್ಮ ಪಕ್ಷ ಹೋಗುತ್ತಿರುವ ದಾರಿ ಸರಿಯಿಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ಬದಲು ತಮಗೆ ಬೇಕಾದವರ ಮೂಲಕ ಪಕ್ಷವನ್ನು ಕಂಟ್ರೋಲಿನಲ್ಲಿಟ್ಟುಕೊಳ್ಳುವ ಕೆಲಸ ವಾಗುತ್ತಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಪಕ್ಷ ಕಷ್ಟಕ್ಕೆ ಸಿಲುಕುತ್ತದೆ' ಎಂದಿದ್ದಾರೆ.

ಹಾಗೆಯೇ ಮುಂದುವರಿದು, 'ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಹೆಸರು ಬಂತಲ್ಲ? ಇದರ ವಿರುದ್ಧ ಮೈಸೂರು ಚಲೋ ಪಾದಯಾತ್ರೆ ನಡೆಸಲು ತೀರ್ಮಾನಿಸಿದಾಗ ಪಕ್ಷದ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸವಾಗಲಿಲ್ಲ. ಬದಲಿಗೆ ತಮಗೆ ಬೇಕಾದವರ ಗುಂಪು ಕಟ್ಟಿಕೊಂಡು ಯಾತ್ರೆ ಮಾಡಲಾಯಿತು. ಯಾವಾಗ ಈ ಕೆಲಸವಾಯಿತೋ, ಆಗ ಹಲವು ಮಂದಿ ಹಿರಿಯ ನಾಯಕರು ಸೇರಿ ಸರಕಾರದ ವಿರುದ್ಧ ಪ್ರತ್ಯೇಕ ಪಾದಯಾತ್ರೆ ನಡೆಸುವುದಾಗಿ ಘೋಷಿಸಿದರು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸವಾಗಿದ್ದರೆ ಇಂಥ ಒಡಕಿನ ಧ್ವನಿ ಏಕೆ ಬರುತ್ತಿತ್ತು? ವಸ್ತುಸ್ಥಿತಿ ಎಂದರೆ ರಾಜ್ಯ ಬಿಜೆಪಿಯಲ್ಲಿ ಇವತ್ತು ಹಿರಿಯರಿಗೆ ಗೌರವ ಸಿಗುತ್ತಿಲ್ಲ. ಪಕ್ಷದ ಕೆಲಸಗಳಲ್ಲಿ ಅವರನ್ನು ಇನ್‌ವಾಲ್ವ್ ಮಾಡಿಕೊಳ್ಳುವ ನಡೆ ಕಾಣಬರುತ್ತಿಲ್ಲ. ಅರ್ಥಾತ್, ಕರ್ನಾಟಕದ ಬಿಜೆಪಿ ಸ್ಪಷ್ಟವಾಗಿ ಒಂದು ಗುಂಪಿನ ಹಿಡಿತಕ್ಕೆ ಸಿಲುಕಿದೆ. ಇದು ಎಲ್ಲರಿಗೂ ಗೊತ್ತು. ಹೀಗಾಗಿ ಮೊದಲು ಇದನ್ನು ಸರಿಪಡಿಸಿ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪಕ್ಷ ಹೋಳಾಗಬಹುದು' ಅಂತ ವಿವರಿಸಿದ್ದಾರೆ. ಹೀಗೆ ಸದಾನಂದಗೌಡರು ಆಡಿದ ಮಾತನ್ನು ಗಂಭೀರವಾಗಿ ಕೇಳಿಸಿಕೊಂಡ ಅಮಿತ್ ಶಾ ಮತ್ತು ನಡ್ಡಾ ಅವರು, 'ಹೌದು, ರಾಜ್ಯ ಬಿಜೆಪಿಗೆ ಸರ್ಜರಿ ಮಾಡುವ ಅಗತ್ಯವಿದೆ' ಎಂದಿದ್ದಾರಂತೆ.

ಟಾರ್ಗೆಟ್ ಆಗುತ್ತಿದ್ದಾರೆ ವಿಜಯೇಂದ್ರ

ಅಂದ ಹಾಗೆ, ಸದಾನಂದಗೌಡರು ದಿಲ್ಲಿಯಲ್ಲಿ ಏನು ಹೇಳಿ ಬಂದರೋ, ಅದನ್ನೇ ಬಸನಗೌಡ ಪಾಟೀಲ್ ಯತ್ನಾಳ್ ಅವರಂಥ ನಾಯಕರು ಇಲ್ಲಿ ನೇರವಾಗಿ ಹೇಳುತ್ತಿದ್ದಾರೆ ಮತ್ತು ಇವರೆಲ್ಲರ ಟಾರ್ಗೆಟ್ ಆಗಿರುವವರು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದ ನಂತರ ಅವರು ರೂಪಿಸಿದ ಪದಾಧಿಕಾರಿಗಳ ಪಟ್ಟಿಯಿಂದ ಹಿಡಿದು ಎಲ್ಲ ಹಂತದ ನೇಮಕಾತಿಗಳನ್ನು

ವಿರೋಧಿಸುತ್ತಿರುವ ಯತ್ನಾಳ್ ಮತ್ತಿತರ ನಾಯಕರು, 'ಇದು ಬಿಜೆಪಿ ಪಟ್ಟಿಯಲ್ಲ, ಕೆಜೆಪಿ-2' ಅಂತ ಟೀಕಿಸುತ್ತಿದ್ದಾರೆ. ಈ ಹಿಂದೆ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಯಾರು ತಮ್ಮ ಸುತ್ತ ಇದ್ದರೋ ಅವರನ್ನೇ ಪಕ್ಷದ ಆಯಕಟ್ಟಿನ ಜಾಗಗಳಲ್ಲಿ ವಿಜಯೇಂದ್ರ ಕೂರಿಸಿದ್ದಾರೆ ಎಂಬುದು ಈ ಗ್ಯಾಂಗಿನ ಆರೋಪ. ಪರಿಣಾಮ? ದಿನ ಕಳೆದಂತೆ ರಾಜ್ಯ ಬಿಜೆಪಿಯ ಅಂತಃಕಲಹ ಹೆಚ್ಚಾಗುತ್ತಾ ಸಿದ್ದರಾಮಯ್ಯ ಸರಕಾರದ ವಿರುದ್ಧ ಹೋರಾಡುವ ಶಕ್ತಿಯೇ ಕುಸಿದುಹೋದಂತೆ ಕಾಣುತ್ತಿದೆ. ಕೆಲವು ಬಾರಿ ಇದ್ದಕ್ಕಿದ್ದಂತೆ ಸಿದ್ದರಾಮಯ್ಯ ಸರಕಾರದ ವಿರುದ್ಧ ಅಬ್ಬರದ ಮಾತುಗಳು ಕೇಳುತ್ತವಾದರೂ, ಆಳದಲ್ಲಿ ಬಿಜೆಪಿಯ ಫ್ರಂಟ್‌ಲೈನ್ ನಾಯಕರು ಒಂದು ಬಗೆಯ ಮುಜುಗರಕ್ಕೆ ಒಳಗಾದವರಂತೆ ಕಾಣುತ್ತಾರೆ.

ಈ ಬಗ್ಗೆ ರಾಜ್ಯ ಬಿಜೆಪಿಯ ಕೆಲ ನಾಯಕರು, 'ಒಂದು ವೇಳೆ ಸರಕಾರದ ವಿರುದ್ಧ ದೊಡ್ಡ ಮಟ್ಟದಲ್ಲಿ ಹೋರಾಡಲು ಇವರು ಹೊರಟರೆ ಇವರನ್ನೇ ಸಿದ್ದು, ಡಿಕೆಶಿ ಇಕ್ಕಳದಲ್ಲಿ ಸಿಲುಕಿಸುತ್ತಾರೆ. ಹೀಗಾಗಿ ಇವರಿಗೆ ಹೋರಾಟ ಮಾಡುತ್ತಿದ್ದೇವೆ ಎಂಬ ಮೆಸೇಜು ಹೋಗಬೇಕು, ಆದರೆ ಸಿದ್ದು-ಡಿಕೆಶಿ ಸಿಟ್ಟಾಗಬಾರದು. ಇಂಥ ಪರಿಸ್ಥಿತಿಯಲ್ಲಿ ರಾಜ್ಯ ಬಿಜೆಪಿಯ ಹೋರಾಟಕ್ಕೆ ತಾರ್ಕಿಕ ಅಂತ್ಯ ಸಿಗುವುದಿಲ್ಲ. ಈ ಹೋರಾಟಕ್ಕೆ ತಾರ್ಕಿಕ ಪ್ರಾರಂಭ ಅಂತಿದ್ದರೆ ತಾನೇ ತಾರ್ಕಿಕ ಅಂತ್ಯ ಸಿಗುವುದು? ಹೀಗಾಗಿ ಬಿಜೆಪಿ ವರಿಷ್ಠರು ಮನಸು ಮಾಡಿದರೆ ಮಾತ್ರ ಏನಾದರೂ ಆಗಬಹುದು. ಇಲ್ಲದಿದ್ದರೆ ಸರಕಾರಕ್ಕೆ ಏನೂ ಆಗುವುದಿಲ್ಲ' ಎನ್ನುತ್ತಾರೆ.

ರಾಜಿಗೆ ರೆಡಿಯಾಗಿ ಅಂದ್ರಾ ನಡ್ಡಾ?

ಹೀಗೆ ರಾಜ್ಯ ಬಿಜೆಪಿಯ ಬಣ ರಾಜಕೀಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ನಡುವೆಯೇ ನಡ್ಡಾ ಆಡಿದ ಮಾತು ವಿಜಯೇಂದ್ರ ಅವರ ತಲೆನೋವಿಗೆ ಕಾರಣವಾಗಿದೆಯಂತೆ. ಅದೆಂದರೆ, 'ಬಸನಗೌಡ ಪಾಟೀಲ್ ಯತ್ನಾಳ್ ಜತೆ ರಾಜಿಗೆ ಸಿದ್ಧರಾಗಿ' ಎಂಬುದು. ಕೆಲ ದಿನಗಳ ಹಿಂದೆ ದಿಲ್ಲಿಗೆ ಹೋಗಿದ್ದ ವಿಜಯೇಂದ್ರ, ತಮ್ಮ ವಿರುದ್ಧ ಆರೋಪ ಮಾಡುತ್ತಿರುವ ಯತ್ನಾಳ್ ವಿರುದ್ಧ ದೂರು ಕೊಟ್ಟಿದ್ದರು. 'ಪದೇಪದೆ ನಮ್ಮ ವಿರುದ್ಧ ಆರೋಪ ಮಾಡುತ್ತಿರುವ ಯತ್ನಾಳ್ ಅವರಿಂದ ಮುಜುಗರ ಅನುಭವಿಸಬೇಕಾಗಿದೆ. ಇಂಥ ಪರಿಸ್ಥಿತಿಯಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡುವುದು ಹೇಗೆ? ಹೀಗಾಗಿ ಯತ್ನಾಳ್ ಅವರನ್ನು ಮೊದಲು ಸಸ್ಪೆಂಡ್ ಮಾಡಿ' ಅಂತ ನಡ್ಡಾ ಅವರನ್ನು ಒತ್ತಾಯಿಸಿದ್ದರು. ಆಗೆಲ್ಲ ವಿಜಯೇಂದ್ರ ಅವರನ್ನು ಸಮಾಧಾನಿಸಿದ ನಡ್ಡಾ, 'ಆಗಸ್ಟ್ ಅಂತ್ಯದವರೆಗೆ ನೋಡೋಣ. ಆಮೇಲೆ ಸಸ್ಪೆಂಡ್ ಮಾಡೋಣ' ಅಂತ ಭರವಸೆ ನೀಡಿದ್ದರು.

ಯಾವಾಗ ಅವರು ಈ ಭರವಸೆ ನೀಡಿದರೋ, ಖುಷಿಯಿಂದ ರಾಜ್ಯಕ್ಕೆ ಮರಳಿದ್ದ ವಿಜಯೇಂದ್ರ ತಮ್ಮ ಬೆಂಬಲಿಗರ ಪಡೆಗೂ ಇದನ್ನೇ ಹೇಳಿದ್ದರು. 'ಈ ಯತ್ನಾಳ್ ಅವರದು ಜಾಸ್ತಿ ಆಯ್ತು ಸರ್. ಒಂದು ಪ್ರೆಸ್‌ಮೀಟ್ ಮಾಡಿ ಝಾಡಿಸಿಬಿಡುತ್ತೇವೆ' ಅಂತ ಕೆಲ ಬೆಂಬಲಿಗರು ತಮ್ಮ ಬಳಿ ಬಂದಾಗ, 'ನೋ, ನೋ ಅದರಿಂದ ಉಪಯೋಗವಿಲ್ಲ. ಹೀಗಾಗಿ ಸುಮ್ಮನಿರಿ. ಆಗಸ್ಟ್ ಅಂತ್ಯದ ವೇಳೆಗೆ ಯತ್ನಾಳ್ ಸಸ್ಪೆಂಡ್ ಆಗ್ತಾರೆ' ಅಂತ ವಿಜಯೇಂದ್ರ ಮತ್ತು ಯಡಿಯೂರಪ್ಪ ಹೇಳಿದ್ದರು. ಆದರೆ ಮೊನ್ನೆ ಇದ್ದಕ್ಕಿದ್ದಂತೆ ಫೋನು ಮಾಡಿದ ನಡ್ಡಾ ಅವರು, 'ಒಂದು ಸಲ ದಿಲ್ಲಿಗೆ ಬನ್ನಿ. ಯತ್ನಾಳ್ ಮತ್ತು ನಿಮ್ಮ ಮಧ್ಯೆ ರಾಜಿ ಮಾಡಿಸುತ್ತೇವೆ. ಯಾಕೆಂದರೆ ಇವತ್ತಿನ ಸಂದರ್ಭದಲ್ಲಿ ಎಲ್ಲರೂ ಒಗ್ಗೂಡಿ ಹೋಗುವುದು ಮುಖ್ಯ' ಎಂದರಂತೆ. ಆದರೆ ನಡ್ಡಾ ಅವರ ಮಾತಿಗೆ ವಿಜಯೇಂದ್ರ, 'ಅದ್ಹೇಗೆ ಸರ್ ರಾಜಿ ಮಾಡಿಕೊಳ್ಳುವುದು? ನಮ್ಮ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿ, ಪದೇಪದೆ ನಮ್ಮನ್ನು ಮುಜುಗರಕ್ಕೆ ಸಿಲುಕಿಸಿದವರ ಜತೆ ಹೇಗೆ ರಾಜಿ ಮಾಡಿಕೊಳ್ಳಬೇಕು? ನೋ ಸರ್, ಯಾವ ಕಾರಣಕ್ಕೂ ಅವರ ಜತೆ ರಾಜಿ ಬೇಡ' ಎಂದಿದ್ದಾರಂತೆ.

ಬಿಜೆಪಿಯಲ್ಲಿ ಅಕ್ಟೋಬರ್ ಕ್ರಾಂತಿ?

ಅಂದ ಹಾಗೆ, ಅಪನಂಬಿಕೆಯ ವಾತಾವರಣ ಹೆಚ್ಚಾಗುತ್ತಿದ್ದಂತೆಯೇ ಬಿಜೆಪಿ ಪಾಳಯದಲ್ಲಿ ಒಂದು ಗುಸುಗುಸು ಶುರುವಾಗಿದೆ. ಅದರ ಪ್ರಕಾರ, ರಾಜ್ಯ ಬಿಜೆಪಿಯ ಮೇಲೆ ತಾವು ಸಾಧಿಸಿರುವ ಹಿಡಿತವನ್ನು ಬಿಟ್ಟುಕೊಡಲು ವಿಜಯೇಂದ್ರ ರೆಡಿ ಇಲ್ಲ. ಅದೇ ಕಾಲಕ್ಕೆ, ಪಕ್ಷ ವಿಜಯೇಂದ್ರ ಹಿಡಿತದಲ್ಲಿರುವುದು ಬಹುತೇಕ ನಾಯಕರಿಗೆ ಇಷ್ಟವಿಲ್ಲ. ಹೀಗಾಗಿ ವಿಜಯೇಂದ್ರ ವಿರುದ್ಧ ತಿರುಗಿಬೀಳಲು ಹಲವು ನಾಯಕರು ಸಜ್ಜಾಗಿದ್ದಾರೆ. ಅಷ್ಟೇ ಅಲ್ಲ, ಅಕ್ಟೋಬರ್ ಹೊತ್ತಿಗೆ ದಂಗೆ ಏಳಲು ನಿರ್ಧರಿಸಿದ್ದಾರೆ.

ಬಿಜೆಪಿ ಮೂಲಗಳ ಪ್ರಕಾರ, ಈ ಅಕ್ಟೋಬರ್ ಕ್ರಾಂತಿಯ ಸುಳಿವು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಮತ್ತು ಕೇಂದ್ರ ಸಚಿವ ಪ್ರಲ್ಹಾದ್ ಜೋಷಿ ಅವರಿಗಿದೆ. ಹೀಗಾಗಿಯೇ ಮೊನ್ನೆ-ಮೊನ್ನೆಯಷ್ಟೇ ತಮ್ಮನ್ನು ಭೇಟಿಯಾದ ವಿಜಯೇಂದ್ರ ಅವರಿಗೆ ಈ ನಾಯಕರು ಅದನ್ನು ಸೂಚ್ಯವಾಗಿ ಹೇಳಿದ್ದಾರೆ. ಪಕ್ಷದ ನಾಯಕರಿಗೆ ಯಾವ್ಯಾವ ಕಾರಣಗಳಿಗಾಗಿ ನಿಮ್ಮ ಮೇಲೆ ಸಿಟ್ಟಿದೆ ಮತ್ತು ಅದನ್ನು ನೀವು ಹೇಗೆ ಪರಿಹರಿಸಿಕೊಳ್ಳಬಹುದು ಅಂತ ವಿವರಿಸಿದ್ದಾರೆ. ಒಂದು ವೇಳೆ ಅವರಾಡಿದ ಮಾತುಗಳನ್ನು ವಿಜಯೇಂದ್ರ ಪಾಸಿಟಿವ್ ಆಗಿ ತೆಗೆದುಕೊಂಡರೆ ಓಕೆ. ಇಲ್ಲದೆ ಹೋದರೆ ಅಕ್ಟೋಬರ್ ಹೊತ್ತಿಗೆ ಮೇಲೇಳಲಿರುವ ಸ್ವಪಕ್ಷೀಯರ ಕ್ರಾಂತಿಯನ್ನು ಎದುರಿಸಲು ಅವರು ಸಜ್ಜಾಗಬೇಕು.

ರಿಯಲ್ ಫೈಟರ್ ಕುಮಾರಸ್ವಾಮಿ

ಕುತೂಹಲದ ಸಂಗತಿ ಎಂದರೆ ರಾಜ್ಯ ಬಿಜೆಪಿಯಲ್ಲಿನ ಬೆಳವಣಿಗೆಗಳು ಜೆಡಿಎಸ್ ನಾಯಕ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಶಕ್ತಿಯನ್ನು ಹೆಚ್ಚಿಸುತ್ತಿವೆ. ವಸ್ತುಸ್ಥಿತಿ ಎಂದರೆ ಮುಡಾ ಎಪಿಸೋಡಿನ ನಂತರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಹೋಗುತ್ತಿರುವ ರಿಪೋರ್ಟುಗಳು ಕುಮಾರಸ್ವಾಮಿ ಅವರ ಪರವಾಗಿವೆ. 'ಮುಡಾ ಎಪಿಸೋಡಿನ ನಂತರ ಕುಮಾರಸ್ವಾಮಿ ಹೋರಾಡುತ್ತಿರುವ ರೀತಿಗೂ, ನಮ್ಮ ಫ್ರಂಟ್‌ಲೈನ್ ನಾಯಕರು ಹೋರಾಡುತ್ತಿರುವ ರೀತಿಗೂ ವ್ಯತ್ಯಾಸವಿದೆ. ಇನ್‌ಫ್ಯಾಕ್ಟ್, ತಮ್ಮ ವಿರುದ್ಧ ಬಿಜೆಪಿಯ ರಾಜ್ಯ ನಾಯಕರು ಹೋರಾಡುತ್ತಿರುವ ರೀತಿಯಿಂದ ಸಿಎಂ ಸಿದ್ದು ಆಗಲೀ, ಡಿಸಿಎಂ ಡಿಕೆಶಿ ಆಗಲೀ ತಲೆ ಕೆಡಿಸಿಕೊಂಡಿಲ್ಲ. ಬದಲಿಗೆ ಕುಮಾರಸ್ವಾಮಿ ನಡೆಸುತ್ತಿರುವ ಹೋರಾಟದಿಂದ ಕನಲಿದ್ದಾರೆ. ಪರಿಣಾಮ? ಕುಮಾರಸ್ವಾಮಿ ಅವರನ್ನು ಹಣಿಯಲು ಮುಂದಾಗಿರುವ ಸಿದ್ದು-ಡಿಕೆಶಿ ಪಡೆ, ಜಂತಕಲ್ ಮೈನಿಂಗ್ ಎಪಿಸೋಡಿನಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡುವಂತೆ ರಾಜ್ಯಪಾಲರಿಗೆ ಸಲಹೆ ನೀಡಿದೆ. ಇದೇ ರೀತಿ ಕುಮಾರಸ್ವಾಮಿ ಅವರನ್ನು ಯಾವ್ಯಾವ ಇಕ್ಕಳದಲ್ಲಿ ಸಿಲುಕಿಸಲು ಸಾಧ್ಯವೋ ಅದನ್ನೆಲ್ಲ ಮಾಡತೊಡಗಿದೆ. ಹೀಗೆ ಕುಮಾರಸ್ವಾಮಿ ಅವರನ್ನು ಹಣಿಯಲು ನಿಂತಿರುವ ಸಿದ್ದು ಪಡೆ, ಬಿಜೆಪಿಯ ಫ್ರಂಟ್‌ಲೈನ್ ನಾಯಕರ ಮೇಲೆ ಮುಗಿಬೀಳುತ್ತಿಲ್ಲ. ಮೊನ್ನೆ ಮುರುಗೇಶ್ ನಿರಾಣಿ, ಜನಾರ್ದನ ರೆಡ್ಡಿ ಮತ್ತು ಶಶಿಕಲಾ ಜೊಲ್ಲೆ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಿ ಅಂತ ರಾಜ್ಯಪಾಲರಿಗೆ ಸಲಹೆ ನೀಡಿದೆಯಾದರೂ ಇವರೆಲ್ಲ ಸಿದ್ದು ಪಡೆಗೆ ಸವಾಲೇ ಅಲ್ಲ. ಹೀಗೆ ರಾಜ್ಯ ಬಿಜೆಪಿಯ ಫ್ರಂಟ್‌ಲೈನ್ ನಾಯಕರನ್ನು ಬಿಟ್ಟು ಕುಮಾರಸ್ವಾಮಿ ವಿರುದ್ಧ ಸಿದ್ದು ಪಡೆ ನಿರ್ಣಾಯಕ ದಾಳಿ ಮಾಡುತ್ತಿದೆ ಎಂದರೆ, ಅದು ತನ್ನ ಎದುರಾಳಿಯ ಪಟ್ಟ ನೀಡಿರುವುದು ಕುಮಾರಸ್ವಾಮಿ ಅವರಿಗೇ ಹೊರತು ನಮ್ಮ ಫ್ರಂಟ್‌ಲೈನ್ ಲೀಡರುಗಳಿಗಲ್ಲ. ಆದ್ದರಿಂದ ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರದ ವಿರುದ್ಧ ಸೆಣಸುತ್ತಿರುವ ಮಿತ್ರಕೂಟದಲ್ಲಿ ಕುಮಾರಸ್ವಾಮಿ ಅವರೇ ಎಫೆಕ್ಟಿವ್' ಅಂತ ಅಮಿತ್ ಶಾ ಅವರಿಗೆ ಮೆಸೇಜುಗಳು ತಲುಪುತ್ತಿವೆ. ಅರ್ಥಾತ್, ಮಿತ್ರಕೂಟದ ಪವರ್‌ಫುಲ್ ನಾಯಕರಾಗಿ ಕುಮಾರಸ್ವಾಮಿ ಎಮರ್ಜ್ ಆಗಿದ್ದಾರೆ.

ಲಾಸ್ಟ್ ಸಿಪ್: ಅಂದ ಹಾಗೆ, ಕರ್ನಾಟಕ ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆಯುವುದು ಖಚಿತ ಎಂಬ ತೀರ್ಮಾನಕ್ಕೆ ಬಂದಿರುವ ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಇದಕ್ಕಾಗಿ ಪಕ್ಷವನ್ನು ಅಣಿಗೊಳಿಸಲು ಸಜ್ಜಾಗುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಆಗಸ್ಟ್ 25ರ ಭಾನುವಾರ ಪಕ್ಷದ ಕಚೇರಿ ಜೆ.ಪಿ.ಭವನದಲ್ಲಿ ಕೋರ್ ಕಮಿಟಿ ಸಭೆ ನಡೆದಿದ್ದು ವಿವಿಧ ಜಿಲ್ಲೆಗಳಿಗೆ ಉಸ್ತುವಾರಿಗಳನ್ನು ನೇಮಕ ಮಾಡಲಾಗಿದೆ. ಈಗಿನಿಂದಲೇ ಪಕ್ಷದ ಸಂಘಟನೆಗೆ ಹೆಚ್ಚಿನ ಆದ್ಯತೆ ಕೊಡಬೇಕು. ಮಿನಿಮಮ್ ನೂರು ಕ್ಷೇತ್ರಗಳಲ್ಲಿ ಗೆಲ್ಲುವ ಅಭ್ಯರ್ಥಿಗಳನ್ನು ಗುರುತಿಸಬೇಕು. ಉಳಿದಂತೆ ಬೇರೆ ಕಡೆ ಬಿಜೆಪಿಯ ಗೆಲುವಿಗೆ ಶಕ್ತಿ ತುಂಬಲು ನಮಗೆ ಸಾಧ್ಯವಾಗಬೇಕು ಎಂಬುದು ಕುಮಾರಸ್ವಾಮಿ ಟಾರ್ಗೆಟ್. ಜೆಡಿಎಸ್ ಮೂಲಗಳ ಪ್ರಕಾರ, ಈಗಲ್ಲ ಇನ್ನೊಂದು ವರ್ಷಕ್ಕಾದರೂ ಕರ್ನಾಟಕ ವಿಧಾನಸಭೆಗೆ ಉಪಚುನಾವಣೆ ನಡೆಯುವುದು ಖಚಿತ ಎಂಬುದು ಕುಮಾರಸ್ವಾಮಿ ಲೆಕ್ಕಾಚಾರ.

ಅಂಬೇಡ್ಕರರನ್ನು ನೆನಪಿಸುವ ಬಾಂಗ್ಲಾ ಅರಾಜಕತೆ!

ವಿಶ್ಲೇಷಣೆ
ಡಾ. ಸುಧಾಕರ ಹೊಸಳ್ಳಿ
vveditoped@gmail.com

ಸಂವಿಧಾನ ಶಿಲ್ಪಿ ಅಂಬೇಡ್ಕರರ ನೆನಪು ಈಗ ಭಾರತಕ್ಕಲ್ಲದೆ ಇಡೀ ಜಗತ್ತನ್ನು ಕಾಡುತ್ತಿದೆ. ಅದಕ್ಕೆ ಕಾರಣ ಬಾಂಗ್ಲಾದಲ್ಲಿನ ಅರಾಜಕತೆ. ಅಂಬೇಡ್ಕರರು ಯಾವುದಾದರೂ ವಿಷಯದ ಕುರಿತು ಮಾತನಾಡಿದರೆ ಅಥವಾ ಲಿಖಿತ ರೂಪದಲ್ಲಿ ದಾಖಲಿಸಿದರೆ, ಅದರ ಹಿಂದೆ ಪರಿಪೂರ್ಣವಾದ ಸಂಶೋಧನೆ ಇದ್ದೇ ಇರುತ್ತಿತ್ತು.

ಇತ್ತೀಚೆಗೆ ಬಾಂಗ್ಲಾದಲ್ಲಿ ಮತ್ತು ಹಿಂದೆ ಸಿರಿಯಾ, ಈಜಿಪ್ಟ್, ಅಫ್ಘಾನಿಸ್ತಾನ ಮುಂತಾದ ಕಡೆ ಮತೀಯ ಕಾರಣಕ್ಕೆ ಸಾಂವಿಧಾನಿಕ ಅರಾಜಕತೆ ಸೃಷ್ಟಿಯಾಗಿದ್ದನ್ನು ನಾವೆಲ್ಲ ಕಂಡಿದ್ದೇವೆ; ಆದರೆ ಇಂಥ ಪರಿಸ್ಥಿತಿ ಉದ್ಭವವಾಗುವುದಕ್ಕಿರುವ ಹಿನ್ನೆಲೆಯನ್ನು ಬಾಬಾ ಸಾಹೇಬರು 1936ರ ಕಾಲಘಟ್ಟದಲ್ಲೇ ವಿವರಿಸಿದ್ದರು. ಇಂಥ ಹಿನ್ನೆಲೆಯನ್ನು ವಿಸ್ತೃತ ಆಧಾರಗಳುಳ್ಳ ದಾಖಲೆಯೊಂದಿಗೆ 'Thoughts on Pakistan', 'Pakistan Or The Partition of India' ಎಂಬ ಕೃತಿಗಳಲ್ಲಿ ಸಮಾಜಕ್ಕೆ ಕಟ್ಟಿಕೊಟ್ಟಿದ್ದರು. ಇಸ್ಲಾಂನ ಮತೀಯ ವಿಸ್ತರಣಾವಾದ ಜಗತ್ತಿಗೆ ಹೇಗೆ ಅಪಾಯಕಾರಿ ಆಗಬಲ್ಲದು, ಸಮಾನತೆಯ ತತ್ವದಿಂದ ಮುಸ್ಲಿಮರು ಹೇಗೆ ದೂರ ಉಳಿದಿದ್ದಾರೆ, ಮುಸ್ಲಿಂ ಅಲ್ಲದವನು ಬದುಕಲು ಅರ್ಹನೇ ಅಲ್ಲ ಎಂಬ 'ಕಾಫಿರ್ ಪದ್ಧತಿ'ಯ ದುಷ್ಪರಿಣಾಮ ಇವೆಲ್ಲವನ್ನೂ ಅಂಬೇಡ್ಕರರು ಎಳೆಎಳೆಯಾಗಿ ಮತ್ತು ನಿರ್ಭಯವಾಗಿ ಬಿಚ್ಚಿಟ್ಟಿದ್ದರು.

ದೇಶದ ಮಹಿಳಾ ಪ್ರಧಾನಿಯ ಮನೆಯನ್ನು ಲೂಟಿ ಮಾಡಿದ್ದೂ ಅಲ್ಲದೆ, ಅವರ ಒಳ ಉಡುಪುಗಳನ್ನು ದೋಚಿ ಹೊರಜಗತ್ತಿಗೆ ಅದನ್ನು ಪ್ರದರ್ಶಿಸುವ ಬಾಂಗ್ಲಾದ ಕೆಲ ವಿಕ್ಷಿಪ್ತ ಜನರ ಕ್ರೂರತೆಯನ್ನು ಹೀಗೆ 88 ವರ್ಷಗಳ ಹಿಂದೆಯೇ ದಾಖಲೆ ಸಮೇತ ವಿವರಿಸಿ ಎಚ್ಚರಿಸಿದ್ದ ಅಂಬೇಡ್ಕರರದ್ದು ಅದೆಂಥಾ ದೂರದೃಷ್ಟಿಯಲ್ಲವೇ?

ಮೀಸಲಾತಿಯ ಕಾರಣ ಮುಂದುಮಾಡಿ ಆರಂಭವಾದ ಒಂದು ಹೋರಾಟ ಇಡೀ ದೇಶವನ್ನೇ ಅಂಧಕಾರದಲ್ಲಿ ಮುಳುಗಿಸುವ ಮಟ್ಟಕ್ಕೆ ಬೆಳೆದು ನಿಂತಿದ್ದರ ಹಿಂದೆ ಮತೀಯ ವಿಸ್ತರಣಾವಾದದ ಉದ್ದೇಶ ಇದ್ದೇ ಇದೆ ಎಂಬುದಕ್ಕೆ ಅಲ್ಲಿನ ಮತಾಂಧರು ಹತ್ತಾರು ಸಾಕ್ಷಿಗಳನ್ನು ನೀಡಿದ್ದಾರೆ. 1971ರ ಬಾಂಗ್ಲಾದ ಉಗಮದ ಸಂದರ್ಭದಿಂದ ಇಲ್ಲಿಯವರೆಗೆ ಧರ್ಮಾತೀತವಾಗಿ ಅನ್ನದಾನ ಮಾಡುತ್ತಾ ಬಂದಿದ್ದ ಇಸ್ಕಾನ್ ಸಂಸ್ಥೆಯ ಮೇಲೆ ದಾಳಿ ಮಾಡಿರುವುದು, ಹಿಂದೂ ದೇವಾಲಯಗಳನ್ನು ನಾಶಮಾಡಿರುವುದು, ಹಿಂದೂಗಳ ಹತ್ಯೆ, ಅತ್ಯಾಚಾರ, ಅಪಹರಣ ಇವುಗಳ ಹಿಂದೆ ಮತಾಂಧರ ಹಿಡನ್ ಅಜೆಂಡಾ ಇರುವುದು ದೃಢಪಟ್ಟಿದೆ.

ಮತಾಂಧತೆ, ಮಹಿಳಾ ಅಸಮಾನತೆ, ವಿಜ್ಞಾನ-ವಿರೋಧಿ ಶರಿಯಾ ಆಚರಣೆ ಮುಂತಾದವುಗಳ ಅಪಾಯಗಳ ಕುರಿತು ಅಂಬೇಡ್ಕರ್ ಅವರಷ್ಟು ಗಟ್ಟಿಯಾಗಿ ಹೇಳಿದ, ತನ್ಮೂಲಕ ಇಸ್ಲಾಂ ಅನ್ನು ವಿಮರ್ಶಿಸಿದ ಮತ್ತೊಬ್ಬ ಭಾರತೀಯ ಇಲ್ಲವೆನ್ನಬೇಕು. ಪ್ರಸ್ತುತ ಬಾಂಗ್ಲಾದಲ್ಲಿನ ಅರಾಜಕತೆಯ ಘಟನಾವಳಿಗಳನ್ನು ಅಂಬೇಡ್ಕರರ ನಿರ್ದೇಶನದ ಪರಿಧಿಯಲ್ಲಿ ನಿಂತು ನೋಡುವುದಾದರೆ, 'ಇಡೀ ಜಗತ್ತಿನಲ್ಲಿ ಮುಸ್ಲಿಮರು ಸಮಾನತೆಯಿಂದ ಬಹುದೊಡ್ಡ ಫಾಸಿಗೊಳಗಾಗಿದ್ದಾರೆ, ಅವರು ಸಮಾನತೆಯನ್ನು ಎಂದೂ ಬಯಸುವುದಿಲ್ಲ' ಎಂದು ಅಂಬೇಡ್ಕರ್ ಅಭಿಪ್ರಾಯಪಟ್ಟಿದ್ದಾರೆ. 'ಮುಸ್ಲಿಂ ದಾಳಿಕೋರರು ಸಾಮ್ರಾಜ್ಯ ವಿಸ್ತರಣೆಯ ಭಾಗವಾಗಿ ಭಾರತದ ಭೂಭಾಗದ ಮೇಲೆ ಹಲವಾರು ಬಾರಿ ದಾಳಿಮಾಡಿದ್ದು ಇತಿಹಾಸದಲ್ಲಿ ದಾಖಲಾಗಿದೆ. ಭಾರತದ ಮೇಲೆ ದಾಳಿ ಮಾಡಿದ ಮಿಕ್ಕ ಪರಕೀಯರಿಗಿಂತ ಮುಸ್ಲಿಂ ದಾಳಿಕೋರರ ಅಜೆಂಡಾ ಭಿನ್ನವಾದದ್ದು. ಅಧಿಕಾರ ದಕ್ಕಿಸಿಕೊಳ್ಳುವುದರ ಜತೆಗೆ ಈ ನೆಲಮೂಲದ ಹಿಂದೂಧರ್ಮವನ್ನು, ಅದರ ಆಚರಣೆಗಳನ್ನು ನಾಶಮಾಡುವ ಉದ್ದೇಶವನ್ನು ಈ ದಾಳಿಕೋರರು ಹೊಂದಿದ್ದರು' ಎಂಬ ತಲಸ್ಪರ್ಶಿ ವಿಚಾರವನ್ನು ಅಂಬೇಡ್ಕರರು ತಮ್ಮ ಬರವಣಿಗೆಯಲ್ಲಿ ವಸ್ತುನಿಷ್ಠವಾಗಿ ದಾಖಲಿಸಿದ್ದಾರೆ. 'ಭಾರತದ ಮೇಲಿನ ತನ್ನ ದಾಳಿಗಳ



ಉದ್ದೇಶ ಪವಿತ್ರ ಯುದ್ಧವೆಂದು ಘಸ್ನಿ ಮಹಮ್ಮದನೂ ಭಾವಿಸಿದ್ದ. ವಿಗ್ರಹ ಗಳಿದ್ದ ದೇವಾಲಯಗಳನ್ನು ಕೆಡವಿ ಇಸ್ಲಾಂ ಅನ್ನು ಸ್ಥಾಪಿಸಿದ. ಆತನು ನಗರಗಳನ್ನು ಆಕ್ರಮಿಸಿಕೊಂಡು ವಿಗ್ರಹಾರಾಧಕರನ್ನು ನಾಶಮಾಡುವುದರ ಮೂಲಕ ಮುಸಲ್ಮಾನರನ್ನು ಸಂತೃಪ್ತಿ ಗೊಳಿಸಿದ. ನಂತರ ತನ್ನ ದೇಶಕ್ಕೆ ಹಿಂದಿರುಗಿ, ಇಸ್ಲಾಂಗಾಗಿ ಗಳಿಸಿದ ವಿಜಯಗಳ ಲೆಕ್ಕವನ್ನು ಘೋಷಿಸಿದ. ಅಲ್ಲದೆ, ಪ್ರತಿ ವರ್ಷವೂ ಹಿಂದೂಗಳ ವಿರುದ್ಧ ಪವಿತ್ರ ಯುದ್ಧ ಮಾಡುತ್ತೇನೆಂದು ಶಪಥಮಾಡಿದ' ಎಂದು ಅಂಬೇಡ್ಕರ್ ದಾಖಲಿಸಿದ್ದಾರೆ.

ಭಾರತದ ಮೇಲಿನ ಮಹಮ್ಮದ್ ಘೋರಿಯ ದಾಳಿಗಳ ಹಿಂದೆ ಇಂಥದೇ ಉನ್ಮಾದಗಳ ಪ್ರೇರಣೆಯಿತ್ತು. ಹಸನ್ ನಿಸಾಮಿ ಎಂಬ ಇತಿಹಾಸಕಾರನು ಘೋರಿಯ ಕೃತ್ಯವನ್ನು ಹೀಗೆ ವಿವರಿಸಿದ್ದಾನೆ: 'ಕುಧರ್ಮ ಮತ್ತು ಪಾಪಪೂರಿತ ಹಿಂದೂಗಳ ದೇಶದ ಕೊಳಚೆಯನ್ನು ಆತ ತನ್ನ ಕತ್ತಿಯ ಸಹಾಯದಿಂದ ತೊಳೆದ. ಅಲ್ಲದೆ, ಬಹುದೇವತಾರಾಧನೆಯ ಮುಳ್ಳಿನಿಂದ ಮತ್ತು ವಿಗ್ರಹಾರಾಧನೆಯ ಅಪವಿತ್ರತೆಯಿಂದ ಆ ದೇಶವನ್ನು ಮುಕ್ತಗೊಳಿಸಿದ. ತನ್ನ ರಾಜಶಕ್ತಿ ಮತ್ತು ಧೈರ್ಯಗಳಿಂದ ಯಾವುದೇ ಒಂದು ದೇವಾಲಯವೂ ಉಳಿಯಲು ಅವನು ಬಿಡಲಿಲ್ಲ'.

ಭಾರತದ ಮೇಲಿನ ತನ್ನ ದಾಳಿಯನ್ನು ತೈಮೂರನು ತನ್ನ ಆತ್ಮಕಥೆಯಲ್ಲಿ ವಿವರಿಸುತ್ತಾ, 'ಕುಧರ್ಮಿಗಳ ವಿರುದ್ಧದ ಕದನ ಪರಂಪರೆಯ ನೇತೃತ್ವ ವಹಿಸುವುದೇ ಹಿಂದೂಸ್ತಾನದ ಮೇಲಿನ ನನ್ನ ದಂಡಯಾತ್ರೆಯ ಉದ್ದೇಶ' ಎಂದು ಹೇಳಿಕೊಂಡಿದ್ದಾನೆ. 'ಮಹಮ್ಮದ ಮತ್ತು ಆತನ ಕುಟುಂಬದ ವರ್ಗದವರ ಮೇಲೆ ದೇವರ ಆಶೀರ್ವಾದವಿರಲಿ. ಮಹಮ್ಮದನ ಆಹ್ವಾನಾನುಸಾರವಾಗಿ ಕುಧರ್ಮಿಗಳನ್ನು ನಿಜವಾದ ಧರ್ಮಕ್ಕೆ ಮತಾಂತರಿಸುವುದು, ಅವರಲ್ಲಿನ ಅಪನಂಬಿಕೆಯನ್ನು ಕಳೆಯುವುದು ಮತ್ತು ಬಹುದೇವತಾ ರಾಧನೆಗಳಿಂದ ಆ ಭೂಮಿಯನ್ನು ಮುಕ್ತಗೊಳಿಸಿ ಪವಿತ್ರ ವಾಗಿಸುವುದು, ದೇವಸ್ಥಾನಗಳು ಮತ್ತು ವಿಗ್ರಹಗಳನ್ನು ಧ್ವಂಸ ಮಾಡುವುದು ಮುಂತಾದ ಕಾರ್ಯಗಳನ್ನೆಸಗಿದಾಗ ನಾವು ದೇವರ ದೃಷ್ಟಿಯಲ್ಲಿ ಧರ್ಮದ ಎತ್ತರದ ಸೈನಿಕರೂ ಆಗುತ್ತೇವೆ' ಎಂಬ ಆಶಯ ಅವನಿಂದ ವ್ಯಕ್ತವಾಗಿತ್ತು.

ಹಿಂದೂಗಳ ಎದೆಯಲ್ಲಿ ನಡುಕ ಹುಟ್ಟಿಸುವಂಥ ತಂತ್ರಗಳನ್ನೇ ಘಜ್ನಿ ಮಹಮ್ಮದನು ಮೊದಲಿನಿಂದಲೂ ಅಳವಡಿಕೊಂಡಿದ್ದ. ಕ್ರಿ.ಶ. 1001ರಲ್ಲಿ, ರಾಜ ಜಯಪಾಲನ ಪರಾಜಯದ ನಂತರ, ಆತನನ್ನು ಬೀದಿಗಳಲ್ಲಿ ಎಳೆದೊಯ್ಯಬೇಕೆಂಬ ಆಜ್ಞೆಯಿತ್ತ. ಏಕೆಂದರೆ, ಜಯಪಾಲನಿಗಾಗುವ ಅಪಮಾನ, ಅವನ ಬಂಧನ ಮತ್ತು ಮಾನಭಂಗಗಳನ್ನು ಆತನ ಮಕ್ಕಳು ಹಾಗೂ ಸಾಮಂತರು ನೋಡಬೇಕೆಂಬುದು ಮತ್ತು ಕುಧರ್ಮಿಗಳ ದೇಶದ ಮೂಲಕ ಇಸ್ಲಾಂನ ಭೀತಿಯು ಹೊರದೇಶಗಳಿಗೂ ತಲುಪಬೇಕೆಂಬುದು ಅವನ ಉದ್ದೇಶವಾಗಿತ್ತು. ಕುಧರ್ಮಿಗಳನ್ನು ಬಲಿ ಕೊಡುವುದು ಮಹಮ್ಮದನಿಗೆ ವಿಶೇಷ ಸಂತುಷ್ಟಿಯನ್ನು ಕೊಟ್ಟ ಏಕೈಕ ಸಂಗತಿಯೆಂದು ತೋರುತ್ತದೆ. ಕ್ರಿ.ಶ.1019ರಲ್ಲಿ ಚಾಂದ್ರಾಯ್ ಮೇಲೆ ಮಾಡಲಾದ ಒಂದು ದಾಳಿಯಲ್ಲಿ ಅನೇಕ ಕುಧರ್ಮಿಗಳನ್ನು ಕೊಲ್ಲಲಾಯಿತು ಅಥವಾ ಸೆರೆಯಾಳುಗಳಾಗಿ ಒಯ್ಯಲಾಯಿತು. ಕುಧರ್ಮಿಗಳನ್ನು ಬಲಿಕೊಟ್ಟು, ಸೂರ್ಯ ಮತ್ತು ಅಗ್ನಿಪೂಜಕರನ್ನು ಕೊಂದು ತಮ್ಮನ್ನು ತಾವೇ ತೃಪ್ತಿಪಡಿಸಿಕೊಳ್ಳುವ ಕೃತ್ಯವು ಮುಸಲ್ಮಾನರಿಗೆ ಅವರು ಕೊಳ್ಳೆಹೊಡೆದ ಸಂಪತ್ತಿಗಿಂತ ಹೆಚ್ಚು ಮಾನ್ಯವಾಗಿತ್ತು ಎಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಎಂಟು ದಶಕಗಳಿಗೂ ಸಾಕಷ್ಟು ಹಿಂದೆಯೇ ಅಂಬೇಡ್ಕರರು ಕೊಟ್ಟ ಎಚ್ಚರಿಕೆಯ ನಂತರವೂ, ರಾಜಕೀಯ ಕಾರಣಕ್ಕಾಗಿ, ಸೈದ್ಧಾಂತಿಕ ವಿರೋಧದ ದೃಷ್ಟಿಯಿಂದ ಅವರ ಚಿಂತನೆಗಳನ್ನು ಸೂಕ್ಷ್ಮ ಕಣ್ಣಿನಿಂದ ನೋಡಲಾಗಲೇ ಇಲ್ಲ ಎಂಬುದು ನಿರ್ವಿವಾದ. ನೆರೆಯ ಬಾಂಗ್ಲಾದ ಅರಾಜಕತೆಯನ್ನು ಈಗ ಲಾದರೂ ಅಂಬೇಡ್ಕರರ ಸಂಶೋಧನೆಯ ಮಾರ್ಗಸೂಚಿ ಅಡಿಯಲ್ಲಿ ನೋಡಬೇಕಾದದ್ದು, ವಿಮರ್ಶೆ ಮಾಡಬೇಕಾ ದದ್ದು ಹಾಗೂ ಪರಿಹಾರ ಸೂಚಕಗಳ ಬಗೆಗೆ ಅವಲೋಕನ ಮಾಡಬೇಕಾದದ್ದು ಪ್ರತಿಯೊಬ್ಬ ಪ್ರಜ್ಞಾವಂತ ಭಾರತೀಯನ ಆದ್ಯ ಕರ್ತವ್ಯವೇ ಆಗಿದೆ.

(ಆಧಾರ: ಅಂಬೇಡ್ಕರರ ಬದುಕು-ಬರಹಗಳು ಮತ್ತು ಭಾಷಣಗಳು, ಸಂಪುಟ-6. ಲೇಖಕರು ಸಂವಿಧಾನ ತಜ್ಞರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹೆತ್ತವರ ನೋಯಿಸದಿರಿ

ರೇಣುಕಾಸ್ವಾಮಿ ಎಂಬಾತನ ಕೊಲೆ ಪ್ರಕರಣವು ಎಲ್ಲರ ಗಮನ ಸೆಳೆಯಲು ಅದರಲ್ಲಿ ಪ್ರಸಿದ್ಧ ನಟನ ಪಾತ್ರವಿದ್ದುದೇ ಕಾರಣ. 'ಪ್ರಕರಣ ನಡೆದಿದ್ದು ಏಕೆ? ಹೇಗೆ?' ಎನ್ನುವುದನ್ನು ಸುದ್ದಿವಾಹಿನಿಗಳು ಎಳೆಎಳೆಯಾಗಿ ಬಿಚ್ಚಿ ತೋರಿಸಿವೆ. ಮಕ್ಕಳ ಮರಣವೆಂಬುದು ಹೆತ್ತವರ ಪಾಲಿಗೆ ದಾರುಣ ಘಟನೆ. ಕಾರಣ, ಪುತ್ರಶೋಕ ನಿರಂತರ. ಮಗನ ಕೊಲೆಯಿಂದಾಗಿ ಹೆತ್ತವರು ಈಗಾಗಲೇ ಜರ್ಜರಿತರಾಗಿರುವಾಗ, ಆತನು ಸಾಯುವ ಕೊನೆಯ ಕ್ಷಣದಲ್ಲಿ ಅನುಭವಿಸಿದ ಚಿತ್ರಹಿಂಸೆ ಮತ್ತು ಆತ ಕಣ್ಣೀರಿಡುತ್ತ ರಕ್ತಸಿಕ್ತ ಕೈಗಳನ್ನು ಜೋಡಿಸಿ ಬೇಡಿಕೊಳ್ಳುವ ದೃಶ್ಯಗಳನ್ನು ಸಿನಿಮಾದಂತೆ ತೋರಿಸುತ್ತಾ ಸುದ್ದಿವಾಹಿನಿಯ ನಿರೂಪಕರು ವರ್ಣಿಸುತ್ತಿದ್ದರೆ, ಅದನ್ನು ವೀಕ್ಷಿಸುವ ಹೆತ್ತವರ ದುಃಖ ಮತ್ತು ನೋವು ತೀವ್ರವಾಗುವುದಿಲ್ಲವೇ? ಕಾಲ್ಪನಿಕ ಕಥಾಚಿತ್ರದಲ್ಲಿನ ಭೀಕರ ದೃಶ್ಯಗಳನ್ನು ನೋಡಲು ಪ್ರೇಕ್ಷಕರಿಗೆ ಕಷ್ಟವಾಗುತ್ತದೆ ಎಂಬ ಕಾರಣಕ್ಕೇ ಸೆನ್ಸಾರ್ ಮಂಡಲಿ ಅವಕ್ಕೆ ಕತ್ತರಿ ಪ್ರಯೋಗ ಮಾಡುತ್ತದೆ; ಆದರೆ ಸುದ್ದಿವಾಹಿನಿಗಳಿಗೆ ಇಂಥ ಯಾವ ಲಗಾಮೂ ಇಲ್ಲವೇ? ಹೆತ್ತ ಕರುಳಿಗೆ ಮಗನ ಶವದಲ್ಲೂ ಜೀವಂತ ಮಗನೇ ಕಾಣುತ್ತಾನೆ. ಕಾದಂಬರಿಕಾರ ಅ.ನ.ಕೃಷ್ಣರಾಯರ ಅಂತಿಮ ಯಾತ್ರೆಯ ವೇಳೆ ಅವರ ಕಳೇಬರಕ್ಕೆ ಬಿಸಿಲು ತಟ್ಟದಿರಲೆಂದು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಕೊಡೆಹಿಡಿದ ಸಂಗತಿಯನ್ನು ಮರೆಯಲು ಸಾಧ್ಯವೇ? ಅ.ನ.ಕೃ. ಅವರ ತಂದೆಯೂ ಅಲ್ಲದ, ತಾಯಿಯೂ ಅಲ್ಲದ ಮಾಸ್ತಿಯವರಿಗೇ ಅಷ್ಟು ನೋವಾಗಿರಬೇಕಾದರೆ, ಸಾಯುವಾಗ ಮಗ ಅನುಭವಿಸಿದ ಕ್ರೌರ್ಯವನ್ನು ಮತ್ತೆಮತ್ತೆ ತೋರಿಸಿದರೆ ಹೆತ್ತಕರುಳಿಗೆ ಅದೆಷ್ಟು ನೋವಾದೀತು? ಇಂಥ ದೃಶ್ಯಗಳ ಪ್ರಸಾರವನ್ನು ತಡೆಹಿಡಿಯಿರಿ ಎಂದು ಹೇಳಬೇಕೆಂದು ಯಾರಿಗೂ ಅನಿಸಲೇ ಇಲ್ಲವೇ? ಕೆಲವು ವರ್ಷಗಳ ಹಿಂದೆ ಇಡೀ ಬೆಂಗಳೂರು ನೋಡುತ್ತಿರುವಂತೆ, ಲ್ಯಾಂಡಿಂಗ್ ವೇಳೆ ವಿಮಾನವೊಂದು ಸ್ಫೋಟಿಸಿದಾಗ ನಮ್ಮ ಸುದ್ದಿವಾಹಿನಿಗಳು ಸುಟ್ಟ ದೇಹಗಳ ದೃಶ್ಯವನ್ನು ಬಿತ್ತರಿಸಿದ್ದು ಮತ್ತು ಬಂಧುಗಳು ಆಕ್ಷೇಪಿಸಿದಾಗ ಅದನ್ನು ನಿಲ್ಲಿಸಿದ್ದು ಜನರಿಗೆ ಇನ್ನೂ ನೆನಪಿದೆ. ದುರಂತ ಪ್ರಸಂಗಗಳನ್ನು 'ರೋಚಕವಾಗಿಸುವ' ಧೋರಣೆಯನ್ನು ನಮ್ಮ ಸುದ್ದಿವಾಹಿನಿಗಳು ಕೈಬಿಡುವುದು ಯಾವಾಗ? 2004-05ರಲ್ಲಿ ಜಪಾನ್‌ನಲ್ಲಿ ಸುನಾಮಿಯಿಂದ ಸಾವಿರಾರು ಜನರು ಸತ್ತರೂ ಅಲ್ಲಿಯ ಸುದ್ದಿವಾಹಿನಿಗಳು ಒಂದೇ ಒಂದು ಮೃತದೇಹವನ್ನು ತೋರಿಸದೆ ಮೆರೆದ ಸಂಯಮ ಮತ್ತು ಸಂಸ್ಕೃತಿ ನಮ್ಮವರಿಗೆ ಮೇಲ್ಪಂಕ್ತಿಯಾಗಬೇಕು.

- ಸತ್ಯಬೋಧ, ಬೆಂಗಳೂರು

ಕಾಲ ಕೆಟ್ಟುಹೋಯ್ತು!

ಕಳ್ಳತನ, ದರೋಡೆ ಮತ್ತು ಲೂಟಿಯಂಥ ಕುವಿದ್ಯೆಗಳನ್ನು ಕಲಿಸಲು ಮಧ್ಯಪ್ರದೇಶದಲ್ಲಿ ಒಂದು ಶಾಲೆಯಿದ್ದು, ಆರು ತಿಂಗಳ ಅವಧಿಯ ಈ ಕೋರ್ಸ್‌ಗೆ 50 ಸಾವಿರದಿಂದ 3 ಲಕ್ಷ ರು.ವರೆಗೆ ಶುಲ್ಕ ವಿಧಿಸಲಾಗುತ್ತದೆ ಎಂಬ ಸುದ್ದಿ ಕೆಲ ದಿನಗಳ ಹಿಂದೆ ವರದಿಯಾಗಿದೆ. ಸೈಬರ್ ಅಪರಾಧವನ್ನು ಹೇಗೆ ಮಾಡಬೇಕೆಂಬುದನ್ನು ಜಾರ್ಖಂಡ್ ರಾಜ್ಯದ ಒಂದು ಊರಿನಲ್ಲಿ ಕಲಿಸಲಾಗುತ್ತದೆ ಎಂಬ ಸುದ್ದಿ ಕೆಲ ವರ್ಷಗಳ ಹಿಂದೆ ಮಾಧ್ಯಮಗಳಲ್ಲಿ ವರದಿಯಾಗಿತ್ತು. ಇದನ್ನು ಓದಿದ ಮತ್ತು ನೋಡಿದ ನಂತರ, 'ನಮ್ಮ ಬದುಕಿನಲ್ಲಿ ಈ ಪಾಪಿ ಕಣ್ಣುಗಳು ಇನ್ನೂ ಏನೇನನ್ನು ನೋಡಬೇಕೋ?' ಎಂದು ಪ್ರಜ್ಞಾವಂತರು ವ್ಯಥಿಸುವಂತಾಗಿದೆ. 'ಗುರುವಿಲ್ಲದೆಯೇ ಬರುವಂಥದ್ದು ಕುವಿದ್ಯೆ' ಎನ್ನಲಾಗುತ್ತಿತ್ತು; ಆದರೆ ಕಳ್ಳತನ, ಲೂಟಿಯನ್ನು ಹೇಳಿಕೊಡುವಷ್ಟರ ಮಟ್ಟಿಗೆ 'ಬೆಳವಣಿಗೆ' ಆಗಿದೆ ಎಂದರೆ, ಅದು 'ಶಾಲೆ' ಎಂಬ ಪವಿತ್ರ ಪರಿಕಲ್ಪನೆಗೆ ಆದ ಅವಮಾನವೇ ಸರಿ. ಇಂಥ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುವವರೂ ಇದ್ದಾರೆ ಎಂಬುದು ಇದಕ್ಕಿಂತ ನೋವಿನ ಸಂಗತಿ. 'ದಾರಿ ಯಾವುದಾದರೇನು? ಬದುಕುವುದು ಮುಖ್ಯ' ಎಂಬುದು ಪ್ರಾಯಶಃ ಇಂಥವರ ಸಿದ್ಧಾಂತ ಆಗಿರಲಿಕ್ಕೂ ಸಾಕು!

-ರಮಾನಂದ ಎಸ್., ಬೆಂಗಳೂರು

ಗುಂಡಿ ಗಂಡಾಂತರ

ಕೆಲ ದಿನಗಳ ಹಿಂದೆ ಸುರಿದ ಧಾರಾಕಾರ ಮಳೆಗೆ ಬೆಂಗಳೂರು ಮಹಾನಗರಿಯ ರಸ್ತೆಗಳು ತೀರಾ ಹದಗೆಟ್ಟಿವೆ. ಇಲ್ಲಿ ಸಂಚರಿಸಲು ವಾಹನ ಸವಾರರು ನಿಜಾರ್ಥದಲ್ಲಿ ಸರ್ಕಸ್ ಮಾಡಬೇಕಾಗಿ ಬಂದಿದೆ. ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ, ಸಿಲಿಕಾನ್ ಸಿಟಿ,

ಉದ್ಯಾನ ನಗರಿ ಎಂದೆಲ್ಲಾ ಕರೆಸಿಕೊಳ್ಳುವ ಬೆಂಗಳೂರಿನ ದುಸ್ಥಿತಿ. ಇನ್ನು ಮಹಾನಗರಿಯ ಮೆಜೆಸ್ಟಿಕ್ ಬಸ್ ನಿಲ್ದಾಣದ ಆಸುಪಾಸಿನಲ್ಲಿ ಕಾಣಬರುವ ಗುಂಡಿಗಳನ್ನೊಮ್ಮೆ ನೋಡಿದರೆ, 'ರಾಜಧಾನಿಯಲ್ಲೇ ಪರಿಸ್ಥಿತಿ ಹೀಗಿದ್ದರೆ ಮಿಕ್ಕ ಪಟ್ಟಣಗಳು ಮತ್ತು ಹಳ್ಳಿಗಳಲ್ಲಿ ಪರಿಸ್ಥಿತಿ ಅದೆಷ್ಟು ಅಧ್ವಾನವಾಗಿರಬಹುದು?' ಎಂದು ಯಾರಾದರೂ ಊಹೆಗೆ ಜಾರುವಂತಾಗುತ್ತದೆ. ರಸ್ತೆ ನಿರ್ವಹಣೆಯ ಹೊಣೆಹೊತ್ತವರಿಗೆ ಸಾರ್ವಜನಿಕರು, ವಾಹನ ಸವಾರರು ಎಷ್ಟೇ ಮನವಿ ಮಾಡಿದರೂ ರಸ್ತೆಗಳ ದುರಸ್ತಿಯಾ ಗುತ್ತಿಲ್ಲ. ಹೀಗಾಗಿ ಜನರು ಹೈರಾಣಾಗಿ ಹೋಗಿದ್ದಾರೆ. ನಗರದ ರಸ್ತೆಗುಂಡಿಗಳನ್ನು ಮುಚ್ಚಿ ಎಂದು ನ್ಯಾಯಾಲಯ ಗುಡುಗಿ ದರೆ ಮಾತ್ರವೇ ಸಂಬಂಧಿತ ಅಧಿಕಾರಿಗಳು ತಡ ಬಡಾಯಿಸಿ ಕೊಂಡು ಎಚ್ಚರಗೊಳ್ಳುತ್ತಾರೆ, ಇಲ್ಲ ಅಂದ್ರೆ ಇಲ್ಲ!

-ನಬಿ ಆರ್.ಬಿ., ದೋಟಿಹಾಳ

ಮೌಲ್ಯ ಕುಸಿಯದಿರಲಿ

ನಿಗದಿತ ಹೊಣೆಗಾರಿಕೆಯ ನೆರವೇರಿಕೆಯಲ್ಲಿ ಮತ್ತು ಕೆಲಸದಲ್ಲಿ ದಕ್ಷತೆ ತೋರಿದ ಶಿಕ್ಷಕರಿಗೆ, ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಪ್ರತಿ ವರ್ಷ 'ಉತ್ತಮ ಶಿಕ್ಷಕ' ಪ್ರಶಸ್ತಿ ನೀಡುವುದು ವಾಡಿಕೆ. ಆದರೆ ಇತ್ತೀಚಿನ ದಿನಗಳಲ್ಲಿ, ಪ್ರಶಸ್ತಿ ಪಡೆಯುತ್ತಿರುವ ಕೆಲ ಶಿಕ್ಷಕರನ್ನು ಗಮನಿಸಿದಾಗ, ಈ ಗೌರವಕ್ಕೆ ಇವರು ನಿಜವಾಗಿಯೂ ಅರ್ಹರೇ? ಎಂಬ ಪ್ರಶ್ನೆ ಮೂಡದಿರದು.

ಈ ಪ್ರಶಸ್ತಿ ಪಡೆಯಲು ಬಯಸುವ ಶಿಕ್ಷಕರು ಆನ್‌ಲೈನ್‌ನಲ್ಲಿ ಅರ್ಜಿ ಹಾಕಿಕೊಳ್ಳಬೇಕು ಹಾಗೂ ಸ್ವವಿವರ, ಕರ್ತವ್ಯದ ಅವಧಿಯ ಕಾರ್ಯಪಾಲನಾ ವರದಿಗಳನ್ನು ಪ್ರಶಸ್ತಿ ನೀಡುವ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಇವೆಲ್ಲಾ ನೆಪಮಾತ್ರಕ್ಕೆ ಅಷ್ಟೇ ಎಂಬ ಮಾತು ಕೇಳಿಬರುತ್ತಿದೆ. ಪ್ರಶಸ್ತಿಗೆ ನಿಜವಾಗಿಯೂ ಅರ್ಹರಾಗಿರುವ ಶಿಕ್ಷಕರು ಇದರ ಗೊಡವೆಗೆ ಹೋಗುವುದಿಲ್ಲ, ಎಲೆಮರೆಯ ಕಾಯಿಯಂತೆ ತಮ್ಮ ಕರ್ತವ್ಯದಲ್ಲಿ ನಿರತರಾಗಿರುತ್ತಾರೆ. ಇಲಾಖೆಯೇ ಅಂಥ ಶಿಕ್ಷಕರನ್ನು ಗುರುತಿಸಿ, ಪ್ರಶಸ್ತಿಗೆ ಪರಿಗಣಿಸಬೇಕು. ಆದರೆ ನಮ್ಮ ವ್ಯವಸ್ಥೆಯಲ್ಲಿ ನಡೆಯುತ್ತಿರುವುದೇ ಬೇರೆ. ರಾಜಕಾರಣಿಗಳ, ಅಧಿಕಾರಿಗಳ, ಸಂಘ-ಸಂಸ್ಥೆಯವರ ಬಾಲಹಿಡಿಯುವ ಶಿಕ್ಷಕರಿಗೆ ಪ್ರಶಸ್ತಿ ನೀಡಲಾಗುತ್ತಿದೆ. ತನ್ಮೂಲಕ ಪ್ರಶಸ್ತಿಗಳ ಮೌಲ್ಯವು ಕುಸಿಯುತ್ತಿದೆ. ಈ ಪರಿಪಾಠ ನಿಲ್ಲಬೇಕು. ಶಿಕ್ಷಕರನ್ನು ಪ್ರಶಸ್ತಿಗೆ ಆಯ್ಕೆಮಾಡುವ ಸಮಿತಿಯು ಯಾವುದೇ ಆಮಿಷ ಅಥವಾ ಒತ್ತಡಕ್ಕೆ ಒಳಗಾಗದೆ, ಉತ್ತಮ ಶಿಕ್ಷಕರನ್ನು ನಿಷ್ಪಕ್ಷಪಾತವಾಗಿ ಆಯ್ಕೆಮಾಡುವಂಥ ದಿಟ್ಟತನವನ್ನು ಈ ಸಲವಾದರೂ ತೋರುವುದೇ?

-ದೇವರಹಳ್ಳಿ ಲೋಕೇಶ್, ಪಾಂಡವಪುರ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ವಿದ್ಯಾವಂತ ದಡ್ಡನಿಗೂ, ಅವಿದ್ಯಾವಂತ ದಡ್ಡನಿಗೂ ಏನು ವ್ಯತ್ಯಾಸ?
- ಡಿಗ್ರಿ!

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ತಾಯಿ, ತಮ್ಮ ಬಿಟ್ಟು ಯಾರನ್ನೂ ಬಿಡಬೇಡಿ ಅಂತ ದರ್ಶನ್ ಹೇಳಿದ್ದರೂ ರಚಿತಾರಾಮ್ ಭೇಟಿಯಾಗಿದ್ದೇಕೆ?
- ರಾಖಿ ಕಟ್ಟಿಸಿಕೊಳ್ಳಲು ಇರಲಿಕ್ಕಿಲ್ಲ!

● **ಉಳ್ಳಾಲ ಗೋಪಿ, ಬೆಂಗಳೂರು**
ಭಟ್ರೇ, ಸರಕಾರವನ್ನು ಪ್ರಶ್ನಿಸುವ ಹಕ್ಕು ಪ್ರಜೆಗಳಿಗೆ ಇದೆಯಾ?
- ಸದ್ಯ ಆ ಹಕ್ಕು 'ಜಸ್ಟ್ ಆಸ್ಕಿಂಗ್' ಆ ಪ್ರಕಾಶ ರೈಗೆ ಮಾತ್ರ ಇದೆ!

● **ಮಲ್ಲೇಶ ಬಿ., ಚಿತ್ರದುರ್ಗ**
ಭಟ್ರೇ, ತಂದೆಯ ಆಸ್ತಿ ಮಗನಿಗೆ ಸೇರಬೇಕಲ್ಲವೇ?
- ತಂದೆ ಮತ್ತು ಮಗ (ರೇವಣ್ಣ-ಪ್ರಜ್ವಲ್) ಒಬ್ಬಳನ್ನೇ ಆಸ್ತಿ ಮಾಡಿಕೊಳ್ಳಬಾರದಷ್ಟೇ!

● **ರಘು ಹಾಸನ, ಹಾಸನ**
ಭಟ್ರೇ, ಒಳಒಪ್ಪಂದಕ್ಕೆ ಬೇರೆ ಅರ್ಥಗಳಿವೆಯಾ?
- ರೇವಣ್ಣ ಮತ್ತು ಪ್ರಜ್ವಲ್ ಒಂದೇ ಹೆಂಗಸಿನ ಜತೆ ಅಡ್ಜಸ್ಟ್ ಆಗಿರೋದನ್ನು ನೋಡಿದರೆ, ಬೇರೆ ಬೇರೆ ಅರ್ಥಗಳಿವೆ ಅನಿಸುತ್ತೆ!

● **ಪಿ.ರಾಘವೇಂದ್ರ, ಮಂಡ್ಯ**
ಭಟ್ರೇ, ಪತಿ ಮೃತಪಟ್ಟ ಸುದ್ದಿ ಕೇಳಿ ಪತ್ನಿಯೂ ಸತ್ತಳಂತೆ?
- ಸಾವಿನಲ್ಲೂ ಆಕೆ ಗಂಡನನ್ನು ಬಿಡದೇ ಕಾಡಿದಳು ಅಂತಾಯ್ತು!

● **ಚೈತ್ರಶ್ರೀ, ಶಿವಮೊಗ್ಗ**
ಭಟ್ರೇ, ಈಗಿನ ಕಾಲದ ಹುಡುಗರಿಗೆ ಎಲ್ಲವನ್ನೂ ಬಿಡಿಸಿ ಹೇಳಬೇಕಾ?
- ಬಿಡಿಸುವುದು ಬೇಡ, ಬಿಚ್ಚಿ ಹೇಳಲಿ!

● **ವೆಂಕಟೇಶ ಜೋಶಿ, ಭದ್ರಾವತಿ**
ಭಟ್ರೇ, ಗಣೇಶ ಹಬ್ಬಕ್ಕೆ ನಿಮ್ಮ ಪ್ರಾರ್ಥನೆ ಏನು?
- ಸಾಣೇಹಳ್ಳಿ ಶ್ರೀಗಳ ಭಕ್ತರಿಗೆ ವಚನಾನಂದ ಶ್ರೀಗಳ ಭಕ್ತರನ್ನು ಭೇಟಿ ಮಾಡಿಸು!

● **ಬಣಗಿ ಶ್ರೀಪಾದ, ಶಿರಸಿ**
ಭಟ್ರೇ, ಕೆಲವರು ನಮಗಿನ್ನೂ ಸ್ವಾತಂತ್ರ್ಯ ಸಿಕ್ಕಿಲ್ಲ ಅಂತಾರಲ್ಲ?
- ಯಾರ ಪ್ರತಿಮೆ, ಫೋಟೋಕ್ಕಾದರೂ ಚಪ್ಪಲಿ ಹಾರ ಹಾಕುವ ಸ್ವಾತಂತ್ರ್ಯ ಸಿಕ್ಕಿರುವಾಗ ಈ ಮಾತಾ?!

● **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ನೀರಿನ ರೇಟು ಜಾಸ್ತಿ ಮಾಡಿದ್ದಕ್ಕೆ ಜನ ಸಿಟ್ಟಾಗಿದ್ದಾರಲ್ಲ?
- ಬಿಯರಿನ ರೇಟು ಜಾಸ್ತಿ ಮಾಡಿದಾಗ ಅವರ ಸಿಟ್ಟು ಎಲ್ಲಿ ಹೋಗಿತ್ತಂತೆ?!

● **ರಾಜೇಶ ಪನ್ನಾರ, ದಾವಣಗೆರೆ**
ಭಟ್ರೇ, ಮದುವೆಯಾಗಿ ಎಂಟು ತಿಂಗಳಾಯ್ತು, ಇನ್ನೂ ಖುಷಿಯಾಗಿದ್ದಾನಲ್ಲ?
- ಪ್ರೀತಿಸಿದವಳನ್ನೇ ಮದುವೆಯಾಗಿರಲಿಕ್ಕಿಲ್ಲ!

ಅರುಣಾ, ಅಭಯಾ, ಹೆಸರು ಮಾತ್ರ ಬೇರೆ!

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಇತ್ತೀಚೆಗೆ ಬೆಂಗಳೂರಿನಿಂದ ಮುಂಬೈ ಮಾರ್ಗವಾಗಿ ಬಹ್ರೈನ್‌ಗೆ ಬರುತ್ತಿದ್ದೆ. ಇಂಡಿಗೋ ಸಂಸ್ಥೆಯ ಲೋಹಪಕ್ಷಿ ಭೂಮಿ ಬಿಟ್ಟು ನಭಕ್ಕೆ ನೆಗೆದು ಹತ್ತು ನಿಮಿಷವಷ್ಟೇ ಆಗಿತ್ತು. ಅಷ್ಟರಲ್ಲಿ ಗಗನಸಖಿಯ ಧ್ವನಿ ಕೇಳಿಬಂತು- Ladies and gentlemen, it is an emergency. ವಿಮಾನದಲ್ಲಿದ್ದವರೆಲ್ಲ ಎಚ್ಚೆತ್ತುಕೊಂಡರು. ಲಕ್ಷ್ಯ ಕೊಡಬೇಕಾದದ್ದೇ, ಏಕೆಂದರೆ ವಿಮಾನದಲ್ಲಿ ಇಂಥ ಪ್ರಕಟಣೆ ಮಾಡುವುದು ಎರಡೇ ಸಂದರ್ಭದಲ್ಲಿ. ಹವಾಮಾನ ವೈಪರೀತ್ಯ, ತಾಂತ್ರಿಕ ದೋಷದಿಂದ ವಿಮಾನವನ್ನು ತುರ್ತಾಗಿ ಭೂಸ್ಪರ್ಶ ಮಾಡಬೇಕಾದಾಗ ಅಥವಾ ಪ್ರಯಾಣಿಕರ ವೈದ್ಯಕೀಯ ಕಾರಣದಿಂದಾಗಿ. ಅಂದಿನ ಪ್ರಕಟಣೆ ಎರಡನೆಯ ಕಾರಣಕ್ಕಾಗಿತ್ತು. ಯಾರಾದರೂ ವೈದ್ಯರಿದ್ದರೆ ದಯವಿಟ್ಟು ಕಾಕ್‌ಪಿಟ್ ಬಳಿ ಬನ್ನಿ. ಪ್ರಯಾಣಿಕರೊಬ್ಬರಿಗೆ ಚಿಕಿತ್ಸೆ ಬೇಕಾಗಿದೆ ಎಂಬ ಮಾತು ಕೇಳಿಸಿತು. ವಿಮಾನದ ಮಧ್ಯಸಾಲಿನಲ್ಲಿದ್ದ ಸುಮಾರು 55ರ ಪ್ರಾಯದ ವ್ಯಕ್ತಿಯೊಬ್ಬರು ಕೂಡಲೇ ಎದ್ದು ಮುಂಭಾಗಕ್ಕೆ ದೌಡಾಯಿಸಿದರು. ಅವರ ಹಿಂದೆಯೇ ಒಬ್ಬ ಮಹಿಳೆ, ನನ್ನ ಮುಂದೆ ಕುಳಿತಿದ್ದ ಸುಮಾರು 55ರ ಪ್ರಾಯದ ಯುವತಿಯೂ ವಿಮಾನದ ಮುಂಭಾಗದ ಕಡೆ ಓಡಿದರು. ಮೂವರೂ ವೈದ್ಯರು ಎನ್ನುವುದರಲ್ಲಿ ಸಂದೇಹವಿರಲಿಲ್ಲ.

ಅಸ್ವಸ್ಥ ವ್ಯಕ್ತಿಗೆ ವೈದ್ಯರು ಪ್ರಥಮ ಚಿಕಿತ್ಸೆ ನೀಡಿ ಐದೇ ನಿಮಿಷದಲ್ಲಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು. ಮೊದಲು ಎದ್ದು ಹೋದ ವೈದ್ಯರು ತುರ್ತುದ್ವಾರದ ಬಳಿ ಕುಳಿತಿದ್ದ ವ್ಯಕ್ತಿಯ ಬಳಿ ಮಾತನಾಡಿ ಆಸನವನ್ನು ಅಸ್ವಸ್ಥ ವ್ಯಕ್ತಿಗೆ ಬಿಟ್ಟುಕೊಡುವಂತೆ ಮನವೊಲಿಸಿದರು. ಅವರ ಆಸನವೂ ಪಕ್ಕದಲ್ಲಿಯೇ ಇದ್ದದ್ದರಿಂದ ವಿಮಾನ ಮುಂಬೈನಲ್ಲಿ ಇಳಿಯುವವರೆಗೂ ವೈದ್ಯರು ಆ ವ್ಯಕ್ತಿಯ ಬಗ್ಗೆ ಕಾಳಜಿ ವಹಿಸಿದ್ದು ಕಂಡುಬಂತು. 'ದೇವರು ಎಲ್ಲ ಕಡೆಗೂ ಬರಲಾಗುವುದಿಲ್ಲ ಎಂದು ತಾಯಂದಿರನ್ನು ಭೂಮಿಗೆ ಕಳಿಸುತ್ತಾನೆ' ಎಂಬ ಮಾತಿದೆ. ಬರೀ ತಾಯಂದಿರನ್ನಷ್ಟೇ ಅಲ್ಲ, ಆತ ಸೈನಿಕರನ್ನೂ, ವೈದ್ಯರನ್ನೂ ಕಳಿಸುತ್ತಾನೆ. ಅದನ್ನು ಕೋವಿಡ್ ಒಕ್ಕರಿಸಿದ ಸಂದರ್ಭದಲ್ಲಿ ನೋಡಿದ್ದೇವೆ. ಇರಲಿ, ವಿಮಾನದಿಂದ ಹೊರಗೆ ಬಂದ ನಂತರ, ಶುಶ್ರೂಷೆ ನೀಡಿದ ವೈದ್ಯರು ಸಿಕ್ಕಿದರು. ಅವರ ಹೆಸರು ಡಾ. ನವಲ್ ಕಿಶೋರ್ ಸಾಹು ಎಂದೂ ಅವರು ರಾಯಘಡದಲ್ಲಿ ವೈದ್ಯವೃತ್ತಿಯಲ್ಲಿದ್ದಾರೆಂದೂ ತಿಳಿಯಿತು. ಸಮರೋಪಾದಿಯಲ್ಲಿ ಕೆಲಸ ಮಾಡಿದ ವೈದ್ಯರಿಗೆ ಧನ್ಯವಾದ ಹೇಳಿದಾಗ ಅವರ ಮುಖದಲ್ಲಿ ಸಂತಸ, ಸಂತೃಪ್ತಿ. ಅದರ ಅಪೇಕ್ಷೆಯಾಗಲಿ, ಬಯಕೆಯಾಗಲಿ ಇರಲಿಲ್ಲವಾದರೂ, ತಾವು ಮಾಡಿದ ಕೆಲಸವನ್ನು ಇನ್ನೊಬ್ಬರು ಗುರುತಿಸಿದ್ದಾರೆ ಎಂಬ ಧನ್ಯತಾಭಾವ ಅವರಲ್ಲಿ ಕಂಡುಬಂತು. ಉಳಿದಿಬ್ಬರು ವೈದ್ಯೆಯರು ಜನರ ಗುಂಪಿನಲ್ಲಿ ಲೀನವಾಗಿದ್ದರು. ಆದರೆ ನನ್ನ ಮುಂದಿನ ಸಾಲಿನಲ್ಲಿ ಕುಳಿತ ಯುವ ವೈದ್ಯೆಯನ್ನು ಕಂಡಾಗ ಯಾಕೋ ನಾಲ್ಕು ದಿನದ ಹಿಂದಷ್ಟೇ ಕೋಲ್ಕತಾದಲ್ಲಿ ನಡೆದ ಘಟನೆ ನೆನಪಿಗೆ ಬರುತ್ತಿತ್ತು. ಏನು ಮಾಡುವುದು? ಆ ವೈದ್ಯೆಯ ಸೇವೆ ಪಡೆಯುವ ಭಾಗ್ಯ ನಮ್ಮ ದೇಶಕ್ಕೆ ಇಲ್ಲ ಎಂದೆನಿಸಿತು.

ವೈದ್ಯರು ಯಾವ ಸೈನಿಕರಿಗೂ ಕಮ್ಮಿಯಲ್ಲ ಎನ್ನುವುದಕ್ಕೆ ಮೇಲಿನ ಉದಾಹರಣೆ ಕೊಡಬೇಕಾಯಿತು. ತುರ್ತುಸ್ಥಿತಿಯಲ್ಲಿ ಪ್ರತಿಕ್ರಿಯಿಸುವುದಕ್ಕೆ ಕೆಲವರಿಂದ ಮಾತ್ರ ಸಾಧ್ಯ. ಸೇನೆ, ನೌಕೆ, ವಾಯುಪಡೆ, ಪೊಲೀಸ್ ಮೊದಲಾದ ರಕ್ಷಣಾ ಪಡೆಯ ಜತೆಗೆ ವೈದ್ಯರೂ ಆ ಸಾಲಿನಲ್ಲಿ ನಿಲ್ಲುತ್ತಾರೆ. ಅಪಘಾತವಾದಾಗ, ಮಾರಣಾಂತಿಕ ಹಲ್ಲೆ, ಗಲಭೆಗಳು ನಡೆದಾಗ, ಏನೂ ಬೇಡ, ಮಧ್ಯರಾತ್ರಿ ಯಾರಿಗಾದರೂ ಹೆರಿಗೆ ನೋವು ಬಂದರೂ, ದಿನ-ಸಮಯವನ್ನು ಲೆಕ್ಕಿಸದೆ ವೈದ್ಯರು ಕಾರ್ಯನಿರ್ವಹಿಸುತ್ತಾರೆ. ಅದು ಅವರ ವೃತ್ತಿಧರ್ಮ. ಈ ಕಾರಣಕ್ಕಾಗಿಯೇ ವೈದ್ಯಕೀಯ ಬಿಟ್ಟು ಬೇರೆ ಕ್ಷೇತ್ರ ಆಯ್ದುಕೊಳ್ಳುವವರೂ ಇದ್ದಾರೆ. ಆದರೆ ದೇವತಾ ಸ್ವರೂಪಿ ವೈದ್ಯರ ಮೇಲೂ ಬಲಾತ್ಕಾರ ಮಾಡುವ, ಸಾಯಿಸುವ ಜನ ನಮ್ಮ ನಡುವೆಯೇ ಇದ್ದಾರೆಂದರೆ ಅದಕ್ಕಿಂತ ನಾಚಿಕೆಯ ವಿಷಯ ಇನ್ನೊಂದಿಲ್ಲ.

ಅಗಸ್ಟ್ 8ರಂದು ಕೋಲ್ಕತಾದ ಆರ್.ಜಿ. ಕರ್ ವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ನಡೆದ ಘಟನೆಯನ್ನೇ ನೋಡಿ. ಮೊದಲೇ ಹೇಳುತ್ತೇನೆ, ನಾನು ಈ ಘಟನೆಯ ಕುರಿತಂತೆ ತಾಂತ್ರಿಕ ವಿಷಯ ಹೇಳುವ ಪೊಲೀಸ್ ಅಲ್ಲ, ಸಾಕ್ಷ್ಯಾಧಾರದ ವಿಷಯ ಮಾತಾಡುವ ವಕೀಲ ಅಲ್ಲ, ರಾಜಕೀಯ ಮಾತನಾಡುವ ರಾಜಕಾರಣಿಯೂ ಅಲ್ಲ. ಆದರೆ, ಒಬ್ಬ ಮನುಷ್ಯನಾಗಿ, ಪ್ರಜೆಯಾಗಿ ರಾಕ್ಷಸೀಯ ಕೃತ್ಯ ಎಸಗಿದವರನ್ನು ಮತ್ತು ಅಂಥವರನ್ನು ರಕ್ಷಿಸಲು ಮುಂದಾದವರನ್ನು ಖಂಡಿಸುವುದಕ್ಕೆ ಯಾವ ಮುಲಾಜೂ ಇಟ್ಟುಕೊಳ್ಳುವುದಿಲ್ಲ. ಈ ವಿಷಯ ಹೇಳುತ್ತಿದ್ದಂತೆ ಕೆಲವರು ಮಣಿಪುರದ ಬಗ್ಗೆ ಯಾಕೆ ಮಾತನಾಡುವುದಿಲ್ಲ? ಉನ್ನಾವ್ ಕುರಿತು ಯಾಕೆ ಹೇಳುವುದಿಲ್ಲ? ಇತ್ಯಾದಿ ಪ್ರಶ್ನಿಸುತ್ತಾರೆ. ಇಂಥ ವಿಷಯದಲ್ಲಿ, ಮಣಿಪುರ, ಅಜ್ಮೀರ್, ಸಂದೇಶ್‌ಖಾಲಿ, ಉನ್ನಾವ್, ಹೈದರಾಬಾದ್ ಎಲ್ಲಿಯೇ ಆಗಲಿ, ಯಾರೇ ಮಾಡಿರಲಿ ಅದು ಅಕ್ಷಮ್ಯ. ಭಾರತದಲ್ಲಿ ಇಂದು ಬಲಾತ್ಕಾರ, ಕೊಲೆಗಳಲ್ಲೂ ರಾಜಕೀಯ ಒಳಹೊಕ್ಕಾಗಿದೆ. ಇಂಥ ವಿಷಯಗಳನ್ನೂ ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವುದು ದುರ್ದೈವ.

ಕೋಲ್ಕತಾದಲ್ಲಿ ಅಮಾನುಷ ಕೃತ್ಯಕ್ಕೆ ಒಳಗಾದ ವಳಿಗೆ 31ರ ಹರೆಯ. ಅಂದರೆ, ಜೀವನದ ಅರ್ಧ ಭಾಗವನ್ನೂ ಆಕೆ ಕಳೆದಿರಲಿಲ್ಲ. ಮುಂದಿನ ದಿನಗಳಲ್ಲಿ ಜನಸೇವೆ ಮಾಡುವ ಕನಸು ಕಂಡ ಅವಳ ಕಣ್ಣಿನೊಳಗೆ ಆಕೆಯ ಕನ್ನಡಕದ ಗಾಜು ಹೊಕ್ಕಿತ್ತು. ಉಟ್ಟ ಬಟ್ಟೆ ಹರಿದಿತ್ತು. ದೇಹದ ಮೇಲೆ ಹತ್ತಕ್ಕೂ ಹೆಚ್ಚು ಕ್ರೌರ್ಯದ ಕಲೆಗಳಿದ್ದವು. ಗುಪ್ತಾಂಗದಲ್ಲಿ 150 ಎಂಎಲ್ ದ್ರವ ಇತ್ತು. ಮುಖದ ಮೇಲೆ ಪರಚಿದ ಗುರುತು, ತಿರುಚಿಕೊಂಡ ಕಾಲುಗಳು, ತಲೆಯಿಂದ ಕಾಲಿನವರೆಗೆ ದೇಹದ ಪ್ರತಿ ಅಂಗವೂ ಪೈಶಾಚಿಕ ಕೃತ್ಯವನ್ನು ಚೀರಿ ಚೀರಿ ಹೇಳುತ್ತಿದ್ದವು. ಮೃಗವೇ ಆದರೂ ತನ್ನ ಬೇಟೆಯನ್ನು ಅಷ್ಟು ಕ್ರೂರವಾಗಿ ಹಿಂಸಿಸುವುದಿಲ್ಲ. ಅದರದ್ದೇನಿದ್ದರೂ ಬೇಟೆ ಸಿಗುವವರೆಗೆ ಮಾತ್ರ. ಬೇಟೆ ಸಿಕ್ಕ ನಂತರ ಪ್ರಾಣ ತೆಗೆಯಲು ನೇರ ಗೋಣಿಗೆ ಬಾಯಿ ಹಾಕುತ್ತದೆ. ಎಷ್ಟೆಂದರೂ ಮನುಷ್ಯ ಪ್ರಾಣಿಗಿಂತಲೂ ಕಡೆ ಅಲ್ಲವೇ? ಅದನ್ನು ಆಗಾಗ ದೃಢೀಕರಿಸದಿದ್ದರೆ ಹೇಗೆ?

ಇದು ಒಂದು ಕಡೆಯಾದರೆ, ಈ ಹತ್ಯೆಗೆ ಕಾರಣ ಆ ಆಸ್ಪತ್ರೆಯಲ್ಲಿ ನಡೆಯುತ್ತಿದ್ದ ಅವ್ಯವಹಾರಗಳು ಎಂಬ ಮಾತಿದೆ. ಅಲ್ಲಿ ವೇಶ್ಯಾವಾಟಿಕೆ, ಅಶ್ಲೀಲ ಚಿತ್ರಗಳ ಚಿತ್ರೀಕರಣ, ಮಾದಕ ವಸ್ತುಗಳ ಸರಬರಾಜು, ಅಕ್ರಮ ಅಂಗಾಂಗ ಕಸಿ, ಇನ್ನೂ ಅನೇಕ ಅವ್ಯವಹಾರಗಳು ನಡೆಯುತ್ತಿದ್ದವು. ಸಾವಿಗೀಡಾದವಳಿಗೆ ಅದರ ಪುರಾವೆ ದೊರಕಿತ್ತು, ಅದಕ್ಕಾಗಿ ಅವಳನ್ನು ಮುಗಿಸಲಾಯಿತು ಎಂಬ ಮಾತೂ ಇದೆ. ಇರಲೂಬಹುದು, ಏಕೆಂದರೆ ಆ ಆಸ್ಪತ್ರೆಯಲ್ಲಿ ಇಂಥ ಘಟನೆ ನಡೆದದ್ದು ಇದೇ ಮೊದಲ ಬಾರಿಯೇನೂ ಅಲ್ಲ. ಅದೇ ಆಸ್ಪತ್ರೆ ಮತ್ತು ವೈದ್ಯಕೀಯ ವಿದ್ಯಾಲಯದಲ್ಲಿ ಕಳೆದ 20 ವರ್ಷದಲ್ಲಿ ವಿದ್ಯಾರ್ಥಿಗಳು, ವೈದ್ಯರು, ಪ್ರಾಧ್ಯಾಪಕರೂ ಸೇರಿದಂತೆ ಕನಿಷ್ಠ 5 ಅಸಹಜ ಸಾವು ಸಂಭವಿಸಿದೆ. ಆ ಸಾವುಗಳು ಕೈನರ ಕತ್ತರಿಸಿಕೊಂಡು, ಮಹಡಿಯಿಂದ ಜಿಗಿದು, ಉರುಳು ಹಾಕಿಕೊಂಡು, ಅತಿಯಾದ ಮಾದಕ ವಸ್ತುಗಳ ಸೇವನೆ ಇತ್ಯಾದಿಗಳಿಂದ ಆದದ್ದು. ವಿಚಿತ್ರವೆಂದರೆ ಇದೆಲ್ಲವನ್ನೂ ಅಲ್ಲಿಯ ಆಡಳಿತ ಮಂಡಳಿ ಆತ್ಮಹತ್ಯೆ ಎಂದಿತು. ಸಂಬಂಧಪಟ್ಟವರು ಮೊದಲೇ ಎಚ್ಚೆತ್ತುಕೊಂಡು ತನಿಖೆ ನಡೆಸಿದ್ದಿದ್ದರೆ ಇಂದು ಈ ಸ್ಥಿತಿ ಬರುತ್ತಿರಲಿಲ್ಲ. ಎಂಥ ವಿಚಿತ್ರ ನೋಡಿ, ಜನರ ಪ್ರಾಣ ಉಳಿಸಲು ಹೋರಾಡುವ ವೈದ್ಯರು, ಅದೇ ವೈದ್ಯರನ್ನು ಬಲಾತ್ಕರಿಸಿ ಪ್ರಾಣ ತೆಗೆಯುವ ರಾಕ್ಷಸರು, ಇಬ್ಬರೂ ಒಂದೇ ಜಾಗದಲ್ಲಿ! ಅದಕ್ಕಿಂತಲೂ ವಿಚಿತ್ರ ಎಂದರೆ, ಈ ಘಟನೆಯ ವಿರುದ್ಧ ರಾಜ್ಯದ ಮುಖ್ಯಮಂತ್ರಿ, ಆರೋಗ್ಯ ಮಂತ್ರಿ ಮತ್ತು ಗೃಹಮಂತ್ರಿಯವರಿಂದ (ಮೂರೂ ಒಬ್ಬರೇ) ಪ್ರತಿಭಟನೆ!

ಇಂದು ಜನ 12 ವರ್ಷದ ಹಿಂದೆ ದೆಹಲಿಯಲ್ಲಿ ನಡೆದ 'ನಿರ್ಭಯಾ' ಪ್ರಕರಣ, ನಂತರದ ಹೈದರಾಬಾದ್, ಉನ್ನಾವ್, ಸಂದೇಶ್‌ಖಾಲಿ, ಮೊನ್ನೆಯ 'ಅಭಯಾ' ಘಟನೆಯಾವರೆಗೆ ಮಾತನಾಡುತ್ತಿದ್ದಾರೆ. 50 ವರ್ಷ ಮೊದಲು ನಡೆದ ಅರುಣಾ ಶಾನ್‌ಭಾಗ್ ಕಥೆ ಯಾರೂ ಮಾತನಾಡುತ್ತಿಲ್ಲ ಏಕೆ? ಮುಂಬೈನಲ್ಲಿ ದಾದಿಯಾಗಿದ್ದ ಕಾರವಾರದ ಕನ್ನಡತಿಯನ್ನು ಎಲ್ಲರೂ ಮರೆತರೇ? ಮರೆಯದೇ ಇನ್ನೇನು? ಆ ತಾಯಿಯನ್ನು ಬಲಾತ್ಕಾರ ಮಾಡಲು

ಯತ್ನಿಸಿ, ಕೊರಳಿಗೆ ಸರಪಳಿ ಸುತ್ತಿ ಸಾಯಿಸಲು ಯತ್ನಿಸಿದ ವ್ಯಕ್ತಿ ಕೇವಲ 7 ವರ್ಷ ಶಿಕ್ಷೆ ಅನುಭವಿಸಿ ಜೈಲಿನಿಂದ ಬಿಡುಗಡೆಯಾದರೆ ಹೇಗೆ ನೆನಪಿರಲು ಸಾಧ್ಯ? ಅವನಿಗೆ ಬಲಿಪಶುವಾದವಳು 42 ವರ್ಷ ಬಳ್ಳಿಯಿಂದ ಬೇರೆಯಾದ ಕುಂಬಳಕಾಯಿಯಂತೆ ಆಸ್ಪತ್ರೆಯ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದಳು. ಕೊನೆಗೊಂದು ದಿನ ನ್ಯುಮೋನಿಯಾದಿಂದ ಸಾವನ್ನಪ್ಪಿದಳು. ಅಂದಿನ ಅರುಣಾ ಆಗಲಿ, ನಂತರದ ನಿರ್ಭಯಾ ಆಗಲಿ ಅಥವಾ ಇತ್ತೀಚಿನ ಅಭಯಾ ಆಗಲಿ, ಏನು ಬದಲಾಗಿದೆ ಎಂದರೆ, ಹೆಸರು, ಸ್ಥಳ ಮಾತ್ರ. ಘಟನೆ, ಪರಿಣಾಮ ಒಂದೇ! ಉಳಿದಂತೆ ವಿಚಾರಣೆಯ ವೇಗದಲ್ಲಾಗಲಿ, ಕ್ರಮದಲ್ಲಾಗಲಿ, ಶಿಕ್ಷೆಯಲ್ಲಾಗಲಿ ಯಾವುದೇ ಬದಲಾವಣೆಯಾಗಲಿಲ್ಲ.

ಅದೆಲ್ಲ ಹೋಗಲಿ, ಇಂಥ ಅದೆಷ್ಟೋ ಘಟನೆಗಳು ನಡೆದಾಗ ಎಷ್ಟು ಬಾರಿ ಜನರ ವಿಪರೀತ ಆಕ್ರೋಶ ಭುಗಿಲೆದ್ದಿದೆ? ಕೇವಲ ನಾಲ್ಕೋ-ಐದೋ ಬಾರಿ ಮಾತ್ರ. ಜನರ ಆಕ್ರೋಶ, ಪ್ರತಿಭಟನೆ ಜೋರಾದಾಗ ಒಮ್ಮೆ ಆಡಳಿತ ಚುರುಕಾಗುತ್ತದೆ, 'ಕಠಿಣ ಕ್ರಮ(!)' ಕೈಗೊಳ್ಳುವ ಹೇಳಿಕೆ ಬರುತ್ತದೆ ನಂತರ ಮಳೆಗಾಲದ ಠುಸ್ ಪಟಾಕಿಯಾಗುತ್ತದೆ.

ಭಾರತದಲ್ಲಿ ಪ್ರತಿನಿತ್ಯ 90 ಬಲಾತ್ಕಾರ ನಡೆಯುತ್ತದೆ ಎಂಬ ಅಂಕಿ-ಅಂಶವಿದೆ. ಇದು ಜನರ ಗಮನಕ್ಕೆ ಬಂದು, ಕೇಸು ದಾಖಲಾಗಿರುವ ಸಂಖ್ಯೆ. ಇನ್ನು ಗಮನಕ್ಕೆ ಬಾರದ ಸಂಖ್ಯೆ ಎಷ್ಟು ಎಂಬುದನ್ನು ದೇವರೇ ಬಲ್ಲ. ಮಾನವ ರೂಪದಲ್ಲಿರುವ ಪಿಶಾಚಿಗಳು ಸ್ವತಃ ದೇವರೇ ಬಂದರೂ ಬಿಡುವವರಲ್ಲ. ಕಾಮಪಿಶಾಚಿಗಳಿಗೆ ಈಗಿನ ಕಾನೂನು ವ್ಯವಸ್ಥೆಯ ಭಯವೇ ಇಲ್ಲ. ಇದ್ದಿದ್ದರೆ, ಕೋಲ್ಕತಾದಲ್ಲಿ ಬಂಧನಕ್ಕೊಳಗಾದ ಆರೋಪಿ 'ಬೇಕಾದರೆ ನನ್ನನ್ನು ಗಲ್ಲಿಗೆ ಏರಿಸಿ' ಎಂದು ಹೇಳುತ್ತಿರಲಿಲ್ಲ. ಇದು ಇಷ್ಟು ಬೇಗ ಇತ್ಯರ್ಥವಾಗುವ ವಿಷಯವಲ್ಲ ಎಂಬುದು ಆ ಕ್ರಿಮಿಗೂ ಗೊತ್ತು. ಅಸಲಿಗೆ ಭಾರತದಲ್ಲಿ ಬಹುತೇಕ ಜನರಿಗೆ ಕಾನೂನಿನ ಭಯವೇ ಇಲ್ಲ, ಉಳಿದವರಿಗೆ ಈಗ ಇರುವ ಕಾನೂನಿನ ಮೇಲೆ ಅಥವಾ ವ್ಯವಸ್ಥೆಯ ಮೇಲೆ ನಂಬಿಕೆ ಉಳಿದಿಲ್ಲ. ತನ್ನನ್ನು ಗಲ್ಲಿಗೇರಿಸಿ ಎಂದವನ ಪರವಾಗಿ ವಾದಿಸಲೂ ಜನ ಸಿಗುತ್ತಾರೆ. ಸಣ್ಣ-ಪುಟ್ಟ ವ್ಯಾಜ್ಯ, ತಕರಾರು, ಕಳ್ಳತನ ಇತ್ಯಾದಿಗಳಾದರೆ ಹೌದು; ಕೊಲೆ, ಬಲಾತ್ಕಾರ, ಅದರಲ್ಲೂ ಅಮಾನುಷವಾಗಿ ವರ್ತಿಸಿದವರಿಗೆ ಮಾನವ ನಿರ್ಮಿತ, ಮನುಷ್ಯರಿಗಾಗಿ ನಿರ್ಮಿಸಿದ ಕಾನೂನು ಏಕೆ? ಅವರು ಅದಕ್ಕೆ ಅರ್ಹರಲ್ಲ, ವಿಚಾರಣೆಯ ನೆಪದಲ್ಲಿ ತಿಂಗಳುಗಟ್ಟಲೆ ತೆಗೆದು, ಆಮೇಲೆ ಜೀವಾವಧಿ ಶಿಕ್ಷೆಯ ನೆಪದಲ್ಲಿ ಹದಿನೈದೋ, ಇಪ್ಪತ್ತೋ ವರ್ಷ ಜೈಲಿನಲ್ಲಿಟ್ಟು, ಹೊಟ್ಟೆಹೊರೆಯುವುದಕ್ಕಿಂತ ತಿಂಗಳೊಪ್ಪತ್ತಿನ ಒಳಗೆ ವಿಚಾರಣೆ ನಡೆಸಿ, ಅಪರಾಧಿಗೆ ಅವರು ಬೇರೆಯ ವರನ್ನು ಯಾವ ರೀತಿ ಸಾಯಿಸಿದ್ದರೋ ಅದೇ ರೀತಿ ಶಿಕ್ಷೆ ನೀಡುವುದು ಒಳ್ಳೆಯದಲ್ಲವೇ? ಇದು ಶರಿಯಾ ಕಾನೂನು ಎನಿಸಬಹುದು. ಆದರೆ, ಈಗಿರುವ ಕಾನೂನಿಗೆ ಜನ ಬೇಸತ್ತಿದ್ದಾರೆ. ಅದಕ್ಕಾಗಿಯೇ ಹೈದರಾಬಾದಿನಲ್ಲಿ ನಡೆದ ಬಲಾತ್ಕಾರದ ನಂತರ ನಡೆದ ಎನ್ಕೌಂಟರ್ ಅನ್ನು ಬಹುತೇಕ ಭಾರತೀಯರು ಹಬ್ಬದೋಪಾದಿಯಲ್ಲಿ ಸಂಭ್ರಮಿಸಿದ್ದು.

ಇರಲಿ, ಇಷ್ಟಾದರೂ ಈ ವೈದ್ಯರುಗಳು ಬದಲಾಗುವುದಿಲ್ಲ, ಬೇಕಾದರೆ ನೋಡಿ, ನಾಳೆ ಅದೇ ಆರೋಪಿಗೆ ಆರಾಮಿಲ್ಲ ಎಂದಾದರೆ ಯಾವುದೋ ವೈದ್ಯ ಮದ್ದು ಕೊಟ್ಟು ಬರುತ್ತಾನೆ. ಆತನ ಪ್ರಾಣ ಹೋಗುವ ಸಂದರ್ಭ ಬಂದರೆ ಶತಾಯುಗತಾಯು ಆತನ ಪ್ರಾಣ ಉಳಿಸಲು ಯತ್ನಿಸುತ್ತಾನೆ. ಆ ಕಾಲದಲ್ಲಿ ಅವನ ವೃತ್ತಿಧರ್ಮ ಜಾಗೃತವಾಗುತ್ತದೆ. ವೈದ್ಯರೇ, ಬಿಟ್ಟುಬಿಡಿ, ಅಂಥವರು ನೀವು ನೀಡುವ ಭಿಕ್ಷೆಗೆ ಅರ್ಹರಲ್ಲ.

ರಾಷ್ಟ್ರೀಯ ವೈದ್ಯಕೀಯ ಮಂಡಳಿಯ ಪ್ರಕಾರ ಭಾರತದಲ್ಲಿ 13 ಲಕ್ಷಕ್ಕೂ ಹೆಚ್ಚು ಅಲೋಪತಿ ವೈದ್ಯರಿದ್ದಾರೆ. ಪ್ರತಿ ವರ್ಷ 70-80 ಸಾವಿರ ವಿದ್ಯಾರ್ಥಿಗಳು ವೈದ್ಯಕೀಯ ಪದವಿ ಪಡೆದು ಹೊರಬರುತ್ತಿದ್ದಾರೆ. ಹತ್ತು ವರ್ಷದ ಕೆಳಗಿನ ಅಂಕಿ-ಅಂಶಕ್ಕೆ ಹೋಲಿಸಿದರೆ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಶೇ.80ರಷ್ಟು ಹೆಚ್ಚಾಗಿದ್ದು, ಇಂದು ದೇಶದಾದ್ಯಂತ 700ಕ್ಕೂ ಅಧಿಕ ಕಾಲೇಜುಗಳಿವೆ. ಇದರ ಜತೆಗೆ 6.5 ಲಕ್ಷ ಆಯುಷ್ ವೈದ್ಯರಿದ್ದಾರೆ. ವರದಿಯ ಪ್ರಕಾರ ದೇಶದಲ್ಲಿ ಪ್ರತಿ 850 ಜನರಿಗೆ ಒಬ್ಬ ವೈದ್ಯರಿದ್ದಾರಂತೆ. ನಿಜ ಎಂದೇ ಇಟ್ಟುಕೊಳ್ಳೋಣ, ಅಷ್ಟು ಸಾಕೆ? ಸ್ವೀಡನ್, ಗ್ರೀಸ್‌ನಂಥ ದೇಶದಲ್ಲಿ ಪ್ರತಿ 200-250 ಜನರಿಗೆ ಒಬ್ಬ ವೈದ್ಯರಿರುವಾಗ ಭಾರತ ಎಷ್ಟು ಹಿಂದಿದೆ ಎಂದು ತಿಳಿಯುತ್ತದೆ. ಭಾರತದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಈಗ ತೆರಬೇಕಾದ ಹಣಕ್ಕೆ ಹೆದರಿ ಕೆಲವರು ವೈದ್ಯಕೀಯ ಅಭ್ಯಾಸ ಮಾಡುತ್ತಿಲ್ಲ, ಸಮಯದ ಮಿತಿ ಇಲ್ಲದೇ ಇರುವುದರಿಂದ ಕೆಲವರು ಆ ವೃತ್ತಿಗೆ ಹೋಗುವುದಿಲ್ಲ. ಇನ್ನು ಅವರಿಗೆ ಸುರಕ್ಷತೆಯೂ ಇಲ್ಲವೆಂದರೆ ಕಥೆ ಮುಗಿಯಿತು. 'ಬೇಟಿ ಬಚಾವೊ, ಬೇಟಿ ಪಢಾವೊ', 'ಹೆಣ್ಣು ಮಕ್ಕಳನ್ನು ಉಳಿಸಿ, ಹೆಣ್ಣು ಮಕ್ಕಳನ್ನು ಓದಿಸಿ' ಎನ್ನುತ್ತಾರಲ್ಲ, ಓದುವ ಸ್ಥಳದಲ್ಲೇ ರಕ್ಷಣೆ ಇಲ್ಲದಿದ್ದಾಗ ಓದಿಸುವುದು ಹೇಗೆ? ಬದುಕುವುದು ಹೇಗೆ? ಬದುಕಿಸುವುದು ಹೇಗೆ? ಹೆಣ್ಣು ಮಕ್ಕಳು ಬದುಕಬೇಕು ಎಂದರೆ ಮನುಷ್ಯನ ಮುಖವಾಡ ತೊಟ್ಟ ರಾಕ್ಷಸರಿಗೆ ಸರಿಯಾದ ಪಾಠ ಓದಿಸಬೇಕು.

ಕೊನೆಯದಾಗಿ, ಇತ್ತೀಚಿಗೆ ಸಾಮಾಜಿಕ ಜಾಲತಾಣದಲ್ಲಿ ನೋಡಿದ ಒಂದು ವಾಕ್ಯ: 'ಬಲಾತ್ಕಾರವಾದಾಗ ಪ್ರತಿ ಬಾರಿ ಮೇಣದಬತ್ತಿಯನ್ನೇ ಯಾಕೆ ಸುಡಬೇಕು? ಒಮ್ಮೆಯಾದರೂ ಬಲತ್ಕಾರಿಯನ್ನು ಸುಟ್ಟುಬಿಡಿ!'

ಸಾಧ್ಯವೇ?

ತನ್ನಿಮಿತ್ತ

ವಿನೋದ್ ಕಾಮತ್

ಶ್ರೀಕೃಷ್ಣ ಜನ್ಮಾಷ್ಟಮಿ ಮಹತ್ವ

ಶ್ರೀ ಕೃಷ್ಣ ಜನ್ಮಾಷ್ಟಮಿ ಅರ್ಥಾತ್ ಶ್ರೀಕೃಷ್ಣ ಜಯಂತಿಯನ್ನು ಭಾರತದಲ್ಲಷ್ಟೇ ಅಲ್ಲ ಇಡೀ ವಿಶ್ವದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಇದು ಒಂದು ಹಬ್ಬ, ವ್ರತ ಮತ್ತು ಉತ್ಸವವಾಗಿದೆ. ಗೋಕುಲ, ಮಥುರಾ, ಬೃಂದಾವನ, ದ್ವಾರಕಾ, ಪುರಿ ಇವು ಶ್ರೀಕೃಷ್ಣನ ಉಪಾಸನೆಗೆ ಸಂಬಂಧಿಸಿದ ಪವಿತ್ರ ಸ್ಥಾನಗಳಾಗಿವೆ. ಇಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯ ಉತ್ಸವವನ್ನು ವಿಶೇಷ ರೂಪದಲ್ಲಿ ಆಚರಿಸಲಾಗುತ್ತದೆ. ಈ ದಿನ ಬೃಂದಾವನದಲ್ಲಿ ಡೋಲೋತ್ಸವವಾಗುತ್ತದೆ ಮತ್ತು ನೋಡಲು ಇದು ಆನಂದದಾಯಕವಾಗಿರುತ್ತದೆ. ಈ ದಿನ ಕೆಲವರು ತಮ್ಮ ಮನೆಯಲ್ಲಿಯೇ ಗೋಕುಲ-ಬೃಂದಾವನದ ಪ್ರತಿಕೃತಿಯನ್ನು ಮಾಡಿ ಶ್ರೀಕೃಷ್ಣನ ಜನ್ಮೋತ್ಸವವನ್ನು ಆಚರಿಸುತ್ತಾರೆ. ವೈಷ್ಣವ ಪಂಥೀಯರು ಈ ದಿನವನ್ನು ಅತೀವ ಭಕ್ತಿಭಾವದಿಂದ ಆಚರಿಸುತ್ತಾರೆ. ಅನೇಕ ವೈಷ್ಣವ ದೇವಾಲಯಗಳಲ್ಲಿ ದೀಪಾರಾಧನೆ, ಶೋಭಾಯಾತ್ರೆ, ಕೃಷ್ಣಲೀಲೆ, ಭಾಗವತ ಪಠಣ, ಕೀರ್ತನೆ, ಭಜನೆ, ನೃತ್ಯ-ಗಾಯನ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಈ ಕಾರ್ಯಕ್ರಮಗಳು ಶ್ರಾವಣ ಕೃಷ್ಣಪಾಡ್ಯದಿಂದ ಶ್ರಾವಣ ಕೃಷ್ಣಾಷ್ಟಮಿಯವರೆಗೂ ನಡೆಯುತ್ತವೆ.

ಶ್ರೀಕೃಷ್ಣ ಜನ್ಮಾಷ್ಟಮಿ ವ್ರತವನ್ನು ಅಷ್ಟಮಿಯಂದು ಮಾಡಲಾಗುತ್ತದೆ ಮತ್ತು ಎರಡನೆಯ ದಿನ, ಅರ್ಥಾತ್ ಶ್ರಾವಣ ಕೃಷ್ಣ ನವಮಿಯಂದು ಪಾರಾಯಣ ಮಾಡಿ ವ್ರತವನ್ನು ಸಂಪನ್ನಗೊಳಿಸಲಾಗುತ್ತದೆ. ಇದು ಎಲ್ಲರೂ ಮಾಡುವಂಥ ವ್ರತವಾಗಿದ್ದು, ಮಕ್ಕಳು, ಯುವಕರು, ವೃದ್ಧರು, ಸ್ತ್ರೀಯರು ಇದರಲ್ಲಿ ತೊಡಗಿಸಿಕೊಳ್ಳಬಹುದಾಗಿದೆ. ಪಾಪನಾಶ, ಸೌಖ್ಯವೃದ್ಧಿ, ಸಂತತಿ-ಸಂಪತ್ತಿ ಮತ್ತು ವೈಕುಂಠ ಪ್ರಾಪ್ತಿಯು ಈ ವ್ರತದ ಫಲವಾಗಿದೆ. ವ್ರತದ ದಿನದಂದು ದಿನವಿಡೀ ಉಪವಾಸವನ್ನು ಮಾಡಲಾಗುತ್ತದೆ. ನಿರಾಹಾರ ಉಪವಾಸವು ಸಾಧ್ಯವಿಲ್ಲದಿದ್ದರೆ, ಫಲಾಹಾರ ಮಾಡಬಹುದು. ಇದಕ್ಕೆ ಒಂದು ದಿನ ಮುಂಚೆ, ಅರ್ಥಾತ್ ಶ್ರಾವಣ ಕೃಷ್ಣ ಸಪ್ತಮಿಯಂದು ಅಂಶಾತ್ಮಕ ಭೋಜನವನ್ನು ಮಾಡುತ್ತಾರೆ. ಶ್ರೀಕೃಷ್ಣ ಜನಿಸಿದ್ದು ಮಧ್ಯರಾತ್ರಿಯಲ್ಲಿ, ಆದ್ದರಿಂದ ಶ್ರೀಕೃಷ್ಣ ಜಯಂತಿಯಂದು ಮಧ್ಯರಾತ್ರಿಯಲ್ಲಿ ವಿಶೇಷ ಪೂಜೆಯನ್ನು ಮಾಡಲಾಗುತ್ತದೆ. ಮಧ್ಯರಾತ್ರಿ, ಸ್ನಾನವನ್ನು ಮಾಡಿ ಈ ಪೂಜೆಯನ್ನು ಆರಂಭಿಸಲಾಗುತ್ತದೆ.

ಶ್ರೀಕೃಷ್ಣ ಜನ್ಮಾಷ್ಟಮಿಯಂದು ಹೀಗೆ ಮಾಡಿ: ನಿಮ್ಮ ಬಂಧು-ಮಿತ್ರರಿಗೆ ಕಿರುಸಂದೇಶಗಳನ್ನು ಕಳುಹಿಸಿ, ಶ್ರೀಕೃಷ್ಣನ ನಾಮಜಪ ಮಾಡುವಂತೆ ಅವರಿಗೆ ಸೂಚಿಸಿ. ಶ್ರೀಕೃಷ್ಣನ ದೇವಸ್ಥಾನದಲ್ಲಿ ಸ್ವಚ್ಛತೆಯ ಸೇವೆಯನ್ನು ಮಾಡಿ. ಶ್ರೀಕೃಷ್ಣನಿಗೆ ಅವಮಾನವಾಗುತ್ತಿರುವುದು ಕಂಡುಬಂದಲ್ಲಿ ಅದನ್ನು ತಡೆಗಟ್ಟಿ. ಇತರ ದಿನಗಳಿಗೆ ಹೋಲಿಸಿದಾಗ ಶ್ರೀಕೃಷ್ಣ ಜಯಂತಿಯಂದು ಕೃಷ್ಣತತ್ವವು ಹೆಚ್ಚು ಪ್ರಮಾಣದಲ್ಲಿ, ಅಂದರೆ ಒಂದು ಸಾವಿರ ಪಟ್ಟು ಹೆಚ್ಚು ಪ್ರಮಾಣದಲ್ಲಿ ಸಕ್ರಿಯವಾಗಿರುತ್ತದೆ, ಇದನ್ನು ಗ್ರಹಿಸಲು 'ಓಂ ನಮೋ ಭಗವತೇ ವಾಸುದೇವಾಯ' ನಾಮಜಪವನ್ನು ಮಾಡಿ. ಇದರಿಂದಾಗಿ ಶ್ರೀಕೃಷ್ಣನ ಚೈತನ್ಯದಾಯಕ ತತ್ವಲಹರಿಗಳು ಪೃಥ್ವಿಯ ಮೇಲೆ ಹೆಚ್ಚು ಪ್ರಮಾಣದಲ್ಲಿ ಆಕರ್ಷಿತವಾಗುತ್ತವೆ. ಈ ಲಹರಿಗಳಿಂದ 'ವ್ಯಾವಹಾರಿಕ' ಮತ್ತು 'ಆಧ್ಯಾತ್ಮಿಕ' ಈ ಎರಡೂ ಸ್ತರಗಳಲ್ಲೂ ಜೀವಕ್ಕೆ ಲಾಭವಾಗುತ್ತದೆ. ಇದರ ಜತೆಗೆ, ಈ ಕೃಷ್ಣಗಾಯತ್ರಿ ಮಂತ್ರವನ್ನೂ ಜಪಿಸಿದಲ್ಲಿ ಒಳಿತು: 'ದೇವಕೀನಂದನಾಯ ವಿದ್ಮಹೇ । ವಾಸು ದೇವಾಯ ಧೀಮಹಿ । ತನ್ನೋ ಕೃಷ್ಣಃ ಪ್ರಚೋದಯಾತ್ ॥' (ಅರ್ಥ: ನಾವು ದೇವಕೀಪುತ್ರ ಕೃಷ್ಣನನ್ನು ಅರಿತಿದ್ದೇವೆ, ವಾಸುದೇವನ ಧ್ಯಾನ ಮಾಡುತ್ತೇವೆ, ಆ ಕೃಷ್ಣನು ನಮ್ಮ ಬುದ್ಧಿಗೆ ಸತ್ ಪ್ರೇರಣೆ ನೀಡಲಿ).

(ಆಧಾರ: ಸನಾತನ ಸಂಸ್ಥೆಯ ಜಾಲತಾಣ. ಲೇಖಕರು ರಾಜ್ಯ ವಕ್ತಾರರು, ಸನಾತನ ಸಂಸ್ಥೆ)

ವಚನಗಳ ಅಧಿಕೃತ ವಕ್ತಾರರು ಯಾರು?

ವಚನ ಜಿಜ್ಞಾಸೆ

ಸಂತೋಷ್ ಪಿ.ಕೆ.
vveditoped@gmail.com

'ವಚನ ದರ್ಶನ' ಎಂಬ ಪುಸ್ತಕವನ್ನು ಅಯೋಧ್ಯ ಪ್ರಕಾಶನವು ಇತ್ತೀಚೆಗೆ ಹೊರತಂದಿದ್ದು, ನಾಡಿನ ಕೆಲ ತಲಸ್ಪರ್ಶಿ ಮತ್ತು ವಿಶ್ವಮಾನವ ತತ್ವವನ್ನು ಅನುಸರಿಸುವ ತಥಾಕಥಿತ ಚಿಂತಕರು ಈ ಪುಸ್ತಕದ ವಿರುದ್ಧ ತೀವ್ರ ಹೋರಾಟವನ್ನು ಆರಂಭಿಸಿದ್ದಾರೆ. ಅವರು ಆರಂಭಿಸಿದ್ದು ಚರ್ಚೆಯನ್ನಲ್ಲ, ಬದಲಿಗೆ ವಿರೋಧಿಸುವ ಹೋರಾಟವನ್ನು ಎಂಬ ಅಂಶವನ್ನಿಲ್ಲಿ ಗಮನಿಸಬೇಕು. ಸಹೃದಯಿ ಬರಹಗಾರರು ಅದನ್ನು ಚರ್ಚೆಗೊಳಪಡಿಸಿ ಹಲವಾರು ಮಗ್ಗಲುಗಳಲ್ಲಿ ವಚನಗಳನ್ನು ಶೋಧಿಸಬೇಕಾಗಿರುವ ಅನಿವಾರ್ಯತೆಯನ್ನು ತಮ್ಮ ಬರಹಗಳ ಮೂಲಕ ಒತ್ತಿಹೇಳುತ್ತಿದ್ದಾರೆ. ಆದರೆ, ಇವಕ್ಕೆ ಕಿವಿಗೊಡದ ವಿರೋಧಿಗಳು ತಥಾಕಥಿತ ಕಥೆಗಳನ್ನೇ ಮುಂದಿರಿಸಿಕೊಂಡು ವಿರೋಧಿಸುವ ಹುಮ್ಮಸ್ಸನ್ನು ಮಾತ್ರ ತೋರುತ್ತಿದ್ದಾರೆ.

ನಾಡಿನ ಜೀವಪರ ಚಿಂತಕರೆಂದೇ ಖ್ಯಾತರಾದ ಒಂದಷ್ಟು 'ಚಿಂತನಾ ಹೋರಾಟಗಾರರು' (ಹೋರಾಟಕ್ಕೋಸ್ಕರ ಚಿಂತನೆಯನ್ನು ಮಾಡುವವರು ಎಂದರ್ಥ) ಪುಸ್ತಕ ಬಿಡುಗಡೆಯನ್ನು ವಿರೋಧಿಸಿ ಹೋರಾಟ ಮಾಡಿರುವುದು, ಕನ್ನಡ ವಿದ್ವತ್ ವಲಯಕ್ಕೆ ಅಂಟಿಕೊಳ್ಳುತ್ತಿರುವ ಬೌದ್ಧಿಕ ದಾರಿದ್ರ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ತರ್ಕಶಾಸ್ತ್ರವನ್ನು ಜಗತ್ತಿಗೆ ಪರಿಚಯಿಸಿದ ಭಾರತದ ನೆಲದಲ್ಲಿ ಇಂಥ ವಿಚಾರಹೀನರ ಹೋರಾಟಗಳು ಚಿಂತಕರ ಬದಲಿಗೆ ಚಿಂತನಾ ಹೋರಾಟಗಾರರ ಅಸ್ತಿತ್ವವನ್ನು ಎತ್ತಿಹಿಡಿಯುತ್ತಿವೆ.

'ವಚನ ದರ್ಶನ' ಪುಸ್ತಕಕ್ಕೆ 'ಚಿಂತನಾ ಹೋರಾಟಗಾರ'ರ ವಿರೋಧವಿರುವುದಕ್ಕೆ ಮುಖ್ಯಕಾರಣ, ವಚನಗಳ ಕುರಿತು ಸಂಘ ಪರಿವಾರದವರು ಮಾತನಾಡುತ್ತಿದ್ದಾರೆ ಎನ್ನುವುದೇ ಆಗಿದೆ. 'ಎಡ'ಪರ ಚಿಂತಕರ ಮೂಲ ಸಂಪನ್ಮೂಲಕ್ಕೆ (ಗಂಜಿ ಎಂಬ ಸಂಪನ್ಮೂಲ) ಕೈಹಾಕಿದರೆ ಜೀವಗಳು ತಡೆಯುವುದಾದರೂ ಹೇಗೆ? ಆದ್ದರಿಂದಲೇ ಇಲ್ಲಸಲ್ಲದ ಆರೋಪಗಳನ್ನು ಹೊರಿಸುವ ಮೂಲಕ ಅವರು ತೀವ್ರವಾಗಿ ವಿರೋಧಿಸುತ್ತಿರುವುದು ಗೋಚರಿಸುತ್ತಿದೆ. 'ಸಂಸ್ಕೃತ ಕೇವಲ ಬ್ರಾಹ್ಮಣರ ಸ್ವತ್ತಾಗಿತ್ತು, ಅದು ಸಮಾಜದ ಜನಸಾಮಾನ್ಯರಿಗೆ ನಿಷಿದ್ಧವಾಗಿತ್ತು' ಎಂಬ ಸುಳ್ಳು ವಾದಸರಣಿಯ ಮೂಲಕ ಹಲಬುವ ಎಡಚರರಿಗೆ ವಚನಗಳ ಕುರಿತು ಬೇರೆ ಯಾರೂ ಮಾತಾಡಬಾರದು ಎಂದು ವಿರೋಧಿಸುವುದಕ್ಕೂ ಏನು ವ್ಯತ್ಯಾಸವಿದೆ? ವಚನಗಳು ಎಡ ಚಿಂತಕರ ಸ್ವತ್ತು ಎಂದು ಬಸವಣ್ಣನವರು ಯಾವುದಾದರೂ ವಚನದಲ್ಲಿ ತಿಳಿಸಿದ್ದಾರೆಯೇ, ಇಲ್ಲವಲ್ಲಾ? ಹಾಗಾದರೆ, ವಚನಗಳ ಕುರಿತು ಇತರರು ಮಾತನಾಡಬಾರದು ಎಂಬ ಇವರ ಧಾರ್ಷ್ಟ್ಯ ಮನೋಭಾವವನ್ನು ಅರ್ಥೈಸಿಕೊಳ್ಳುವುದು ಹೇಗೆಂಬುದೇ ನಮ್ಮ ಪ್ರಶ್ನೆ. ಭಾರತೀಯ ಪರಂಪರೆಯ ಬಗ್ಗೆ ಆಸಕ್ತಿಯಿರುವ ಯಾರಾದರೂ ಕೀರ್ತನೆಗಳು, ವಚನಗಳು ಹಾಗೂ ಇತರೆ ಭಕ್ತಿ ಸಾಹಿತ್ಯಗಳನ್ನು ಓದಬಹುದು, ಭಾಷ್ಯಗಳನ್ನು ಬರೆಯಬಹುದು. ಹಾಗಾಗಿಯೇ ಉಪನಿಷತ್ತುಗಳ ಕುರಿತು 200ಕ್ಕೂ ಹೆಚ್ಚು ಭಾಷ್ಯಗಳು ನಮ್ಮ ಸಂಪ್ರದಾಯದಲ್ಲಿವೆ. ಹಾಗೆ ನೋಡಿದರೆ, ವೇದಗಳನ್ನು ರಚಿಸಿದವರು ಯಾರು ಎಂಬ ಪ್ರಶ್ನೆಗೆ ನಾವಿನ್ನೂ ತಾರ್ಕಿಕ ಉತ್ತರವನ್ನು ಕಂಡುಕೊಳ್ಳಲಾಗಿಲ್ಲ; ಆದರೆ ಅದನ್ನು ಬ್ರಾಹ್ಮಣರೇ ಬರೆದಿದ್ದಾರೆ ಎಂಬ ಭ್ರಮೆಯನ್ನಿಟ್ಟುಕೊಂಡು ಧಿಕ್ಕರಿಸುವ ಪರಿಪಾಠ ಬೆಳೆದುಬಂದಿದೆ.

'ಕೆಲವು ವಚನಗಳು ವೇದಗಳನ್ನು ತಿರಸ್ಕಾರ ಮನೋಭಾವದಿಂದ ನೋಡಿವೆ, ಅಂದರೆ ವೇದಗಳನ್ನು ಅನುಸರಿಸುವ ಬ್ರಾಹ್ಮಣರನ್ನು ತಿರಸ್ಕರಿಸಿವೆ, ಹಾಗಾಗಿ ಬ್ರಾಹ್ಮಣರನ್ನು ವಿರೋಧಿಸುವುದೇ ವಚನಗಳ ಆಶಯವಾಗಿದೆ' ಎಂಬುದು ಹೋರಾಟಗಾರರ ಚಿಂತನೆಯಾಗಿದೆ. ಹಾಗಾಗಿ, 'ವೇದಗಳು ಎಂದರೆ ಬ್ರಾಹ್ಮಣರು, ಬ್ರಾಹ್ಮಣರು ಎಂದರೆ ಸಂಘಪರಿವಾರ' ಎಂಬ ಸಮೀಕರಣದ ಮೂಲಕ 'ವಚನ ದರ್ಶನ' ಪುಸ್ತಕದ ವಿರುದ್ಧದ ಹೋರಾಟವನ್ನು ಸಮರ್ಥಿಸಲಾಗುತ್ತಿದೆ.

ಮೊದಲನೆಯದಾಗಿ, ವಚನಗಳು ವೇದಗಳನ್ನು ತಿರಸ್ಕರಿಸಿವೆಯೇ ಎಂಬ ಪ್ರಶ್ನೆಗೆ 'ಹೌದು' ಎಂಬ ಉತ್ತರವು ವಚನಗಳನ್ನು ಓದುವ ಯಾರಿಗಾದರೂ ಹೊಲಬಾಗುತ್ತದೆ. ಆದರೆ ತಿರಸ್ಕರಿಸುವ ಮತ್ತು ಪುರಸ್ಕರಿಸುವ ಎಲ್ಲಾ ವಚನಗಳಿಗೂ ಅವುಗಳದೇ ಆದ ಸಂದರ್ಭಗಳಿರುತ್ತವೆ, ಆ ಸಂದರ್ಭದಿಂದ ವಾಕ್ಯಗಳನ್ನು ಪ್ರತ್ಯೇಕಗೊಳಿಸಿದರೆ ಅವು ತಮ್ಮ ಅರ್ಥವನ್ನೇ ಕಳೆದುಕೊಳ್ಳುತ್ತವೆ. ಉದಾಹರಣೆಗೆ, 'ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ನಮ್ಮ ಕೂಡಲಸಂಗಮ ದೇವ' ಎಂಬ ಬಸವಣ್ಣನವರ ವಚನವು ಏನನ್ನು ತಿಳಿಸುತ್ತದೆ? ವಚನಕಾರರು ಸಮಾಜದ ಕುರಿತು ಏನನ್ನೂ ಮಾಡಲಿಲ್ಲ, ಸಮಾಜದ ಓರೆಕೋರೆಗಳನ್ನು ತಿದ್ದಲು ಪ್ರಯತ್ನಿಸಲಿಲ್ಲ ಎಂದು ಹೇಳಬಹುದೇ? ಅಥವಾ ಎಲ್ಲಾ ಶರಣರು ಕೇವಲ ತಮ್ಮ ಅಧ್ಯಾತ್ಮ ಸಾಧನೆಯಲ್ಲಿ ಮುಳುಗಿದ್ದರು ಎಂದು ಹೇಳಬಹುದೇ? ಒಂದೊಮ್ಮೆ ಹಾಗೆ ಹೇಳಿದರೆ ಸಾಮಾಜಿಕ ಕ್ರಾಂತಿ, ಸಮಾಜ ಸುಧಾರಣೆಯ ಚಳವಳಿ ಎಂಬ ವಾದಗಳು ಬಿದ್ದುಹೋಗುತ್ತವೆ. ಆದ್ದರಿಂದ, ಬಿಡಿಯಾದ ವಚನಗಳನ್ನು ಕೈಗೆತ್ತಿಕೊಂಡು ಇಡೀ ವಚನಸಾಹಿತ್ಯದ ಆಶಯವನ್ನು ಅರ್ಥೈಸಿಕೊಳ್ಳುತ್ತಾ ಹೋದರೆ ಮೇಲೆ ತಿಳಿಸಿದ ಅಪಾರ್ಥವು ಹೆಚ್ಚಾಗುತ್ತದೆ. ಹಾಗಾಗಿ ವಚನ ಸಾಹಿತ್ಯವನ್ನು ಇಡಿಯಾಗಿ ನೋಡುವ ಅಗತ್ಯವಿದೆ.

ವೇದಗಳನ್ನು ಟೀಕಿಸುವ ವಚನಗಳು ಸಾಕಷ್ಟಿದ್ದರೂ, ಒಟ್ಟು ಸಂದರ್ಭದಲ್ಲಿ ಯಾವ ಆಶಯವನ್ನು ಹೊಂದಿವೆ ಎನ್ನುವುದನ್ನು ಅರ್ಥೈಸಿಕೊಳ್ಳಬೇಕು. ವೇದಗಳು ಜ್ಞಾನದ ಶಾಖೆಗಳು ಎಂದು ಪರಿಗಣಿಸಲ್ಪಟ್ಟಿದ್ದರೂ ಅಲ್ಲಿಗೆ ಸೀಮಿತವಾಗದೇ, ಪಾರಮಾರ್ಥಿಕ ಲೋಕಕ್ಕೆ ಪ್ರವೇಶ ಪಡೆಯಲು ಅನುಭವಜನ್ಯ ಜ್ಞಾನವೇ ಪ್ರಧಾನ ಎಂಬುದು ಅವರ ಟೀಕೆಗಳ ಇಂಗಿತವಾಗಿದೆ. 'ಮಣ್ಣು, ಮಡಿಕೆ ದೇವರುಗಳು..' ಎಂಬ ವಚನದಲ್ಲಿಯೂ ದೇವರುಗಳನ್ನು ಪೂಜಿಸುವಲ್ಲಿಯೇ ನಿಲ್ಲದೆ ಅದಕ್ಕಿಂತಲೂ ಮುಂದೆ ಹೋದರೆ ಸಾಯುಜ್ಯವನ್ನು ಪಡೆಯಲು ಸಾಧ್ಯ ಎಂಬುದು ವಚನದ ಉದ್ದೇಶವಾಗಿದೆ. ಇದಕ್ಕೆ ಬಾಹೂರ ಬೊಮ್ಮಣ್ಣ ಬರೆದಿರುವ ವಚನವೇ ಸಾಕ್ಷಿ- 'ನಾನಾ ಭೇದಂಗಳಲ್ಲಿ ಷಡ್ದರುಶನವ ಹೊಕ್ಕು ತಿಳಿದಡೂ, ಶ್ರುತಿವೇದ ಶಾಸ್ತ್ರ ಪುರಾಣ ಆಗಮಂಗಳ ಕಲಿತಡೂ, ಮೂರುಮಲದ ಭೇದವನರಿತು ಬಿಡುಮುಡಿಯಲ್ಲಿ ಕಳೆದುಳಿಯಬೇಕು. ಇದು ಪ್ರಸಿದ್ಧವಪ್ಪ ತೆರ. ಇದು ಸಂಗನಬಸವಣ್ಣನ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗವ ಕೂಡಬೇಕು'. ಏನು ಮಾಡಿದರೇನು ಅನುಭವದ ಅರಿವು ಪಡೆ ಯದೇ ಇದ್ದರೆ ಯಾವ ವೇದ ಶಾಸ್ತ್ರಗಳನ್ನು ಓದಿದರೂ ಶಿವಸಾಯುಜ್ಯವನ್ನು ಪಡೆಯಲು ಸಾಧ್ಯವಿಲ್ಲ ಎಂಬುದೇ ಈ ವಚನದ ಆಶಯವಾಗಿದೆ. ಆದ್ದರಿಂದ ಇಂಥ ಅನೇಕ ವಚನಗಳನ್ನು ನಾವು ಅಧ್ಯಯನ ಮಾಡಿದರೂ ಅದರ ಭಾವವನ್ನು ಅರ್ಥೈಸಿಕೊಳ್ಳುವ ಜರೂರು ನಮ್ಮ ಮುಂದಿದೆ. ವಚನಗಳ ಭಾವ ಮತ್ತು ಆಶಯಗಳನ್ನು ಗ್ರಹಿಸಲು ವಚನ ಸಾಹಿತ್ಯವನ್ನು ಸಮಗ್ರವಾಗಿ ನೋಡಬೇಕಾಗುತ್ತದೆ.

ಸಮಾಜದ ಓರೆಕೋರೆಗಳನ್ನು ಅಧ್ಯಾತ್ಮದ ಸಾರದ ಮೂಲಕ ಗುರುತಿಸಿ, ಅದರಿಂದ ಜನಸಾಮಾನ್ಯರನ್ನು ಹೊರತಂದು, ಬಹುದೊಡ್ಡ ಅನುಭಾವಿಗಳ ಗುಂಪನ್ನು ಕಟ್ಟುವಲ್ಲಿ ವಚನ ಸಾಹಿತ್ಯವು ಬಹುಮುಖ್ಯ ಪಾತ್ರವನ್ನು ವಹಿಸಿವೆ. ಯಾವುದೇ ಸಮಾಜವು, ಯಾವುದೇ ಕಾಲದಲ್ಲಿಯೂ ಆದರ್ಶಸ್ವರೂಪದಲ್ಲಿ ಇರಲು ಸಾಧ್ಯವಿಲ್ಲ, ಕೇವಲ ಕಲ್ಪನೆಯಲ್ಲಿ ಇರಬಹುದು ಅಷ್ಟೇ. ಲೌಕಿಕ ಜಗತ್ತಿನ ಬಯಕೆ ಹಾಗೂ ತೃಪ್ತಿಗಳೇ ಮನುಷ್ಯನ ಉನ್ನತೀ ಕರಣಕ್ಕೆ ಅಡ್ಡಿಯಾಗಬಲ್ಲವು ಎಂಬುದನ್ನು ಅರಿತೇ ಹಲವಾರು ಆಧ್ಯಾತ್ಮಿಕ ಪರಂಪರೆಗಳು ಅದರಿಂದ ಬಿಡುಗಡೆ ಹೊಂದುವ ಅನೇಕ ಮಾರ್ಗಗಳನ್ನು ಶೋಧಿಸುತ್ತಾ ಬಂದಿವೆ. 'ಆಸೆಯೇ ದುಃಖಕ್ಕೆ ಮೂಲ' ಎನ್ನುವ ಬುದ್ಧನಿಂದ ಹಿಡಿದು, 'ಮನದ ಮುಂದಣ ಆಸೆಯೇ ಮಾಯೆ' ಎಂಬ ಅಲ್ಲಮಪ್ರಭುಗಳ ವಚನದವರೆಗೂ ಇಹಲೋಕದ ಲೋಲುಪ್ತತೆಯಿಂದ ಆಚೆಗೆ ತೆರಳುವ ಮಾರ್ಗವನ್ನು ಸೂಚಿಸುತ್ತಲೇ ಬಂದಿದ್ದಾರೆ. ಆತ್ಯಂತಿಕ ಸುಖ ಅಥವಾ ಆನಂದದ ಸ್ಥಿತಿಯನ್ನು ಹೊಂದುವಲ್ಲಿ ಯಾವ ಅಂಶಗಳು ಅಡ್ಡಿಯಾಗಿವೆಯೋ ಅವನ್ನು ಗುರುತಿಸಿ, ಅವುಗಳಿಂದ ವಿಮುಕ್ತಿ ಹೊಂದುವ ಆಶಯವೇ ಅಧ್ಯಾತ್ಮವು ಸಾಮಾಜಿಕೀಕರಣಗೊಂಡಿದ್ದರ ಹಿಂದಿನ ಕಾರಣವಾಗಿರಬಹುದು. ವಿವೇಕಾನಂದರು ಕೂಡ, 'ಸಮಾಜ ಸುಧಾರಣೆಯನ್ನು ಯಾವುದೇ ಕಾಯ್ದೆ-ಕಾನೂನುಗಳನ್ನು ನೆಚ್ಚುವುದಕ್ಕಿಂತ, ಅಧ್ಯಾತ್ಮವನ್ನು ಹಂಚುವ ಮೂಲಕ ಮಾಡಬೇಕು' ಎನ್ನುತ್ತಾರೆ. ಈ ಎಲ್ಲಾ ಒಳನೋಟಗಳ ಸಾರವನ್ನು ಗ್ರಹಿಸಿದರೆ, ಆಧ್ಯಾತ್ಮಿಕ ವ್ಯಕ್ತಿಯಾಗಿದ್ದರೂ ವ್ಯಕ್ತಿಗಿರುವ ಅಡೆತಡೆಗಳು ತೊಲಗಲು ಸಾಮಾಜಿಕವಾಗಿ ಅವನನ್ನು/ಅವಳನ್ನು ಸುತ್ತುವರಿದ ಪದರಗಳಿಂದ ಕಳಚಿಕೊಳ್ಳಬೇಕಾಗುತ್ತದೆ. ಹಾಗಾಗಿ ಜನಸಾಮಾನ್ಯರು ನಿಂತಲ್ಲಿಂದ ಮುಂದೆ ಚಲಿಸಲು ಋಷಿಮುನಿಗಳ, ವಚನಕಾರರ ಹಾಗೂ ಇತರ ಆಧ್ಯಾತ್ಮಿಕ ದಾರ್ಶನಿಕರ ದಾರಿದೀಪ ಸಮಾಜಕ್ಕೆ ಎಂದಿಗೂ ಅತ್ಯಗತ್ಯ. ಈ ಹಿನ್ನೆಲೆಯಲ್ಲಿ, ವಚನಸಾಹಿತ್ಯದ ಕುರಿತು ನಡೆದಿರುವ ಹಲವಾರು ಚರ್ಚೆಗಳನ್ನು ಗಮನಿಸಿದರೆ ಮೇಲೆ ವಿವರಿಸಿದ ಸುಧಾರಣೆಯ ಒಳತಿರುಳು ವಾದ- ವಾಗ್ವಾದಗಳ ನಡುವೆ ಕಳೆದುಹೋದಂತೆ ಕಾಣುತ್ತದೆ. ವಚನ ಸಾಹಿತ್ಯದ ಮೂಲಕ ಸಮಾಜವನ್ನು ತಿದ್ದುವಲ್ಲಿ, ಸಮುದಾಯಗಳನ್ನು ಪರಿವರ್ತಿಸುವಲ್ಲಿ ಶರಣರು ಹಲವು ತೆರನಾದ ಪ್ರಯತ್ನಗಳನ್ನು ಮಾಡಿರುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಅವರ ಪರಿವರ್ತನೆ ಅಥವಾ ಸುಧಾರಣೆಯು, ಆಧ್ಯಾತ್ಮಿಕ ಮಾರ್ಗಕ್ಕೆ ಅಡ್ಡಿಯಾಗಿರುವ ಅಂಶಗಳನ್ನು ತೊಡೆದುಹಾಕುವುದೇ ಆಗಿತ್ತು ಎಂಬುದನ್ನು ನಾವು ಮರೆತರೆ, ವಚನಸಾಹಿತ್ಯವನ್ನು ಅದರ ಸಂದರ್ಭದಿಂದ ಕಿತ್ತುಹಾಕಿದಂತೆ. ಯಾವುದೇ ವ್ಯಕ್ತಿಯೂ, ಸಮುದಾಯವೂ ವಚನಗಳನ್ನು ಓದಬಹುದು, ವ್ಯಾಖ್ಯಾನಿಸಬಹುದು. ಅದನ್ನು ವಿರೋಧಿಸುವುದೇ ಜೀವವಿರೋಧಿ ಕಾರ್ಯವಾಗುತ್ತದೆ.

(ಲೇಖಕರು ಸಂಶೋಧಕರು)

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಪೆನ್‌ಡ್ರೈವ್ ಚಿರಾಯುವಾಗಲಿ!

'ರಾಜಕಾರಣ ಮತ್ತು ಹಗರಣ ಎಂಬ ಶಬ್ದಗಳ ನಡುವೆ ಅದೇನೋ ವಿಚಿತ್ರ ಸಂಬಂಧ ಇದೆ ಕಣ್ರೀ; ಇವೆರಡೂ ಒಂದೇ ನಾಣ್ಯದ ಎರಡು ಮುಖ ಗಳಿದ್ದಂತೆ' ಎಂದು ಕೆಲವರು ಲೋಕಾಭಿರಾಮವಾಗಿ ಕಮೆಂಟ್ ಮಾಡುವುದಿದೆ. ಈ ಗ್ರಹಿಕೆಯನ್ನು ಒಂದಿಡೀ ರಾಜಕಾರಣಕ್ಕೆ ಅಥವಾ ಎಲ್ಲ ರಾಜಕಾರಣಿಗಳಿಗೆ ಸಾರಾ ಸಗಟಾಗಿ ಅನ್ವಯಿಸಲಾಗದಿದ್ದರೂ, ಕೆಲ ರಾಜಕಾರಣಿಗಳ ದಿನನಿತ್ಯದ ನವರಂಗಿ ಆಟ ವನ್ನು ನೋಡಿದಾಗ, ಈ ಗ್ರಹಿಕೆ ನಿಜ ಅನ್ನಿಸೋದುಂಟು, ಇರಲಿ.

ವಿಷಯ ಅದಲ್ಲ, ನಮ್ಮ ಕೆಲ ರಾಜಕಾರಣಿಗಳ ಹಗರಣ ಅಥವಾ ಎಡವಟ್ಟುಗಳನ್ನು ಜನರೆದುರು ಬೆತ್ತಲೆ ಮಾಡುವಲ್ಲಿ ತಾಂತ್ರಿಕ ಸಾಧನಗಳು ವಹಿಸಿರೋ ಪಾತ್ರವನ್ನೊಮ್ಮೆ ನೆನೆಯಬೇಕು. ಕೆಲ ವರ್ಷಗಳ ಹಿಂದೆ, ಪ್ರಮುಖ ರಾಷ್ಟ್ರೀಯ ಪಕ್ಷವೊಂದರ ಶಾಸಕರು ಹಾಗೂ ವಿಪಕ್ಷ ನಾಯಕರೊಬ್ಬರು, ರಾಜ್ಯ ಸರಕಾರಕ್ಕೆ ಬೆಂಬಲ ನೀಡಿದ್ದ ಪಕ್ಷೇತರ ಶಾಸಕರೊಬ್ಬರನ್ನು ತಮ್ಮಲ್ಲಿಗೆ ಸೆಳೆಯಲು ದೊಡ್ಡ ಮೊತ್ತದ ಆಫರ್ ಒಡ್ಡಿದ್ದರು. ಕಾರಿನಲ್ಲಿ ಸಾಗುತ್ತಾ ಆ ಸಂಬಂಧವಾಗಿ ಅವರು ವ್ಯವಹಾರ ಕುದುರಿಸುವಾಗ, ಆಫರ್ ನೀಡಲ್ಪಟ್ಟ ಚಾಲಾಕಿ ನಾಯಕರು ತಮಗೆ ಆಫರ್ ನೀಡಿದ ನಾಯಕರಿಗೆ ಗೊತ್ತಿಲ್ಲದಂತೆ ಆ ಮಾತುಕತೆಯನ್ನು ಡಿಕ್ಟಾಫೋನ್ (ಪುಟಾಣಿ ಟೇಪ್ ರೆಕಾರ್ಡರ್ ಅಥವಾ ವಾಯ್ಸ್ ರೆಕಾರ್ಡರ್) ಬಳಸಿ

ರೆಕಾರ್ಡ್ ಮಾಡಿಕೊಂಡು, ಕೆಲ ದಿನದ ನಂತರ ಪತ್ರಿಕಾಗೋಷ್ಠಿ ಕರೆದು ಆಫರ್ ನೀಡಿದ್ದ ನಾಯಕರು ಕೊಟ್ಟಿದ್ದ ನೋಟುಗಳ ಕಂತೆಯನ್ನು ಮಾಧ್ಯಮ ಪ್ರತಿನಿಧಿಗಳ ಸಮ್ಮುಖದಲ್ಲಿ ಸುರಿದು ಜನ್ಮ ಜಾಲಾಡಿದರು. ಹೀಗೆ 'ಜನ್ಮ ಜಾಲಾಡಿಸಿ ಕೊಂಡ' ನಾಯಕರನ್ನು ಮಾಧ್ಯಮಗಳು ಸಾಕಷ್ಟು ಕಾಲದವರೆಗೆ 'ಟೇಪು ಸುಲ್ತಾನ್' ಎಂದೇ ರೇಗಿಸುತ್ತಿದ್ದವು! ಇನ್ನು ರಾಜ್ಯದಲ್ಲಿ 'ಬಳ್ಳಾರಿ ಗಣಿಗಾರಿಕೆ' ಸಂಬಂಧಿತ ಚರ್ಚೆಗಳು ತಾರಕಕ್ಕೇರಿದ್ದಾಗ, 'ಗಣಿಧಣಿ' ನಾಮಾಂಕಿತ ರಾಜಕಾರಣಿಯೊಬ್ಬರು ಗಣಿಕಪ್ಪಕ್ಕೆ ಸಂಬಂಧಿಸಿ ತಮ್ಮ ರಾಜಕೀಯ ಎದುರಾಳಿಯ 'ಸಿಡಿ'ಯನ್ನು ಬಿಡುಗಡೆ ಮಾಡಿದ್ದರು. ಇದೇ ರೀತಿಯಲ್ಲಿ, 'ಸ್ಟಿಂಗ್ ಆಪರೇಷನ್' ಅಥವಾ 'ಕುಟುಕು ಕಾರ್ಯಾ ಚರಣೆ' ವೇಳೆ ಪೆನ್ ಕ್ಯಾಮರಾ, ಬಟನ್ ಕ್ಯಾಮರಾ, ಗಾಗಲ್ ಕ್ಯಾಮರಾದಂಥ ಗುಪ್ತ ಕ್ಯಾಮರಾಗಳು ಮಹತ್ತರ ಕೊಡುಗೆ ನೀಡಿದ್ದಿದೆ. ಇನ್ನು, 'ಪಿಡಿಪಿ' ಅಥವಾ 'ಪೆನ್‌ಡ್ರೈವ್ ಪುಟಾಣಿ'ಯು ಇತ್ತೀಚೆಗೆ 'ಪುಢಾರಿ ಪುಂಗವ' ಸಂಸದನೊಬ್ಬನ ಲೈಂಗಿಕ ಹಗರಣವನ್ನು ರಾಜ್ಯದಲ್ಲಷ್ಟೇ ಏಕೆ ಇಡೀ ದೇಶದಲ್ಲೇ ಬಟಾಬಯಲು ಮಾಡಿದ್ದು ನಿಮಗೆ ಗೊತ್ತೇ ಇದೆ (ಮತ್ತೊಬ್ಬ ಮಹಾಶಯರು, 'ನಿಮ್ಮೆಲ್ಲಾ ರಹಸ್ಯ ಈ ಪೆನ್‌ಡ್ರೈವ್‌ನಲ್ಲಿದೆ, ಸಮಯ ಬಂದಾಗ ಅದನ್ನು ಬಿಡುಗಡೆ ಮಾಡುವೆ' ಅಂತ ಕೆಲ ತಿಂಗಳ ಹಿಂದೆ ಜೇಬಿನಿಂದ ಪೆನ್‌ಡ್ರೈವ್ ಹೊರತೆಗೆದು ತೋರಿಸಿ ಕಾಗೆ ಹಾರಿಸಿದರೇ ಹೊರತು, ಪೆನ್‌ಡ್ರೈವ್ ಎಂಬ ಆ ಬುಟ್ಟಿಯಲ್ಲಿದ್ದ 'ರಹಸ್ಯ' ಹಾವನ್ನು ಹೊರಗೆ ಬಿಡಲೇ ಇಲ್ಲ, ಅದು ಬೇರೆ ಮಾತು!). 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತೆ ಅಂಗೈಯಲ್ಲಿ ಅಡಕವಾಗುವ ಸಿ.ಡಿ. ಮತ್ತು ಪೆನ್‌ಡ್ರೈವ್‌ನಂಥ ತಾಂತ್ರಿಕ ಸಾಧನಗಳು ಕೆಲ ರಾಜಕಾರಣಿಗಳ ನಿಜಬಣ್ಣ ವನ್ನು ಸಮರ್ಥವಾಗಿಯೇ ಬಯಲುಮಾಡಿರುವುದರಿಂದ, ಇವು ಚಿರಾಯುವಾಗಲಿ ಎಂದು ಹಾರೈಸೋಣವೇ?

ನಾರಾಯಣ ನಾರಾಯಣ!

ಕುಸ್ತಿ ಅಖಾಡಕ್ಕೆ ಸಂಬಂಧಿಸಿ ಸಾಕಷ್ಟು ಸುದ್ದಿಯನ್ನೂ, ವಿವಾದಗಳನ್ನೂ ಹುಟ್ಟುಹಾಕಿದ್ದ ಕುಸ್ತಿಪಟು ವಿನೇಶ್ ಫೋಗಟ್ ರಾಜಕಾರಣವನ್ನು ಪ್ರವೇಶಿಸಲಿದ್ದಾರೆಯೇ? ಹರಿಯಾಣ ಮಾಜಿ ಸಿಎಂ ಭೂಪಿಂದರ್ ಸಿಂಗ್ ಹೂಡಾ ಅವರ ಕುಟುಂಬಿಕರನ್ನು ಫೋಗಟ್ ಭೇಟಿ ಮಾಡಿರುವುದು ನೋಡಿದರೆ 'ಹೌದು' ಎಂದೇ ಉತ್ತರಿಸಬೇಕಾಗುತ್ತದೆ. ಅಕ್ಟೋಬರ್‌ನಲ್ಲಿ ನಡೆಯಲಿರುವ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಫೋಗಟ್ ಸ್ಪರ್ಧಿಸಲಿದ್ದಾರೆ ಎನ್ನಲಾಗುತ್ತಿದೆ. ರಾಜಕೀಯದ ಅಖಾಡದಲ್ಲೂ ಅವರು ಯಶಸ್ವಿಯಾಗಿ ಪಟ್ಟು ಹಾಕಲಿದ್ದಾರೆಯೇ ಎಂಬುದನ್ನು ಕಾಲವಷ್ಟೇ ಹೇಳಬಲ್ಲದು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 245

ಸಮಾಚಾರ ಸಣ್ಣದಲ್ಲ

ಯುಪಿಎಸ್ ಅಂಗೀಕಾರ ಯು-ಟರ್ನ್: ಟೀಕೆ

ದೆಹಲಿ: 'ಏಕೀಕೃತ ಪಿಂಚಣಿ ಯೋಜನೆ'(ಯುಪಿಎಸ್)ಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟ ಅನುಮೋದನೆ ನೀಡಿದೆ. ಆದರೆ, ಈ ಕ್ರಮಕ್ಕೆ ಕಾಂಗ್ರೆಸ್

ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಣಕವಾಡಿದ್ದಾರೆ. ಯುಪಿಎಸ್ ಯೋಜನೆಯಲ್ಲಿನ 'ಯು' ಎಂದರೆ ಮೋದಿ ಸರಕಾರದ 'ಯು-ಟರ್ನ್' ಎಂದರ್ಥ ಎಂದು ಖರ್ಗೆ ಕುಟುಕಿದ್ದಾರೆ. ಕೇಂದ್ರ ಸರಕಾರದ ನಡೆಯನ್ನು 'ಎಕ್ಸ್' ಖಾತೆಯಲ್ಲಿ ಭಾನುವಾರ ಟೀಕಿಸಿದ ಖರ್ಗೆ 'ಜೂ.4ರ ಬಳಿಕ ಪ್ರಧಾನಿ ಅಧಿಕಾರದ ದುರಹಂಕಾರದ ಮೇಲೆ ದೇಶದ ಜನರ ಶಕ್ತಿ ಮೇಲುಗೈ ಸಾಧಿಸಿದೆ. ದೀರ್ಘಕಾಲದ ಬಂಡವಾಳ ಲಾಭ ವಿಚಾರದಲ್ಲಿ, 'ವಕ್ಫ್ ಕಾಯ್ದೆ'ಯ ತಿದ್ದುಪಡಿ ವಿಧೇಯಕದಲ್ಲಿ, ಪ್ರಸಾರ ಮಸೂದೆ, ಲ್ಯಾಟರಲ್ ಎಂಟ್ರಿ ವಿಚಾರಗಳಲ್ಲೆಲ್ಲಾ ಮೋದಿ ಸರಕಾರ ಯು ಟರ್ನ್ ಹೊಡೆದಿದೆ. ಈ ನಿರಂಕುಶ ಸರಕಾರದಿಂದ 140 ಕೋಟಿ ಭಾರತೀಯರನ್ನು ರಕ್ಷಿಸುತ್ತೇವೆ' ಎಂದೂ ಖರ್ಗೆ ಬರೆದಿದ್ದಾರೆ.

10 ವರ್ಷದ ವಿದ್ಯಾರ್ಥಿ ಬ್ಯಾಗಿನಲ್ಲಿ ಪಿಸ್ತೂಲು!

ದೆಹಲಿ: ದೆಹಲಿಯ ದೀಪಕ್ ವಿಹಾರ ಪ್ರದೇಶದ ಶಾಲೆಯ 4ನೇ ತರಗತಿ ಬಾಲಕನ ಶಾಲಾ ಬ್ಯಾಗ್‌ನಲ್ಲಿ ಪಿಸ್ತೂಲು ಪತ್ತೆಯಾಗಿದ್ದು, ಶಾಲಾವರಣದಲ್ಲಿ ಕೆಲಕಾಲ ಆತಂಕಕ್ಕೆ ಕಾರಣವಾಗಿತ್ತು. ತಂದೆ ಬಳಿ ಇದ್ದ ಪಿಸ್ತೂಲನ್ನು ಆಟಿಕೆ ವಸ್ತು ಎಂದು ತಿಳಿದ 10 ವರ್ಷದ ಬಾಲಕ, ಪಿಸ್ತೂಲನ್ನು ಶಾಲಾ ಬ್ಯಾಗ್‌ನಲ್ಲಿರಿಸಿಕೊಂಡು ಶಾಲೆಗೆ ತೆಗೆದುಕೊಂಡು ಬಂದಿದ್ದ. ಅದೃಷ್ಟವಶಾತ್ ಪಿಸ್ತೂಲ್‌ನಲ್ಲಿ ಗುಂಡುಗಳು(ಮ್ಯಾಗಜೈನ್) ಇರಲಿಲ್ಲ, ಹಾಗಾಗಿ ಯಾವುದೇ ಪ್ರಾಣಹಾನಿಗೆ ಕಾರಣವಾಗಿಲ್ಲ. ಬಾಲಕನ ಬ್ಯಾಗ್‌ನಲ್ಲಿ ಪಿಸ್ತೂಲ್ ಕಂಡ ಶಿಕ್ಷಕರು ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಶಾಲೆ ಆಡಳಿತ ಮಂಡಳಿಯೂ ಬಾಲಕನ ತಾಯಿಯನ್ನು ಕರೆಸಿ ವಿಚಾರಣೆ ನಡೆಸಿದೆ. ಬಾಲಕನ ತಂದೆ ಕೆಲ ತಿಂಗಳ ಹಿಂದೆ ನಿಧನರಾಗಿದ್ದಾರೆ. ಅವರ ಬಳಿ ಪರವಾನಿಗೆ ಪಡೆದ ಪಿಸ್ತೂಲ್ ಇತ್ತು. ಪೊಲೀಸ್ ಠಾಣೆಗೆ ಪಿಸ್ತೂಲ್ ವಾಪಸ್ ಮಾಡಲು ಬಾಲಕನ ತಾಯಿ ಹೊರಗೆ ತೆಗೆದಿಟ್ಟದ್ದಾಗಲೇ ಬಾಲಕನ ಕಣ್ಣಿಗೆ ಬಿದ್ದಿದೆ. ಆಟದ ಪಿಸ್ತೂಲೆಂದು ಬ್ಯಾಗ್‌ಗೆ ಹಾಕಿಕೊಂಡಿದ್ದಾಗಿ ಬಾಲಕ ಹೇಳಿದ್ದಾನೆ. ಬಳಿಕ ಪಿಸ್ತೂಲ್‌ನನ್ನು ಬಾಲಕನ ತಾಯಿ ಪೊಲೀಸರಿಗೆ ಒಪ್ಪಿಸಿದ್ದಾರೆ.

ಪಾಕ್‌ನಲ್ಲಿ ರಾಜಗುರು 116ನೇ ಜನ್ಮ ದಿನ

ಲಾಹೋರ್: ಸ್ವಾತಂತ್ರ್ಯ ಹೋರಾಟಗಾರ ರಾಜಗುರು ಅವರ 116ನೇ ಜನ್ಮ ದಿನಾಚರಣೆಯನ್ನು ಪಾಕಿಸ್ತಾನದ ಭಗತ್‌ಸಿಂಗ್ ಸ್ಮಾರಕ ಪ್ರತಿಷ್ಠಾನ ಶನಿವಾರ ಆಚರಿಸಿದೆ. ಲಾಹೋರ್‌ನ ಹೈಕೋರ್ಟ್ ಆವರಣದಲ್ಲಿರುವ ಜಿನ್ನಾ ಸಭಾಂಗಣದಲ್ಲಿ ಪ್ರತಿಷ್ಠಾನದ ಸದಸ್ಯರು, ವಕೀಲರು ಹಾಗೂ ಹೋರಾಟಗಾರರು ಕೇಕ್ ಕತ್ತರಿಸಿ ರಾಜಗುರು ಜನ್ಮದಿನ ಆಚರಿಸಿದರು. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದ ರಾಜಗುರು, ಸುಖದೇವ್, ಭಗತ್ ಸಿಂಗ್ ಅವರ ತ್ಯಾಗ, ಶೌರ್ಯ, ಬಲಿದಾನ ಸ್ಮರಿಸಲಾಯಿತು. 'ರಾಜಗುರು ಶತಮಾನಕ್ಕೊಮ್ಮೆ ಜನಿಸುವಂಥ ಅಪರೂಪದ ವ್ಯಕ್ತಿ. ಉಪಖಂಡದ ಜನರಿಗೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಅವರ ಕಾರ್ಯ ಸದಾ ಸ್ಮರಣೀಯ' ಎಂದು ಪ್ರತಿಷ್ಠಾನದ ಅಧ್ಯಕ್ಷ ಇಮ್ತಿಯಾಜ್ ರಶೀದ್ ಖುರೇಷಿ ಸ್ಮರಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ 1931ರ ಮಾ.23ರಂದು ಬ್ರಿಟಿಷರು ಸುಖದೇವ್, ರಾಜಗುರು, ಭಗತ್‌ಸಿಂಗ್‌ರನ್ನು ಗಲ್ಲಿಗೇರಿಸಿದರು.

ಡೆಹರಾಡೂನ್‌ನಲ್ಲೂ ನಿರ್ಭಯ ರೀತಿ ರೇಪ್

ಡೆಹರಾಡೂನ್: ದೆಹಲಿಯಲ್ಲಿ ನಡೆದ ನಿರ್ಭಯಾ ಪ್ರಕರಣದ ರೀತಿಯಂತಹುದೇ ಕೃತ್ಯ ಉತ್ತರಾಖಂಡ ರಾಜ್ಯದಲ್ಲಿಯೂ, ಅದೂ ಅಪ್ರಾಪ್ತೆಯ ಮೇಲೆ ನಡೆದಿದ್ದು, ದೇಶವೇ ಬೆಚ್ಚಿಬೀಳುವಂತಾಗಿದೆ. ಉತ್ತರಾಖಂಡ ರಾಜ್ಯ ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ದೆಹಲಿಯಿಂದ ಡೆಹ್ರಾಡೂನ್‌ಗೆ ಪ್ರಯಾಣಿಸುತ್ತಿದ್ದ ಬಾಲಕಿ ಮೇಲೆ ಐವರು ಕಾಮುಕರು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ಚಲಿಸುತ್ತಿದ್ದ ಬಸ್‌ನಲ್ಲಿಯೇ ಬಾಲಕಿ ಮೇಲೆ ಮುಗಿಬಿದ್ದು ಅತ್ಯಾಚಾರ ನಡೆಸಿದ ಐವರು ದುರುಳರನ್ನೂ ಬಂಧಿಸಿರುವ ಡೆಹರಾಡೂನ್ ಪೊಲೀಸರು, ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ. ಡೆಹ್ರಾಡೂನ್‌ನ ಪಟೇಲ್ ನಗರದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹೆಚ್ಚಿನ ಸಾಕ್ಷ್ಯ ಸಂಗ್ರಹದಲ್ಲಿ ಪೊಲೀಸ್ ಅಧಿಕಾರಿಗಳು ತೊಡಗಿದ್ದಾರೆ ಎಂದು ಎಸ್‌ಪಿ ತಿಳಿಸಿದ್ದಾರೆ.

{ ಅಮಿತ್ ಶಾ } ಕೇಂದ್ರ ಗೃಹ ಸಚಿವ

ಮಾದಕ ದ್ರವ್ಯಗಳ ವಿರುದ್ಧ ತೀವ್ರ ಸ್ವರೂಪದ ಹಾಗೂ ಸಮಗ್ರ ಕಾರ್ಯತಂತ್ರಗಳ ಮೂಲಕ ಹೋರಾಡಿದರೆ ಭಾರತವನ್ನು ಮಾದಕದ್ರವ್ಯ ಮುಕ್ತ ದೇಶ ಮಾಡಬಹುದು. ಮಾದಕ ವಸ್ತುಗಳ ಅಕ್ರಮ ಸಾಗಣೆ ರಾಷ್ಟ್ರೀಯ ಭದ್ರತೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಅಕ್ರಮ ಡ್ರಗ್ಸ್ ಮಾರಾಟದಿಂದ ಗಳಿಸಿದ ಹಣ ಭಯೋತ್ಪಾದನೆಗೆ ನೆರವಾಗುತ್ತಿದೆ, ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನೂ ಕುಗ್ಗಿಸುತ್ತಿದೆ.

ಅಪಾರ ಸಂಖ್ಯೆಯ ಯುವಜನ ರಾಜಕೀಯ ಅರಂಗೇಟ್ರಂಗೆ ಸಿದ್ಧ

ಹೊಸಬರು ರಾಜಕೀಯ ಪ್ರವೇಶಿಸಿದರೆ ಪ್ರಜಾಪ್ರಭುತ್ವ ಬಲ ಹೆಚ್ಚಲಿದೆ: ಮೋದಿ

113ನೇ ಮನ್ ಕಿ ಬಾತ್‌ನಲ್ಲಿ ಇಸ್ರೋ ಬಾಹ್ಯಾಕಾಶ ಕ್ಷೇತ್ರ ಸಾಧನೆಗೆ ಪ್ರಧಾನಿ ಶ್ಲಾಘನೆ

▶ ಚಂದ್ರಯಾನ-3ರ ಯಶಸ್ಸು ದೇಶ ಮರೆಯಲ್ಲ

ದೆಹಲಿ: ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಿದೆ. ಈವರೆಗೆ ಯಾರೂ ಪ್ರವೇಶಿಸದ ಚಂದ್ರನ ದಕ್ಷಿಣ ಧ್ರುವದಲ್ಲಿ ಭಾರತದ ಉಪಗ್ರಹ 'ಪ್ರಜ್ಞಾನ್' ಮತ್ತು ರೋಬೊ 'ರೋವರ್' ಅನ್ನು ಯಶಸ್ವಿಯಾಗಿ ಇಳಿಸಲಾಗಿದೆ. ಈ ಐತಿಹಾಸಿಕ ಸಾಧನೆಯ ಕ್ಷಣವನ್ನು ಇಡೀ ವಿಶ್ವವೇ ನೆನಪಿಡಲಿದೆ. ಭಾರತೀಯರಂತೂ ಮರೆಯಲು ಸಾಧ್ಯವೇ ಇಲ್ಲ ಎಂದು ಮೋದಿ ಮಾಸಿಕ ರೇಡಿಯೋ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ಹೇಳಿದ್ದಾರೆ. ಇದೇ ಆ.23ರಂದು ದೇಶ ಮೊದಲ 'ರಾಷ್ಟ್ರೀಯ ಬಾಹ್ಯಾಕಾಶ ದಿನ' ಆಚರಿಸಿತು. ನೀವೂ ಆಚರಿಸಿದ್ದೀರೆಂದು ನಂಬುವೆ. ಮತ್ತೊಮ್ಮೆ ನೀವೆಲ್ಲರೂ ಚಂದ್ರಯಾನ-3ರ ಯಶಸ್ಸು ನೆನಪಿಸಿಕೊಳ್ಳಬೇಕು. ನಮ್ಮ 'ಇಸ್ರೊ' ಉಡ್ಡಯನ ಮಾಡಿದ ಉಪಗ್ರಹ ಬಲು ಯಶಸ್ವಿಯಾಗಿ 2023ರ ಆ.23ರಂದು ಚಂದ್ರನ ದಕ್ಷಿಣ ಧ್ರುವದ 'ಶಿವ-ಶಕ್ತಿ ಪಾಯಿಂಟ್'ನಲ್ಲಿ ಇಳಿಯಿತು. ಈ ಸಾಧನೆ ಮಾಡಿದ ವಿಶ್ವದ ಮೊದಲ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ ಎಂದು ಪ್ರಧಾನಿ ಮೋದಿ ಅಭಿಮಾನದಿಂದ ನುಡಿದರು.

ದೆಹಲಿ: ದೊಡ್ಡ ಸಂಖ್ಯೆಯ ಯುವಜನರು ರಾಜಕೀಯಕ್ಕೆ ಸೇರಲು ಸಿದ್ಧರಿದ್ದಾರೆ. ಅವರಿಗೆ ಸರಿಯಾದ ಅವಕಾಶ ಹಾಗೂ ಮಾರ್ಗದರ್ಶನ ನೀಡಬೇಕಷ್ಟೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದ ಒಂದು ಲಕ್ಷ ಯುವಜನರು ರಾಜಕೀಯಕ್ಕೆ ಸೇರಬೇಕು ಎಂದು ಈ ಬಾರಿಯ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಕರೆ ಕೊಟ್ಟಿದ್ದೆ. ಅದಕ್ಕೆ ವ್ಯಾಪಕ ಪ್ರತಿಕ್ರಿಯೆಗಳು ಬಂದಿವೆ. ದೊಡ್ಡ ಸಂಖ್ಯೆಯಲ್ಲಿ ಯುವಜನತೆ ರಾಜಕೀಯಕ್ಕೆ ಸೇರಲು ಸಿದ್ಧರಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಯುವಜನರು ತಮ್ಮ ಅನಿಸಿಕೆಗಳನ್ನು ಪತ್ರ ಬರೆದು ತಿಳಿಸಿದ್ದಾರೆ, ಬಗೆ ಬಗೆಯ ಸಲಹೆಗಳನ್ನೂ ನೀಡಿದ್ದಾರೆ, ಹೊಸ ಪರಿಕಲ್ಪನೆಗಳನ್ನೂ ಹಂಚಿಕೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳ ಮೂಲಕ ಸಂಪರ್ಕಿಸಿದ್ದಾರೆ. ಕೆಲವೇ ಕುಟುಂಬಗಳವರು ರಾಜಕೀಯದಲ್ಲಿರುವುದರಿಂದ, ಪರಿವಾರ ರಾಜಕಾರಣದಿಂದಾಗಿ ದೇಶದಲ್ಲಿ ಪ್ರತಿಭಾವಂತರ, ಆಸಕ್ತಿ ಹೊಂದಿದ ಯುವಜನರ ರಾಜಕೀಯ ಪ್ರವೇಶದ ಕನಸುಗಳು ಹಾಗೆಯೇ ಉಳಿಯುತ್ತಿವೆ ಎಂದೂ ಅಭಿಪ್ರಾಯಪಟ್ಟಿದ್ದಾರೆ ಎಂದು ಮೋದಿ ವಿವರಿಸಿದ್ದಾರೆ.

ಖುದ್ದು ಪ್ರಧಾನಿ ನರೇಂದ್ರ ಮೋದಿ ಅವರೇ ನಡೆಸಿಕೊಡುವ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್' 113ನೇ ಸಂಚಿಕೆ ಭಾನುವಾರ ಬಿತ್ತರವಾಗಿದ್ದು, ರಾಜಕೀಯಕ್ಕೆ ಹೊಸಬರ ಪ್ರವೇಶ, ಪ್ರಜಾಪ್ರಭುತ್ವದ ಬಲಗೊಳ್ಳುವಿಕೆ, ವಿಕಸಿತ ಭಾರತ, ಚಂದ್ರಯಾನ-3 ಸೇರಿದಂತೆ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಸಾಧನೆ ಮೊದಲಾದ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ.

21ನೇ ಶತಮಾನದಲ್ಲಿ ಭಾರತದಲ್ಲಿ ಬಹಳಷ್ಟು ಸಂಗತಿಗಳು ನಡೆಯುತ್ತಿವೆ. ಅವು 'ವಿಕಸಿತ ಭಾರತ'ದ ಅಡಿಪಾಯವನ್ನು ಬಲಪಡಿಸುತ್ತಿವೆ. ಅಭಿವೃದ್ಧಿ ಹೊಂದಿದ ರಾಷ್ಟ್ರ ನಿರ್ಮಾಣದ ಗುರಿಯನ್ನು ಇನ್ನಷ್ಟು ಬಲಪಡಿಸುತ್ತಿದೆ ಎಂದು ಪ್ರಧಾನಿ ಹೇಳಿದರು.

ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದವರು, ಸಮಾಜದ ಎಲ್ಲಾ ವರ್ಗದ ಅಸಂಖ್ಯಾತ ಜನರು ಭಾಗವಹಿಸಿದ್ದರು. ಅವರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮದೆನ್ನುವ ಎಲ್ಲವನ್ನೂ ಅರ್ಪಿಸಿದರು. 'ವಿಕಸಿತ ಭಾರತ'ದ ಪರಿಕಲ್ಪನೆ ನಿಜವಾಗಿಸಲು ಭಾರತೀಯರು ಮತ್ತೊಮ್ಮೆ ಅಂತಹುದೇ ಮನೋಭಾವ ತೋರಬೇಕಿದೆ ಎಂದು ಮೋದಿ ಉತ್ತೇಜನದ ಮಾತುಗಳನ್ನಾಡಿದ್ದಾರೆ.

▶ ಯುವ ವಿಜ್ಞಾನಿಗಳ ಜತೆ ಸಂವಾದ

ಬಾಹ್ಯಾಕಾಶ ಕ್ಷೇತ್ರದಲ್ಲಿನ ಈ ಸಾಧನೆ ಮತ್ತು ಸುಧಾರಣೆಗಳಿಂದಾಗಿ ದೇಶದ ಯುವಜನರು ಬಹಳಷ್ಟು ಪ್ರಯೋಜನ ಪಡೆದಿದ್ದಾರೆ. ಸ್ಟಾರ್ಟ್‌ಅಪ್ 'ಸ್ಪೇಸ್‌ಟೆಕ್ ಗ್ಯಾಲಕ್ಸಿ' ತಂಡವನ್ನು ಕಟ್ಟಿದ್ದ ಐಐಟಿ ಮದ್ರಾಸ್‌ನ ಹಿರಿಯ ವಿದ್ಯಾರ್ಥಿಗಳ ಜತೆ ಮೋದಿ ಸಂವಾದ ನಡೆಸಿದರು. ಯುವ ವಿಜ್ಞಾನಿ ಸುಯಾಶ್ ಮಾತನಾಡಿ, ನಾವು ಗೆಳೆಯರು ಐಐಟಿ ಮದ್ರಾಸ್‌ನಲ್ಲಿ ವ್ಯಾಸಂಗ ಮಾಡುವಾಗ 'ಹೈಪರ್ ಲೂಪ್' ಎಂಬ ಯೋಜನೆ ಹೊಳೆದು 'ಅವಿಷ್ಕಾರ್ ಹೈಪರ್ ಲೂಪ್' ತಂಡ ಆರಂಭಿಸಿದೆವು. ಆ ಯೋಜನೆಯೊಂದಿಗೇ ಅಮೆರಿಕಕ್ಕೆ ತೆರಳಿದೆವು. ಏಷ್ಯಾದಿಂದ ಅಲ್ಲಿಗೆ ಹೋಗಿ ತ್ರಿವರ್ಣ ಧ್ವಜ ಹಾರಿಸಿದ ಏಕೈಕ ತಂಡ ನಮ್ಮದು ಎಂದು ವಿವರಿಸಿದರು. ಉತ್ತರಾಖಂಡದ ಅಲ್ಮೋರಾ ಜಿಲ್ಲೆಯ ರಕ್ಷಿತ್ ತಮ್ಮ ಸ್ಟಾರ್ಟ್‌ಅಪ್‌ನಲ್ಲಿನ ತಂತ್ರಜ್ಞಾನದ ಪ್ರಯೋಜನಗಳ ಬಗ್ಗೆ ಮಾತನಾಡಿದರು. 'ನಮ್ಮ ಹೈಪರ್ ಲೂಪ್'ದಿಂದ ದೇಶದ ಯಾವುದೇ ಮೂಲೆಯ ಸ್ಪಷ್ಟ ಚಿತ್ರ ತೆಗೆಯಬಹುದು. ನಾವು ಸಂಗ್ರಹಿಸುವ ಡೇಟಾವನ್ನು ಎರಡು ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಬಳಸಲಾಗುತ್ತದೆ. ದೇಶದ ಗಡಿಗಳು ಹಾಗೂ ಸಾಗರ(ಸಮುದ್ರ)ಗಳ ಮೇಲ್ವಿಚಾರಣೆ. ಅಲ್ಲದೇ ಶತ್ರುಗಳ ಚಟುವಟಿಕೆಗಳನ್ನೂ ಈ ಹೈಪರ್ ಲೂಪ್ ಮೂಲಕ ಸದಾ ಗಮನಿಸಲಾಗುತ್ತದೆ. ಆ ಮೂಲಕ ದೇಶದ ಸುರಕ್ಷೆಗಾಗಿ ಶ್ರಮಿಸಲಾಗುತ್ತದೆ. ಎರಡನೆಯದಾಗಿ ದೇಶದ ರೈತರನ್ನು ಬಲಿಷ್ಟಗೊಳಿಸಲೂ ನಮ್ಮ ತಂತ್ರಜ್ಞಾನದಿಂದ ಅನುಕೂಲವಿದೆ ಎಂದು ವಿವರಿಸಿದರು.

▶ ಮಾನವ-ವನ್ಯಮೃಗ ಸಂಬಂಧ

ಅಸ್ಸಾಂ ರಾಜ್ಯದಲ್ಲಿನ ತೀನ್ ಸುಕಿಯ ಜಿಲ್ಲೆಯ ಪುಟ್ಟ ಗ್ರಾಮ ಬಾರೇಕುರಿಯಲ್ಲಿನ ಮೋರಾನ್ ಸಮುದಾಯದವರು ಮಾನವ-ಪ್ರಾಣಿ ಸಂಬಂಧಕ್ಕೆ ಉತ್ತಮ ಉದಾಹರಣೆಯಾಗಿದ್ದಾರೆ. 'ಹೂಲಾಕ್ ಗಿಬ್ಬೋನ್' ಅಥವಾ ಹೋಲೊ ಬಂದರ್‌ಗಳ ಜತೆಗೇ ಸಹಜೀವನ ನಡೆಸಿದ್ದಾರೆ. ಆದ ಕಾರಣವಾಗಿ ಗಿಬ್ಬೋನ್‌ಗಳು (ಮುಸಿಯ ಎಂಬ ಮಂಗ ಪ್ರಭೇದ) ಈ ಗ್ರಾಮದಲ್ಲಿ ಸುರಕ್ಷಿತವಾಗಿವೆ. ಮಂಗ-ಮಾನವ ಸಂಬಂಧ ಇಲ್ಲಿ ಬಲು ಗಾಢವಾಗಿದೆ ಎಂದು ಮೋದಿ ಪ್ರಶಂಸಿಸಿದ್ದಾರೆ.

ಅಯೋಧ್ಯೆ ರಾಮಮಂದಿರಕ್ಕೆ 2,100 ಕೋಟಿ ರು. ಚೆಕ್

ಅಯೋಧ್ಯೆ: ಉತ್ತರ ಪ್ರದೇಶದಲ್ಲಿನ ಅಯೋಧ್ಯೆಯ ಶ್ರೀ ರಾಮಮಂದಿರ ಟ್ರಸ್ಟ್‌ಗೆ ದಾನಿಯೊಬ್ಬರು 2,100 ಕೋಟಿ ರು. ಮೊತ್ತದ ಚೆಕ್ ಕಳಿಸಿದ್ದಾರೆ. ಚೆಕ್ ಮೇಲೆ ದಾನಿ ಹೆಸರು, ವಿಳಾಸ, ಫೋನ್ ನಂಬರ್ ಇದ್ದರೂ ಮಾಹಿತಿ ರಹಸ್ಯವಾಗಿರಿಸಲಾಗಿದೆ. ಚೆಕ್ಕನ್ನು ಪ್ರಧಾನ ಮಂತ್ರಿ ಸಹಾಯ ನಿಧಿ ಹೆಸರಲ್ಲಿ ಟ್ರಸ್ಟ್ ವಿಳಾಸಕ್ಕೆ ಕೊರಿಯರ್‌ನಲ್ಲಿ ಕಳುಹಿಸಿಕೊಡಲಾಗಿದೆ.

2 ದಿನಗಳ ಹಿಂದೆ ಚೆಕ್ ತಮ್ಮ ಕಚೇರಿಗೆ ತಲುಪಿದೆ. ಚೆಕ್ ಬಗೆಗೆ ಪೂರ್ಣ ಮಾಹಿತಿ ಪಡೆಯಲು ಪ್ರಧಾನಿ ಕಚೇರಿಗೆ ಕಳುಹಿಸಿಕೊಡಲು ಟ್ರಸ್ಟ್ ಸಿಬ್ಬಂದಿಗೆ ಸೂಚಿಸಲಾಗಿದೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಪ್ರ. ಕಾರ್ಯದರ್ಶಿ ಚಂಪತ್‌ರಾಯ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಆಯ-ವ್ಯಯ:

ಶ್ರೀರಾಮ ಮಂದಿರ ನಿರ್ಮಾಣಕ್ಕೆ ಈವರೆಗೆ ಒಟ್ಟು 1,850 ಕೋಟಿ ರು. ವೆಚ್ಚವಾಗಿದೆ. ಕಳೆದ ವರ್ಷ 776 ಕೋಟಿ ರು. ಮತ್ತು ಪ್ರಸಕ್ತ ಹಣಕಾಸು ವರ್ಷ ದೇಗುಲದ ಉಳಿದ ಕಾಮಗಾರಿಗೆ 850 ಕೋಟಿ ರು. ವೆಚ್ಚವಾಗಲಿದೆ. ದೇವಸ್ಥಾನ ನಿರ್ವಹಣೆಗೆ 540 ಕೋಟಿ ರು., ಇತರೆ ವೆಚ್ಚಕ್ಕೆ 136 ಕೋಟಿ ರು. ವೆಚ್ಚ ಮಾಡಲಾಗಿದೆ. ಶ್ರೀ ರಾಮಮಂದಿರ ಟ್ರಸ್ಟ್ ಹೆಸರಲ್ಲಿ ಒಟ್ಟು 2,600 ಕೋಟಿ ರು.ಗಳನ್ನು ಬ್ಯಾಂಕ್‌ನಲ್ಲಿ ನಿಗದಿತ ಅವಧಿಗೆ ಠೇವಣಿಯಾಗಿ ಇರಿಸಲಾಗಿದೆ. ಕಳೆದ ಹಣಕಾಸು ವರ್ಷ ಬ್ಯಾಂಕ್‌ಗಳ ಠೇವಣಿಗೆ 363.34 ಕೋಟಿ ರು. ಬಡ್ಡಿ ರೂಪದಲ್ಲಿ ಬಂದಿದೆ. ದೇಣಿಗೆಯಾಗಿ ಹುಂಡಿ ಮೂಲಕ 58 ಕೋಟಿ ರು., ಆನ್‌ಲೈನ್ ಮೂಲಕ 71 ಕೋಟಿ ರು., ಅನಿವಾಸಿ ಭಾರತೀಯರಿಂದ 10.43 ಕೋಟಿ ರು. ಮತ್ತು 20 ಕೆಜಿ ಚಿನ್ನ ಹಾಗೂ 900 ಕೆಜಿ ಬೆಳ್ಳಿ ಸಂಗ್ರಹವಾಗಿದೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ 2023-24ನೇ ಹಣಕಾಸು ವರ್ಷದ ಆದಾಯ-ವೆಚ್ಚದ ವಿವರ ಪ್ರಕಟಿಸಿದೆ.

53 ಸಾಕ್ಷ್ಯ ಸಂಗ್ರಹಿಸಿದ ಸಿಬಿಐ

9 ಸಾಕ್ಷ್ಯ ಮುಖ್ಯ ಆರೋಪಿಗೆ ಸಂಬಂಧಿಸಿದ್ದು
ಆರೋಪಿ ಸಂಜಯ್ ಪಾಲಿಗ್ರಫಿ ಪರೀಕ್ಷೆ ಅಂತ್ಯ

ಕೋಲ್ಕತ್ತ: ನಗರದ ಸರಕಾರ ವೈದ್ಯಕೀಯ ಕಾಲೇಜು-ಆಸ್ಪತ್ರೆಯ ಕಿರಿಯ ವೈದ್ಯೆ ಮೇಲಿನ ಅತ್ಯಾಚಾರ-ಕೊಲೆ ಪ್ರಕರಣದಲ್ಲಿ

ಕೇಂದ್ರ ತನಿಖಾ ದಳದ (ಸಿಬಿಐ) ತನಿಖೆ ಚುರುಕುಗೊಂಡಿದೆ. ಸಿಬಿಐ ಅಧಿಕಾರಿಗಳ ತಂಡ, ಅತ್ಯಾಚಾರ-ಕೊಲೆ ಆರೋಪಿ ಸಂಜಯ್ ರೇ, ಭ್ರಷ್ಟಾಚಾರ ಆರೋಪಿ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಹಾಗೂ ಮತ್ತೆ ಐವರ ಪಾಲಿಗ್ರಫಿ ಪರೀಕ್ಷೆ ಪೂರ್ಣಗೊಳಿಸಿದೆ. ಇನ್ನೊಂದೆಡೆ ಪ್ರಕರಣದ ಬಗ್ಗೆ ಮತ್ತಷ್ಟು ಸುಳಿವು ನೀಡಬಹುದಾದ 53 ಸಾಕ್ಷ್ಯಗಳನ್ನು ಸಿಬಿಐ ವಶಕ್ಕೆ ಪಡೆದು ತನಿಖೆ ನಡೆಸುತ್ತಿದೆ. ಈ ವಸ್ತುಗಳಲ್ಲಿ ಸಂಜಯ್ ರೇ ಅಪರಾಧ ಕೃತ್ಯ ಬಳಿಕ ಸ್ಥಳದಲ್ಲಿ ಬಿಟ್ಟು ಹೋಗಿದ್ದ, ಕೃತ್ಯಕ್ಕೆ ನೆರವಾದ 9 ವಸ್ತುಗಳು ಕೂಡ ಸೇರಿವೆ ಎಂದು ತನಿಖಾಧಿಕಾರಿ ಹೇಳಿದ್ದಾರೆ.

ಪ್ರಮುಖ ಸಾಕ್ಷ್ಯಗಳು: ಮುಖ್ಯ ಆರೋಪಿ ಸಂಜಯ್ ರೇ ಧರಿಸಿದ್ದ ಬಟ್ಟೆಗಳು, ಒಳ ಉಡುಪು ಹಾಗೂ ಆತನ ಚಪ್ಪಲಿ ಕೂಡ ಪ್ರಕರಣದಲ್ಲಿ ಆರೋಪ ಸಾಬೀತಿಗೆ ಮಹತ್ವದ ಸಾಕ್ಷ್ಯಗಳಾಗಿವೆ. ಕೃತ್ಯದ ಸಮಯದಲ್ಲಿ ಆರೋಪಿ ಘಟನಾ ಸ್ಥಳದಲ್ಲಿದ್ದ ಎಂಬುದನ್ನು ಸೂಚಿಸುವ ಡಿಜಿಟಲ್ ಸಾಕ್ಷ್ಯಗಳಾದ ಫೋನ್ ಟವರ್ ಲೊಕೇಶನ್, ಆರೋಪಿಯ ಬೈಕ್ ಹಾಗೂ ಹೆಲ್ಮೆಟ್ ಕೂಡ ಸಿಬಿಐ ವಶಕ್ಕೆ ಪಡೆದಿದೆ. ಘಟನಾ ಸ್ಥಳದಿಂದ ಬೆರಳಚ್ಚು, ಹೆಜ್ಜೆಯ ಗುರುತು ಸೇರಿ 40 ಸಾಕ್ಷ್ಯಗಳನ್ನು ಸಂಗ್ರಹಿಸಿರುವ ರಾಜ್ಯ ವಿಧಿ ವಿಜ್ಞಾನ ಪ್ರಯೋಗಾಲಯ, ಸದ್ಯದಲ್ಲೆ ಮಹತ್ವದ ವರದಿ ನೀಡಲಿದೆ. ಆರೋಪಿಯ ಫೋನ್‌ನಿಂದ ಸಂಗ್ರಹಿಸಲಾದ ಕೆಲ ಮಾಹಿತಿಗಳು, ಆಸ್ಪತ್ರೆಯ ಎರಡು ಸಿಸಿಟಿವಿಯಿಂದ ಸಂಗ್ರಹಿಸಿದ ದೃಶ್ಯಗಳನ್ನು ಕೂಡ ಮಹತ್ವದ ಸಾಕ್ಷ್ಯ ಎಂದು ಪರಿಗಣಿಸಲಾಗಿದೆ.

ಆರೋಪಿಯ ಮೈ ಮೇಲಿನ ಗಾಯದ ಗುರುತುಗಳು ಕೃತ್ಯದ ಬಗ್ಗೆ ಸಾಕಷ್ಟು ಮಾಹಿತಿ ನೀಡಿದೆ. ಆರೋಪಿ ಸಂಜಯ್ ರೇ ರಕ್ತದ ಮಾದರಿ, ಆತನ ಎಡಗೆನ್ನೆ, ಎಡಗೈ ಹಾಗೂ ಎಡಗಾಲಿನ ಗಾಯಗಳು ಆತ ಪ್ರಕರಣದಲ್ಲಿ ಭಾಗಿಯಾಗಿರುವುದನ್ನು ಸೂಚಿಸುತ್ತವೆ ಎಂದು ಹೇಳಲಾಗಿದೆ. ಸಂಚಾರಿ ಪೊಲೀಸರಿಗೂ ಆಸ್ಪತ್ರೆ ಮಾರ್ಗದ ಸಿಸಿಟಿವಿ ದೃಶ್ಯಾವಳಿಗಳನ್ನು ಸಂರಕ್ಷಿಸಿಡುವಂತೆ ತಿಳಿಸಲಾಗಿದೆ. ಅವೆಲ್ಲವನ್ನೂ ದೋಷಾರೋಪ ಪಟ್ಟಿ ಸಲ್ಲಿಕೆ ವೇಳೆ ಹಾಗೂ ನ್ಯಾಯಾಲಯ ವಿಚಾರಣೆ ಸಂದರ್ಭ ಡಿಜಿಟಲ್ ಸಾಕ್ಷ್ಯವಾಗಿ ಬಳಸಿಕೊಳ್ಳಲಾಗುವುದು ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಆರ್‌ಜಿ ಕರ್ ಮಾಜಿ ಪ್ರಾಂಶುಪಾಲ ಡಾ. ಘೋಷ್ ಮನೆಗೆ ಸಿಬಿಐ ದಾಳಿ

ಕೋಲ್ಕತ್ತದಲ್ಲಿ ಡಾ.ಸಂದೀಪ್ ಘೋಷ್ ಮನೆಗೆ ಸಿಬಿಐ ಅಧಿಕಾರಿಗಳು ಭಾನುವರ ದಾಳಿ ನಡೆಸಿದ್ದು, ಅರೆಸೇನಾಪಡೆ ಸಿಬ್ಬಂದಿ ಭದ್ರತೆ ಒದಗಿಸಿದ್ದರು.

ಕೋಲ್ಕತ್ತ: ಭ್ರಷ್ಟಾಚಾರ ಪ್ರಕರಣ ಸಂಬಂಧ ಕೋಲ್ಕತ್ತ ಆರ್.ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಡಾ.ಸಂದೀಪ್ ಘೋಷ್ ಮನೆ ಮೇಲೆ ಕೇಂದ್ರ ತನಿಖಾ ದಳ(ಸಿಬಿಐ) ಭಾನುವಾರ ಬೆಳಗ್ಗೆಯೇ ದಾಳಿ ನಡೆಸಿದೆ.

ಕೋಲ್ಕತ್ತ ಆರ್.ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಆ.9ರ ನಸುಕಿನಲ್ಲಿ ಕಿರಿಯ ವೈದ್ಯೆ ಮೇಲೆ ನಡೆದ ಅತ್ಯಾಚಾರ-ಕೊಲೆ ಪ್ರಕರಣದ ತನಿಖೆಯನ್ನೂ ನಡೆಸುತ್ತಿರುವ ಸಿಬಿಐ, ಮುಖ್ಯ ಆರೋಪಿ ಸಂಜಯ್ ರೇ ಸೇರಿದಂತೆ ಡಾ.ಘೋಷ್ ಹಾಗೂ ಇತರೆ ನಾಲ್ವರು ತರಬೇತಿ ವೈದ್ಯರನ್ನು ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಿದೆ.

ಇನ್ನೊಂದೆಡೆ ಆಸ್ಪತ್ರೆಯಲ್ಲಿನ ಅನಾಥ ಶವಗಳನ್ನೂ ಮಾರಿಕೊಂಡು ಹಣ ಮಾಡುತ್ತಿದ್ದ ಹಾಗೂ ಹಲವು ಭ್ರಷ್ಟಾಚಾರ ನಡೆಸಿದ ಪ್ರಕರಣದಲ್ಲಿ ಡಾ.ಘೋಷ್ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿದೆ. ಈ ಪ್ರಕರಣ ಸಂಬಂಧ ಭಾನುವಾರ ಬೆಳಗ್ಗೆಯೇ ಡಾ.ಘೋಷ್ ಮನೆಗೆ ತೆರಳಿ ಭ್ರಷ್ಟಾಚಾರ ಆರೋಪ ಸಾಬೀತಿಗೆ ದಾಖಲೆಗಳಿಗಾಗಿ ಶೋಧ ನಡೆಸಿದೆ.

ಡಾ. ಘೋಷ್ ಮನೆಯಷ್ಟೇ ಅಲ್ಲದೇ, ಆರ್.ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಯ ವಿಧಿವಿಜ್ಞಾನ ಔಷಧ ತಜ್ಞ ಡಾ.ದೇಬಶಿಶ್ ಸೋಮ್ ನಿವಾಸ ಮತ್ತು ಆಸ್ಪತ್ರೆಯ ಇತರೆ ಅಧಿಕಾರಿಗಳು, ಸಿಬ್ಬಂದಿಗಳಿಗೆ ಸೇರಿದ 14 ಸ್ಥಳಗಳಲ್ಲಿಯೂ ಸಿಬಿಐನ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಶೋಧ ನಡೆಸಿದರು.

ಆಸ್ಪತ್ರೆಯ ಮಾಜಿ ಉಪ ಅಧೀಕ್ಷಕ ಅಖ್ತರ್ ಅಲಿ ಅವರು 3 ದಿನಗಳ ಹಿಂದೆ ಡಾ.ಘೋಷ್ ಅಧಿಕಾರವಧಿಯಲ್ಲಿ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಭಾರೀ ಪ್ರಮಾಣದ ಭ್ರಷ್ಟಾಚಾರ ಮತ್ತು ಅಕ್ರಮಗಳು ನಡೆದಿರುವ ಬಗ್ಗೆ ದೂರು ದಾಖಲಿಸಿದ್ದರು.

ಈ ಮಧ್ಯೆ, ಕೋಲ್ಕತ್ತ ಪೊಲೀಸರು ಆರ್.ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆ ಬಳಿ ವಿಧಿಸಿದ್ದ ನಿಷೇಧಾಜ್ಞೆಯನ್ನು ಆ.31ರವರೆಗೂ ವಿಸ್ತರಿಸಿದ್ದಾರೆ.

ಮಲಯಾಳಂ ಚಿತ್ರರಂಗದ ಕರಾಳ ಚಿತ್ರಣ

ಕಾಸ್ಟಿಂಗ್ ಕೌಚ್‌ನಿಂದ ಅಡ್ಜೆಸ್ಟ್‌ಮೆಂಟ್‌ವರೆಗೆ ವ್ಯಸನ | ಬದಲಾವಣೆ ತರಲಿದೆಯೇ ನ್ಯಾ.ಹೇಮಾ ಕಮಿಟಿ ವರದಿ?
5 ವರ್ಷಗಳ ಕಾಲ ವರದಿಯನ್ನು ಮರೆಮಾಚಿದ್ದೇಕೆ? | ಕೇರಳ ಸರಕಾರದ ವಿರುದ್ಧ ಪ್ರತಿಪಕ್ಷಗಳ ಆಕ್ರೋಶ

ತಿರುವನಂತಪುರಂ: ಮಲಯಾಳಂ ಚಿತ್ರರಂಗದಲ್ಲಿನ ಲೈಂಗಿಕ ದೌರ್ಜನ್ಯ, ಲಿಂಗ ಅಸಮಾನತೆ ಬಗ್ಗೆ ತನಿಖೆ ನಡೆಸಲು ರಚನೆಯಾಗಿದ್ದ 'ಹೇಮಾ ಕಮಿಟಿ', ಆ ಬಳಿಕ ಬಿಡುಗಡೆ ಮಾಡಿದ ಸಮಗ್ರ ವರದಿ 5 ವರ್ಷಗಳ ಕಾಲ ರಾಜ್ಯದ ಸರಕಾರದ ತಿಜೋರಿಯಲ್ಲೇ ಉಳಿದಿತ್ತು!

ಸಾಕಷ್ಟು ಪ್ರಯತ್ನಗಳ ಬಳಿಕ 290 ಪುಟಗಳ ವರದಿ ಬಿಡುಗಡೆಗೆ ಕೇರಳ ಹೈಕೋರ್ಟ್ ಅನುಮತಿ ನೀಡಿತು. ಈಗ ಈ ವರದಿಯಿಂದ ಮಲಯಾಳಂ ಚಿತ್ರರಂಗದ ಸಾಕಷ್ಟು ಹುಳುಕುಗಳು, ನಟಿಯರ ಮೇಲೆ ಲೈಂಗಿನ ದೌರ್ಜನ್ಯ ಪ್ರಸಂಗಗಳು ಬಹಿರಂಗಗೊಂಡಿವೆ. ಈ ವರದಿ ಮಾಹಿತಿಗಷ್ಟೇ ಸೀಮಿತವಾಗುವುದೇ? ವರದಿಯಿಂದ ಬದಲಾವಣೆ ಆಗುವುದೇ? ಎಂಬ ಚರ್ಚೆಯೂ ಈಗ ದೇವರ ಸ್ವಂತ ನಾಡಿನಲ್ಲಿ ನಡೆಯುತ್ತಿದೆ.

ಕೋಲ್ಕತ್ತದ ಸರಕಾರಿ ಆರ್‌ಜಿ ಕರ್ ಕಾಲೇಜು-ಆಸ್ಪತ್ರೆಯ ಕಿರಿಯ ವೈದ್ಯೆ ಅತ್ಯಾಚಾರ-ಹತ್ಯೆ ಘಟನೆ ಬಳಿಕ ಉದ್ಯೋಗ ಸ್ಥಳದಲ್ಲಿ ಮಹಿಳೆಯರ ಸುರಕ್ಷತೆ ವಿಚಾರ ಹೆಚ್ಚು ಚರ್ಚೆಗೊಳಗಾಗಿದೆ. ಈ ಮಧ್ಯೆ 'ಹೇಮಾ ಕಮಿಟಿ' ಮಲಯಾಳಂ ಚಿತ್ರರಂಗದ ಬಗ್ಗೆ ನೀಡಿದ ವರದಿಯು ದೇಶದ ಉಳಿದೆಲ್ಲಾ ಭಾಷೆಗಳ ಚಿತ್ರರಂಗದ ವಾತಾವರಣವನ್ನು ಕೂಲಂಕುಷವಾಗಿ ಪರಿಶೀಲಿಸುವಂತೆ ಮಾಡಿದೆ.

ಹೇಮಾ ಕಮಿಟಿ ರಚನೆಯಾಗಿದ್ದೇಕೆ?

2017ರ ಫೆ. 17ರಂದು ದಕ್ಷಿಣ ಭಾರತದ ಚಿತ್ರರಂಗದ, ಕೇರಳ ಮೂಲದ ಖ್ಯಾತ ನಟಿ ಮೇಲೆ ಮಲಯಾಳಂ ಚಿತ್ರರಂಗದವರಿಂದಲೇ ಅಪಹರಣ-ಲೈಂಗಿಕ ದೌರ್ಜನ್ಯ ನಡೆದಿರುವುದು ದೇಶವನ್ನೇ ಬೆಚ್ಚಿ ಬೀಳಿಸಿತ್ತು. ತ್ರಿಶೂರ್‌ನಿಂದ ಕೊಚ್ಚಿಗೆ ತೆರಳುತ್ತಿದ್ದ ನಟಿಯನ್ನು ಅಪಹರಿಸಿ ಕಾರಿನಲ್ಲೇ ಲೈಂಗಿಕ ದೌರ್ಜನ್ಯ ನಡೆಸಲಾಗಿತ್ತು. ನಟಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಬಳಿಕ ನಟ ದಿಲೀಪ್‌ನನ್ನ ಬಂಧಿಸಿ ಜೈಲಿಗೆ ಹಾಕಲಾಗಿತ್ತು.

ಆ ಬಳಿಕ ಮಲಯಾಳಂ ಚಿತ್ರರಂಗದ ಖ್ಯಾತ ಕಲಾವಿದರಿಂದ 'ವುಮೆನ್ ಇನ್ ಸಿನೆಮಾ ಕಲೆಕ್ಟಿವ್'(ಡಬ್ಲ್ಯುಸಿಸಿ) ಸಂಘ ಆರಂಭಗೊಂಡಿತು. ಚಿತ್ರರಂಗದಲ್ಲಿ ಮಹಿಳೆಯರು ಅನುಭವಿಸುತ್ತಿರುವ ಸಮಸ್ಯೆ ಪರಿಹರಿಸುವಂತೆ ಹಾಗೂ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಶೀಘ್ರ ಕ್ರಮ ಕೈಗೊಳ್ಳುವಂತೆ ಸಂಘ ಸರಕಾರವನ್ನು ಒತ್ತಾಯಿಸಿತ್ತು. ಸಿಎಂ ಪಿಣರಾಯಿ ವಿಜಯನ್ ಸರಕಾರ ಕೇರಳ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಹೇಮಾ ಅವರ ನೇತೃತ್ವದಲ್ಲಿ ಸಮಿತಿ ರಚಿಸಿತ್ತು.

ವರದಿ ಬಿಡುಗಡೆಗೆ ತಡವೇಕೆ?

2019ರ ಡಿ.31ರಂದು ಹೇಮಾ ಸಮಿತಿ ವರದಿಯನ್ನು ಸರಕಾರಕ್ಕೆ ಸಲ್ಲಿಸಿದರೂ 5 ವರ್ಷಗಳ ಕಾಲ ಬಹಿರಂಗಗೊಂಡಿರಲಿಲ್ಲ. ಇದು ವರದಿಯಲ್ಲಿ ವಿಷಯಗಳ ಬಗ್ಗೆ ಅನುಮಾನ ಮೂಡುವಂತೆ ಮಾಡಿತ್ತು. ಸಾಕ್ಷಿಗಳ ಗೌಪ್ಯತೆ ದೃಷ್ಟಿಯಿಂದ ಸಂಸ್ಕೃತಿ ಇಲಾಖೆ ಮಾಹಿತಿ ಹಕ್ಕು ಅರ್ಜಿಗಳನ್ನೂ ತಿರಸ್ಕರಿಸಿತ್ತು. ಕಡೆಗೆ ಜು.6ರಂದು ರಾಜ್ಯ ಮಾಹಿತಿ ಆಯೋಗ, 'ಜು.25ರೊಳಗೆ ವರದಿ ಬಿಡುಗಡೆ ಮಾಡಬೇಕು' ಎಂದು ಸೂಚಿಸಿತು. ಕೆಲ ಸಿನಿಮಾ ನಿರ್ಮಾಪಕರು ಹಾಗೂ ವರದಿಯಲ್ಲಿನ ಸಾಕ್ಷಿಗಳು ವರದಿ ಬಿಡುಗಡೆಗೆ ತಡೆಕೋರಿ ಹೈ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರಿಂದ ಮತ್ತೆ ವಿಳಂಬವಾಯಿತು. ಅರ್ಜಿಯನ್ನು ಕೋರ್ಟ್ ವಜಾಗೊಳಿಸಿದ ಬಳಿಕ ಆ.19ರಂದು ವರದಿ ಬಿಡುಗಡೆಗೊಂಡಿದೆ. ದೇವರ ಸ್ವಂತ ನಾಡಿನ ಚಿತ್ರರಂಗದ ಕೊಳಕುಗಳ ಅನಾವರಣಗೊಂಡಿದೆ.

ಚಿತ್ರರಂಗದ ಕರಾಳ ಮುಖ ತೆರೆದಿಟ್ಟ ವರದಿ

ಸಿನಿಮಾದಲ್ಲಿ ಅವಕಾಶ ಬೇಕಿದ್ದರೆ ಲೈಂಗಿಕವಾಗಿ ಸಹಕರಿಸುವಂತೆ ನಟಿಯರನ್ನು ಶೋಷಣೆ ಮಾಡುವ 'ಕಾಸ್ಟಿಂಗ್ ಕೌಚ್' ಪದ್ಧತಿ ಮಲಯಾಳಂ ಚಿತ್ರರಂಗದಲ್ಲಿ ವ್ಯಾಪಕವಾಗಿದೆ ಎಂದು ವರದಿ ಹೇಳಿದೆ. ಈ ಬಗ್ಗೆ ಚಿತ್ರರಂಗದ ಹಲವಾರು ಕಲಾವಿದರು ಆಡಿಯೋ, ವಿಡಿಯೋ ಕ್ಲಿಪ್, ವಾಟ್ಸಾಪ್ ಮೆಸೇಜ್‌ಗಳ ಸಾಕ್ಷಿಯನ್ನು ಕಮಿಟಿ ಮುಂದಿಟ್ಟಿದೆ. ಚಿತ್ರರಂಗದ ಕೆಲ ಪುರುಷರು ತಡರಾತ್ರಿ ಮಹಿಳಾ ಕಲಾವಿದರ ಮನೆಬಾಗಿಲು ಬಡಿದಿದ್ದಾರೆ ಎಂದೂ ಉಲ್ಲೇಖಿಸಲಾಗಿದೆ. ವಿಡಿಯೋ ಚಿತ್ರಕರಣ ಮೂಲಕ ನಟಿಯರಿಗೆ ಬ್ಲಾಕ್‌ಮೇಲ್ ಮಾಡಲಾಗುತ್ತಿದೆ. ಬಹಳಷ್ಟು ಕಲಾವಿದೆಯರು ಪೊಲೀಸರಿಗೆ ದೂರು ಕೊಡಲೂ ಆಗದೇ, ಸ್ನೇಹಿತರು, ಕುಟುಂಬದವರ ಬಳಿ ಹೇಳಿಕೊಳ್ಳಲೂ ಆಗದೇ ನರಳುತ್ತಿದ್ದಾರೆ. ಒಂದು ಗುಂಪು ಮಾಫಿಯಾ ರೀತಿ ಚಿತ್ರರಂಗವನ್ನು ನಿಯಂತ್ರಿಸುತ್ತಿದೆ. ಯಾರನ್ನಾದರೂ ಖರೀದಿಸುವ ಶಕ್ತಿ ಅವರಿಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಅಕಾಡೆಮಿ ಅಧ್ಯಕ್ಷ ರಂಜಿತ್ ರಾಜೀನಾಮೆ

ಮಲಯಾಳಂ ಚಿತ್ರ ನಿರ್ದೇಶಕ ರಂಜಿತ್, ಕೇರಳ ರಾಜ್ಯದ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ರಾಜೀನಾಮೆ ಘೋಷಿಸಿದ್ದಾರೆ. 2009ರಲ್ಲಿ ಚಿತ್ರೀಕರಣ ವೇಳೆ ನಿರ್ದೇಶಕ ರಂಜಿತ್ ತಮ್ಮ



ಮೈಮುಟ್ಟಿ ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಬೆಂಗಾಲಿ ನಟಿ ಶ್ರೀಲೇಖಾ ಮಿತ್ರಾ ಅವರು ಆರೋಪ ಮಾಡಿದ ಬಳಿಕ ರಂಜಿತ್ ರಾಜೀನಾಮೆ ನೀಡುವುದಾಗಿ ಹೇಳಿದ್ದಾರೆ. ಸಿಎಂ ಪಿಣರಾಯಿ ವಿಜಯನ್‌ಗೆ ಧ್ವನಿ ಸಂದೇಶ ಕಳುಹಿಸಿದ್ದಾರೆ. ಇನ್ನೊಂದೆಡೆ, ಲೈಂಗಿಕ ಕಿರುಕುಳ ಆರೋಪ ಎದುರಾಗಿದ್ದರಿಂದ ಮಲಯಾಳಂ ಸಿನಿಮಾ ಕಲಾವಿದರ ಸಂಘದ(ಅಮ್ಮ) ಪ್ರಧಾನ ಕಾರ್ಯದರ್ಶಿ ಸಿದ್ದಿಕಿ ಕೂಡ ರಾಜೀನಾಮೆ ಘೋಷಿಸಿದ್ದಾರೆ. ಸಿನಿಮಾ ಚರ್ಚೆಗೆ ಕರೆದು ಸಿದ್ದಿಕಿ ಲೈಂಗಿಕ ಕಿರುಕುಳ ನೀಡಿದ್ದಾರೆಂದು ನಟಿ ಆರೋಪಿಸಿದ್ದರು. 'ಅಮ್ಮಾ' ಅಧ್ಯಕ್ಷ ಮೋಹಲ್‌ಲಾಲ್ ಅವರಿಗೆ ಸಿದ್ದಿಕಿ ರಾಜೀನಾಮೆ ಪತ್ರ ರವಾನಿಸಿದ್ದಾರೆ.

ನ್ಯಾ. ಹೇಮಾ ಕಮಿಟಿ ವರದಿ ಪ್ರಮುಖಾಂಶ

- ಕಾಸ್ಟಿಂಗ್ ಕೌಚ್ ರೀತಿಯ ಶೋಷಣೆ ಮಲಯಾಳಂ ಚಿತ್ರರಂಗದಲ್ಲಿದೆ
- ತಡರಾತ್ರಿ ಕೆಲ ಪುರುಷರು ಮಹಿಳಾ ಕಲಾವಿದರ ಮನೆ ಬಾಗಿಲು ತಟ್ಟಿದ್ದಾರೆ
- ಚಿತ್ರೀಕರಣ ಸ್ಥಳಗಳಲ್ಲಿ ನಟಿಯರ ಕೊಠಡಿಗೆ ಬಲ ಪ್ರಯೋಗಿಸಿ ನುಗ್ಗಿದ್ದಾರೆ
- ಲೈಂಗಿಕ ದೌರ್ಜನ್ಯಕ್ಕೀಡಾದ ಬಳಿಕವೂ ದುಷ್ಟರ ಜತೆ ಹೊಂದಾಣಿಕೆ ಅನಿವಾರ್ಯ
- ದೌರ್ಜನ್ಯದ ಬಗ್ಗೆ ದೂರು ಕೊಟ್ಟಲ್ಲಿ ಚಿತ್ರರಂಗದಿಂದಲೇ ನಿಷೇಧದ ಬೆದರಿಕೆ
- ಪ್ರಭಾವಶಾಲಿ ಪುರುಷ ನಿರ್ಮಾಪಕ, ನಿರ್ದೇಶಕ, ನಟರ ಹಿಡಿತದಲ್ಲಿ ಚಿತ್ರರಂಗ
- ಸಿನಿಮಾಸೆಟ್‌ನಲ್ಲಿ ಸ್ತ್ರೀ ಶೌಚಾಲಯ, ಬಟ್ಟೆ ಬದಲಾವಣೆ ಕೊಠಡಿಗಳ ಕೊರತೆ
- ಕಿರಿಯ ಕಲಾವಿದರಿಗೆ ಜೀತದಾಳು ರೀತಿಯ ವಾತಾವರಣ, ಕನಿಷ್ಠ ವೇತನ
- ಬೇಡಿಕೆಗಳಿಗೆ ಒಪ್ಪದಿದ್ದರೆ ನಟಿಯರಿಗೆ ಚಿತ್ರೀಕರಣ ಸ್ಥಳದಲ್ಲೇ ಶೋಷಣೆ
- ಬಲಿಷ್ಠ ನಟರ ಜತೆಗೆ ನಟಿಯರು ಸಹಕರಿಸಲೇಬೇಕೆಂಬ ಕೆಟ್ಟ ವಾತಾವರಣ
- 'ಪೋಶ್' ಜಾರಿಯಲ್ಲಿದ್ದರೂ ಕೆಲಸದ ಸ್ಥಳದಲ್ಲೇ ಸ್ತ್ರೀ ಶೋಷಣೆ-ದೌರ್ಜನ್ಯ
- ನಟಿಯರು ಕೋರಿದವರ ಜತೆ ಸಹಕರಿಸಿದರಷ್ಟೇ ಕೆಲಸ, ಇಲ್ಲವಾದರೆ ನಿಷೇಧ

ನ್ಯಾ. ಹೇಮಾ ಸಮಿತಿ ಸಲಹೆಗಳು

'ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆ ಕಾಯಿದೆ'(ಪಿಒಎಸ್‌ಎಚ್-ಪೋಶ್) ರಾಜ್ಯದಲ್ಲಿ ಜಾರಿಗೆ ಬಂದಿದ್ದರೂ ಮಲಯಾಳಂ ಚಿತ್ರರಂಗದಲ್ಲಿ ಪ್ರಯೋಜನಕ್ಕಿಲ್ಲ. ಮಲಯಾಳಂ ಚಿತ್ರರಂಗ ಬಹಳ ಪ್ರಭಾವಶಾಲಿಗಳ ಹಿಡಿತದಲ್ಲಿದೆ. ಹಾಗಾಗಿ ಆಂತರಿಕ ದೂರು ಸಮಿತಿ ರಚಿಸಿದರೂ ಅದು ಯಶಸ್ವಿಯಾಗುವುದು ಅನುಮಾನ ಎಂದೇ ಸಮಿತಿ ತಿಳಿಸಿದೆ. ಆದರೆ, ನಟಿಯರ ಸಮಸ್ಯೆ ಆಲಿಸಲು ಟ್ರಿಬ್ಯೂನಲ್ ರಚನೆಗೆ ಸಲಹೆ ನೀಡಿದೆ. ಚಿತ್ರೀಕರಣ ಸಮಯದಲ್ಲಿ ಕಿರಿಯ ಕಲಾವಿದರಿಗೂ ಶೌಚಾಲಯ-ಡ್ರೆಸ್ಸಿಂಗ್ ರೂಂ ಒದಗಿಸುವುದನ್ನು ಕಡ್ಡಾಯ ಮಾಡಬೇಕು. ಸಿನಿಮಾ ನಿರ್ಮಾಣದ ತಾಂತ್ರಿಕ ಕೆಲಸಗಳಲ್ಲಿ ಮಹಿಳೆಯರಿಗೂ ಅವಕಾಶ ಹೆಚ್ಚಿಸಬೇಕು. ಫಿಲಂಸ್ಕೂಲ್‌ನಲ್ಲಿ ಮಹಿಳೆಯರಿಗೆ ಮೀಸಲಾತಿ ಮತ್ತು ಶಿಷ್ಯವೇತನ ನೀಡುವುದಕ್ಕೂ ಸಮಿತಿ ಸಲಹೆ ನೀಡಿದೆ.

ಡಬ್ಲ್ಯುಸಿಸಿ ಪ್ರತಿಕ್ರಿಯೆ

ಹೇಮಾ ಸಮಿತಿ ವರದಿ ಬಿಡುಗಡೆಯನ್ನು ಸ್ವಾಗತಿಸಿದ 'ವುಮೆನ್ ಇನ್ ಸಿನೆಮಾ ಕಲೆಕ್ಟೀವ್' ಸಂಘ, ಇದು ದೀರ್ಘ ಪ್ರಯಾಣವಾಗಿತ್ತು. ಚಿತ್ರೀಕರಣ ಸ್ಥಳದಲ್ಲಿ 'ಪೋಶ್' ಅನ್ವಯ ಕಲಾವಿದೆಯರ ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು, ಎಲ್ಲಾ ಮಹಿಳೆಯರಿಗೂ ಕೆಲಸದ ಸ್ಥಳದಲ್ಲಿ ಸುರಕ್ಷತೆ, ಗೌರವಯುತ ವಾತಾವರಣ ಬೇಕು. ಸಿನಿಮಾ ರಂಗದಲ್ಲಿನ ಲಿಂಗ ತಾರತಮ್ಯ ಬಗ್ಗೆ ಮೊದಲ ಬಾರಿಗೆ ವರದಿ ನೀಡಲಾಗಿದೆ. ಹೇಮಾ ಸಮಿತಿಗೆ ಧನ್ಯವಾದ ಎಂದು ಸಂಘ ಹೇಳಿದೆ.

ಸರಕಾರದ ಪ್ರತಿಕ್ರಿಯೆ

ವರದಿ ಬಿಡುಗಡೆಯಲ್ಲಿನ ವಿಳಂಬಕ್ಕೆ ಸರಕಾರವನ್ನು ಪ್ರತಿಪಕ್ಷಗಳು ಖಂಡಿಸಿವೆ. ಕಾನೂನು ತಜ್ಞರ ತಂಡ ವರದಿಯ ವಿಚಾರಗಳ ಮೇಲೆ ಸರಕಾರ ವಿಶೇಷ ತನಿಖೆ ನಡೆಸಬೇಕು ಎಂದಿದೆ. ಸಿಎಂ ಪಿಣರಾಯಿ ವಿಜಯನ್, ದೌರ್ಜನ್ಯ ನಡೆದ ಬಗ್ಗೆ ದೂರು ನೀಡಿದರೆ ಸರಕಾರ ಕಠಿಣ ಕ್ರಮ ಕೈಗೊಳ್ಳುತ್ತದೆ. ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದವರು ಎಂಥವರೇ ಆಗಿರಲಿ ಕ್ರಮ ಖಂಡಿತ ಎಂದಿದ್ದಾರೆ. ಪೂರ್ಣ ವರದಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ, ವರದಿಗೆ ಸರಕಾರ ಯಾವ ಕ್ರಮ ಕೈಗೊಳ್ಳಲಿದೆ ಎಂಬ ಮಾಹಿತಿ ನೀಡುವಂತೆ ಹೈಕೋರ್ಟ್ ಸೂಚಿಸಿದೆ. ಸೆ.10ಕ್ಕೆ ಮುಂದಿನ ವಿಚಾರಣೆ. ವರದಿ ಬಿಡುಗಡೆಗೂ ಮುನ್ನವೇ ಪ್ರಮುಖ 11 ಪ್ಯಾರಾಗಳನ್ನು ಸಾಕ್ಷಿಗಳ ಗೌಪ್ಯತೆ ದೃಷ್ಟಿಯಿಂದ ಸರಕಾರವೇ ತೆಗೆದು ಹಾಕಿದೆ ಎಂಬುದು ಅನುಮಾನಕ್ಕೆಡೆ ಮಾಡಿದೆ.

ಸಮಾಚಾರ ಸಣ್ಣದಲ್ಲ

ಬಂಗರತ್ನ ವಾಪಸ್‌ಗೆ ಕೋಲ್ಕತ್ತ ಶಿಕ್ಷಕ ನಿರ್ಧಾರ

ಕೋಲ್ಕತ್ತ: ನಗರದ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣದಲ್ಲಿ ಸಿಎಂ ಮಮತಾ ಬ್ಯಾನರ್ಜಿ ಸರಕಾರದ ನಡೆಗೆ ರಾಜ್ಯದಲ್ಲಿ ಭಾರಿ ಖಂಡನೆ ವ್ಯಕ್ತವಾಗಿದೆ. ಘಟನೆಯನ್ನು ಮುಚ್ಚಿಹಾಕಲೆತ್ನಿಸಿದ ಪಶ್ಚಿಮ ಬಂಗಾಳ ಸರಕಾರದ ಕ್ರಮ ಖಂಡಿಸಿ 'ಬಂಗ ರತ್ನ' ಪ್ರಶಸ್ತಿ ಪಡೆದ ಶಿಕ್ಷಕರೊಬ್ಬರು ಪ್ರಶಸ್ತಿ ವಾಪಸ್ ಮಾಡಲು ನಿರ್ಧರಿಸಿದ್ದಾರೆ. 2019ರಲ್ಲಿ ಮಮತಾ ಬ್ಯಾನರ್ಜಿ ಸರಕಾರದ ಅವಧಿಯಲ್ಲೇ ಪ್ರತಿಷ್ಠಿತ ಬಂಗ ರತ್ನ ಪ್ರಶಸ್ತಿ ಪಡೆದಿದ್ದ ಅಲಿಪುರ್‌ದೌರ್‌ನ ಶಿಕ್ಷಕ ಪರಿಮಲ್ ಡೇ, ವೈದ್ಯೆ ಮೇಲಿನ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ತಮ್ಮ ಪ್ರಶಸ್ತಿಯನ್ನು ಸರಕಾರಕ್ಕೆ ವಾಪಸ್ ಮಾಡುವುದಾಗಿ ತಿಳಿಸಿದ್ದಾರೆ. ಮಮತಾ ಬ್ಯಾನರ್ಜಿ ಆಡಳಿತ ನಡೆಸುತ್ತಿರುವ ರೀತಿ ಸರಿಯಿಲ್ಲ. ದೇಶಾದ್ಯಂತ ಮಹಿಳಾ ಸುರಕ್ಷತೆ ಬಗ್ಗೆ ನಡೆಯುತ್ತಿರುವ ಪ್ರತಿಭಟನೆ ಬೆಂಬಲಿಸುತ್ತೇನೆ, ಪ್ರಶಸ್ತಿ ವಾಪಸ್ ಮಾಡುವುದೇ ಸರಿ ಎಂದು ಮಾಧ್ಯಮಕ್ಕೆ ಪ್ರತಿಕ್ರಿಯಿಸಿದ್ದಾರೆ.

ಕಡೆಗೂ ಸಹಜ ಸ್ಥಿತಿಗೆ ಮರಳಿದ ಬಾಂಗ್ಲಾದೇಶ

ಢಾಕಾ: ನೆರೆಯ ಬಾಂಗ್ಲಾದೇಶದಲ್ಲಿ ಮೀಸಲು ತಾರತಮ್ಯ ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆಯಿಂದ ಆರಂಭಗೊಂಡ ಹಿಂಸಾಚಾರ ತಿಂಗಳ ಕಾಲ ನಡೆದು ಕಡೆಗೂ ತಹಬಂದಿಗೆ ಬಂದಿದೆ. ಸದ್ಯ ರಾಜಧಾನಿ ಢಾಕಾ ಸೇರಿದಂತೆ ದೇಶದಲ್ಲಿ ಸಹಜ ಸ್ಥಿತಿ ನೆಲೆಸಿದೆ ಎಂದು ಮಧ್ಯಂತರ ಸರಕಾರ ಭಾನುವಾರ ತಿಳಿಸಿದೆ. ಬಸ್, ಕ್ಯಾಬ್, ಮೆಟ್ರೋ ಸೇವೆಗಳು ಪುನಾರಂಭಗೊಂಡಿವೆ. ಅಂಗಡಿ-ಹೋಟೆಲ್‌ಗಳೆಲ್ಲಾ ತೆರೆದಿದ್ದು ವ್ಯಾಪಾರ ವಹಿವಾಟು ಎಂದಿನಂತೆ ನಡೆಯುತ್ತಿದೆ ಎಂದು ಸರಕಾರದ ಮೂಲಗಳು ತಿಳಿಸಿವೆ. ಐದಾರು ವಾರಗಳ ಕಾಲ ನಡೆದ ಪ್ರತಿಭಟನೆ, ಹಿಂಸಾಚಾರದಲ್ಲಿ 560ಕ್ಕೂ ಅಧಿಕ ಮಂದಿ ಜೀವಕಳೆದುಕೊಂಡಿದ್ದಾರೆ ಎಂದು ವರದಿಯಾಗಿದೆ.

ಬ್ರೆಜಿಲ್ ವಿ.ನಿಲ್ದಾಣದಲ್ಲಿ 660 ಏಷ್ಯಾ ವಲಸಿಗರ ಸೆರೆ

ಬ್ರಾಸಿಲಿಯ: ಅಧಿಕೃತ ವೀಸಾ ಇಲ್ಲದೇ ದೇಶ ಪ್ರವೇಶಿಸಿದ ಭಾರತ, ನೇಪಾಳ ಸೇರಿದಂತೆ ಏಷ್ಯಾ ಖಂಡದ ವಿವಿಧ ದೇಶಗಳ 660 ಅಕ್ರಮ ವಲಸಿಗರು ಬ್ರೆಜಿಲ್ ವಿಮಾನ ನಿಲ್ದಾಣದಲ್ಲಿ ಸಿಕ್ಕಿಬಿದ್ದಿದ್ದಾರೆ. ಭಾರತ, ನೇಪಾಳ, ವಿಯೆಟ್ನಾಂ ವಲಸಿಗರು ವಾರಗಳಿಂದ ನಿರ್ಬಂಧಿತ ಸ್ಥಳದಲ್ಲಿ ಅನ್ನ ನೀರು ಇಲ್ಲದೇ ಪರದಾಟ ನಡೆಸಿದ್ದಾರೆ ಎಂದು ವರದಿಯಾಗಿದೆ. ಬ್ರೆಜಿಲ್‌ನ ಸಾವೋ ಪೌಲೊ ವಿಮಾನ ನಿಲ್ದಾಣದಲ್ಲಿ ಈ ಅಕ್ರಮ ವಲಸಿಗರು ಸಿಲುಕಿದ್ದಾರೆ. ವೀಸಾ ಇಲ್ಲದ ಕಾರಣ ಬ್ರೆಜಿಲ್ ಆಡಳಿತ ಇವರನ್ನು ವಿಮಾನ ನಿಲ್ದಾಣದ ನಿರ್ಬಂಧಿತ ಪ್ರದೇಶದಲ್ಲಿ ಕೂಡಿ ಹಾಕಿದೆ. ಹೊದಿಕೆ, ಆಹಾರ ಇಲ್ಲದೇ ಮಕ್ಕಳು, ಮಹಿಳೆಯರ ಸ್ಥಿತಿ ಹೀನಾಯವಾಗಿದೆ ಎಂದು ಹೇಳಲಾಗಿದೆ. ಹೇಗಾದರೂ ಮಾಡಿ ಅಮೆರಿಕ ಅಥವಾ ಕೆನಡಾಕ್ಕೆ ಸೇರಿಕೊಳ್ಳಬೇಕು ಎಂಬ ಹಪಾಹಪಿಯಲ್ಲಿ ಅಕ್ರಮ ಮಾರ್ಗದಲ್ಲಿ ಸಾಗಿಬಂದ ಈ ವಲಸಿಗರುವ ಬ್ರೆಜಿಲ್‌ನಲ್ಲಿ ಸದ್ಯ ಸಿಕ್ಕಿಕೊಂಡಿದ್ದಾರೆ. ವಿಮಾನ ಪ್ರಯಾಣದ ಲೇ ಓವರ್ ಸಮಯದಲ್ಲಿ ಬ್ರೆಜಿಲ್ ಪ್ರವೇಶಿಸುವ ಅಕ್ರಮ ವಲಸಗರು ಅಲ್ಲೇ ಉಳಿಯುವ ಪ್ರಯತ್ನ ಮಾಡುತ್ತಾರೆ. ಬ್ರೆಜಿಲ್ ಸರಕಾರ ಅಕ್ರಮ ವಲಸಿಗರ ಮೇಲೆ ಕಠಿಣ ಕ್ರಮ ಕೈಗೊಂಡಿದೆ. ಸದ್ಯ ಈ ವಲಸಿಗರಿಗೆ ಆಶ್ರಯ ನೀಡುವ ಅಥವಾ ಅವರವರ ದೇಶಕ್ಕೆ ವಾಪಸ್ ಕಳುಹಿಸುವ ವ್ಯವಸ್ಥೆಯನ್ನು ಬ್ರೆಜಿಲ್ ಮಾಡಬೇಕು ಎಂಬ ಆಗ್ರಹ 'ಪಬ್ಲಿಕ್ ಡಿಫೆಂಡರ್ಸ್ ಕಚೇರಿ'ಯಿಂದ ಬಂದಿದೆ.

ತ.ನಾ. ಪಟಾಕಿ ಘಟಕ ಸ್ಫೋಟ-ಇಬ್ಬರ ಸಾವು

ದಿಂಡಿಗಲ್: ತಮಿಳುನಾಡಿನಲ್ಲಿ ಮತ್ತೊಂದು ಪಟಾಕಿ ದುರಂತವಾಗಿದೆ. ದಿಂಡಿಗಲ್ ಜಿಲ್ಲೆಯ ನಾಥಂನಲ್ಲಿ ಪಟಾಕಿ ಘಟಕದಲ್ಲಿ ಭಾನುವಾರ ಸ್ಫೋಟ ಸಂಭವಿಸಿ ಇಬ್ಬರು ಕಾರ್ಮಿಕರು ಸಾವನ್ನಪ್ಪಿದ್ದಾರೆ. ಹಲವರು ಗಾಯಗೊಂಡಿದ್ದಾರೆ. ಸ್ಫೋಟಕ್ಕೆ ನಿಖರ ಕಾರಣ ಸ್ಪಷ್ಟವಾಗಿಲ್ಲ. ಆದರೆ ರಕ್ಷಣಾ ಕಾರ್ಯಾಚರಣೆ ನಡೆದಿದೆ ಎಂದು ದಿಂಡಿಗಲ್ ಎಸ್‌ಪಿ ಪ್ರತೀಪ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

ಚಿರಾಗ್ ಪಾಸ್ವಾನ್ ಮರು ಆಯ್ಕೆ

ರಾಂಚಿ: ಲೋಕ ಜನಶಕ್ತಿ ಪಕ್ಷದ (ರಾಮ್ ವಿಲಾಸ್) ಅಧ್ಯಕ್ಷರಾಗಿ ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರು ಮರು ಆಯ್ಕೆಯಾಗಿದ್ದಾರೆ. ರಾಂಚಿಯಲ್ಲಿ ಭಾನುವಾರ ನಡೆದ ಲೋಕ ಜನಶಕ್ತಿ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಮುಂದಿನ ಐದು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ನನ್ನನ್ನು ಮರು ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

ಕಾಂಗ್ರೆಸ್, ಎಸ್‌ಪಿ ಜತೆ ಮೈತ್ರಿ ಇಲ್ಲ

ಲಖನೌ: ಕಾಂಗ್ರೆಸ್ ಮತ್ತು ಸಮಾಜವಾದಿ (ಎಸ್‌ಪಿ) ಪಕ್ಷಗಳೆರಡೂ ಮೀಸಲು ವಿರೋಧಿ ಪಕ್ಷಗಳಾಗಿದ್ದು, ಭವಿಷ್ಯದಲ್ಲಿ ಇವುಗಳೊಂದಿಗೆ ಯಾವುದೇ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಕಿಡಿಕಾರಿದ್ದಾರೆ. ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಮಾಯಾವತಿ ಈಗ ಜಾತಿಗಣತಿ ನಡೆಸುವಂತೆ ಆಗ್ರಹಿಸುತ್ತಿರುವ ಕಾಂಗ್ರೆಸ್, ತಾನು ಅಧಿಕಾರದಲ್ಲಿದ್ದಾಗ ಏಕೆ ಗಣತಿ ನಡೆಸಲಿಲ್ಲ? ಕಾಂಗ್ರೆಸ್‌ಗೆ ಅಂಬೇಡ್ಕರ್ ಅವರ ಬಗ್ಗೆ ಗೌರವವಿಲ್ಲ. ಅವರಿಗೆ ಪಕ್ಷವು ಭಾರತ ರತ್ನ ಪುರಸ್ಕಾರವನ್ನೂ ನೀಡಿಲ್ಲ. ಅಂಬೇಡ್ಕರ್ ಅವರ ಅನುಯಾಯಿಗಳು ಕಾಂಗ್ರೆಸ್ ಅನ್ನು ಎಂದಿಗೂ ಕ್ಷಮಿಸುವುದಿಲ್ಲ ಎಂದರು. ಅಲ್ಲದೇ ಕಾಂಗ್ರೆಸ್ ಮತ್ತು ಎಸ್‌ಪಿ ಮೀಸಲು ವಿರೋಧಿಗಳು. ಅವರಿಗೆ ಎಂದಿಗೂ ಮೀಸಲು ಬೇಕಿರಲಿಲ್ಲ. ದಲಿತರ ಮೇಲಿನ ಅವರ ಪ್ರೀತಿ ಕೇವಲ ಒಂದು ನೆಪವಷ್ಟೆ ಎಂದರು.

ಐಷಾರಾಮಿ ಜೀವನ ನಡೆಸುತ್ತಿರುವ ಕೈದಿಗಳು | ಮಾದಕ ವಸ್ತು, ಮೊಬೈಲ್ ಪೂರೈಕೆ

ಪರಪ್ಪನ ಅಗ್ರಹಾರ ಜೈಲು ಅಕ್ರಮಗಳ ಗೂಡು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸದಾ ಒಂದಿಲ್ಲೊಂದು ಅಕ್ರಮದ ಬಗ್ಗೆ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಗೃಹ ಯಾವಾಗಲೂ ಸುದ್ದಿಯಲ್ಲಿರುತ್ತದೆ. ಜೈಲಿನಲ್ಲಿನ ಕೈದಿಗಳು ಹಣ ನೀಡಿ ತಮಗೆ ಬೇಕಾದ ಹಾಗೆ ಐಷಾರಾಮಿ ಜೀವನ ನಡೆಸುತ್ತಿದ್ದು, ಇದಕ್ಕೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎನ್ನುವಂತಹ ಆರೋಪಗಳು ಪದೇ ಪದೇ ಕೇಳಿ ಬಂದಿದ್ದವು.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ ಎಂಬ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಇತ್ತೀಚಿಗೆ ಸಿಸಿಬಿ ಪೊಲೀಸರು ದಿಢೀರ್ ದಾಳಿ ನಡೆಸಿ ತಪಾಸಣೆ ನಡೆಸಿದ್ದಾರೆ. ಇಲ್ಲಿ ಬಂಧಿಗಳಾಗಿರುವ ಕೈದಿಗಳಿಗೆ ಮಾದಕ ವಸ್ತು ಪೂರೈಕೆಯಾಗುತ್ತಿದೆ, ಮೊಬೈಲ್ ಬಳಸುತ್ತಿದ್ದಾರೆ. ಜೊತೆಗೆ ಹಲವಾರು ರೀತಿಯ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ ಎಂಬ ಆರೋಪಗಳು ವ್ಯಾಪಕವಾಗಿ ಕೇಳಿ ಬಂದಿದ್ದವು. ಜೈಲಿನಲ್ಲಿ ಈ ಹಿಂದೆಯಿಂದಲೂ ಎಷ್ಟೇ ಕಠಿಣ ಕ್ರಮ ಕೈಗೊಂಡರು ಅಕ್ರಮ ಮಾತ್ರ ನಿಲ್ಲುತ್ತಿಲ್ಲ, ಮೊಬೈಲ್ ಬಳಕೆ ಮಾಡಿ ಜೈಲಿನಿಂದಲೇ ಧಮ್ಕಿ ಹಾಕುವುದು, ಗಾಂಜಾ ಸೇವನೆ, ಸೇರಿದಂತೆ ಅನೇಕ ಸ್ಕೆಚ್ ಜೈಲಿನೊಳಗಡೆಯಿಂದ ನಡೆಯುತ್ತಿವೆ ಎಂಬ ದೂರುಗಳು ಕೇಳಿ ಬಂದಿವೆ.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಕರ್ಮಕಾಂಡಗಳ ಕುರಿತು 2022 ರಲ್ಲಿ ತನಿಖೆ ನಡೆಸಿದ್ದ ಪೊಲೀಸ್ ಸಂವಹನ ಮತ್ತು ಆಧುನೀಕರಣ ವಿಭಾಗದ ಎಡಿಜಿಪಿ ಎಸ್.ಮುರುಗನ್ ನೇತೃತ್ವದ ತಂಡವು ರಾಜ್ಯ ಸರಕಾರಕ್ಕೆ ವರದಿ ಸಲ್ಲಿಸಿದ್ದರು. ಜೈಲಿನಲ್ಲಿ ಕೈದಿಗಳಿಗೆ ಐಷಾರಾಮಿ ಸವಲತ್ತು ಒದಗಿಸಿರುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಸುಮಾರು 500 ಪುಟದಷ್ಟಿರುವ ವರದಿಯಲ್ಲಿ ಕಾರಾಗೃಹದ ಅಕ್ರಮಗಳನ್ನು ಎಳೆಎಳೆಯಾಗಿ ಬಿಚ್ಚಿಡಲಾಗಿತ್ತು.

ಬೆಂಗಳೂರು ಕಾರಾಗೃಹದಲ್ಲಿನ ಕೈದಿಗಳಿಗೆ ಕಾನೂನು ಬಾಹಿರವಾಗಿ ಗಾಂಜಾ, ಬೀಡಿ, ಸಿಗರೇಟು ಪೂರೈಕೆಯಾಗಿರುವುದು ಹಾಗೂ ಕೈದಿಗಳು ಜೈಲಿನ ಸಿಬ್ಬಂದಿಯ ನೆರವಿನಿಂದ ಐಷಾರಾಮಿ ನಡೆಸುತ್ತಿದ್ದ ಸಂಗತಿಯನ್ನು ವರದಿಯಲ್ಲಿ ಉಲ್ಲೇಖವಾಗಿತ್ತು. ಮುರುಗನ್ ತಂಡದ ವರದಿ ಸಲ್ಲಿಕೆ ಬೆನ್ನಲ್ಲೆ ಜೈಲಿನ 7 ಸಿಬ್ಬಂದಿಯನ್ನು ಎತ್ತಂಗಡಿ ಮಾಡಲಾಗಿತ್ತು. ಇಷ್ಟಾದರೂ ಪರಪ್ಪನ ಅಗ್ರಹಾರ ಜೈಲಿನಲ್ಲಿ ಹಲವು ಲೋಪದೋಷಗಳು ನಡೆಯುತ್ತಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ಜೈಲುಗಳಲ್ಲಿ ಇಷ್ಟು ದಿನ ಬಿರಿಯಾನಿ ಪೊಟ್ಟಣ, ಮೂಸಂಬಿ, ಕಿತ್ತಾಳೆಹಣ್ಣುಗಳಲ್ಲಿ ಕೈದಿಗಳಿಗೆ ಗಾಂಜಾ ಸರಬರಾಜಾಗುತ್ತಿದೆ. ಆದರೆ ಬಾಳೆಹಣ್ಣಿನಲ್ಲಿ ನೋಟುಗಳನ್ನು ರವಾನೆ ಮಾಡುವ ಮೂಲಕ ಬಡ್ಡಿ ದಂಧೆ ನಡೆಯುತ್ತಿರುವುದು ಬೆಳಕಿಗೆ ಬಂದಿದೆ. ಜೈಲಿನ ಒಳಗಿರುವ ಪ್ರಭಾವಿ ಕೈದಿಗಳು ತಮ್ಮ ಕುಟುಂಬ ಹಾಗು ಸ್ನೇಹಿತರ ಮೂಲಕ ವಾಮ ಮಾರ್ಗದಲ್ಲಿ ಜೈಲಿನ ಒಳಭಾಗಕ್ಕೆ ಹಣ ತರಿಸಿಕೊಂಡು ಆ ಹಣವನ್ನು ಜೈಲಿನಲ್ಲಿ ಇರುವ ಕೈದಿಗಳಿಗೆ ನೀಡಿ ಬಡ್ಡಿ ವಸೂಲಿ ಮಾಡುತ್ತಿರುವ ಘಟನೆ ನಡೆಯುತ್ತಿದೆ. ಕೈದಿಗಳು ಒಳಭಾಗದಲ್ಲಿ 100 ರುಪಾಯಿಗೆ 10 ರುಯಂತೆ ಬಡ್ಡಿ ಹಣ ಪಡೆದು ಜೈಲಿನ ಒಳಭಾಗದಲ್ಲೂ ತಮ್ಮ ವೃತ್ತಿಯನ್ನು ವಿಸ್ತರಿಸಿದ್ದಾರೆ.

ಜೈಲು ನಿಯಮ ಏನು ಹೇಳುತ್ತದೆ?

- ವಿಚಾರಣಾಧೀನ ಕೈದಿಗೆ ಅಗತ್ಯ ವಸ್ತು ಹೊರತುಪಡಿಸಿ ಉಳಿದ ಸೌಲಭ್ಯ ನೀಡುವಂತಿಲ್ಲ
- ಕೋರ್ಟ್ ಅನುಮತಿಯಿಲ್ಲದೇ ಮನೆಯೂಟ ಸೇರಿ ಇತರೆ ಸೌಲಭ್ಯಗಳಿಗೆ ಅವಕಾಶ ಇಲ್ಲ
- ಜೈಲಿನ ಲಾನ್‌ಲ್ಲಿ ಚೇರ್-ಟೀಪಾಯಿ ಹಾಕಿಕೊಂಡು ಕುಳಿತು ಮಾತನಾಡುವ ವ್ಯವಸ್ಥೆ ಮಾಡುವಂತಿಲ್ಲ
- ಜೈಲಿನ ಎಲ್ಲೆಂದರಲ್ಲಿ ಕುಳಿತು ಸಿಗರೇಟ್, ಬೀಡಿ ಸೇವನೆ ಮಾಡುವಂತಿಲ್ಲ
- ಜೈಲಿಗೆ ಸಿಗರೇಟು, ಮಾದಕ ವಸ್ತು, ಮದ್ಯ ಸರಬರಾಜು ಸೇವನೆ ಶಿಕ್ಷಾರ್ಹ ಅಪರಾಧ
- ವಿಚಾರಣಾಧೀನ ಕೈದಿ ವಿಐಪಿ ಸೆಲ್‌ನಲ್ಲಿದ್ದರೂ ಸ್ಪೆಷಲ್ ಸೆಕ್ಯೂರಿಟಿ ಕೊಡುವಂತಿಲ್ಲ.

ಸೆರೆಮನೆಯೋ ಅರಮನೆಯೋ

ಬೆಂಗಳೂರು: ಪರಪ್ಪನ ಅಗ್ರಹಾರ ಸೆರೆಮನೆಯೇ ಅಥವಾ ಅರಮನೆಯೇ ಎಂಬುದನ್ನು ಗೃಹ ಇಲಾಖೆ ಮತ್ತು ಗೃಹ ಸಚಿವರು ನಾಡಿನ ಜನತೆಗೆ ಸ್ಪಷ್ಟಪಡಿಸಬೇಕಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಪ್ರಶ್ನಿಸಿದ್ದಾರೆ. ಈ ಬಗ್ಗೆ ಮಾತನಾಡಿರುವ ಅವರು, ರೇಣುಕಸ್ವಾಮಿ ಕೊಲೆ ಆರೋಪಿ ದರ್ಶನ್‌ಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ಐಷಾರಾಮಿ, ರಾಜಾತಿಥ್ಯ ವ್ಯವಸ್ಥೆ ಅಲ್ಲಿನ ಜೈಲಿನ ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆ ಕಲ್ಪಿಸಿಕೊಟ್ಟಿರುವುದು ತೀವ್ರ ಖಂಡನೀಯ, ಇದು ರಾಜ್ಯ ಕಾಂಗ್ರೆಸ್ ಸರಕಾರದ ದುರಾಡಳಿತದ ಪರಮಾವಧಿ ಎಂದು ಟೀಕಿಸಿದ್ದಾರೆ. ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಈ ಪ್ರಕರಣದ ವೈಫಲ್ಯವೇ ಎತ್ತಿ ತೋರಿಸುತ್ತದೆ. ಈ ಪ್ರಕರಣದಲ್ಲಿ ಗೃಹ ಇಲಾಖೆ ಸಂಪೂರ್ಣ ವಿಫಲವಾಗಿದೆ. ಐಷಾರಾಮಿ ವ್ಯವಸ್ಥೆ ನೋಡಿದರೆ ಅಲ್ಲಿನ ಸಂಬಂಧಪಟ್ಟ ಜೈಲಿನ ಅಧಿಕಾರಿಗಳು ಮತ್ತು ಅಲ್ಲಿನ ಸಿಬ್ಬಂದಿ ಆರೋಪಿಗಳ ಜತೆ ಶಾಮೀಲಾಗಿರುವುದು ಗೋಚರಿಸುತ್ತದೆ. ದರ್ಶನ್ ಸೇರಿದಂತೆ ಇತರ ಆರೋಪಿಗಳಿಗೆ ಕುಳಿತುಕೊಳ್ಳಲು ಕುರ್ಚಿ, ಟೇಬಲ್, ಕಾಫಿ-ಟೀ ಜತೆಗೆ ಸಿಗರೇಟ್ ಸೇರಿದಂತೆ ಎಲ್ಲ ಐಷಾರಾಮಿ ವ್ಯವಸ್ಥೆ ಕಲ್ಪಿಸಿಕೊಟ್ಟಿರುವುದು ಸರಿಯಲ್ಲ ಎಂದರು.

ಶೇಷಾದ್ರಿಪುರಂ ಕಾಲೇಜಿನಲ್ಲಿ ಕರುನಾಡ ಸಿರಿ ಸಾಹಿತ್ಯ ವೇದಿಕೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಡಾ.ರಾಣಿಗೋವಿಂದರಾಜು ಅವರನ್ನು ಸನ್ಮಾನಿಸಲಾಯಿತು. ಡಾ.ಶಿವರಾಜ್ ಬ್ಯಾಡರಹಳ್ಳಿ, ವ.ಚ.ನ್ನೇಗೌಡ, ಶಾಂತಲಾ ಸುರೇಶ್, ಇಂದಿರಾ ಶರಣ್,ರಾಗಡೆ, ಅಂಬುಜಾಕ್ಷಿ ಉಪಸ್ಥಿತರಿದ್ದರು.

ಚನ್ನಪಟ್ಟಣ ಟಿಕೆಟ್: ಬಿಜೆಪಿ ತೀರ್ಮಾನಿಸಲಿ

ಬೆಂಗಳೂರು: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಟಿಕೆಟ್ ವಿಚಾರ ಅಂತಿಮವಾಗಿ ದೆಹಲಿ ಹೈಕ ಮಾಂಡ್ ತೀರ್ಮಾನ ಮಾಡಲಿದೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ. ಜೆಡಿಎಸ್ ಕಚೇರಿಯಲ್ಲಿ ಮಾತನಾಡಿದ ಅವರು, ಈಗಾಗಲೇ ವರದಿ ಬಿಜೆಪಿ ಹೈಕಮಾಂಡ್ ಸೇರಿದೆ. ಕೆಲವೇ ದಿನಗಳಲ್ಲಿ ಅಭ್ಯರ್ಥಿಯನ್ನು ಘೋಷಣೆ ಮಾಡುತ್ತಾರೆ ಎಂದು ತಿಳಿಸಿದರು. ಚನ್ನಪಟ್ಟಣ ತಾಲೂಕು ಜೆಡಿಎಸ್ ಪಕ್ಷದ ಭದ್ರಕೋಟೆ. ಸರಳ ವ್ಯಕ್ತಿಗೆ ಬೆಂಬಲ ನೀಡಿ ಪಕ್ಷಕ್ಕೆ ಆಶೀರ್ವಾದ ಮಾಡಿದ್ದಾರೆ. ಚನ್ನಪಟ್ಟಣದಲ್ಲಿ ಸಾಮಾನ್ಯ ಕಾರ್ಯಕರ್ತ ಸ್ಪರ್ಧಿಸಿ ದರೂ 55ರಿಂದ 60 ಸಾವಿರ ಜೆಡಿಎಸ್ ಮತಗಳಿವೆ. ಹಾಗಿದ್ದಾಗ ಒಂದು ಕಡೆ ಜೆಡಿಎಸ್ ಶಕ್ತಿ ಮತ್ತೊಂದು ಕಡೆ ಸಿ.ಪಿ ಯೋಗೀಶ್ವರ್ ಸಹ ವೈಯಕ್ತಿಕ ವರ್ಚಸ್ಸು ಕ್ಷೇತ್ರದಲ್ಲಿ ಇಟ್ಟುಕೊಂಡಿದ್ದಾರೆ. ಇವೆಲ್ಲವನ್ನು ನೋಡಿದಾಗ ಕಾಂಗ್ರೆಸ್‌ಗೆ ಚನ್ನಪಟ್ಟಣ ಕ್ಷೇತ್ರದಲ್ಲಿ ನೆಲೆ ಇಲ್ಲ, ಇತಿಹಾಸ ತೆಗೆದು ನೋಡಿದಾಗ ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಪ್ರಭಾವವಿಲ್ಲ ಎಂದು ಹಿಂದಿನ ಮಾಹಿತಿ ನೋಡಿದಾಗ ತಿಳಿಯುತ್ತೆ ಎಂದರು.

ಬೆಳಗಾವಿಯಲ್ಲಿ ಸಿದ್ದು ಬಲಪ್ರದರ್ಶನ

ಬೆಂಗಳೂರು: ಮುಡಾ ಪ್ರಕರಣದ ಬಳಿಕ ಶಕ್ತಿ ಪ್ರದರ್ಶನಕ್ಕೆ ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೀಗ ಸೋಮವಾರ ಬೆಳಗಾವಿಯಲ್ಲಿ ತಮ್ಮ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ.

ಸಿಎಂ ಸಿದ್ದರಾಮಯ್ಯ ಬೆನ್ನಿಗೆ ಜಾರಕಿಹೊಳಿ ಬ್ರದರ್ಸ್ ಪರೋಕ್ಷವಾಗಿ ನಿಂತಿದ್ದು, ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿದೆ. ಇದಕ್ಕೆ ಪುಷ್ಠಿ ನೀಡುವಂತೆ ಸೋಮವಾರ ಗೋಕಾಕ್ ಪ್ರವಾಸ ಕೈಗೊಂಡಿದ್ದಾರೆ. ಮೂಡಾ ಹಗರಣಕ್ಕೆ ಸಂಬಂಧ ಪ್ರತಿಪಕ್ಷಗಳು ರಾಜೀನಾಮೆಗೆ ಪಟ್ಟು ಹಿಡಿದಿರುವ ಬೆನ್ನಲ್ಲೇ ಜಾರಕಿಹೊಳಿ ಬ್ರದರ್ಸ್ ಭದ್ರಕೋಟೆಗೆ 2ನೇ ಬಾರಿಗೆ ಭೇಟಿ ನೀಡುತ್ತಿದ್ದಾರೆ.

ಸೋಮವಾರ ಗೋಕಾಕ್ ಹಾಗೂ ಮೂಡಲಗಿ ತಾಲೂಕುಗಳಲ್ಲಿ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಲೋಕಾರ್ಪಣೆ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಬೆಳಗ್ಗೆ 11.45ಕ್ಕೆ ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ಬೆಳಗಾವಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿರುವ ಸಿಎಂ, ರಸ್ತೆ ಮಾರ್ಗವಾಗಿ ಗೋಕಾಕ್ ತಾಲೂಕಿನ ಕೌಜಲಗಿ ಗ್ರಾಮಕ್ಕೆ ಭೇಟಿ ನೀಡಲಿದ್ದಾರೆ.

ಸಿಎಂಗೆ ಸ್ವಾಮೀಜಿಗಳ ಬೆಂಬಲ

ಬೆಂಗಳೂರು: ಸ್ವಾಮೀಜಿಗಳ ಬೆಂಬಲ ಘೋಷಿಸುವ ಮೂಲಕ ಸರಕಾರವನ್ನು ಅಸ್ಥಿರಗೊಳಿಸಲು ಮುಂದಾಗಿರುವ ವಿರೋಧಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆಯ ಸಂದೇಶ ರವಾನಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಒಂದು ವೇಳೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಸಂದರ್ಭ ನಿರ್ಮಾಣವಾದರೆ ಸಮುದಾಯದ ಸ್ವಾಮೀಜಿಗಳ ನಿಷ್ಠುರಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಈ ಮೂಲಕ ವಿರೋಧಿಗಳಿಗೆ ಬಿಸಿ ಮುಟ್ಟಿಸಿದ್ದಾರೆ. ಹೀಗಾಗಿ ಹಿಂದುಳಿದ ವರ್ಗ ಮತ್ತು ದಲಿತ ಹಾಗೂ ಶೋಷಿತ ಸಮುದಾಯಗಳ ಸ್ವಾಮೀಜಿಗಳ ಒಕ್ಕೂಟದ ಭೇಟಿ ಭಾರಿ ಮಹತ್ವ ಪಡೆದುಕೊಂಡಿದೆ.

ಗೃಹ ಕಚೇರಿ ಕೃಷ್ಣದಲ್ಲಿ ಭೇಟಿಯಾಗಿ ನೈತಿಕ ಬೆಂಬಲ ನೀಡಿ ಸರಕಾರವನ್ನು ಅಸ್ಥಿರಗೊಳಿಸುವ ಕೇಂದ್ರ ಸರಕಾರದ ಮತ್ತು ರಾಜಭವನದ ಷಡ್ಯಂತ್ರಗಳನ್ನು ಸ್ವಾಮೀಜಿಗಳು ತೀವ್ರವಾಗಿ ಖಂಡಿಸಿದರಲ್ಲದೇ, ಈ ಷಡ್ಯಂತ್ರದ ವಿರುದ್ಧ ಒಕ್ಕೊರಲಿನಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ನಿಂತು ಹೋರಾಟ ನಡೆಸುವುದಾಗಿ ಘೋಷಿಸಿದರು.

ನಿಯೋಗದಲ್ಲಿದ್ದ ಸ್ವಾಮೀಜಿಗಳು: ಕಾಗಿನೆಲೆ ಕನಕ ಪೀಠದ ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ , ಹೊಸದುರ್ಗ, ಕುಂಚಿಟಿಗ ಮಹಾಸಂಸ್ಥಾನ ಮಠದ ಶ್ರೀ ಶಾಂತವೀರ ಮಹಾಸ್ವಾಮಿ, ಚಿತ್ರದುರ್ಗದ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮಿ, ಚಿತ್ರದುರ್ಗದ ಮಾದರ ಚನ್ನಯ ಗುರುಪೀಠದ ಶ್ರೀ ಬಸವಮೂರ್ತಿ ಮಾದರ ಚನ್ನಯ್ಯ ಮಹಾಸ್ವಾಮಿ ಮೊದಲಾದವರು ಇದ್ದರು.

ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣದಲ್ಲಿ ಹಿಂದುಳಿದ ವರ್ಗ ಮತ್ತು ದಲಿತ ಹಾಗೂ ಶೋಷಿತ ಸಮುದಾಯಗಳ ಸ್ವಾಮೀಜಿಗಳ ಒಕ್ಕೂಟ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿ ಮಾಡಿದರು.

ಕಾನೂನು ಹೋರಾಟಕ್ಕೆ ಅಂಬಾನಿ ನಿರ್ಧಾರ

ದೆಹಲಿ: ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಆದೇಶ ಕುರಿತು ಉದ್ಯಮಿ ಅನಿಲ್ ಅಂಬಾನಿ ಅವರು ಪರಾಮರ್ಶೆ ನಡೆಸುತ್ತಿದ್ದಾರೆ. ಸೆಬಿ ವಿಧಿಸಿರುವ ದಂಡ ಹಾಗೂ ನಿಷೇಧ ಕುರಿತಂತೆ ಕಾನೂನು ಸಲಹೆ ಪಡೆದು ಮುಂದಿನ ಹೋರಾಟದ ಬಗ್ಗೆ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಅನಿಲ್ ಅಂಬಾನಿ ಅವರ ವಕ್ತಾರರು ಭಾನುವಾರ ತಿಳಿಸಿದ್ದಾರೆ. ರಿಲಯನ್ಸ್ ಹೋಮ್ ಫೈನಾನ್ಸ್ ಲಿಮಿಟೆಡ್‌ನಿಂದ (ಆರ್‌ಎಚ್‌ಎಫ್‌ಎಲ್) ಬೇರೆಡೆಗೆ ಹಣ ಅಕ್ರಮವಾಗಿ ವರ್ಗಾಯಿ ಸಿದ ಪ್ರಕರಣದಲ್ಲಿ ಅನಿಲ್ ಅಂಬಾನಿ ಮತ್ತು ಇತರೆ 24 ಕಂಪನಿಗಳಿಗೆ ಷೇರುಪೇಟೆಯಿಂದ ಸೆಬಿಯು ಐದು ವರ್ಷ ನಿರ್ಬಂಧ ವಿಧಿಸಿದೆ. ಅನಿಲ್ ಅಂಬಾನಿಗೆ ₹25 ಕೋಟಿ ದಂಡ ಕೂಡ ವಿಧಿಸಲಾಗಿದೆ. ಆರ್‌ಎಚ್‌ಎಫ್‌ಎಲ್ ಪ್ರಕರಣಕ್ಕೆ ಸಂಬಂಧಿಸಿದಂತೆ 2022ರ ಫೆಬ್ರವರಿ 11ರಂದು ಸೆಬಿ ಮಧ್ಯಂತರ ಆದೇಶ ನೀಡಿತ್ತು. ಇದರ ಅನ್ವಯ ರಿಲಯನ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಮತ್ತು ರಿಲಯನ್ಸ್ ಪವರ್ ಲಿಮಿಟೆಡ್‌ನ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ಅವರು ರಾಜೀನಾಮೆ ನೀಡಿದ್ದಾರೆ.

ವಿಶೇಷ ರೈಲು ಸಂಚಾರ ವಿಸ್ತರಣೆ

ಬೆಂಗಳೂರು: ಪ್ರಯಾಣಿಕರ ದಟ್ಟಣೆ ಕಡಿಮೆಗೊಳಿಸಲು ದಾನಪುರದ ವಿಶೇಷ ರೈಲುಗಳ ಸಂಚಾರವನ್ನು ಮತ್ತೆರಡು ವಾರ ವಿಸ್ತರಿಸಲು ರೈಲ್ವೆ ನಿರ್ಧರಿಸಿದೆ. ಬೆಂಗಳೂರು ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್-ಬಿಹಾರದ ದಾನಪುರ ನಡುವೆ ವಾರಕ್ಕೊಮ್ಮೆ ಸಂಚರಿಸುವ ಎಂಟು ರೈಲುಗಳು ಆಗಸ್ಟ್ 28ರಿಂದ ಸೆಪ್ಟೆಂಬರ್ 7ರವರೆಗೆ ಒಟ್ಟು 14 ಟ್ರಿಪ್‌ಗಳನ್ನು ನಡೆಸಲಿವೆ. ಅದೇ ರೀತಿ ವಾರಕ್ಕೆ ಎರಡು ಬಾರಿ ಸಂಚರಿಸುವ ಎರಡು ರೈಲುಗಳು ತಲಾ ಎರಡು ಬಾರಿ ಹೆಚ್ಚುವರಿಯಾಗಿ ಸಂಚರಿಸಲಿವೆ ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.

ಸುನಿತಾ ವಿಲಿಯಮ್ಸ್ 2025ಕ್ಕೆ ಭೂಮಿಗೆ ವಾಪಸ್

ದೆಹಲಿ: ಬಾಹ್ಯಾಕಾಶ ನಿಲ್ದಾಣದಲ್ಲಿ ಸಿಲುಕಿರುವ ನಾಸಾ ಗಗನಯಾತ್ರಿಗಳು ಭೂಮಿಗೆ ಬರುವುದು ಮುಂದಿನ ವರ್ಷವೇ ಎಂದು ನಾಸಾ ಮಾಹಿತಿ ನೀಡಿದೆ.ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್‌ಮೋರ್ ಫೆಬ್ರವರಿ 2025ಕ್ಕೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ(ಐಎಸ್‌ಎಸ್) ಭೂಮಿಗೆ ಮರಳಲಿದ್ದಾರೆ ಎಂದು ಹೇಳಲಾಗಿದೆ. ಜೂನ್ 5ರಂದು ಸ್ಟಾರ್ ಲೈನರ್ ಸ್ಪೇಸ್‌ಕ್ರಾಫ್ಟ್ ಮೂಲಕ 8 ದಿನದ ಸಂಶೋಧನಾ ಕಾರ್ಯಕ್ಕೆ ಐಎಸ್‌ಎಸ್‌ಗೆ ತೆರಳಿದ್ದ ನಾಸಾ ಗಗನಯಾತ್ರಿಗಳು 80 ದಿನವಾದರೂ ಭೂಮಿಗೆ ಮರಳದೇ ಸಿಕ್ಕಿಬಿದ್ದಿದ್ದಾರೆ. ತಾಂತ್ರಿಕ ದೋಷದ ಹಿನ್ನಲೆ ಗಗನಯಾತ್ರಿಗಳು ಭೂಮಿಗೆ ಮರಳುವುದು ಸದ್ಯ ಅಸಾಧ್ಯವಾಗಿದೆ. ನಾಸಾ- ಬೋಯಿಂಗ್ ಜಂಟಿಯಾಗಿ ಕೈಗೊಂಡ ಈ ಯೋಜನೆಯ ಗಗನ ನೌಕೆಯಲ್ಲಿ ಹೀಲಿಯಂ ಸೋರಿಕೆ ಸೇರಿ ಹಲವು ಸಮಸ್ಯೆಗಳು ಎದುರಾಗಿವೆ. ಇದರಿಂದ ಗಗನಯಾತ್ರಿಗಳ ಆರೋಗ್ಯದ ಮೇಲೂ ಪರಿಣಾಮ ಬೀರಿದೆ ಎಂದು ತಿಳಿದು ಬಂದಿದೆ. ಹೀಗೆ ಮುಂದುವರೆದರೆ ಆರೋಗ್ಯ ಮತ್ತಷ್ಟು ಹದಗೆಡುವ ಆತಂಕವೂ ಎದುರಾಗಿದೆ. ಸದ್ಯ ನಾಸಾ ಗಗನಯಾತ್ರಿಗಳು ಹಾಗೂ ಸ್ಟಾರ್‌ಲೈನರ್ ಸುರಕ್ಷತೆ ಬಗ್ಗೆ ಸಾಕಷ್ಟು ಪ್ರಯೋಗ, ಪರೀಕ್ಷೆ ಕೈಗೊಂಡಿದ್ದು ಆದಷ್ಟು ಬೇಗ ಸುನಿತಾ ಹಾಗೂ ಬುಚ್ ವಿಲ್‌ಮೋರ್ ಅವರನ್ನು ಭೂಮಿಗೆ ಕರೆತರುವುದಾಗಿ ತಿಳಿಸಿದೆ. ಆದರೆ ಈಗ ಮತ್ತೆ 6 ತಿಂಗಳು ಗಗನಯಾತ್ರಿಗಳು ಅಲ್ಲೇ ಉಳಿಯಬೇಕಾಗಿ ಬಂದಿದ್ದು ಆತಂಕ ಹೆಚ್ಚಿಸಿದೆ.

ಸಿಎಚ್‌ಜಿ ಸಭೆ: ಮೋದಿಗೆ ಆಹ್ವಾನ ನೀಡಿದ ಪಾಕ್

ದೆಹಲಿ: ಪಾಕಿಸ್ತಾನದಲ್ಲಿ ಅಕ್ಟೋಬರ್‌ನಲ್ಲಿ ನಡೆಯಲಿರುವ 'ಕೌನ್ಸಿಲ್ ಆಫ್ ಹೆಡ್ಸ್ ಆಫ್ ಗವರ್ನಮೆಂಟ್'(ಸಿಎಚ್‌ಜಿ) ಸಭೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪಾಕ್ ಸರಕಾರ ಆಹ್ವಾನಿಸಿದೆ. ಇತರ ಶಾಂಘೈ ಸಹಕಾರ ಸಂಸ್ಥೆ (ಎಸ್‌ಸಿಒ) ಸದಸ್ಯ ದೇಶಗಳ ನಾಯಕರನ್ನೂ ಈ ಸಭೆಗೆ ಆಹ್ವಾನಿಸಲಾಗಿದೆ.

ಆದರೆ, ಪ್ರಧಾನಿ ಮೋದಿ ಅವರು ಇಸ್ಲಾಮಾ ಬಾದ್ ತೆರಳುವ ಸಾಧ್ಯತೆಯೇ ಇಲ್ಲ. ಬದಲಾಗಿ ಹಿಂದೆ ಮಾಡಿದಂತೆ ಸಭೆಗೆ ಭಾರತದ ಪ್ರತಿನಿಧಿಯಾಗಿ ಸಚಿವರೊಬ್ಬರನ್ನು ನಿಯೋಜಿಸುವ ಸಾಧ್ಯತೆ ಇದೆ ಎನ್ನಲಾಗಿದೆ. 2023ರಲ್ಲಿ ಬಿಷ್ಕೆಕ್‌ನಲ್ಲಿ ನಡೆದ ಸಿಎಚ್‌ಜಿ ಸಭೆಯಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್ ಪ್ರತಿನಿಧಿಸಿದ್ದರು. ರಷ್ಯಾ ಮತ್ತು ಚೀನಾ ನೇತೃತ್ವದ ಗುಂಪಿನ ಈ ಸಭೆ ಪ್ರಾದೇಶಿಕ ಭದ್ರತೆ ಮತ್ತು ಮಧ್ಯ ಏಷ್ಯಾ ರಾಷ್ಟ್ರಗಳೊಂದಿಗೆ ಸಹಕಾರಕ್ಕೆ ನಿರ್ಣಾಯಕವಾಗಿದೆ. ಕಳೆದ ವರ್ಷ ಎಸ್‌ಸಿಒ ವಿದೇಶಾಂಗ ಸಚಿವರ ಸಭೆ ಭಾರತದಲ್ಲಿ ನಡೆದಾಗ ಪಾಕಿಸ್ತಾನದ ಆಗಿನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ಜರ್ದಾರಿ ಹಾಜರಾಗಿದ್ದರು.

ಪಾಕ್: ಬಸ್ ಕಂದಕಕ್ಕೆ ಉರುಳಿ 29 ಸಾವು

ಬಲೂಚಿಸ್ತಾನ: ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ಭಾನುವಾರ ಬಸ್ಸೊಂದು ಕಂದಕಕ್ಕೆ ಉರುಳಿ 29 ಮಂದಿ ದಾರುಣ ಸಾವಿಗೀಡಾಗಿದ್ದಾರೆ. ಹೆದ್ದಾರಿಯಲ್ಲಿ ಚಲಿಸುತ್ತಿದ್ದ ಬಸ್ ಚಾಲಕನ ನಿಯಂತ್ರಣ ತಪ್ಪಿ ಕಂದಕಕ್ಕೆ ಉರುಳಿದೆ. ಮಕ್ರಾನ್ ಕರಾವಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಪಾನಾ ಸೇತುವೆ ಬಳಿ ಅಪಘಾತ ಸಂಭವಿಸಿದೆ. ಬಸ್‌ನಲ್ಲಿ 30 ಯಾತ್ರಾರ್ಥಿಗಳಿದ್ದರು. ಅವರೆಲ್ಲಾ ಪಂಜಾಬ್ ಪ್ರಾಂತ್ಯಕ್ಕೆ ಪ್ರಯಾಣಿಸುತ್ತಿದ್ದರು ಎಂದು ಜಿಯೋ ನ್ಯೂಸ್ ವರದಿ ಮಾಡಿದೆ. ಬಹುತೇಕ ಪ್ರಯಾಣಿಕರು ಲಾಹೋರ್‌ನವರು ಎಂದು ಪೊಲೀಸರು ತಿಳಿಸಿದ್ದಾರೆ.

ಲಕ್ಷಾಂತರ ರು. ಆರೋಗ್ಯ ವಿಮೆ ಕ್ಲೇಮ್

ಬೆಂಗಳೂರು: ವಿಧಾನ ಪರಿಷತ್ ಸದಸ್ಯರು ಅನಾರೋಗ್ಯದ ಸಮಸ್ಯೆ ನೀಡಿ ಸರಕಾರದಿಂದ ಲಕ್ಷ ಲಕ್ಷ ಹಣ ಪಡೆದಿರುವ ಘಟನೆ ಬೆಳಕಿಗೆ ಬಂದಿದೆ. ಕೇವಲ ಒಂದು ವರ್ಷದಲ್ಲಿ ಲಕ್ಷಾಂತರ ರುಪಾಯಿ ಆರೋಗ್ಯ ವಿಮೆ ಹೆಸರಲ್ಲಿ ಕ್ಲೇಮ್ ಮಾಡಿರುವ ಮಾಹಿತಿ ಬಹಿರಂಗವಾಗಿರುವುದು ಚರ್ಚೆಗೆ ಗ್ರಾಸವಾಗಿದೆ. ವಿಧಾನಪರಿಷತ್ ಸದಸ್ಯರಿಗೆ ಆರೋಗ್ಯ ವಿಮೆ ಕ್ಲೇಮ್ ಮಾಡಲು ಅವಕಾಶವಿರುತ್ತದೆ. ಆದರೆ ಕೆಲವರು ಇದನ್ನೇ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಸಾಮಾಜಿಕ ಹೋರಾಟಗಾರ ಎಚ್.ಎಂ. ವೆಂಕಟೇಶ್ ಆರೋಪಿಸಿದ್ದಾರೆ.

ಕಳೆದ 2023ರ ಮೇ 1 ರಿಂದ 2024ರ ಜುಲೈ ತಿಂಗಳವರೆಗೆ ಯಾರು ಎಷ್ಟು ಹಣ ಪಡೆದಿದ್ದಾರೆ ಎಂಬ ಮಾಹಿತಿಯನ್ನು ವಿಧಾನ ಪರಿಷತ್ ಸಚಿವಾಲಯ ಮಾಹಿತಿ ನೀಡಿದೆ.

ಭಾರತಿ ಶೆಟ್ಟಿ 48.70 ಲಕ್ಷ ಕ್ಲೇಮ್: ಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಕಳೆದ ಒಂದು ವರ್ಷದಲ್ಲಿ ಬರೋಬ್ಬರಿ 48.70 ಲಕ್ಷ ಕ್ಲೇಮ್ ಮಾಡಿದ್ದು, ಎರಡನೇ ಸ್ಥಾನದಲ್ಲಿ ಸಿ.ಪಿ.ಯೋಗೇಶ್ವರ್ 39.64 ಲಕ್ಷ ಸರಕಾರದಿಂದ ಅನಾರೋಗ್ಯದ ಕಾರಣ ನೀಡಿ ಹಣ ಸ್ವೀಕರಿಸಿದ್ದಾರೆ. ಇನ್ನು ಮೂರನೇ ಸ್ಥಾನದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸಹೋದರ ಚನ್ನರಾಜ್ ಹಟ್ಟಿಹೊಳಿಯಿದ್ದು, 17.03 ಲಕ್ಷ ಪಡೆದಿರುವುದು ದಾಖಲೆಯಿಂದ ಬಹಿರಂಗವಾಗಿದೆ.

ಕೋಲ್ಕತ್ತ, ಬದ್ಲಾಪುರ ಘಟನೆ ಖಂಡಿಸಿದ ಪ್ರಧಾನಿ ಮೋದಿ

ಸ್ತ್ರೀ ಶೋಷಣೆಗೆ ಕ್ಷಮೆಯಿಲ್ಲ, ಶಿಕ್ಷೆ ಖಚಿತ



ಜಲಗಾಂವ್: 'ತಾಯಂದಿರು, ಸಹೋದರಿಯರು, ಹೆಣ್ಣು ಮಕ್ಕಳ ಸುರಕ್ಷತೆ ದೇಶದ ಆದ್ಯತೆ' ಎಂದು ಪ್ರಧಾನಿ ನರೇಂದ್ರ ಮೋದಿ ಪುನರುಚ್ಚರಿಸಿದ್ದಾರೆ. ಮಹಾರಾಷ್ಟ್ರದ ಜಲಗಾಂವ್‌ನಲ್ಲಿ ಭಾನುವಾರ 'ಲಕ್‌ಪತಿ ದೀದಿ' ಕಾರ್ಯಕ್ರಮದಲ್ಲಿ ಭಾಗಿಯಾಗಿ, ಮಹಿಳಾ ಸುರಕ್ಷತೆ ಬಗ್ಗೆ ಮಾತನಾಡಿದ್ದಾರೆ. 'ಸಹೋದರಿಯರು, ಹೆಣ್ಣುಮಕ್ಕಳ ಸಿಟ್ಟು, ಆಕ್ರೋಶ ನನಗೆ ಅರ್ಥವಾಗುತ್ತದೆ' ಎಂದ ಪ್ರಧಾನಿ, ಮಹಿಳಾ ದೌರ್ಜನ್ಯ ಕ್ಷಮಿಸಲಾಗದು. ಅಪರಾಧ ಮಾಡಿದವರನ್ನು ಸುಮ್ಮನೆ ಬಿಡಲಾಗದು. ಅಪರಾಧ ಕೃತ್ಯಗಳಿಗೆ ಕುಮ್ಮಕ್ಕು, ಸಹಕಾರ ನೀಡುವವರಿಗೂ ತಕ್ಕ ಶಿಕ್ಷೆಯಾಗಬೇಕು. ಆಸ್ಪತ್ರೆ, ಶಾಲೆ, ಪೊಲೀಸ್ ಇಲಾಖೆ, ಸರಕಾರಿ ಕಚೇರಿ ಯಾವುದೇ ಸ್ಥಳದಲ್ಲಿ ಸುರಕ್ಷತೆ ಬಗ್ಗೆ ನಿರ್ಲಕ್ಷ್ಯ ತೋರಿದರೆ ಎಲ್ಲ ಅಧಿಕಾರಿಗಳೂ ಕೃತ್ಯಕ್ಕೆ ಹೊಣೆಗಾರರೇ ಆಗಿರುತ್ತಾರೆ ಎಂದು ಪ್ರಧಾನಿ ಮೋದಿ ಗುಡುಗಿದ್ದಾರೆ. ಸರಕಾರ ಬದಲಾಗುತ್ತವೆ, ಆದರೆ ಜೀವ-ಮಹಿಳೆಯರ ಮಾನದ ರಕ್ಷಣೆ ಎಲ್ಲರ ಜವಾಬ್ದಾರಿ. ಈ ಬಗ್ಗೆ ರಾಜ್ಯದ ಎಲ್ಲಾ ಪಕ್ಷಗಳಿಗೆ ಸಂದೇಶ ನೀಡಲು ಬಯಸುವೆ ಎಂದು ಮೋದಿ ಹೇಳಿದ್ದಾರೆ.

ಲಕ್‌ಪತಿ ದೀದಿ ಜತೆ ಸಂವಾದ: ಸರಕಾರದ ಮಹಿಳಾ ಕೇಂದ್ರೀಕೃತ ಯೋಜನೆಗಳ ಬಗ್ಗೆ ಕಾರ್ಯಕ್ರಮದಲ್ಲಿ ವಿವರಿಸಿದ ಮೋದಿ, 2014ರವರೆಗೆ ದೇಶದ ಮಹಿಳಾ ಸ್ವಸಹಾಯ ಸಂಘಗಳಿಗೆ 25 ಸಾವಿರ ಕೋಟಿ ರು. ಸಾಲ ನೀಡಿದ್ದರೆ, ಕಳೆದ 10 ವರ್ಷಗಳಲ್ಲಿ 9 ಲಕ್ಷ ಕೋಟಿ ರು. ಸಾಲ ನೀಡಲಾಗಿದೆ. 'ಲಕ್‌ಪತಿ ದೀದಿ' ಯೋಜನೆ ಮಹಿಳೆಯರ ಆದಾಯ ಹೆಚ್ಚಳಕ್ಕೆ ರೂಪಿಸಿದ ಯೋಜನೆಯಲ್ಲ. ಭವಿಷ್ಯದ ಪೀಳಿಗೆ ಸಶಕ್ತಗೊಳಿಸುವ ಯೋಜನೆ. 10 ವರ್ಷದಲ್ಲಿ 1 ಕೋಟಿ ಮಹಿಳೆಯರು ಲಕ್‌ಪತಿ ದೀದಿ ಆಗಿದ್ದಾರೆ ಎಂದಿದ್ದಾರೆ. ಈ ವೇಳೆ ಪ್ರಧಾನಿ 2500 ಕೋಟಿ ರು. ಬಿಡುಗಡೆ ಮಾಡಿದ್ದು 4.3 ಲಕ್ಷ ಸ್ವಸಹಾಯ ಸಂಘಗಳ 48 ಲಕ್ಷ ಸದಸ್ಯರಿಗೆ ನೆರವಾಗಲಿದೆ. ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿಯೂ ಬಿಜೆಪಿ ನೇತೃತ್ವದ ಮಹಾಯುತಿ ಸರಕಾರವನ್ನೇ ಅಧಿಕಾರಕ್ಕೆ ತರುವಂತೆ ಮೋದಿ ಮನವಿ ಮಾಡಿದರು.

ಜಲಮಂಡಳಿ ವಿರುದ್ಧ ಲೋಕಾಯುಕ್ತದಲ್ಲಿ ದೂರು

ಬೆಂಗಳೂರು: ಬೆಂಗಳೂರು ಜಲಮಂಡಳಿ ವಿರುದ್ಧ ಮತ್ತೊಂದು ಆರೋಪ ಕೇಳಿಬಂದಿದ್ದು, ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಸಾಮೂಹಿಕ ವರ್ಗಾವಣೆ ಮಾಡಿರುವ ಹಿಂದೆ ಸ್ವಜನಪಕ್ಷಪಾತ ಮತ್ತು ಭ್ರಷ್ಟಾಚಾರ ನಡೆದಿರುವ ಅನುಮಾನ ಕೇಳಿಬಂದಿದೆ.

ಬೆಂಗಳೂರು ಜಲಮಂಡಳಿಯಲ್ಲಿ ಒಂದೇ ದಿನ 200ಕ್ಕೂ ಅಧಿಕ ನೌಕರರ ವರ್ಗಾವಣೆ ಮಾಡಲಾಗಿದೆ.

ಸರಕಾರದ ಆದೇಶವನ್ನು ಉದೇಶ ಪೂರ್ವಕವಾಗಿ ಉಲ್ಲಂಘನೆ ಮಾಡಲಾ ಗಿದೆ. ಸಾಮೂಹಿಕ ವರ್ಗಾವಣೆಗೆ ಜುಲೈ 31 ಕಡೆ ದಿನಾಂಕವಾಗಿದ್ದು, ಬೆಂಗಳೂರು ಜಲ ಮಂಡಳಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಕಾನೂನನ್ನು ಗಾಳಿಗೆ ತೂರಿ ಭಾರಿ ಭ್ರಷ್ಟಾಚಾರ ನಡೆಸಿದ್ದಾರೆ ಎಂಬ ಆರೋಪ ಕೇಳಿಬಂದಿದ್ದು, ಈ ಬಗ್ಗೆ ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ಸಾಮಾಜಿಕ ಕಾರ್ಯಕರ್ತ ಮರಿಲಿಂಗ ಗೌಡ ಮಾಲಿಪಾಟೀಲ್, ಲೋಕಾಯುಕ್ತಗೆ ದೂರು ಸಲ್ಲಿಸಿದ್ದಾರೆ.

ರಾತ್ರೋರಾತ್ರಿ ಸಿಬ್ಬಂದಿ ಗಳ ಸಾಮೂಹಿಕ ವರ್ಗಾವಣೆ ಮಾಡಿರುವ ಕಾರಣ ಏನು? ಅಲ್ಲದೇ ಬೆಂಗಳೂರು ಉಸ್ತುವಾರಿ ಸಚಿವರ ಗಮನಕ್ಕೆ ತರದೇ ವರ್ಗಾವಣೆ ಮಾಡಲಾಗಿದೆ.

ಲೆಬನಾನ್ ಮೇಲಿನ ದಾಳಿಗೆ ಸೇಡು

ಇಸ್ರೇಲ್‌ನತ್ತ ಹಿಜ್ಬುಲ್ಲಾ 300 ರಾಕೆಟ್

ಜೆರುಸಲೇಂ: ಇಸ್ರೇಲ್ ಮತ್ತು ಲೆಬನಾನ್‌ನಲ್ಲಿನ ಉಗ್ರ ಸಂಘಟನೆ ಹಿಜ್ಬುಲ್ಲಾ ನಡುವೆ ಕಳೆದ 24 ಗಂಟೆಗಳಲ್ಲಿ ನೂರಾರು ರಾಕೆಟ್‌ಗಳ ವಿನಿಮಯವಾಗಿದೆ. ಲೆಬನಾನ್ ಮೇಲಿನ ಇಸ್ರೇಲ್ ದಾಳಿಯಿಂದ ಸಿಟ್ಟಿಗೆದ್ದ ಹಿಜ್ಬುಲ್ಲಾ, 320ಕ್ಕೂ ಅಧಿಕ ಕತ್ಯುಶಾ ರಾಕೆಟ್‌ಗಳನ್ನು ಇಸ್ರೇಲ್‌ನತ್ತ ಉಡಾಯಿಸಿದೆ.

ಆದರೆ, ಆ ರಾಕೆಟ್‌ಗಳು ಆಕಾಶದಲ್ಲಿರುವಾಗಲೇ ಪ್ರತಿದಾಳಿ ನಡೆಸಿ ಗಾಳಿಯಲ್ಲೇ ಸ್ಫೋಟಗೊಳ್ಳುವಂತೆ ಮಾಡಲಾಗಿದೆ. 100ಕ್ಕೂ ಅಧಿಕ ಜೆಟ್ ಫ್ಲೈಟ್‌ಗಳನ್ನು ಕಾರ್ಯಾಚರಣೆಗಿಳಿಸಿ ಹಿಜ್ಬುಲ್ಲಾ ಹಾರಿಸಿದ ರಾಕೆಟ್‌ಗಳು ದೇಶದ ಮೇಲೆ ಬಂದು ಬೀಳುವುದನ್ನು ಬಹುತೇಕ ತಡೆಯಲಾಗಿದೆ ಎಂದು ಇಸ್ರೇಲ್ ಹೇಳಿದೆ. ಇರಾನ್ ದೇಶದಿಂದ ಬೆಂಬಲ ಪಡೆದಿರುವ ಲೆಬನಾನ್‌ನ ಉಗ್ರ ಸಂಘಟನೆ 'ಹಿಜ್ಬುಲ್ಲಾ', ಇಸ್ರೇಲ್‌ನ ಪ್ರಮುಖ ಸೇನಾ ನೆಲೆಗಳನ್ನು ಗುರಿಯಾಗಿರಿಸಿ 320ಕ್ಕೂ ಹೆಚ್ಚು ಕತ್ಯುಶಾ ರಾಕೆಟ್ ದಾಳಿ ನಡೆಸಿದೆ. ದಾಳಿ ವಿಫಲಗೊಳಿಸಲು ಇಸ್ರೇಲ್ ವಾಯುಪಡೆ ಫೈಟರ್ ಜೆಟ್‌ಗಳನ್ನು ನಿಯೋಜಿಸಿದೆ. ಪರಿಣಾಮ ಹಿಜ್ಬುಲ್ಲಾ ದಾಳಿ ಬಹುತೇಕ ಗುರಿ ತಪ್ಪಿದೆ. ಇದೇ ವೇಳೆ, ಉತ್ತರ ಮತ್ತು ಮಧ್ಯ ಇಸ್ರೇಲ್ ಭಾಗವನ್ನು ಗುರಿಯಾಗಿಸಿ ದಾಳಿಗೆ ಸಿದ್ಧವಾಗಿರಿಸಿದ್ದ 6 ಸಾವಿರ ರಾಕೆಟ್‌ಗಳನ್ನು ಕೂಡಾ ಫೈಟರ್ ಜೆಟ್‌ಗಳ ನಾಶಪಡಿಸಿವೆ ಎಂದು ಇಸ್ರೇಲ್ ಹೇಳಿದೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಶನಿವಾರ ಭದ್ರತೆಗೆ ಸಂಬಂಧಿಸಿದ ಸಂಪುಟ ಸಭೆ ನಡೆಸಿದ್ದು, ಹಿಜ್ಬುಲ್ಲಾ ಉಗ್ರ ಸಂಘಟನೆ ಕೈಗೊಂಡ ಪ್ರತಿಕಾರದ ದಾಳಿ ಬಗ್ಗೆ ಚರ್ಚಿಸಿದರು. ಬಳಿಕ ಇಸ್ರೇಲ್ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ 48 ಗಂಟೆಗಳ ಕಾಲ ದೇಶಾದ್ಯಂತ ತುರ್ತು ಪರಿಸ್ಥಿತಿ ಘೋಷಿಸಿದರು.

@vishwavaninews

ವಿಶ್ವವಾಣಿ

ಆರಾಮ

ಬೆಂಗಳೂರು
ಸೋಮವಾರ
26|08|2024

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಭರವಸೆಯ ಮಹತ್ವ

ಒಂದು ಪುಟ್ಟ ಕಥೆಯಿದೆ. ನಮಗೆ ಬದುಕಲು ಬೇಕಿರುವುದೇನು? ಎಂದು ತರಗತಿಯಲ್ಲಿ ಗುರುಗಳೊಬ್ಬರು ಪ್ರಶ್ನೆಯೊಂದನ್ನು ಕೇಳಿದಾಗ ಒಬ್ಬ ಶಿಷ್ಯ ಎದ್ದು ನಿಂತು ನೀರು, ಆಹಾರ, ಗಾಳಿ ಎಂದ. ಇನ್ನೊಬ್ಬಾತ ಹಣ, ಆಸ್ತಿ ಎನ್ನುತ್ತಾನೆ. ಆದರೆ ತರಗತಿಯ ಮೂಲೆಯಲ್ಲಿದ್ದ ವಿದ್ಯಾರ್ಥಿಯೊಬ್ಬ 'ನಾಳೆಯ ಬಗ್ಗೆ ಭರವಸೆ' ಎನ್ನುತ್ತಾನೆ. ಆಗ ಗುರುಗಳು ಅವನ ಬಳಿಗೆ ಬಂದು ಬೆನ್ನು ತಟ್ಟಿ ಶಹಬ್ಬಾಸ್ ಎನ್ನುತ್ತಾರೆ. ಕಾರಣ ಬದುಕಿನಲ್ಲಿ ಭರವಸೆ ತುಂಬಾ ಮುಖ್ಯ. ಅದಿಲ್ಲದಿದ್ದರೆ ಬದುಕಲು ಸಾಧ್ಯವೇ ಇಲ್ಲ.

ಪ್ರತಿಯೊಬ್ಬ ವ್ಯಕ್ತಿಗೆ ಬದುಕಿನಲ್ಲಿ ಭರವಸೆ ಇರಬೇಕು. ಭರವಸೆಯೇ ನಮ್ಮ ಬದುಕಿನ ಬೆಳಕು. ಒಳ್ಳೆಯ ನಿರ್ಧಾರ ನಿನ್ನನ್ನು ಅರ್ಧ ಗೆಲ್ಲಿಸಿದರೆ, ಇನ್ನರ್ಧ ನಿರ್ಧಾರದ ಮೇಲಿನ ವ್ಯತಿರಿಕ್ತವಾದ ಭರವಸೆಯು ಗೆಲ್ಲಿಸುತ್ತದೆ. ನಮ್ಮ ಮೇಲೆಯೇ ನಮಗೆ ಭರವಸೆ ಇದ್ದರೆ ಎಲ್ಲವೂ ಸಾಧ್ಯ. ಭರವಸೆಗಳು ಬದುಕಿನ ಮೇಲೆ ಇಂದು ವಿಪರೀತ ವ್ಯಾಕುಲತೆ ಮೂಡಿ ಅಸುನೀಗುವ ನಿರ್ಧಾರ ಮಾಡುವವನಿಗೂ ಉಳಿದು, ಬೆಳೆಯುವ ಸದವಕಾಶ ಮಾಡಿಕೊಡುತ್ತವೆ. ಅದಕ್ಕೆ ನಮ್ಮ ಬಲ್ಲವರು ಹೇಳುವುದು ಭರವಸೆಯು ಹೆತ್ತ ತಾಯಿಯ ಸಮಾನವೆಂದು. ಭರವಸೆಯೊಂದಿದ್ದರೆ ಬಂಜರುನೆಲದಲ್ಲೂ ಬೆಳೆ ಬೆಳೆದು ತೋರಿಸಬಹುದು. ನಾವು ಮಾಡುವ ಕಾರ್ಯಗಳ ಮೇಲೆ ಅಚಲವಾದ ಭರವಸೆ ಇದ್ದರೆ ಸಾಕು, ಬದುಕಿನಲ್ಲಿ ನಮಗೆ ಅಸಂಭವ ಎನಿಸಿದ್ದನ್ನು ಸಾಧಿಸಬಹುದು.

ಎಲ್ಲಾ ಇಲ್ಲಗಳ ನಡುವೆ ಎಲ್ಲವೂ ಇದೆಯೆಂಬ ಭರವಸೆಯ ಭಾವದೊಂದಿಗೆ ಬದುಕಬೇಕು. ನಮ್ಮಲ್ಲಿರುವ ಭರವಸೆಯು ಎಂತಹ ಭಯವನ್ನಾದರೂ ಹೆದರಿಸಿ ಹಿಮ್ಮೆಟ್ಟಿಸುವ ದಕ್ಷತೆಯನ್ನು ನೀಡುತ್ತದೆ. ಸೋಲನ್ನೇ ಸೋಲಿಸಿ ಮಲಗಿಸುವ ಸಾಮರ್ಥ್ಯ ಭರವಸೆಗಿದೆ. ಗೆಲುವು ಅನ್ನುವುದು ಒಂದೇ ದಿನಕ್ಕೆ ಸಿಗುವಂಥದಲ್ಲ. ಅದು ಸಿಗುವವರೆಗೂ ಭರವಸೆ ಇರಬೇಕು. ಅದಕ್ಕೆ ನಿರಂತರ ಪರಿಶ್ರಮ ಅಗತ್ಯ.

● ರಂಗನಾಥ್ ಗುಡಿಮನಿ

ಯುವ ಕಾವ್ಯ

ಪ್ರೀತಿ ಅರಳುತ್ತದೆ

ಹೃದಯಗಳು ನವಿರಾಗಿ ಅಪ್ಪಿಕೊಂಡಾಗ
ಪ್ರೀತಿ ಅರಳುತ್ತದೆ
ಕ್ಷಣಿಕವಾದ ಕ್ಷಣಗಳನು
ಶಾಶ್ವತವಾಗಿಸುವ ಸಿಹಿಗನಸು
ಜನ್ಮ ಪಡೆಯುತ್ತದೆ
ಭಾವ ಭಾವಗಳ ರಾಗಗಳೆಲ್ಲಾ
ತಾಳ ಸಂಗಾತವನ್ನು ಪಡೆದಾಗ
ಸ್ವರಮೇಳದ ಸರಸ ಸಂಚಾರ!!

ಆನಂದದ ತುರಿಯಾವಸ್ಥೆಯಲ್ಲಿ
ಆತ್ಮಗಳು ಬಂಧಿಸಲ್ಪಡುತ್ತವೆ
ಅಧ್ಯಾತ್ಮವೋ ಅತಿರೇಕವೋ
ತಿಳಿಯದ ಬಗೆಯಲ್ಲಿ
ನಡೆಯುತ್ತದೆ ಮನಸ್ಸುಗಳ ಮಿಲನ!!

ಬೇಸಿಗೆಯ ಮುನ್ನಾದಿನ ಬೀಸಿದ
ತಣ್ಣನೆಯ ಗಾಳಿಯಂತೆ
ಹಲವು ಹೃದಯಗಳು ಒಂದಾಗುತ್ತವೆ
ಒಲವಿನ ಶಕ್ತಿಗೆ ತಲೆಬಾಗಿ
ಕರಾಳ ರಾತ್ರಿಯಲ್ಲಿ
ಭರವಸೆಯ ದಾರಿದೀಪವೊಂದು
ತಲೆಯೆತ್ತಿ ನಿಂತುಕೊಳ್ಳುತ್ತದೆ!!

ಪ್ರೀತಿಯು ಸೂಜಿಯಾಗುತ್ತದೆ
ದಾರವಾಗುತ್ತದೆ
ಹೃದಯಗಳನ್ನು ತುಂಡುತುಂಡಾಗಿಸುವ
ಕತ್ತರಿಯ ಕಟುಕತೆಗೆ ಎದುರಾಗಿ!!

ಜಗತ್ತು ಚಲಿಸುತ್ತಲೇ ಇರುತ್ತದೆ
ಪ್ರೀತಿ ಇದೆ ಎಂಬ
ನಂಬಿಕೆಯನ್ನು ಹೊತ್ತುಕೊಂಡು

● ಡಾ. ವಿಶ್ವನಾಥ ಎನ್ ನೇರಳಕಟ್ಟೆ



ಖಂಡಾಂತರಗಳಲ್ಲಿ ಕೃಷ್ಣಭಕ್ತಿ

● ಡಾ. ಜಯಂತಿ ಮನೋಹರ್

ಇಂದು ಹಲವಾರು ದೇಶಗಳಲ್ಲಿ ಕಾಣುವ 'ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಸ್ಥೆ '(ಇಸ್ಕಾನ್) ಯನ್ನು 1966 ರಲ್ಲಿ ನ್ಯೂಯಾರ್ಕಿನಲ್ಲಿ ಸ್ಥಾಪಿಸಿದವರು ಭಕ್ತಿವೇದಾಂತ ಶ್ರೀಲ ಸ್ವಾಮಿ ಪ್ರಭುಪಾದರು. 'ಅನನ್ಯವಾಗಿ ನನ್ನನ್ನೇ ಚಿಂತಿಸುವ ಭಕ್ತರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ' ಎಂದು ಕೃಷ್ಣ ಕೊಟ್ಟಿರುವ ಭರವಸೆಯಿಂದ ಕೈಗೊಂಡ ಮಹಾಸಂಕಲ್ಪದೊಂದಿಗೆ ಪ್ರಭುಪಾದರು ಭಾರತದಿಂದ ಹೊರಗೆ ಕಾಲಿಟ್ಟಾಗ ವಯಸ್ಸು ಎಪ್ಪತ್ತು. ಪ್ರಪಂಚದಾದ್ಯಂತ ಹನ್ನೊಂದು ಬಾರಿ ಸಂಚರಿಸಿ 108 ದೇವಾಲಯಗಳನ್ನು ನಿರ್ಮಿಸಿದ ಅವರ ಸಾಧನೆ ಅಪೂರ್ವ ಎನಿಸಿದೆ.

'ಜಲದೂತ' ಎಂಬ ಸರಕು ಸಾಗಣೆಯ ಹಡಗಿನಲ್ಲಿ 1965 ರಲ್ಲಿ ಭಾರತದಿಂದ ಅಮೆರಿಕಕ್ಕೆ ಪಯಣಿಸುತ್ತಿರುವ ಸನ್ಯಾಸಿಯನ್ನು ಹಡಗಿನ ಕಪ್ತಾನ, ಶ್ರೀ ಅಭಯಚರಣಾರವಿಂದ ಭಕ್ತಿವೇದಾಂತ ಸ್ವಾಮಿ ಎಂದು ತನ್ನ ಸಿಬ್ಬಂದಿಗೆ ಪರಿಚಯಿಸುತ್ತಾನೆ. ಇವರೇ ಮುಂದೆ ಕೃಷ್ಣ ಪ್ರಜ್ಞೆಯ ಅಂತಾರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸಿ ಶ್ರೀಲ ಪ್ರಭುಪಾದರೆಂದು ವಿಶ್ವವಿಖ್ಯಾತರಾದರು.

ತನ್ನ ಜೋಳಿಗೆಯಲ್ಲಿ ತಂದಿದ್ದ ಧವಸದಿಂದ ಸ್ವಯಂಪಾಕ ತಯಾರಿಸಿಕೊಂಡು ಭಾಗವತದ ಅನುವಾದ ಕಾರ್ಯದಲ್ಲಿ ನಿರತರಾಗಿದ್ದ ಅವರ ಕೈಯಲ್ಲಿದ್ದದ್ದು ಕೇವಲ ನಲವತ್ತು ರೂಪಾಯಿ. ಪ್ರಯಾಣದಲ್ಲಿ ಎರಡು ಬಾರಿ ಹೃದಯಾಘಾತಕ್ಕೆ ಒಳಗಾಗಿ ಚೇತರಿಸಿಕೊಂಡದ್ದು ಒಂದು ಪವಾಡವೇ. ಪ್ರಭುಪಾದರ ಇಳಿವಯಸ್ಸು ಹಾಗೂ ಆರೋಗ್ಯದ ಸಮಸ್ಯೆಗಳನ್ನು ನೋಡಿದವರೆಲ್ಲರಿಗೂ ಅಮೆರಿಕಕ್ಕೆ ಹೋಗುವ ಅವರ ಸಂಕಲ್ಪ ಅಚ್ಚರಿ ತರಿಸುತ್ತಿತ್ತು. ಅಲ್ಲಿಗೇ ಯಾಕೆ ಎನ್ನುವ ಪ್ರಶ್ನೆಗೆ, ಅಲ್ಲಿನ ಯುವಜನತೆಯನ್ನು ಎಚ್ಚರಿಸುವ ಭಗವಂತನ ಸಂಕಲ್ಪವೇ ಇವರ ಮೂಲಕ ನಡೆಯಿತು ಎನ್ನುವ ಉತ್ತರ ಸಿಗುತ್ತದೆ.

ನ್ಯೂಯಾರ್ಕ್‌ನಲ್ಲಿ

ಪ್ರಭುಪಾದರು ಮೊದಲು ಭೇಟಿಕೊಟ್ಟ ನ್ಯೂಜೆರ್ಸಿ ಹಾಗೂ ನ್ಯೂಯಾರ್ಕ್ ನಗರಗಳಲ್ಲಿ ಯುವಜನತೆ ಮದ್ಯವ್ಯಸನ, ಮುಕ್ತ ಲೈಂಗಿಕತೆ, ಯಾವುದೇ ಕಟ್ಟುಪಾಡಿಲ್ಲದ ಜೀವನಕ್ಕೆ ಶರಣಾಗಿ ಮತ್ತೇರಿಸುವ ವಸ್ತುಗಳ ಸೇವನೆ ಮಾಡಿ ತೊಳಲಾಡುತ್ತಿತ್ತು. ಅಭಯಚರಣರು ತಮ್ಮ ಸಿದ್ಧಾಂತವನ್ನು ಬಿಡದೆ, ಸರಳ ವಿಧಾನಗಳಿಂದ ಅವ್ಯಾಹತವಾಗಿ ನಡೆಸಿದ ಮನ ಒಲಿಸುವ ಕಾರ್ಯಗಳಿಂದ 'ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ' ಸಂಸ್ಥೆಯ ಸ್ಥಾಪನೆ ಹಾಗೂ ಪ್ರಚಾರ ಸಾಧ್ಯವಾಯಿತು.

ಯಾವುದೇ ನಿರ್ದಿಷ್ಟ ಗುರಿಯಿಲ್ಲದೆ ಜೀವಿಸುತ್ತಿದ್ದ ಅಲ್ಲಿನ ಯುವ ಜನರಿಗೆ ಪಂಚೆ ಉಡಿಸಿ, ಶಿಖೆ ಬೆಳೆಸಿ, ಚಂದನ ತಿಲಕವಿಡಿಸಿ, ತಾಳ - ಮದ್ದಳೆಗಳನ್ನು ಕೈಗೆ ಕೊಟ್ಟು ಸಸ್ಯಾಹಾರಿಗಳನ್ನಾಗಿಸಿ, ಬೀದಿ ಬೀದಿಗಳಲ್ಲಿ ಸಂಕೀರ್ತನೆ ನಡೆಸಿದರು. ಅಮೆರಿಕದಾದ್ಯಂತ ಡೋಲು ಬಡಿಯುತ್ತಾ,

ಬೆಂಗಳೂರಿನಲ್ಲಿ ಎರಡು 'ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಸ್ಥೆ' (ಇಸ್ಕಾನ್) ಯ ದೇವಾಲಯಗಳಿವೆ. ರಾಜಾಜಿನಗರದಲ್ಲಿರುವ ದೇವಾಲಯ ಸ್ಥಾಪನೆಯಾದದ್ದು 1997 ರಲ್ಲಿ. ಎರಡನೆಯದು, ಕನಕಪುರ ರಸ್ತೆಯಲ್ಲಿ ವೈಕುಂಠ ಬೆಟ್ಟದ ಮೇಲೆ ಭವ್ಯವಾಗಿ ನಿರ್ಮಾಣವಾಗಿರುವ ದೇವಾಲಯ. ಇಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ, ರಾಮ ನವಮಿ, ಬ್ರಹ್ಮೋತ್ಸವ, ನರಸಿಂಹ ಜಯಂತಿ, ಬಲರಾಮ ಜಯಂತಿ ಮುಂತಾದ ಹಬ್ಬಗಳು ವಿಜೃಂಭಣೆಯಿಂದ ನಡೆಯುತ್ತವೆ. ಇದೇ ತಿಂಗಳ 26 ರಂದು ಆಚರಿಸುವ ಶ್ರೀಕೃಷ್ಣ ಜನ್ಮಾಷ್ಟಮಿಯ ಆಚರಣೆ ವಿಶೇಷವಾದದ್ದು.

ಕಷ್ಟದ ಬದುಕು

ಯೌವ್ವನದಲ್ಲಿ ಇವರು ಅನುಭವಿಸಿದ ಯಾತನೆಯೂ ಸಾಮಾನ್ಯವಾದುದಲ್ಲ. ಪರಿಶ್ರಮದಿಂದ ಬರೆದಿಟ್ಟಿದ್ದ ಭಗವದ್ಗೀತೆಯ ಅನುವಾದ ಪ್ರಮಾದವಶದಿಂದ ಹಳೆಯ ಕಾಗದದ ಅಂಗಡಿ ಸೇರಿಬಿಟ್ಟಿತ್ತು. ಅದನ್ನು ಮತ್ತೆ ಬರೆದು ಸಿದ್ಧಪಡಿಸಿದರು. ಹೀಗೆ,ಸೋಲುಗಳನ್ನೂ ಮೆಟ್ಟಿಲುಗಳಾಗಿ ಪರಿವರ್ತಿಸುವ ಮನೋದಾರ್ಢ್ಯ ಅವರನ್ನು ಮುನ್ನಡೆಸಿತು.

ಇಂಗ್ಲಿಷ್‌ನಲ್ಲಿ ಅಧ್ಯಾತ್ಮ ಪ್ರಚಾರ

ಪ್ರಪಂಚದಾದ್ಯಂತ ಆಧ್ಯಾತ್ಮ ಜ್ಞಾನವನ್ನು ಪ್ರಚಾರ ಮಾಡಲು ಇಂಗ್ಲಿಷ್ ಭಾಷೆಯ ಮಹತ್ವವನ್ನು ಅರಿತು, 1944 ರಲ್ಲಿ ಶ್ರೀಲ ಪ್ರಭುಪಾದರು 'ಬ್ಯಾಕ್ ಟು ಗಾಡ್ ಹೆಡ್' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಅವರ ಮೊತ್ತಮೊದಲ ಪುಸ್ತಕ 'ಈಸಿ ಜರ್ನಿ ಟು ಅದರ್ ಪ್ಲಾನೆಟ್' 1960 ರಲ್ಲಿ ಪ್ರಕಟವಾಯಿತು. ಭಗವದ್ಗೀತೆ ಮತ್ತು ಶ್ರೀಮದ್ ಭಾಗವತಗಳನ್ನು ಆಂಗ್ಲಭಾಷೆಯಲ್ಲಿ ಅನುವಾದಿಸುವ ಕಾರ್ಯ ಕೈಗೊಂಡರು. ಭಗವದ್ಗೀತೆ, ಈಶೋಪನಿಷತ್, ಚೈತನ್ಯ ಚರಿತಾಮೃತ, ಭಕ್ತಿರಸಾಮೃತ ಸಿಂಧು, ಉಪದೇಶಾಮೃತ ಸಿಂಧುಸೇರಿದಂತೆ ಎಂಭತ್ತಕ್ಕೂ ಹೆಚ್ಚು ಪುಸ್ತಕಗಳನ್ನುರಚಿಸಿದ್ದಾರೆ.

'ಹರೇ ಕೃಷ್ಣ' ಮಂತ್ರ ಜಪಿಸುತ್ತಾ ಹಾಡಿ ಕುಣಿಯುವ ಕಾಷಾಯ ವಸ್ತ್ರ ಧರಿಸಿದ ಪುರುಷರ ಹಾಗೂ ಸೀರೆ ಧರಿಸಿದ ಮಹಿಳೆಯರ ಸಂಖ್ಯೆ ಶೀಘ್ರವಾಗಿ ಹೆಚ್ಚಾಯಿತು. ಇದು ಪ್ರಪಂಚದ ಇತರ ಭಾಗಗಳಿಗೂ ಹರಡಿ 'ಹರೇ ಕೃಷ್ಣ' ಆಂದೋಲನದ ಸ್ವರೂಪ ಪಡೆಯಿತು.

1976ರ ಜುಲೈ ತಿಂಗಳಲ್ಲಿ ನ್ಯೂಯಾರ್ಕ್ ನಗರದ ಪ್ರಸಿದ್ಧ ಐದನೆಯ ರಸ್ತೆಯಲ್ಲಿ ವಿಜೃಂಭಣೆಯ ಭವ್ಯ ರಥಯಾತ್ರೆ ನಡೆದ ತರುವಾಯ 'ನ್ಯೂಯಾರ್ಕ್ ಡೈಲಿ ನ್ಯೂಸ್' ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಯಿತು. ಇದರಿಂದ ಪ್ರಭುಪಾದರ ಪ್ರಭಾವದಿಂದ ಅಲ್ಲಿ ಹರಡಿದ್ದ ಕೃಷ್ಣಭಕ್ತಿಯ ಆಳವನ್ನು ತಿಳಿಸುತ್ತದೆ.

ನ್ಯೂಯಾರ್ಕ್ ನಗರದಿಂದ ಹೊರಟು ಇಡೀ ಪ್ರಪಂಚ ಸುತ್ತಿ ಕೃಷ್ಣ ಪ್ರಜ್ಞೆಯನ್ನು ಖಂಡಾಂತರಗಳಲ್ಲಿ ಹರಡಿ 108 ಭವ್ಯ ಮಂದಿರಗಳನ್ನು ಕಟ್ಟಿದರು.

ಗೌಡೀಯ ಮಠದ ಸಂಸ್ಥಾಪನಾಚಾರ್ಯ ಶ್ರೀ ಶ್ರೀಮದ್ ಭಕ್ತಿಸಿದ್ಧಾಂತ ಸರಸ್ವತಿ ಠಾಕೂರರನ್ನು ಪ್ರಭುಪಾದರು ತಮ್ಮ ಆಧ್ಯಾತ್ಮಿಕ ಗುರುಗಳನ್ನಾಗಿ ಸ್ವೀಕರಿಸಿದರು. ಅವರಿಂದ ದೀಕ್ಷೆ ಪಡೆದ ತರುವಾಯ ಅಭಯ ಚರಣ ದಾಸರೆಂಬ ಅಭಿದಾನ ಪಡೆದರು. 1954 ರಲ್ಲಿ ಸಂಸಾರವನ್ನು ತ್ಯಜಿಸಿ, 'ವಾನಪ್ರಸ್ಥಾಶ್ರಮ'ವನ್ನು ಸ್ವೀಕರಿಸಿ, ಮುಂದೆ 1959 ರಂದು, ಮಥುರೆಯಲ್ಲಿ ಸಂನ್ಯಾಸ ದೀಕ್ಷೆ ಸ್ವೀಕರಿಸಿ, 'ತ್ರಿದಂಡಿ ಭಿಕ್ಷು ಅಭಯ ಚರಣಾರವಿಂದ', ಭಕ್ತಿವೇದಾಂತ ಸ್ವಾಮಿಯಾದರು.

ಅರವತ್ತು ಸಂಪುಟಗಳು

ಚೈತನ್ಯ ಪ್ರಭುಗಳ ಸಂದೇಶವನ್ನು ಸಾರುವ ಆದೇಶವನ್ನು ಪ್ರಭುಪಾದರಿಗೆ ಕೊಟ್ಟದ್ದು ಅವರ ದೀಕ್ಷಾಗುರುಗಳಾದ ಸ್ವಾಮಿ ಭಕ್ತಿ ಸಿದ್ಧಾಂತ ಸರಸ್ವತಿಗಳು. ಅಮೆರಿಕಕ್ಕೆ ಹೋಗುವ ಮೊದಲೇ ಭಾಗವತದ ಮೂರು ಸಂಪುಟಗಳನ್ನು ಅನುವಾದಿಸಿ ಪ್ರಕಟಿಸಿದ್ದರು. ಆನಂತರ ಅನುವಾದವನ್ನು ಮುಂದುವರೆಸಿ ಅರವತ್ತು ಸಂಪುಟಗಳನ್ನು ಪೂರ್ಣಗೊಳಿಸಿದ್ದಲ್ಲದೆ ವಿಶ್ವದ ಹಲವಾರು ಭಾಷೆಗಳಲ್ಲಿಯೂ ಅದು ಪ್ರಕಟವಾಯಿತು. ಖಂಡಾಂತರಗಳಲ್ಲಿ ಕೃಷ್ಣ ಪ್ರಜ್ಞೆಯನ್ನು ಪ್ರಸಾರಮಾಡುವಲ್ಲಿ, ದೇವಾಲಯಗಳನ್ನು ಕಟ್ಟುವಲ್ಲಿ, ಭಕ್ತರಿಗೆ ಮಾರ್ಗ ತೋರಿಸುವಲ್ಲಿ, ಪ್ರಭುಪಾದರು ತೋರುತ್ತಿದ್ದ ಜಾಣ್ಮೆ ಅಸಾಧಾರಣವಾದುದು. ಸಮಾಜದ ಉನ್ನತ ವ್ಯಕ್ತಿಗಳೊಂದಿಗೆ ಮಾಡಿದ ಯಶಸ್ವಿ ವ್ಯವಹಾರ, ಅಗತ್ಯವಿರುವ ಅಪಾರ ಧನ ಸಂಗ್ರಹ, ಕೋರ್ಟ್ ವ್ಯವಹಾರಗಳಲ್ಲಿಯೂ ತೋರಿದ ಕುಶಲತೆಗಳ ಹಿಂದೆ ಕಾಣುವುದು ಅವರ ಸ್ವಾರ್ಥರಹಿತ ಸಂಕಲ್ಪ.

ಅಂದು ಭಕ್ತಿವೇದಾಂತ ಶ್ರೀಲ ಪ್ರಭುಪಾದರು ಹಾಕಿದ ಭದ್ರ ಬುನಾದಿಯೊಂದಿಗೆ 'ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಸ್ಥೆ '(ಇಸ್ಕಾನ್) ಇಂದು ಪ್ರಪಂಚದಾದ್ಯಂತ 650 ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಹರಡಿದೆ. ಸಾಮಾನ್ಯ ಜನರಿಗೆ ವೇದಾಂತದ ತಳಹದಿಯಲ್ಲಿ ಕೃಷ್ಣ ಭಕ್ತಿಯ ದೀಕ್ಷೆ ಕೊಟ್ಟು ಧರ್ಮ ಪಥದಲ್ಲಿ ಮುನ್ನಡೆಸುತ್ತಿದೆ.

ಸುವರ್ಣಮುಖಿ ಉಗಮಸ್ಥಾನ

● ಆರ್.ಎಸ್.ರವೀಂದ್ರ, ಪಾವಗಡ

ಸಿದ್ಧರ ಬೆಟ್ಟವು ಕಲ್ಪತರು ನಾಡಿನ ಒಂದು ಪ್ರಸಿದ್ಧ ಪ್ರವಾಸಿ ತಾಣ. ಗುಡ್ಡ ಬೆಟ್ಟಗಳ ಮಧ್ಯೆ ಇರುವ ಈ ಪುಟ್ಟ ಊರು ಹಚ್ಚ ಹಸಿರಿನಿಂದ ಕೂಡಿದೆ. ಇಲ್ಲಿ ಸಾಧು ಸಂತರು ನೆಲೆಸಿದ್ದರೆಂಬ ಉಲ್ಲೇಖವನ್ನೂ ಕಾಣಬಹುದು.

ಸಿದ್ದೇಶ್ವರರು ಈ ಬೆಟ್ಟದ ಮೇಲೆ ನೆಲೆಗೊಂಡು ಪುನೀತರಾದಂತಹ ಪುಣ್ಯಕ್ಷೇತ್ರ ಇದು ಎಂಬ ನಂಬಿಕೆ. ಈ ಕ್ಷೇತ್ರ ತುಮಕೂರು ಜಿಲ್ಲೆ ಕೊರಟಗೆರೆ ತಾಲೂಕಿನ ಚನ್ನರಾಯನದುರ್ಗ ಹೋಬಳಿಯಲ್ಲಿದೆ. ಇದು ಜಿಲ್ಲಾ ಕೇಂದ್ರದಿಂದ ಸುಮಾರು 35 ಕಿ.ಮೀ. ದೂರದಲ್ಲಿ ಮತ್ತು ಬೆಂಗಳೂರಿನಿಂದ 110 ಕಿ.ಮೀ. ದೂರದಲ್ಲಿದೆ. ಚಾರಣಿಗರ ತಾಣ

ಈ ಬೆಟ್ಟಕ್ಕೆ ಬೂದುಗವಿ, ಸುವರ್ಣ ಗಿರಿ, ಸಂಜೀವಿನಿ ಬೆಟ್ಟ ಎಂಬ ಹಲವು ಹೆಸರುಗಳಿವೆ. ಈ ಬೆಟ್ಟವನ್ನು ಏರುವಾಗ ಕೆಲವೆಡೆ ಸಲೀಸಾಗಿಯೂ, ಹಲವೆಡೆ ಕಡಿದಾಗಿಯೂ ಮೆಟ್ಟಿಲುಗಳಿವೆ. ಇದು ಚಾರಣಿಗರಿಗೆ ಹೇಳಿ ಮಾಡಿಸಿದಂಥ ತಾಣ. ಚಾರಣಿಗರು ಹೀಗೆ ಬೆಟ್ಟ ಹತ್ತುವಾಗ ಜಾಲಗಿರಿ ಹೂವುಗಳ ಸುಗಂಧ ಆಸ್ವಾದಿಸಬಹುದು. ಈ ಹೂವಿನ ಮರಗಳು ಶಿವರಾತ್ರಿ ಸಮಯಕ್ಕೆ ಘಮಘಮಿಸುವ ಹೂವುಗಳಿಂದ ಮೈದುಂಬಿಕೊಂಡು ನಳನಳಿಸುತ್ತವೆ.



ಇಲ್ಲಿನ ಬಂಡೆಗಳ ಮಧ್ಯೆ ನೆಲೆಸಿರುವ ಸಿದ್ದೇಶ್ವರ ಸ್ವಾಮಿ ದರ್ಶನ ಪಡೆಯಬಹುದು. ಪಕ್ಕದಲ್ಲೆ ಕಿರಿದಾದ ಒಂದು ಗುಹೆ ಕಾಣಬಹುದು. ಬೆಟ್ಟದ ಮೇಲೆ ದ್ರಾಕ್ಷಿ ತೋಟ, ಸ್ನಾನಕ್ಕೆ ಅಲಸುಂಡೆ ಕೆರೆ, ಮೊಟ್ಟೆ ಆಕಾರದ ಬಾವಿ, ಋಷಿ ಮುನಿಗಳ ತಪಸ್ಸಿನ ತಾಣ ಇದೆ. ಮೇಲೆ ಹೋದರೆ ಬೆಟ್ಟದ ಮೇಲೆ ಒಂದು ಬೃಹದಾಕಾರದ ದೊಡ್ಡ ಬಂಡೆ ಇದೆ. ಇಲ್ಲಿಂದ ಕೋಳಿಕಾಲು ಬೆಟ್ಟದ ಮೇಲೆ ಕುಳಿತ ಪಕ್ಷಿಗಳ ಹಿಂಡು ನಯನ ಮನೋಹರವಾಗಿ ಕಾಣಿಸುತ್ತವೆ.

ಉದ್ಭವ ಲಿಂಗ



ಈ ಬಂಡೆಯ ಮತ್ತೊಂದು ವಿಶೇಷವೆಂದರೆ ಚಿಕ್ಕ ದೇವಾಲಯವೊಂದರಲ್ಲಿ ಉದ್ಭವ ಲಿಂಗ ಇರುವುದನ್ನು ಕಾಣಬಹುದು. ಇಡೀ ಬೆಟ್ಟವನ್ನು ಒಂದು ಸುತ್ತು ಹಾಕಿ ಕೆಳಗೆ ಇಳಿಯುವಾಗ ಮನಸ್ಸು ಪ್ರಫುಲ್ಲವಾಗುವುದು ನಿಶ್ಚಿತ.

ಸೂರ್ಯ ಗವಿ

ಹಾಗೇ ಬೆಟ್ಟದಿಂದ ಕೆಳಗಿಳಿದು ಬಂದರೆ ಐದಾರು ದೇಗುಲಗಳ ದರ್ಶನವನ್ನೂ ಪಡೆಯಬಹುದು. ಇಲ್ಲೊಂದು ಸೂರ್ಯನ ಗವಿ ಇದೆ. ಇದು ಋಷಿ ಮುನಿಗಳ ತಪಸ್ಸು ಮಾಡುತ್ತಿದ್ದ ತಾಣ ಎಂಬ ನಂಬಿಕೆ. ಇಂದು ಇದು ಒಂದು ಯೋಗಾಭ್ಯಾಸಿಗಳ ನೆಚ್ಚಿನ ತಾಣವಾಗಿ ಹೆಸರು ಪಡೆದಿದೆ. ಆಗಾಗ ಯೋಗ ತಂಡಗಳು ಇಲ್ಲಿ ಬಂದು ಯೋಗ ಮಾಡುತ್ತಾರೆ. ಪ್ರತಿ ಸೋಮವಾರ ಇಲ್ಲಿ ಪ್ರವಾಸಿಗರ ದಂಡು ದಾಳಿಯಿಡುತ್ತದೆ. ಸಿದ್ದರ ಬೆಟ್ಟದ ಮೇಲಿರುವ ಸಿದ್ದೇಶ್ವರ ಗುಡಿಗೆ ಎಲ್ಲಾ ದೇವಸ್ಥಾನಗಳ ರೀತಿ ಕಟ್ಟಡವಿಲ್ಲ. ಇದು ಬಂಡೆಗಳಿಂದ ಸುತ್ತುವರಿದ ಗವಿ. ಇಲ್ಲಿನ ಸುತ್ತಮುತ್ತಲಿನ ಗ್ರಾಮಸ್ಥರು ಮನೆಯಲ್ಲೇ ಮಾಡಿದ ಮಡಿ ತುಪ್ಪವನ್ನು ಸಿದ್ದೇಶ್ವರನಿಗೆ ಅರ್ಪಿಸಿ, ದೀಪ ಹಚ್ಚುವ ಪದ್ಧತಿ ಚಾಲ್ತಿಯಲ್ಲಿದೆ.

ನದಿ ಜನಿಸುವ ಸ್ಥಳ

ಶ್ರೀ ಸಿದ್ದೇಶ್ವರಸ್ವಾಮಿ ಒಬ್ಬಟ್ಟು (ಹೋಳಿಗೆ) ಪ್ರಿಯನೆಂಬ ನಂಬಿಕೆಯಿದೆ. ಇದರ ಎದುರುಗಡೆ ಸದಾ ನೀರಿನಿಂದ ತುಂಬಿರುವ ಒಂದು ಪುಷ್ಕರಣಿಯಿದೆ. ಇದುವೇ ಸುವರ್ಣಮುಖಿ ನದಿಯ ಉಗಮಸ್ಥಾನ. ಇಲ್ಲಿ ನೀರು ಸದಾ ತುಂಬಿರುತ್ತದೆ. ಚಾರಣ ಮಾಡಿ ದಣಿದು ಬಂದವರಿಗೆ ಈ ಪುಷ್ಕರಣಿಯ ನೀರು ಮೈಮೇಲೆ ಬಿತ್ತು ಅಂದರೆ ಆಯಾಸ ಮಾಯ! ಈ ಬೆಟ್ಟದುದ್ದಕ್ಕೂ ಹಲವು ಔಷಧೀಯ ಗುಣಗಳುಳ್ಳ ಸಸ್ಯಗಳು ಹೇರಳವಾಗಿ ದೊರೆಯುತ್ತವೆ. ಆದ್ದರಿಂದ ಈ ಬೆಟ್ಟವನ್ನು ಸಂಜೀವಿನಿ ಬೆಟ್ಟವೆಂತಲೂ ಕರೆಯುವರು. ಇಲ್ಲಿ ಕಾಗೆಗಳು ಕಾಣುವುದಿಲ್ಲ. ಸಿದ್ದರಬೆಟ್ಟದ ಮೇಲೆ ಒಂದು ಕೋಟೆ ಇದೆ. ಈ ಕುರಂಕೋಟೆಯನ್ನು ಆಳುತ್ತಿದ್ದ ಕುರಂಗರಾಯನೆಂಬ ಪಾಳೆಗಾರ ನಿರ್ಮಿಸಿದ್ದನೆಂಬ ಇತಿಹಾಸವಿದೆ. ಸಿದ್ದರಬೆಟ್ಟದ ಪ್ರಶಾಂತತೆ, ಹಸಿರಿನ ಹೊದಿಕೆ ಎಂಥವರನ್ನೂ ಆಕರ್ಷಿಸುವದಂತೂ ಖಂಡಿತಾ!

ನೀವೂ ಬರೆಯಿರಿ

ಆರಾಮ ಪುರವಣಿಗೆ ನೀವೂ ಬರೆಯಬಹುದು.
ಪ್ರವಾಸ, ನುಡಿಚಿತ್ರ, ವ್ಯಕ್ತಿತ್ವ ವಿಕಸನ ಮೊದಲಾದ ಬರಹಗಳಿಗೆ ಸ್ವಾಗತ.
ಬರಹ ಚಿಕ್ಕದಾಗಿ, ಚೊಕ್ಕವಾಗಿರಲಿ. ಸೂಕ್ತ ಎನಿಸಿದರೆ ಪ್ರಕಟಿಸಲಾಗುವುದು.
ಇ-ಮೇಲ್:
vishwavanimagazine@gmail.com

ಮಿತ ಸ್ವಾರ್ಥದ ಮಹತ್ವ

● ಪ್ರೊ. ಸಿ. ಶಿವರಾಜು

ಸ್ವಲ್ಪ ಸ್ವಾರ್ಥ ಇರಲಿ; ಆದರೆ ಪರೋಪಕಾರ ನಮ್ಮ ಬದುಕಿನ ತಿರುಳಾಗಿರಲಿ. ಸಮಾಜಸೇವೆ ಬದುಕಿನ ಗುರಿಯಾಗಿರಲಿ.

ಸ್ವಾರ್ಥ ಯಾರಿಗಿಲ್ಲ ಹೇಳಿ! ಮಾನವ ಸ್ವಾರ್ಥಜೀವಿ, ಸ್ವಾರ್ಥ ಎಂಬೆರಡು ಪದ ಮನಷ್ಯನನ್ನು ಸಂಕುಚಿತ ಮನೋಭಾವಕ್ಕೆ ನೂಕಿ ತಾನು, ತನ್ನದೆಂಬ ಸ್ವಾರ್ಥ ಬೆಳೆಯುವಂತೆ ಮಾಡುತ್ತದೆ. ಸ್ವಾರ್ಥ ಎನ್ನುವುದು ಮನುಷ್ಯನಿಗೆ ಸಹಜವಾಗಿ ಹುಟ್ಟಿನಿಂದಲೇ ಬಂದಿರುತ್ತದೆ. ಸ್ವಾರ್ಥವಿರಬೇಕಾ? ಇರಬಾರದಾ? ಅಥವಾ ನಿಸ್ವಾರ್ಥಿಯಾಗಿರಬೇಕಾ? ಎಂಬ ಪ್ರಶ್ನೆ ಮೂಡುತ್ತದೆ.

ಬುದ್ಧರು ಈ ಜಗತ್ತಿಗೆ ಉಪದೇಶವನ್ನು ಮಾಡುತ್ತಾ ''ಮಾನವನ ದುಃಖಕ್ಕೆ ಕಾರಣ ಸ್ವಾರ್ಥ, ಸ್ವಾರ್ಥವನ್ನು ಹೋಗಲಾಡಿಸುವವರೆಗೂ ಮನುಷ್ಯನಿಗೆ ನೆಮ್ಮದಿಯ ಜೀವನ ಸಿಗುವುದಿಲ್ಲ'' ಎಂದಿದ್ದಾರೆ. ಈ ಜಗತ್ತು ಸ್ವಾರ್ಥದಿಂದ ಕೂಡಿದೆ. ಅಳುತ್ತಿರುವಾಗ ಕಣ್ಣೀರು ಒರೆಸಲು ಬಾರದ ಈ ಲೋಕ, ನೀನು ಸತ್ತಾಗ ಮಣ್ಣು ಹಾಕುವುದಕ್ಕೆ ಬರುತ್ತದೆ. ಆದ್ದರಿಂದ ಈ ಲೋಕವನ್ನು ನಂಬಿ ಬದುಕಬೇಡ ಎನ್ನುವುದು ಪ್ರಕೃತಿಯಷ್ಟೇ ಸತ್ಯ. ಮನುಷ್ಯ ಕಷ್ಟ, ದುಃಖ, ಹಾಗೂ ನೋವಿನಲ್ಲಿ ಇರುವಾಗ ಯಾರು ಸ್ಪಂದಿಸುವುದಿಲ್ಲ, ಸತ್ತಾಗ ಅಯ್ಯೋ ಎಂದು ಮಣ್ಣು ಮಾಡಲು ಬರುತ್ತಾರೆ. ಸ್ವಾರ್ಥತೆಯಿಂದ ಕೂಡಿದ ಮನುಷ್ಯ ನಾನು, ನನಗೆ, ನಮ್ಮವರಿಗೆ ಹಾಗೂ ನಮ್ಮ ಕುಟುಂಬಕ್ಕೆ ಎಂಬ ಭಾವನೆ ಬಂದಿರುವುದರಿಂದ ಕಷ್ಟದಲ್ಲಿರುವವರಿಗೆ ಕಣ್ಣೀರು ಒರೆಸುವ ಪ್ರಯತ್ನವನ್ನು ಮಾಡುವುದಿಲ್ಲ.

ಸಹಾಯ ಹಸ್ತ

ಮನುಷ್ಯ ಸ್ವಾರ್ಥಿಯಾಗಿರುವುದು ಸಹಜ; ಆದರೆ ನೂರಕ್ಕೆ ನೂರರಷ್ಟು ಸ್ವಾರ್ಥಿ ಆಗಿರಬಾರದು. ನಾನು ಊಟಮಾಡಿ, ಇತರರಿಗೂ ಊಟ ಬಡಿಸುವ ಅಥವಾ ಸಹಾಯ ಹಸ್ತ ನೀಡುವ ಮನಸ್ಸಿರಬೇಕು. ಈ ಜಗತ್ತಿನಲ್ಲಿ ನಿಸ್ವಾರ್ಥಿಯೆಂದರೆ ಬುದ್ಧನೊಬ್ಬನೇ. ಈ ಜಗತ್ತನ್ನು ಗೆದ್ದಿರುವ ನಿಸ್ವಾರ್ಥಿ ಎನ್ನುವುದು ಈ ಪ್ರಪಂಚಕ್ಕೆ ತಿಳಿದ ವಿಷಯವಾಗಿದೆ. ನಿಸ್ವಾರ್ಥ ಸೇವೆಯಲ್ಲಿ ಪರಮಾನಂದವನ್ನು ಕಾಣಬಹುದು. ಈ ಸಮಾಜದಲ್ಲಿರುವ ಎಲ್ಲರೂ ಸಮಾನವಾಗಿ ಬದುಕಬೇಕೆಂದು ಬುದ್ಧರು ನಮಗೆ ಉಪದೇಶಿಸಿದ್ದಾರೆ, ಅವರು ನೀಡಿದ ಎರಡು ಮಹತ್ತರ ಸಂದೇಶಗಳೆಂದರೆ ಅಹಿಂಸೆ, ಮತ್ತು ಶಾಂತಿ, ಯಾವುದು ಶಾಶ್ವತವಲ್ಲವೆಂಬ ವಾಸ್ತವವನ್ನು ಅರಿತವರು ವ್ಯಸನದಿಂದ ಮುಕ್ತಿಯನ್ನು ಪಡೆಯುತ್ತಾರೆ. ನಿಸ್ವಾರ್ಥತೆಯಿಂದ ಸರಳವಾಗಿ ಬದುಕುವಂತೆ ನೋಡಿಕೊಳ್ಳುತ್ತಾರೆ.

ಮೊದಲ ಪಾರ್ಲಿಮೆಂಟ್

ಬಸವಣ್ಣನವರು ಹನ್ನೆರಡನೇ ಶತಮಾನದಲ್ಲಿ ಪ್ರಪಂಚದಲ್ಲೇ ಮೊದಲನೇ ಪಾರ್ಲಿಮೆಂಟ್ ಎಂಬ ಅನುಭವ ಮಂಟಪ ಸ್ಥಾಪಿಸಿ ಈ ಅನುಭವ ಮಂಟಪದ ಮೂಲಕ ಸರ್ವಜನರ ಹಿತವನ್ನು ಕಾಯಲು ಮಾನವೀಯತೆ, ಜನಪರ-ಜೀವಪರ ನಿಲುವುಗಳು, ವಾಸ್ತವಿಕ ದೃಷ್ಟಿಕೋನ, ಮಾನವಕುಲದ ಕಲ್ಯಾಣ, ನೀತಿಯುತ ಬದುಕು, ಕಾಯಕ-ದಾಸೋಹ, ಪ್ರಸಾದವೆಂಬ ತತ್ವದ ಅಡಿಯಲ್ಲಿ ಶರಣರಂತೆ ಜೀವನ ಸಾಗಿಸಿದರು. ನಿಸ್ವಾರ್ಥತೆಯಿಂದ ಜನರ ಕಲ್ಯಾಣಕ್ಕಾಗಿ ಇಡೀ ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಗಳಿಸಿದ ಸಂಪತ್ತನ್ನು ಸದ್ವಿನಿಯೋಗ-ಸದಾಚಾರ-ಸದ್ಭಕ್ತಿಯಿಂದ ಸಮಾಜದ ಕಲ್ಯಾಣಕ್ಕಾಗಿ ಬಳಸಬೇಕು, ಸಂಪತ್ತಿನ ಬಳಕೆಯೇ 'ದಾಸೋಹ' ಸಿದ್ಧಾಂತವಾಗಿದೆ.

ಈ ಭೂಮಿಯ ಮೇಲೆ ಜೀವಿಸುವ ಪ್ರತಿಯೊಂದು ಜೀವರಾಶಿಯೂ, ಜನ್ಮತಾಳಿ ಬಂದಾಗಿನಿಂದಲೂ ಪ್ರಾಣಿ, ಪಕ್ಷಿ, ಎಲ್ಲಕ್ಕಿಂತ ಮಿಗಿಲಾಗಿ ಮಾನವ ಜೀವರಾಶಿಗೆ ಬೇಕಾದ ಗಾಳಿ, ಬೆಳಕು, ಆಹಾರ, ನೀಡುವ ಈ ಪ್ರಕೃತಿ ಆ ಮಗುವಿಗೆ ಶರೀರ ಮುಚ್ಚಿಕೊಳ್ಳಲು ಬೇಕಾದ ವಸ್ತ್ರ, ಜ್ಞಾನಸಂಪಾದನೆಗೆ ಬೇಕಾದ ವಿದ್ಯೆ, ವಾಸಿಸಲು ಬೇಕಾಗಿರುವ ಮನೆ, ಎಲ್ಲವನ್ನೂ ಈ ಭೂಮಿಯ ಮೇಲೆ ಪ್ರಕೃತಿ ಒದಗಿಸುತ್ತದೆ. ಈ ಪ್ರಕೃತಿಯನ್ನು ಆಶ್ರಯಿಸಿ ಬೆಳೆದು ವಿದ್ಯಾವಂತನಾಗಿ ದುಡಿಯುವ ಹಾಗೂ ಗಳಿಸುವ ಸಾಮರ್ಥ್ಯವನ್ನು ಪಡೆದುಕೊಂಡು ಜೀವನ ಸಂಗಾತಿಯನ್ನು ಪಡೆದು, ದೊಡ್ಡ ದೊಡ್ಡ ಬಂಗಲೆ, ಎಸ್ಟೇಟ್, ಕಾರು, ಹಣ, ಅಂತಸ್ತು, ಮತ್ತು ಅಧಿಕಾರವನ್ನು ಹೊಂದಿ ಸುಖದ ಸುಪ್ಪತ್ತಿಗೆಯಲ್ಲಿ ಜೀವನ ಸಾಗಿಸುವಂತೆ ಈ ಭೂಮಿ (ಪ್ರಕೃತಿ) ಎಲ್ಲವನ್ನೂ ಧಾರೆಯೆರೆದಿದೆ. ಈ ರೀತಿ ಎಲ್ಲವನ್ನು ಗಳಿಸಿದಂತಹ ನಾವು ಈ ಸಮಾಜಕ್ಕೆ (ಭೂಮಿ ಅಥವಾ ಪ್ರಕೃತಿ) ಏನು ನೀಡಿದ್ದೇವೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಹಾಗಾಗಿಯೇ ಅಂಬೇಡ್ಕರ್‌ರವರು ನಿಮ್ಮ ಗಳಿಕೆಯ ಸಂಪತ್ತಿನಲ್ಲಿ ಅಥವಾ ಹಣದಲ್ಲಿ ಒಂದಿಷ್ಟು ಹಣವನ್ನು ಅಥವಾ ಸಂಪತ್ತನ್ನು ಈ ಸಮಾಜಕ್ಕಾಗಿ ನೀಡಿ ಎಂಬ ಕಿವಿ ಮಾತನ್ನು ಹೇಳುತ್ತಾ ''ಒಳ್ಳೆಯ ಮನಸ್ಸಿನಿಂದ ಮಾಡಿದ ಸಹಾಯ ಒಳ್ಳೆಯವರ ಜೊತೆ ಮಾಡಿದ ಸ್ನೇಹ ಎಂದಿಗೂ ವ್ಯರ್ಥವಾಗುವುದಿಲ್ಲ ಎಂದಿದ್ದಾರೆ''. ಬದುಕಿಗಾಗಿ ಗಳಿಸಬೇಕೆ ಹೊರತು ಗಳಿಕೆಗಾಗಿ ಬದುಕಬೇಕಾಗಿಲ್ಲ ಎಂಬ ಸಾಮಾನ್ಯ ಜ್ಞಾನವಿರಬೇಕು.

ಪರೋಪಕಾರ

ಪರೋಪಕಾರಾರ್ಥಮಿದಂ ಶರೀರಮ್ ಎಂಬ ಕಾಳಿದಾಸನ ಉಕ್ತಿಯನ್ನು ತಿಳಿದು ಪರರಿಗೆ ಉಪಕಾರ ಮಾಡುತ್ತಾ ಬೇರೆಯವರ ದುಃಖದಲ್ಲಿ ಭಾಗಿಯಾಗಬೇಕು. ದಯವಿರಬೇಕು ಸಕಲ ಪ್ರಾಣಿಗಳಲ್ಲಿ ಎನ್ನುವ ವಚನಕ್ಕೆ ಅನುಸಾರವಾಗಿ ದಯಪರರಾಗಿ ಇರಬೇಕು. ಸಜ್ಜನರ ಸಹವಾಸವನ್ನು ಅಳವಡಿಸಿಕೊಂಡು ಅವರಂತೆಯೇ ನಾವು ಸಹ ಇರಬೇಕು. ನೂರು ಉಪದೇಶಗಳಿಗಿಂತಲೂ ಆಪತ್ಕಾಲದಲ್ಲಿ ಮಾಡಿದ ಸಹಾಯವು ಶ್ರೇಷ್ಠವಾದದು ಆದುದರಿಂದ ದಯೆ, ಕರುಣೆ, ಪ್ರೀತಿ, ಮಾನವೀಯತೆಯಿಂದ ಪರರ ಶ್ರೇಯಸ್ಸಿನಲ್ಲಿ ಜೀವನ ಸಾಗಿಸಬೇಕು. ನೀ ನನಗಿದ್ದರೆ, ನಾ ನಿನಗೆ ಎನ್ನುವ ಮಾತನ್ನು ಇಲ್ಲಿ ಅನ್ವಯಿಸಬಹುದು.

''ನಿಮ್ಮ ಹಣ ನಿಮ್ಮಲ್ಲೇ ಇರಲಿ ಆದರೆ ಆ ಹಣ ಇತರರಿಗೆ ಸೇವೆ ಮಾಡಲು ಮುಡುಪಾಗಿರಲಿ'' ಎಂಬ ಸತ್ಯವನ್ನು ದಲೈಲಾಮ ಉಪದೇಶಿಸಿದ್ದಾರೆ. ಈ ಮಾರ್ಗದ ಮೂಲಕ ಆನಂದವನ್ನು ನೆಮ್ಮದಿಯ ಜೀವನವನ್ನು ಕಂಡುಕೊಳ್ಳಬಹುದು.

ಹೀಗೆ ಈ ಜಗತ್ತಿನಲ್ಲಿ ಸ್ವಾರ್ಥತೆಯನ್ನು ಬದಿಗೊತ್ತಿ ನಿಸ್ವಾರ್ಥತೆಯಿಂದ ಸಮಾಜದ ಏಳಿಗೆಗೆ, ಬೆಳವಣಿಗೆಗೆ, ಅಭಿವೃದ್ಧಿಗೆ, ಸಮ-ಸಮಾಜವನ್ನು ನಿರ್ಮಿಸಲು ನೋವಿನಲ್ಲಿರುವವರನ್ನು ಅಪ್ಪಿಕೊಂಡು ಅವರ ದುಃಖಗಳಿಗೆ ಸ್ಪಂದಿಸಿ, ನೋವು, ದುಃಖಗಳನ್ನು ಪರಿಹರಿಸಲು ಹಲವಾರು ಸಮಾಜಸುಧಾರಕರು ಶ್ರಮಿಸಿರುವುದನ್ನು ನಾವು ನೋಡಿದ್ದೇವೆ. ಅವರಲ್ಲಿ ಅಗ್ರಗಣ್ಯರೆಂದರೆ ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ, ನೆಲ್ಸನ್ ಮಂಡೇಲಾ, ಮತ್ತು ಮದರ್ ತೆರೆಸಾ. ವ್ಯಕ್ತಿಯ ದೊಡ್ಡ ಸ್ವಾರ್ಥವೆಂದರೆ ಅವನ ಜೀವನ ಎಂಬುದಾಗಿ ಮಹಾತ್ಮಾ ಗಾಂಧಿಯವರು ಸ್ವಾರ್ಥವನ್ನು ಕುರಿತು ಉಲ್ಲೇಖಿಸಿದ್ದಾರೆ. ನಮ್ಮಲ್ಲಿ ಮಿತಸ್ವಾರ್ಥವಿದ್ದರೆ ಬದುಕು ಸುಂದರವಾಗುತ್ತದೆ.

ದಿನ ದರ್ಶಿಕೆ

ಶ್ರಾವಣ ಮಾಸ, ಕೃಷ್ಣ ಪಕ್ಷ, ಅಷ್ಟಮಿ ತಿಥಿ, ವ್ಯಾಘಾಟಾ ಯೋಗ, ಕೃತಿಕಾ ನಕ್ಷತ್ರ, ಬಾಲವ ಕರಣ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮ ಶಕ ಸಂವತ್ಸರ, ದ್ರಿಕ್ ಋತು ಶರದ್, ದ್ರಿಕ್ ಆಯನ ದಕ್ಷಿಣಾಯನ

ಮನೆಮದ್ದು

ಸೋಂಪು ಕಾಳುಗಳು ಮತ್ತು ಓಂ ಕಾಳುಗಳು ನಮ್ಮ ಜೀರ್ಣ ಶಕ್ತಿಯ ಮೇಲೆ ಚಮತ್ಕಾರವನ್ನೇ ಮಾಡುತ್ತವೆ. ಹೊಟ್ಟೆ ಉಬ್ಬರ ಮತ್ತು ಎದೆ ಉರಿ ಸಮಸ್ಯೆಗಳನ್ನು ಸುಲಭವಾಗಿ ಹೋಗಲಾಡಿಸು ತ್ತವೆ. ಜೊತೆಗೆ ನಾವು ಸೇವಿಸುವ ಆಹಾರ ನಮ್ಮ ದೇಹದಲ್ಲಿ ಚೆನ್ನಾಗಿ ಜೀರ್ಣ ಆಗುವಂತೆ ಮಾಡಿ ಅಜೀರ್ಣತೆ, ಹೊಟ್ಟೆ ಉಬ್ಬರ ಮತ್ತು ಗ್ಯಾಸ್ಟ್ರಿಕ್ ಸಮಸ್ಯೆಯನ್ನು ಹೋಗಲಾಡಿಸುತ್ತವೆ.

ಸೌಂದರ್ಯ ಸೂತ್ರ

ಮೊಸರು ಮತ್ತು ಅರಿಶಿನವನ್ನು ಬಳಸಿ ನೀವು ಮನೆಯಲ್ಲಿ ಬ್ಲೀಚ್ ತಯಾರಿಸಬಹುದು. ಎರಡು ಚಮಚ ಮೊಸರಿಗೆ ಒಂದು ಚಿಟಿಕೆ ಅರಿಶಿನವನ್ನು ಬೆರೆಸಬೇಕು. ಈ ಪೇಸ್ಟ್ ಅನ್ನು ಮುಖದ ಮೇಲೆ 20 ನಿಮಿಷಗಳ ಕಾಲ ಹಚ್ಚಿರಿ, ನಂತರ ತಣ್ಣೀರಿನಿಂದ ಮುಖವನ್ನು ತೊಳೆಯಿರಿ. ಹೀಗೆ ಮಾಡುವುದರಿಂದ ಚರ್ಮವು ಶಾಂತವಾಗಿರುತ್ತದೆ ಮತ್ತು ಅರಿಶಿನದಲ್ಲಿರುವ ನೈಸರ್ಗಿಕ ನಂಜುನಿರೋಧಕವು ಮುಖವನ್ನು ಹೊಳೆಯುವಂತೆ ಮಾಡುತ್ತದೆ.

ದಿನ ಭವಿಷ್ಯ

ಮೇಷ ನಿಮಗೆ ಹಣದ ಅಗತ್ಯವಿರಬಹುದು ಆದರೆ ಅದು ನಿಮಗೆ ದೊರೆಯುವುದಿಲ್ಲ. ಕೌಟುಂಬಿಕ ಅಗತ್ಯಗಳಿಗೆ ತಕ್ಷಣದ ಗಮನ ನೀಡಬೇಕು.

ವೃಷಭ ಕೂದಲು ಅಂದಗೊಳಿಸುವಿಕೆ ಮತ್ತು ಮಸಾಜ್ ನಂತಹ ಚಟುವಟಿಕೆಗಳು ಸಾಕಷ್ಟು ಸಮಯ ತೆಗೆದುಕೊಳ್ಳಬಹುದು.

ಮಿಥುನ ಏಕಾಂಗಿ ಹಂತ ನಿಮ್ಮ ಜೀವನ ಸಂಗಾತಿ ದೊರಕಿದ ತಕ್ಷಣ ಕೊನೆಗೊಳ್ಳುತ್ತದೆ. ವಿಚಾರಗೋಷ್ಠಿಗಳು ಮತ್ತು ಪ್ರದರ್ಶನಗಳು ಜ್ಞಾನ ಒದಗಿಸುತ್ತವೆ.

ಕಟಕ ನಿಮ್ಮ ಜೀವನದಲ್ಲಿ ಇನ್ನು ಮುಂದೆ ಯಾವುದೇ ಪ್ರಾಮುಖ್ಯತೆಯನ್ನು ಹೊಂದಿರದ ವಿಷಯಗಳನ್ನು ಪುನರಾವರ್ತಿಸುವುದು ನಿಮಗೆ ಸರಿಹೊಂದುವುದಿಲ್ಲ.

ಸಿಂಹ ದಿನ ತುಂಬಾ ಅದ್ಭುತವಾಗಬಹುದು - ಸ್ನೇಹಿತರು ಅಥವಾ ಸಮಬಂಧಿಕರೊಂದಿಗೆ ಹೊರಗಡೆ ಹೋಗಿ ಚಲನಚಿತ್ರವನ್ನು ನೋಡಲು ಸಹ ಯೋಜಿಸಬಹುದು.

ಕನ್ಯಾ ಅಗತ್ಯವಿದ್ದರೆ ಸ್ನೇಹಿತರು ನಿಮ್ಮ ನೆರವಿಗೆ ಬರುತ್ತಾರೆ. ಪ್ರಣಯ ಸಂಬಂಧದಲ್ಲಿ ನಿಮ್ಮನ್ನು ತಪ್ಪಾಗಿ ತಿಳಿದುಕೊಳ್ಳುವ ಸಾಧ್ಯತೆಯಿದೆ.

ತುಲಾ ಕುಟುಂಬದ ಜವಾಬ್ದಾರಿಗಳ ಬಗ್ಗೆ ನಿಮ್ಮ ಉದಾಸೀನತೆ ಅವರಿಗೆ ಸಿಟ್ಟು ತರಬಹುದು. ನಿಮ್ಮ ಪ್ರೀತಿಯ ಜೀವನದಲ್ಲಿ ಕಹಿ ಘಟನೆಗಳನ್ನು ಕ್ಷಮಿಸಿ.

ವೃಶ್ಚಿಕ ಕಾರ್ಯನಿರತ ದಿನಚರಿಯ ಹೊರತಾಗಿಯೂ ನೀವು ನಿಮಗಾಗಿ ಸಮಯವನ್ನು ತೆಗೆಯಲು ಸಾಧ್ಯವಾಗುತ್ತದೆ.

ಧನು ದಿನವು ಇಂದು ನಿಮ್ಮ ಸಂಗಾತಿಯ ಪ್ರಣಯದ ಉತ್ಕಟತೆಯನ್ನು ತೋರಿಸುತ್ತದೆ. ನಿಮ್ಮ ಸ್ನೇಹಿತರು ನಿಮ್ಮ ಕೆಲಸಕ್ಕೆ ಬರುವುದಿಲ್ಲ.

ಮಕರ ನಿಮ್ಮ ಸಂಗಾತಿ ಅನುದ್ದೇಶಪೂರ್ವಕವಾಗಿ ಅಸಾಧಾರಣವಾದದ್ದೇನಾದರೂ ಮಾಡಬಹುದು ಹಾಗೂ ಇದು ನಿಜವಾಗಿಯೂ ಮರೆಯಲಾಗದಂತಿರುತ್ತದೆ.

ಕುಂಭ ವೈವಾಹಿಕ ಜೀವನದಲ್ಲಿ ಒಂದು ಕಠಿಣ ಹಂತದ ನಂತರ, ಬಿಸಿಲು ಇಂದು ನಿವು ಬಿಸಿಲನ್ನು ನೊಡುತ್ತೀರಿ.

ಮೀನ ನೀವು ನಿಮ್ಮ ಧರ್ಮಪತ್ನಿಯನ್ನು ಪ್ರೇಮಿಸಲು ಸಾಕಷ್ಟು ಸಮಯ ಪಡೆದರೂ, ಆರೋಗ್ಯ ಉಲ್ಬಣಗೊಳ್ಳುತ್ತದೆ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- 1303: ಅಲ್ಲಾಹುದ್ದೀನ್ ಖಿಲ್ಜಿ ಚಿತ್ತೋರ್‌ಗಢವನ್ನು ಸೆರೆ ಹಿಡಿದನು.
- ಖ್ಯಾತ ನಟ ರವಿಶಂಕರ್ ಗೌಡರ ಹುಟ್ಟುಹಬ್ಬ
- 1933: ಖ್ಯಾತ ಬರಹಗಾರ, ವ್ಯಾಕರಣ ತಜ್ಞ, ಸಂಪಾದಕ, ವಿಶ್ಲೇಷಕ ಟಿ.ವಿ. ವೆಂಕಟಚಲ ಶಾಸ್ತ್ರಿ ಹುಟ್ಟುಹಬ್ಬ

ಚಿತ್ರಸ್ಫೂರ್ತಿ





ನಾವೆಲ್ಲರೂ ತಾಜ್ ಮಹಲ್ ಅನ್ನು ನೋಡಿದ್ದೇವೆ. ಆದರೆ, ಎಂದೂ ಈ ರೀತಿಯಲ್ಲಿ ನೋಡಿಲ್ಲ!

ರಾಮಾಯಣದ ಮಹತ್ವ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ರಾಮಾಯಣ ನಮಗೆ ಹತ್ತಿರ ಆಗುವುದಕ್ಕೆ ಮುಖ್ಯಕಾರಣ ವಾಲ್ಮೀಕಿಗಳ ಆಲೋಚನಾ ಶಕ್ತಿ. ಅವರು ನೇರವಾಗಿ ರಾಮನ ಹಾಗೆ ಬದುಕಿ ಎಂದು ಎಲ್ಲೂ ಹೇಳಲಿಲ್ಲ, ಸೀತೆ ಹಾಗೆ ಇರಿ ಅಂತ, ಲಕ್ಷ್ಮಣನ ಹಾಗೆ, ಅಥವಾ ಭರತನ ಪ್ರೀತಿಯ ಹಾಗೆ ಹನುಮಂತನಂತೆ ಇರಬೇಕು ಎಂದು ಎಲ್ಲೂ ಹೇಳಲಿಲ್ಲ. ರಾಮನಿಗೆ ಪ್ರಿಯವಾಗಿರುವುದು ಸತ್ಯ, ಸತ್ಯವನ್ನು ಅವನು ಎಷ್ಟು ಪ್ರೀತಿಸುತ್ತಿದ್ದನೆಂದರೆ, ಒಮ್ಮೆ ಅವನು ಸೀತೆಯ ಹತ್ತಿರ ಮಾತನಾಡುವಾಗ ಹೀಗೆ ಹೇಳಿದನಂತೆ. 'ಸೀತೆ ನನಗೆ ಸತ್ಯ ಪ್ರಿಯವಾದದ್ದು ಅದು ನನ್ನ ಪ್ರಾಣಕ್ಕಿಂತಲೂ, ಹಾಗೂ ನಿನಗಿಂತ. ನಿನಗಿಂತ ಹೆಚ್ಚು ಪ್ರಿಯನಾದ ಲಕ್ಷ್ಮಣ ಅದಕ್ಕಿಂತ 'ಸತ್ಯ' ಪ್ರಿಯವಾದದ್ದು, ಸತ್ಯವನ್ನು ಬಿಟ್ಟು ಬದುಕಿರಲು ಸಾಧ್ಯವೇ ಇಲ್ಲ'. ಅಲ್ಲಿಗೆ ರಾಮನ ಭಕ್ತರಿಗೆ ಸತ್ಯ ಪರಿಪಾಲನೆ ಎಷ್ಟು ಮುಖ್ಯ ಎನ್ನುವುದನ್ನು ಸೂಚ್ಯವಾಗಿ ಇಲ್ಲಿ ವಾಲ್ಮೀಕಿಗಳು ನಿವೇದಿಸುತ್ತಾರೆ. ಅಂತೆಯೇ ರಾಮನ ಕುರಿತಾಗಿ ವಾಲ್ಮೀಕಿಗಳು ಬರೆದಿರುವ ರಾಮಾಯಣ ನಮಗೆ ಮಾರ್ಗದರ್ಶಕವಾಗಿದೆ. ಇದ್ದರೆ ಹೀಗಿರಬೇಕು ಎನ್ನುವ ದಾರಿದೀಪವಾಗಿ ಉತ್ಸಾಹ, ಹುಟ್ಟಿಸುತ್ತದೆ. ಯಾರಿಗಾದರೂ ಉದಾಹರಣೆಯಾಗಿ ಒಳ್ಳೆಯದನ್ನು ಹೇಳಬೇಕು ಎನ್ನುವುದಕ್ಕೆ ಬಳಸುವುದು ರಾಮಾಯಣದ ಕಥೆಯನ್ನು ಅಣ್ಣ-ತಮ್ಮಂದಿರು ರಾಮ-ಲಕ್ಷ್ಮಣರಂತೆ ಇರಬೇಕು. ಭರತನಂತೆ ಪ್ರೀತಿ ಇರಬೇಕು, ನಾಲ್ಕು ಜನ ಗಂಡು ಮಕ್ಕಳಿದ್ದರೆ ದಶರಥನ ಅರಮನೆ ತರಹ. ಹನುಮಂತನು ರಾಮನ ದಾಸನಾಗಿ ಎಲ್ಲರ ಮನ ಮನೆಗಳಲ್ಲಿ ಭಕ್ತಿಯ ಸೆಲೆಯಾಗಿದ್ದಾನೆ. ಹಳ್ಳಿಹಳ್ಳಿಗಳಲ್ಲೂ ಆಂಜನೇಯನ ಗುಡಿಯನ್ನು ಕಾಣಬಹುದು. ಹನುಮಂತನಂತೆ ನಾವು ದಾಸನಾಗಿ ಇರಬೇಕು. ಇಂತಹ ವಿಚಾರ ರಾಮಾಯಣ ಕೇಳಿದವರಿಗೆಲ್ಲಾ ಅನಿಸುತ್ತದೆ. ರಾಮ ಮನುಷ್ಯನಾಗಿ ಹುಟ್ಟಿ ಬದುಕು ನಡೆಸಿ ದೈವತ್ವಕ್ಕೇರಿದ ಕಾರಣ ವಾಲ್ಮೀಕಿಗಳು ಬರೆದ ರಾಮಾಯಣ ವೇದಪ್ರಾಯವಾಯಿತು. ರಾಮಾಯಣದಲ್ಲಿ ರಾಮ ನಮಗೆ ಗುರುವಾಗಿ ದೇವರೂ ಆಗಿದ್ದಾನೆ.

ವಾಲ್ಮೀಕಿಗಳನ್ನು ಗುರುವಾದ ನಾರದರೇ ಹುಡುಕಿಕೊಂಡು ಹೋಗಿ ಮುಂದೆ ವಾಲ್ಮೀಕಿಗಳಿಂದ ರಾಮಾಯಣ ಬರೆಸುತ್ತಾರೆ. ಲೋಕೋತ್ತರರಾದ ನಾರದರಂತ ಗುರುವಿಗೆ, ಅಸಾಮಾನ್ಯ ಶಿಷ್ಯ ವಾಲ್ಮೀಕಿಗಳು ದೊರೆತರು. ವಾಲ್ಮೀಕಿಗಳು ಪರ್ವತವಾದರೆ, ಅದರ ಕೆಳಗೆ ಹುಟ್ಟಿದ ರಾಮಾಯಣ ನದಿಯಾಗಿ ಹರಿದು ಭಾರತ ಭೂಮಿಯ ಮನೆ ಮನೆಯನ್ನು ಮನ ಮನವನ್ನೂ ಪಾವನಗೊಳಿಸಿತು. ಆ ಪುಣ್ಯ ನದಿಗೆ ನೀರನ್ನು ಹಾಯಿಸಿದವರು ನಾರದರು. ರಾಮಾಯಣ ಬರೆಯಲು ಹೇಳಿದ ನಾರದರಿಗೆ, ವಾಲ್ಮೀಕಿಗಳು ಎಲ್ಲವೂ ಅಡಕವಾಗಿರುವಂಥ ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತಾರೆ. ಮಹರ್ಷಿಗಳೇ, ಈಗಿನ ಕಾಲದಲ್ಲಿ, ಇದೇ ಲೋಕದಲ್ಲಿ, ಅತ್ಯಂತ ಗುಣವಂತನೂ, ಧರ್ಮಾತ್ಮನೂ, ಸಚ್ಚಾರಿತ್ರ್ಯನೂ ವಿದ್ವಾಂಸನು, ಎಲ್ಲರಿಗೂ ಪ್ರಿಯನಾದವನು, ಜಿತೇಂದ್ರಿಯನೂ, ಮಹಾಪರಾಕ್ರಮಿಯೂ ಸೇರಿದಂತೆ 16 ಗುಣವುಳ್ಳವರನು ಎಲ್ಲಿದ್ದಾನೆ ಎಂಬ ಪ್ರಶ್ನೆ. ವಾಲ್ಮೀಕಿಗಳಿಗೆ ಅಂತಹ ಮಹಾ ಪರಾಕ್ರಮಶಾಲಿ ಸಕಲ ಸದ್ಗುಣಗಳ ಸಂಪನ್ನ ರಾಮ ಇದ್ದಾನೆಂದು ಗೊತ್ತಿತ್ತು. ಆದರೂ ಗುರು ನಾರದರ ಬಾಯಿಂದಲೇ ಬರಲಿ ಅಂತ ಕೇಳಿದರು. ನಾರದರು ಇಂತಹ ಗುಣಗಳೆಲ್ಲ ಒಬ್ಬನಲ್ಲಿ ಇರುವುದು ಕಷ್ಟ. ಆದರೂ ನಮ್ಮಲ್ಲಿ ಒಬ್ಬ ಇದ್ದಾನೆ. ಯಾರೆಂದರೆ ಅವನು ಶ್ರೀರಾಮ ಎಂದು, ಇಡೀ ರಾಮಗೆ ಸಂಬಂಧಿಸಿದ ಕಥೆಯನ್ನು ರಾಮಾಯಣದ ರೂಪದಲ್ಲಿ ಹೇಳುತ್ತಾ ಹೋದರು. ಭಗವಂತನಾದರೂ ಸ್ವತಃ ಮನುಷ್ಯನಾಗಿ ಹುಟ್ಟಿ ಪ್ರತಿಯೊಬ್ಬರಿಗೂ ಜೀವನದ ಅತ್ಯುನ್ನತ ಮಾರ್ಗ ತೋರಿಸಿದ ಮಹಾಪುರುಷ ಶ್ರೀರಾಮ. ಇಂಥ ರಾಮಾಯಣದ ಈ ಆಯಾಮ ನಮ್ಮೊಳಗೆ ಹೊಸಬೆಳಕು ಮೂಡಿಸುತ್ತದೆ. ನವ ಚೈತನ್ಯ ತುಂಬುತ್ತದೆ.

ರಾ:- ಆತ್ಮ, ಪ್ರಕಾಶ, ಬೆಳಕು, ರಶ್ಮಿ.
ಮ:- ಅಂತರಂಗದ ನಮ್ಮೊಳಗಿನ (ರಾಮ)
'ರಾಮ':- ಎಂದರೆ ಅಂತರಂಗದ ಪ್ರಕಾಶ.

ಇಂತಹ ರಾಮಾಯಣವನ್ನು ನಾವು ನಿರಂತರವಾಗಿ ಅರ್ಥ ವ್ಯಾಖ್ಯಾನ ಮಾಡುತ್ತಾ ನಮ್ಮ ಮಕ್ಕಳಿಗೂ ಕೂಡ ಇದನ್ನು ಹೇಳಬೇಕು. ನಮ್ಮ ಸಂಸ್ಕೃತಿಯ ಮೂಲಾಧಾರ ಮತ್ತು ಭಾರತೀಯರ ಸಂಸ್ಕಾರದ ಮೂಲ ಧಾತು ರಾಮಾಯಣ, ಮಹಾಭಾರತ ಭಾಗವತದಂತಹ ಪೌರಾಣಿಕ ಕಥೆಗಳು. ಇವುಗಳನ್ನು ಇವು ಜೀವನಕ್ಕೆ ನೀಡುವ ಬೆಳಕನ್ನು ಸದಾ ಕೃತಾರ್ಥ ಭಾವನೆಯಿಂದ ಆವಾಹಿಸಿಕೊಳ್ಳೋಣ .

ಪ ದ ಬಂ ಧ



ಪದಬಂಧ-741ರವಿಶಂಕರಶಾಸ್ತ್ರಿ ದಂಬೆ

ಎಡದಿಂದಬಲಕ್ಕೆ:

5. ಎಚ್ಚರಗೊಂಡವನು ಎಂದರ್ಥ (3)
6. ಬಿಡುವಾದಾಗ ನೀಡಿದ ವಾಯಿದೆ (3)
7. ಹಣ ಹಂಚುವಾಗ ಕಾಣಿಸಿದ ಗುಂಪು (2)
8. ಮತ್ತೊಂದು ಬಾಗಿಲಿನೊಂದಿಗೆ ಬಂದಿರುವ ಕಲಕು (3)
10. ತಿರುಗಿ ಬಂದಿರುವ ದ್ವೇಷ (2)
14. ಸಂಬಳ ಇತ್ಯಾದಿ ಹಂಚುವಿಕೆ (4)
15. ದೇಹದ ಅಂಗಾಂಗ (4)
17. ಹೂವಿಗೆ ಮತ್ತೊಂದು ಹೆಸರು (2)
19. ಹೊರದೇಶದಿಂದ ವಸ್ತುಗಳನ್ನು ತರಿಸಿಕೊಳ್ಳುವುದು (3)
21. ಅಡವಿ, ಕಾಡು (2)
22. ಬೇರು ಸಹಿತವಾದುದು ಎಂದರ್ಥ (3)
23. ಟಿಟ್ಟಿಭ ಪಕ್ಷಿ (3)

ಮೇಲಿನಿಂದಕೆಳಕ್ಕೆ:

1. ಬುದ್ಧಿವಂತನಂತೆ ಕಾಣುವ ಒಂದು ಜಾತಿಯ ಪಕ್ಷಿ (3)
2. ಹಂತಕನಾಗಿ ಬಂದ ಯಮ (3)
3. ತೆಳುವಾಗಿರುವ ಲೋಹದ ಹಾಳೆ (3)
4. ಮರದ ಮೆಟ್ಟು (3)
7. ತನ್ನಷ್ಟಕ್ಕೆ ತಾನು ವಟಗುಟ್ಟು (5)
9. ನದಿ, ಕೆರೆಯ ತಟ (2)
11. ಕುದುರೆಯ ಮುಖವೆಂಬ ಒಂದು ನಾಟಕ (5)
12. ತಿರುಳು ಅಥವಾ ಸತ್ವ (3)
13. ಬಿಳಿಯ ಬಣ್ಣ (3)
16. ವನವಾಸಕ್ಕೆ ಹೋದ ಲಕ್ಷ್ಮಣನ ಅಣ್ಣ (2)
18. ಮಣದ ಮಧ್ಯೆ ಸಿಲುಕಿದ ಸ್ಮಶಾನ (3)
19. ಲಯವಿಲ್ಲದ ಮನೆ (3)
20. ಹೆಚ್ಚು ಬೆಲೆ (3)
21. ಮರದ ದೊಣ್ಣೆ, ಕೋಲು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 5. ಜಾಗೃತಿ 6. ಗಡುವು 7. ಬಣ 8. ಕದಡು 10. ಗೆಹ 14. ಬಟವಾಡೆ 15. ಅವಯವ 17. ಸುಮ 19. ಆಮದು 21. ಬನ 22. ಸಮೂಲ 23. ಬಾನಾಡಿ

ಮೇಲಿನಿಂದ ಕೆಳಕ್ಕೆ: 1. ಕಾಜಾಣ 2. ಅಂತಕ 3. ತಗಡು 4. ಹಾವುಗೆ 7. ಬಡಬಡಿಸು 9. ದಡ 11. ಹಯವದನ 12. ಜೀವಾಳ 13. ಧವಳ 16. ರಾಮ 18. ಮಸಣ 19. ಆಲಯ 20. ದುಬಾರಿ 21. ಬಡಿಗೆ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ವಜ್ರದಲ್ಲಿ ಮೊದಲು

ಮೊದಲೆಲ್ಲ ಕೃಷ್ಣದೇವರಾಯನ ಕಾಲದಲ್ಲಿ ವಜ್ರವನ್ನು ಶೇರುಗಳಿಂದ ಅಳಿದು, ರೋಡಿನ ಪಕ್ಕದಲ್ಲಿ ಮಾರಾಟಕ್ಕಿಡುತ್ತಿದ್ದರಂತೆ. ಅದಕ್ಕೂ ಹಿಂದೆ ಚಕ್ರವರ್ತಿ ಅಶೋಕ, ರಾಜನಾಗುವುದಕ್ಕೂ ಮೊದಲು ದೇಶವೆಲ್ಲ ಸುತ್ತಾಡಿ, ಎಲ್ಲೆಲ್ಲಿ

ಗಣಿ, ಅದಿರುಗಳಿದ್ದಾವೋ ಅದನ್ನೆಲ್ಲ ತಿಳಿದುಕೊಂಡಿದ್ದನಂತೆ. ಎಲ್ಲದಕ್ಕಿಂತ ಹೆಚ್ಚಾಗಿ ಭಾರತ ಕೋಹಿನೂರ್ ವಜ್ರದಿಂದಲೂ ವಿಶ್ವವಿಖ್ಯಾತಿ ಪಡೆದಿದೆ. ಅದೂ ನಮ್ಮ ಬಳಿ ಇಲ್ಲದಿದ್ದರೂ ಅದು ಭಾರತದ್ದೇ ಎನ್ನುವುದು ಸುಳ್ಳಲ್ಲ. ಹಾಗೇ ಭಾರತದಲ್ಲಿ ಹಲವಾರು ವಿಶ್ವ ವಿಖ್ಯಾತ ಪಡೆದ ವಜ್ರಗಳೂ ಇದ್ದವು. ಎಲ್ಲದಕ್ಕಿಂತ ಹೆಚ್ಚಾಗಿ ಅದನ್ನೆಲ್ಲ ಭಾರತದಿಂದಲೇ ಹೆಕ್ಕತೆಗೆದಿದ್ದು. ಅದಷ್ಟೇ ಅಲ್ಲ ವಿಶ್ವದಲ್ಲೇ ಮೊದಲು ವಜ್ರಗಣಿಗಾರಿಕೆಯನ್ನು ಶುರು ಮಾಡಿದ್ದೂ ಭಾರತವೇ. ಅದು ಸಿಕ್ಕಿದ್ದು ಕೃಷ್ಣಾ ನದಿಯ ತೀರದಲ್ಲಿ, ಕ್ರಿಸ್ತನಿಗೂ ಮ,ಉಂಚೆ ಅಂದರೆ ಕ್ರಿ.ಪೂ. 4 ನೇ ಶತಮಾನದಲ್ಲಿ ಭಾರತವು ವಜ್ರಗಣಿಗಾರಿಕೆಯನ್ನು ಶುರು ಮಾಡಿತ್ತು.

ಪುಸ್ತಕ ಲೋಕ

ಶ್ರೀ ಶಂಕರಚಾರ್ಯ

ಇದು ನಚಿಕೇತ್ ಹೆಗಡೆ ಅವರ ಕೃತಿಯಾಗಿದೆ. ಈ ಕೃತಿ ಕುರಿತು ಲೇಖಕರು ಬೆನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ; ಭರತಖಂಡದಲ್ಲಿ ಸನಾತನಧರ್ಮ ಕ್ಷೀಣವಾಗಿ ಇನ್ನೇನು ನಶಿಸಿಹೋದೀತೇನೋ ಎಂಬ



ದುಃಸ್ಥಿತಿಯಲ್ಲಿದ್ದಾಗ ಅದನ್ನು ಪುನಶ್ಚೇತನಗೊಳಿಸಿ ಆಚಂದ್ರಾರ್ಕ ಬೆಳಗುವಂತೆ ಮಾಡಿದ ಮಹಾಪುರುಷರು ಶ್ರೀ ಶಂಕರಾಚಾರ್ಯರು. ಅವರು ಭೌತಿಕಶರೀರದಲ್ಲಿ ಭೂಮಿಯ ಮೇಲೆ ನಡೆದಾಡಿದ್ದು ಕೇವಲ 32 ವರ್ಷಗಳಿರಬಹುದು ಆದರೆ ಭಾರತದ ಅಧ್ಯಾತ್ಮ, ಧರ್ಮ, ತತ್ತ್ವಜ್ಞಾನಗಳ ಅವಕಾಶದಲ್ಲಿ ಇಂದಿಗೂ ಪ್ರಸ್ತುತರಾಗಿ ಉಳಿದಿದ್ದಾರೆ. ತನ್ನ ಜೀವಿತದಲ್ಲಿ ಆಚಾರ್ಯ ಶಂಕರರು ಭಾರತದ ಉದ್ದಗಲ ಪರ್ಯಟನೆ ಮಾಡಿದರು, ಕಾಶ್ಮೀರದಲ್ಲಿ ಸರ್ವಜ್ಞಪೀಠವನ್ನೇರುವ ಅರ್ಹತೆ ಮೆರೆದರು. ಮಹಾ ಮಹಾ ಪಂಡಿತರನ್ನೂ ತತ್ತ್ವವೇತ್ತರನ್ನೂ ಮಣಿಸಿ ತಮ್ಮ ಸಿದ್ಧಾಂತದ ಪ್ರಚಾರಕಾರ್ಯ ಮಾಡಿದರು. ಆಮ್ನಾಯಪೀಠಗಳನ್ನು ಸ್ಥಾಪಿಸಿ ಸನಾತನ ಧರ್ಮಕ್ಕೆ ಚಿರಂತನವಾದ ನೆಲೆ ಕಲ್ಪಿಸಿದರು. ಇನ್ನೇನು ಕಣ್ಮುಚ್ಚಿತೇನೋ ಎಂಬಂತಿದ್ದ ಜ್ಞಾನಮಾರ್ಗಕ್ಕೆ ಕಾಯಕಲ್ಪ ನೀಡಿದರು. ಒಟ್ಟಾರೆಯಾಗಿ ಭಾರತದ ಕುಂಡಲಿನಿಯನ್ನು ಜಾಗೃತಗೊಳಿಸಿದರು. ಶಂಕರರ ಜೀವನ, ಸಾಧನೆ, ಸಂದೇಶಗಳನ್ನು ಭಾರತ ಇಂದು ಮೆಲುಕುಹಾಕಬೇಕಿದೆ ಎಂಬುವುದನ್ನು ಈ ಪುಸ್ತಕದಲ್ಲಿ ನೋಡಬಹುದು ಎನ್ನುತ್ತಾರೆ.

ಟ್ವೀಟ್‌ಮೆಂಟ್

ವಿಶ್ವ: ಹುಡುಗಿಯ ಮನಗೆಲ್ಲಲು ಏನು ಮಾಡಬೇಕು?
ಪ್ರದೀಪ: ಗೆಲ್ಲುವುದಕ್ಕೆ ಅದೇನು ಒಲಿಂಪಿಕ್ಸ್ ಮೆಡಲ್ಲಾ?

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಇತ್ತೀಚೆಗೆ ಸುದ್ದಿಯಲ್ಲಿ ಕಂಡುಬಂದ ಮಾರ್ತಾಂಡ ಸೂರ್ಯ ದೇವಾಲಯವು ಯಾವ ರಾಜ್ಯ/ಕೇಂ.ಪ್ರ ದಲ್ಲಿದೆ?

- ಎ. ಅಸ್ಸಾಂ.
- ಬಿ. ಜಮ್ಮು ಮತ್ತು ಕಾಶ್ಮೀರ.
- ಸಿ. ಉತ್ತರ ಪ್ರದೇಶ.
- ಡಿ. ಗುಜರಾತ್.

ಬಿ. ಜಮ್ಮು ಮತ್ತು ಕಾಶ್ಮೀರ.

ಮಾಹಿತಿ

ಹಿಂದುತ್ವ ಗುಂಪಿನ ಸದಸ್ಯರು ಇತ್ತೀಚೆಗೆ ಕಾಶ್ಮೀರ ಕಣಿವೆಯ ಅನಂತನಾಗ್ ಬಳಿಯ ಐತಿಹಾಸಿಕ ಹಿಂದೂ ದೇವಾಲಯವಾದ ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ (ಎ ಎಸ್ ಐ)-ಸಂರಕ್ಷಿತ ಮಾರ್ತಾಂಡ್ ಸೂರ್ಯ ದೇವಾಲಯವನ್ನು ಉಲ್ಲಂಘಿಸಿದ್ದಾರೆ. 8 ನೇ ಶತಮಾನದಲ್ಲಿ ರಾಜ ಲಲಿತಾದಿತ್ಯ ಮುಕ್ತಾಪಿಡಾ ನಿರ್ಮಿಸಿದ. ಇದು ಕಾಶ್ಮೀರಿ, ಗುಪ್ತ, ಚೈನೀಸ್, ಗಾಂಧಾರ, ರೋಮನ್ ಮತ್ತು ಗ್ರೀಕ್ ವಾಸ್ತುಶಿಲ್ಪದ ಶೈಲಿಗಳನ್ನು ಸಂಯೋಜಿಸುತ್ತದೆ. 32,000 ಚದರ ಅಡಿ ವಿಸ್ತೀರ್ಣದ ಕಲ್ಲಿನ ದೇವಾಲಯವು 86-ಸ್ತಂಭಗಳ ಪ್ರಾಂಗಣ, ಸಂಕೀರ್ಣವಾದ ಕೆತ್ತನೆಗಳೊಂದಿಗೆ 60-ಅಡಿ ವಿಮಾನ ಮತ್ತು 84 ಸಣ್ಣ ದೇವಾಲಯಗಳನ್ನು ಒಳಗೊಂಡಿದೆ. ಸುಲ್ತಾನ್ ಸಿಕಂದರ್ ಶಾ ಮಿರಿ ಇದನ್ನು 14 ನೇ ಶತಮಾನದಲ್ಲಿ ಕೆಡವಿದರು ಎಂದು ನಂಬಲಾಗಿದೆ.

ಜಾಗತಿಕ ಕುಸ್ತಿರಂಗದ ದೈತ್ಯ ಪ್ರತಿಭೆ -ಮಿಜೈನ್ ಲೋಪೆಜ್

● ಡಾ. ಕಾರ್ತಿಕ ಜೆ.ಎಸ್



ಇತ್ತೀಚೆಗೆ ಪ್ಯಾರಿಸ್‌ನಲ್ಲಿ ಅದ್ದೂರಿಯಾಗಿ ಜರುಗಿದ 2024 ರ ಒಲಿಂಪಿಕ್ಸ್ ಕ್ರೀಡಾಕೂಟ ಹಲವು ಅವಿಸ್ಮರಣೀಯ ಘಟನೆಗಳಿಗೆ ಸಾಕ್ಷಿಯಾಯಿತು. ಅವುಗಳಲ್ಲಿ, 41 ರ ಹರೆಯದ ಕ್ಯೂಬಾದ ಕುಸ್ತಿಪಟುವೊಬ್ಬ 130 ಕೆ.ಜಿ ಗ್ರೀಕೋ ರೋಮನ್ ಕುಸ್ತಿ ವಿಭಾಗದ ಫೈನಲ್ ಪಂದ್ಯಾವಳಿಯಲ್ಲಿ ತನಗಿಂತಲೂ ಕಿರಿಯ ಪ್ರತಿಸ್ಪರ್ಧಿಯನ್ನು ಸೋಲಿಸಿ ಚಿನ್ನಕ್ಕೆ ಮುತ್ತಿಟ್ಟ ಘಟನೆಯೂ ಒಂದು. ಪಂದ್ಯಾವಳಿಯುದ್ದಕ್ಕೂ ತನ್ನ ದೈತ್ಯ ಶರೀರ ಮತ್ತು ಆಕರ್ಷಕ ಪಟ್ಟುಗಳಿಂದ ಪ್ರತಿಸ್ಪರ್ಧಿಗಳಿಗೆ ನಡುಕ ಹುಟ್ಟಿಸುತ್ತಿದ್ದ ಆತನೇ 'ಮಿಜೈನ್ ಲೋಪೇಜ್'. ಒಲಿಂಪಿಕ್ಸ್ ಇತಿಹಾಸದಲ್ಲಿ ಒಂದೇ ಸ್ಪರ್ಧೆಯಲ್ಲಿ ಸತತ ಐದು ವೈಯಕ್ತಿಕ ಚಿನ್ನದ ಪದಕ ಗೆದ್ದ ಏಕೈಕ ಕ್ರೀಡಾಪಟು ಎಂಬ ಹೆಗ್ಗಳಿಕೆ ಮಿಜೈನ್‌ಗೆ ಸಲ್ಲುತ್ತದೆ.

ಮಿಜೈನ್ ಲೋಪೆಜ್ ಆಗಸ್ಟ್ 20, 1982 ರಂದು ಕ್ಯೂಬಾದ ಪಿನಾರ್ ಡೆಲ್ ರಿಯೋದಲ್ಲಿ ಜನಿಸಿದನು. ಬಾಲ್ಯದಲ್ಲಿಯೇ ಅಸಾಧಾರಣ ದೈಹಿಕ ಶಕ್ತಿ ಹೊಂದಿದ್ದ ಮಿಜೈನ್ ಮಧ್ಯಮ ವರ್ಗ ಕುಟುಂಬದಲ್ಲಿ ಬೆಳೆದವನು. ತಮ್ಮ ಆರ್ಥಿಕ ಸಂಕಷ್ಟದ ನಡುವೆಯೂ ಹೆತ್ತವರು ಆತನಿಗೆ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಲು ಬೆಂಬಲಿಸುತ್ತಾರೆ. ಮಿಜೈನ್ ತನ್ನ ಹತ್ತನೇ ವಯಸ್ಸಿನಲ್ಲಿ ಗ್ರೀಕೋ ರೋಮನ್ ಕುಸ್ತಿಯತ್ತ ಆಕರ್ಷಿತನಾಗುತ್ತಾನೆ. ಸ್ಥಳೀಯ ತರಬೇತುದಾರರ ನೆರವಿನಿಂದ ಹಲವು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾನೆ. ಆತನ ಪ್ರತಿಭೆ ಗುರುತಿಸಿದ ಕ್ಯೂಬಾದ ರಾಷ್ಟ್ರೀಯ ಕುಸ್ತಿ ತಂಡದ ತರಬೇತುದಾರರು ಆತನಿಗೆ ತರಬೇತಿ ನೀಡಲು ಪ್ರಾರಂಭಿಸುತ್ತಾರೆ. ಇದು ಆತನ ವೃತ್ತಿ ಜೀವನಕ್ಕೆ ಹೊಸ ತಿರುವನ್ನು ತಂದುಕೊಟ್ಟಿತು.

2002 ನೇ ಇಸವಿ. ಕೊಲಂಬಿಯಾದ ರಾಜಧಾನಿ ಬೊಗೋಟದಲ್ಲಿ ಜರುಗಿದ ಜೂನಿಯರ್ ಪಾನ್ ಅಮೆರಿಕನ್ ಕುಸ್ತಿ ಚಾಂಪಿಯನ್ ಶಿಪ್ ನಲ್ಲಿ ಭಾಗವಹಿಸಿದ ಆತ ಚಿನ್ನದ ಪದಕ ಪಡೆಯುತ್ತಾನೆ. 2004 ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿ ಐದನೇ ಸ್ಥಾನ ಪಡೆಯುತ್ತಾನೆ. ಅಥೆನ್ಸ್ ಒಲಿಂಪಿಕ್ಸ್‌ನ ಅನುಭವ ಆತನಿಗೆ ಇನ್ನೂ ಹೆಚ್ಚಿನ ಸಾಧನೆ ಮಾಡಲು ಪ್ರೇರಣೆ ನೀಡುತ್ತದೆ. 2008 ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿ ಚಿನ್ನದ ಪದಕ ಗೆಲ್ಲುತ್ತಾನೆ. ಮುಂದೆ ನಡೆದದ್ದು ಇತಿಹಾಸ. 2012 ರ ಲಂಡನ್ ಒಲಿಂಪಿಕ್ಸ್, 2016 ರ ರಿಯೋ ಒಲಿಂಪಿಕ್ಸ್ ಮತ್ತು 2020 ರ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡುತ್ತಾನೆ.

ಐದು ಬಾರಿ 'ಗ್ರೀಕೋ ರೋಮನ್ ವಿಶ್ವಕುಸ್ತಿ ಚಾಂಪಿಯನ್' ಆದ ಹಿರಿಮೆ ಮಿಜೈನ್ ನದ್ದು. ಈ ಬಾರಿಯ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಚಿಲಿಯ ಪ್ರತಿಸ್ಪರ್ಧಿಯನ್ನು 6 – 0 ಅಂತರದಿಂದ ಸೋಲಿಸಿ ಚಿನ್ನದ ಪದಕಕ್ಕೆ ಭಾಜನನಾಗುತ್ತಾನೆ. ಕುಸ್ತಿ ಪಂದ್ಯಾವಳಿಯ ನಂತರ ತನ್ನ ಶೂಗಳನ್ನು ಕಳಚಿಟ್ಟು, ಅಂಗಳಕ್ಕೆ ನಮಸ್ಕರಿಸಿದ ಮಿಜೈನ್ ಸಾಂಕೇತಿಕವಾಗಿ ನಿವೃತ್ತಿಯನ್ನು ಘೋಷಿಸುತ್ತಾನೆ. ಯಶಸ್ಸಿನ ಉತ್ತುಂಗದಲ್ಲಿದ್ದಾಗಲೇ ನಿವೃತ್ತಿ ಘೋಷಿಸಿದ ಹೆಗ್ಗಳಿಕೆ ಆತನದ್ದು.

ತನ್ನ 41 ನೇ ವಯಸ್ಸಿನಲ್ಲಿ, ಗರಿಷ್ಠ ದೈಹಿಕ ಸಾಮರ್ಥ್ಯ ಮತ್ತು ಕ್ಷಮತೆ ಬೇಡುವ ಕ್ರೀಡೆಯಾದ ಕುಸ್ತಿಯಲ್ಲಿ ಚಿನ್ನದ ಪದಕ ಗೆದ್ದ ಮಿಜೈನ್‌ನ ಸಾಧನೆ ಚಿರಸ್ಥಾಯಿಯಾಗಿ ಉಳಿಯುವಂತದ್ದು. ಒಲಿಂಪಿಕ್ಸ್ ಇತಿಹಾಸದಲ್ಲಿ ಅಳಿಸಲಾಗದ ಛಾಪು ಮೂಡಿಸಿದ ಮಿಜೈನ್ ಎಲ್ಲೆಡೆ 'ಸಾರ್ವಕಾಲಿಕ ಶ್ರೇಷ್ಠ ಕುಸ್ತಿಪಟು ' ಎಂದೇ ಗುರುತಿಸಲ್ಪಡುತ್ತಿರುವುದು ಆತನ ಸಾಧನೆಗೆ ಹಿಡಿದ ಕೈಗನ್ನಡಿ ಆಗಿದೆ.

ತನ್ನ ನಿವೃತ್ತಿ ಜೀವನದ ಸಮಯವನ್ನು ಯುವ ಕುಸ್ತಿಪಟುಗಳ ತರಬೇತಿಗೋಸ್ಕರ ಮುಡಿಪಾಗಿಡಲು ನಿರ್ಧರಿಸಿರುವ ಮಿಜೈನ್‌ಗೆ ಶುಭ ಕೋರೋಣ.

ಚಂಚಲತೆಯಿಂದ ಅಚಲತೆಯೆಡೆಗೆ

● ಅಜಯ್ ಅಂಗಡಿ



ನಮ್ಮ ಮನಸೇ ಹಾಗೆ! ಚಿತ್ರವಿಚಿತ್ರ ಆಲೋಚನೆಗಳ ಸಭಾಂಗಣದಂತೆ. ಅಲ್ಲಿ ಒಂದರೆ ಕ್ಷಣ ಮೌನ, ಮತ್ತೆ ಗದ್ದಲವೋ ಗದ್ದಲ. ಧನಾತ್ಮಕ ಯೋಚನೆಗಳೆನ್ನುವುದು ತೀರಾ ವಿರಳ. ಹೇಗೆಂದರೆ, ಋಣಾತ್ಮಕತೆಯ ಹೊಳೆಯಲ್ಲಿ ಧನಾತ್ಮಕತೆಯ ದೋಣಿ ತೇಲುವಂತೆ. ಸ್ವಲ್ಪ ಎಚ್ಚರ ತಪ್ಪಿದರೂ ಋಣಾತ್ಮಕ ಅಂಶಗಳೇ ನಮ್ಮನ್ನು ಸೆಳೆಯುವುದು ನಿಶ್ಚಿತ. ಆದರೂ ವಿವೇಕಾನಂದ, ಪರಮಹಂಸ ಅವರಂತಹ ಯುಗಪುರುಷರು ಧನಾತ್ಮಕತೆಯ ಮೇರು ಶಿಖರಗಳಾಗಿದ್ದು ಅಷ್ಟು ಸುಲಭವಿತ್ತೇ ಎಂಬುದು ಯಕ್ಷಪ್ರಶ್ನೆ. ಸುಲಭವಂತೂ ಇರಲಿಲ್ಲ. ಆದರೆ, ಅವರ ಏಕಾಗ್ರತೆ ಮತ್ತು ದೃಢತೆ ಅದನ್ನು ಸುಲಭವಾಗಿಸಿತು.

ಆದರೆ, ಈ ಮೆಟಿರೀಯಲಿಸ್ಟಿಕ್ ಬದುಕಿನಲ್ಲಿ ಅದು ಸಾಧ್ಯವಾ ಅನ್ನುವ ಯೋಚನೆ ಬಂದೇ ಬರುತ್ತದೆ. ನೂರಾರು ಯೋಚನೆಗಳು, ಚಿಂತೆಗಳು ಇರುವಾಗ ಮನಸ್ಸು ಒಂದೆಡೆ ಕೇಂದ್ರೀಕೃತ ಆಗುವುದಾದರೂ ಹೇಗೆ? ಅದರಾಚೆಗೆ ಮನಸ್ಸು ಮರ್ಕಟದಂತೆ ಬೇರೆ. ಅದಕ್ಕೆ ಲಗಾಮು ಹಾಕದೇ ವಿಧಿಯಿಲ್ಲ. ಹಾಗಂತ ತೀರಾ ಬಿಗಿ ಹಿಡಿತವೂ ಒಳ್ಳೆಯದಲ್ಲ. ಬಿಟ್ಟು ಹಿಡಿಯುವುದೇ ಅದಕ್ಕಿರುವ ಮೂಲಮಂತ್ರ.

ಹಾಗೆ ಸುಮ್ಮನೆ ಕೂತರೆ ಸಾಕು, ಬರಬಾರದ ಯೋಚನೆಗಳ ಪ್ರವಾಹವೇ ಒಮ್ಮೆ ಧುಮ್ಮಿಕ್ಕಿ ಬರುತ್ತದೆ ಸ್ಮೃತಿಯೊಳಗೆ. ಚಂಚಲ ಚಿತ್ತದ ಈ ವೈಚಿತ್ರ್ಯವನ್ನು ತಡೆಯುವುದಾದರೂ ಹೇಗೆ? ಅಸಾಧ್ಯವೇನಲ್ಲ. ಪ್ರವಾಹದ ನಂತರ ಶಾಂತತೆ ಉಂಟಾಗಲೇಬೇಕು. ಸುನಾಮಿ ಅಪ್ಪಳಿಸಿದ ಬಳಿಕ ಅಲ್ಲೊಂದು ನೀರವ ಮೌನವಿರುತ್ತದಲ್ಲ ಹಾಗೆ. ಎಲ್ಲ ಕೆಟ್ಟ ಯೋಚನೆಗಳ ಪ್ರವಾಹದ ಹರಿವು ಮುಗಿದ ನಂತರ ಅಲ್ಲೊಂದು ಧನಾತ್ಮಕತೆಯ ಸಸಿ ಚಿಗುರಲೇಬೇಕು. ಅದೇ ಸೃಷ್ಟಿ ನಿಯಮ. ಚಂಚಲತೆಯಿಂದ ಅಚಲತೆಯೆಡೆಗೆ ತನ್ನಿಂತಾನೆ ಸಾಗುತ್ತದೆ ಚಿತ್ತ.

ಸಮಾಚಾರ ಸಣ್ಣದಲ್ಲ

ಧವನ್‌ಗೆ ಕೊಹ್ಲಿ ಭಾವನಾತ್ಮಕ ಸಂದೇಶ

ಮುಂಬೈ: ಶನಿವಾರವಷ್ಟೇ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದ್ದ ಟೀಮ್ ಇಂಡಿಯಾದ ಎಡಗೈ ಆರಂಭಿಕ ಬ್ಯಾಟರ್ ಶಿಖರ್ ಧವನ್‌ಗೆ ಸಹ ಆಟಗಾರ ವಿರಾಟ್ ಕೊಹ್ಲಿ ಭಾವನಾತ್ಮಕ ಸಂದೇಶದ ಮೂಲಕ ನಿವೃತ್ತ ಜೀವನಕ್ಕೆ ಶುಭ ಹಾರೈಸಿದ್ದಾರೆ.ಎಕ್ಸ್‌ನಲ್ಲಿ ಶಿಖರ್ ಧವನ್ ಬಗ್ಗೆ ಬರೆದುಕೊಂಡಿರುವ ಕೊಹ್ಲಿ, ನೀವು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದಾಗಿನಿಂದಲೂ ಭಯಮುಕ್ತ ಪ್ರದರ್ಶನ ನೀಡಿದ್ದೀರಿ. ಇದೇ ಕಾರಣಕ್ಕೆ ಭಾರತದ ಅತ್ಯಂತ ವಿಶ್ವಾಸಾರ್ಹ ಓಪನರ್‌ಗಳಲ್ಲಿ ಒಬ್ಬರಾಗಲು ಸಾಧ್ಯವಾಯಿತು. ನೀವು ನಮಗೆ ಪಾಲಿಸಲು ಲೆಕ್ಕವಿಲ್ಲದಷ್ಟು ನೆನಪುಗಳನ್ನು ನೀಡಿದ್ದೀರಿ. ಆಟದ ಮೇಲಿನ ನಿಮ್ಮ ಉತ್ಸಾಹ, ನಿಮ್ಮ ಕ್ರೀಡಾ ಮನೋಭಾವ ಮತ್ತು ನಿಮ್ಮ ಟ್ರೇಡ್‌ಮಾರ್ಕ್ ಸ್ಮೈಲ್ ತಪ್ಪಿಹೋಗುತ್ತದೆ. ಆದರೆ, ನಿಮ್ಮ ಪರಂಪರೆಯು ಜೀವಿಸುತ್ತದೆ. ನೆನಪುಗಳು, ಮರೆಯಲಾಗದ ಪ್ರದರ್ಶನಗಳು ಮತ್ತು ಯಾವಾಗಲೂ ನಿಮ್ಮ ಹೃದಯದಿಂದ ಮುನ್ನಡೆಸಿದ್ದಕ್ಕಾಗಿ ಧನ್ಯವಾದಗಳು ಗಬ್ಬರ್. ಮೈದಾನದ ಹೊರಗೆ ನಿಮ್ಮ ಮುಂದಿನ ಇನ್ನಿಂಗ್ಸ್‌ಗೆ ನಿಮಗೆ ಶುಭ ಹಾರೈಸುತ್ತೇನೆ. ಎಂದು ಕೊಹ್ಲಿ ಭಾವನಾತ್ಮವಾಗಿ ಬರೆದುಕೊಂಡಿದ್ದಾರೆ.

ಶಿಖರ್‌ಗೆ ಶುಭ ಹಾರೈಕೆಗಳ ಸುರಿಮಳೆ

ಮುಂಬೈ: ಕ್ರಿಕೆಟ್‌ಗೆ ಶನಿವಾರ ವಿದಾಯ ಘೋಷಿಸಿದ ಶಿಖರ್ ಧವನ್ ಅವರ ಮುಂದಿನ ಜೀವನ ಸುಖಕರವಾಗಿರಲಿ ಎಂದು ಸಚಿನ್ ತೆಂಡೂಲ್ಕರ್ ತಮ್ಮ ಎಕ್ಸ್ ಖಾತೆಯಲ್ಲಿ ಹಾರೈಸಿದ್ದಾರೆ. ಇದೇ ವೇಳೆ ಆರ್‌ಸಿಬಿ ತಂಡದ ಬ್ಯಾಟಿಂಗ್ ಕೋಚ್ ದಿನೇಶ್ ಕಾರ್ತಿಕ್ ಹಾಗೂ ಟೀಮ್ ಇಂಡಿಯಾದ ಅನುಭವಿ ವೇಗಿ ಜಸ್‌ಪ್ರೀತ್ ಬುಮ್ರಾ ಕೂಡ ಶುಭ ಸಂದೇಶ ಕಳುಹಿಸಿದ್ದಾರೆ. ಭಾರತೀಯ ಕ್ರಿಕೆಟ್ ಇನ್ನು ಮುಂದೆ ನಿಮ್ಮ ವೈಭವೀಕರಣವನ್ನು ಕಳೆದುಕೊಳ್ಳಲಿದೆ ಎಂದು ಸಚಿನ್ ಟ್ವಿಟ್ ಮಾಡಿದ್ದರೆ, ದಿನೇಶ್ ಕಾರ್ತಿಕ್ ಅವರು ಅಂಡರ್-19ರಲ್ಲಿ ಧವನ್‌ರೊಂದಿಗೆ ಕಳೆದ ದಿನಗಳು ಹಾಗೂ ಮುಂದಿನ ದಿನಗಳಲ್ಲಿ ಅವರು ಕಂಡ ಯಶಸ್ಸನ್ನು ಸ್ಮರಿಸಿದ್ದಾರೆ. ವೀರೇಂದ್ರ ಸೆಹ್ವಾಗ್, ಯುವರಾಜ್ ಸಿಂಗ್, ಗೌತಮ್ ಗಂಭೀರ್ ಸೇರಿದಂತೆ ಹಲವು ಕ್ರಿಕೆಟಿಗರು ಧವನ್ ಅವರ ಮುಂದಿನ ಜೀವನಕ್ಕೆ ಶುಭ ಹಾರೈಸಿದ್ದಾರೆ.

22 ವರ್ಷದ ಫಾತಿಮಾ ನಾಯಕಿ | ಹುದ್ದೆಯಿಂದ ಕೆಳಗಿಳಿದ ನಿದಾ ದಾರ್

ಟಿ20 ವಿಶ್ವಕಪ್‌ಗೆ ತಂಡ ಪ್ರಕಟಿಸಿದ ಪಾಕಿಸ್ತಾನ

ಕರಾಚಿ: ಮುಂಬರುವ ಮಹಿಳಾ ಟಿ20 ವಿಶ್ವಕಪ್ ಟೂರ್ನಿಗೂ ಮುನ್ನ ಪಾಕಿಸ್ತಾನ ಕ್ರಿಕೆಟ್ ತಂಡವನ್ನು ಪ್ರಕಟಿಸಿದೆ.

ಅಕ್ಟೋಬರ್ 3ರಿಂದ 20ರ ತನಕ ಯುಎಇಯಲ್ಲಿ ನಡೆಯಲಿರುವ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಪಾಕ್ ತಂಡವನ್ನು ಫಾತಿಮಾ ಸನಾ ಮುನ್ನಡೆಸಲಿದ್ದಾರೆ ಎಂದು ಭಾನುವಾರ ಪಿಸಿಬಿ ತನ್ನ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಹಿಂದೆ ತಂಡದ ನಾಯಕಿಯಾಗಿದ್ದ 37ರ ಹರೆಯದ ನಿದಾ ದಾರ್ ಅವರನ್ನು ಈ ಹುದ್ದೆಯಿಂದ ಕೆಳಗಿಳಿಸಲಾಗಿದೆ. ನಿದಾ ದಾರ್ ನಾಯಕತ್ವದಲ್ಲಿ ಕಳೆದ ತಿಂಗಳು ಮುಕ್ತಾಯ ಕಂಡಿದ್ದ ಮಹಿಳೆಯರ ಏಷ್ಯಾ ಕಪ್‌ನಲ್ಲಿ ಪಾಕ್ ತಂಡ ಸೆಮಿಫೈನಲ್‌ನಲ್ಲಿ ನಿರ್ಗಮಿಸಿತ್ತು. ಇದಕ್ಕೂ ಮುನ್ನ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಏಕದಿನ ಮತ್ತು ಟಿ20 ಸರಣಿಯಲ್ಲಿ ಪಾಕ್ ತಂಡ ಸೋಲು ಅನುಭವಿಸಿತ್ತು. ಹೀಗಾಗಿ ಅವರನ್ನು ತಂಡದ ನಾಯಕತ್ವದಿಂದ ಕೆಳಗಿಳಿಸಲಾಗಿದೆ. ಆದರೆ ಟಿ20 ವಿಶ್ವಕಪ್ ತಂಡದಲ್ಲಿ ಅವರಿಗೆ ಸ್ಥಾನ ನೀಡಲಾಗಿದೆ.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡ 'ಎ' ಗುಂಪಿನಲ್ಲಿ ಆಸ್ಟ್ರೇಲಿಯಾ, ಭಾರತ, ನ್ಯೂಜಿಲ್ಯಾಂಡ್ ಮತ್ತು ಶ್ರೀಲಂಕಾ ತಂಡದೊಂದಿಗೆ ಕಾಣಿಸಿಕೊಂಡಿದೆ.

ಫಾತಿಮಾ ಸಾಧನೆ

ಬೌಲಿಂಗ್ ಆಲ್‌ರೌಂಡರ್ ಆಗಿರುವ ಫಾತಿಮಾ, ಪಾಕ್ ಪರ ಇದುವರೆಗೆ 41 ಏಕದಿನ ಮತ್ತು 40 ಟಿ20 ಪಂದ್ಯಗಳನ್ನು ಆಡಿದ್ದಾರೆ. ಈ ಹಿಂದೆ ಪಾಕಿಸ್ತಾನದ ದೇಶೀಯ ತಂಡಗಳನ್ನು ಮುನ್ನಡೆಸಿದ್ದ ಅನುಭವ ಹೊಂದಿದ್ದಾರೆ. ಕಳೆದ ವರ್ಷ(2023) ಕ್ರೈಸ್ಟ್ ಚರ್ಚ್‌ನಲ್ಲಿ ನಡೆದಿದ್ದ ನ್ಯೂಜಿಲೆಂಡ್ ವಿರುದ್ಧ ಏಕದಿನ ಪಂದ್ಯದ ಗೆಲುವಿನ ವೇಳೆ ತಂಡದ ಹಂಗಾಮಿ ನಾಯಕರಾಗಿದ್ದರು.

ವಿಶ್ವಕಪ್ ಪಂದ್ಯ ಎಲ್ಲಿ, ಯಾವಾಗ?

ಬಾಂಗ್ಲಾದೇಶದಲ್ಲಿ ಭುಗಿಲೆದ್ದಿರುವ ಸರಕಾರಿ ಉದ್ಯೋಗಗಳಲ್ಲಿನ ಮೀಸಲು ವ್ಯವಸ್ಥೆಯ ದಂಗೆಯಿಂದಾಗಿ ಮಹಿಳಾ ಟಿ20 ವಿಶ್ವಕಪ್ ಪಂದ್ಯಾವಳಿಯ ಆತಿಥ್ಯವನ್ನು ಕಳೆದ ವಾರ ಐಸಿಸಿ ಯುಎಇಗೆ ನೀಡಿತ್ತು. ಪಂದ್ಯಾವಳಿಯು ಯುಎಇಯ ಎರಡು ಸ್ಥಳಗಳಾದ ದುಬೈ ಮತ್ತು ಶಾರ್ಜಾದಲ್ಲಿ ಅಕ್ಟೋಬರ್ 3 ರಿಂದ 20 ರವರೆಗೆ ನಡೆಯಲಿದೆ.

14ನೇ ಪ್ರಯತ್ನದಲ್ಲಿ ಮೊದಲ ಟೆಸ್ಟ್ ಪಂದ್ಯ ಗೆದ್ದ ಬಾಂಗ್ಲಾ

ಪಾಕ್ ವಿರುದ್ಧ ಬಾಂಗ್ಲಾಕ್ಕೆ ಮೇಲುಗೈ

ರಾವಲ್ಪಿಂಡಿ: ಅನುಭವಿ ಬ್ಯಾಟರ್ ಮುಷ್ಫಿಕುರ್ ರಹೀಂ ಅವರ 191 ರನ್‌ಗಳ ಅಮೋಘ ಆಟದ ನೆರವಿನಿಂದ ಬಾಂಗ್ಲಾದೇಶ ತಂಡ ಮೊದಲ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಶನಿವಾರ ಪಾಕಿಸ್ತಾನ ವಿರುದ್ಧ ಮೇಲುಗೈ ಸಾಧಿಸಿತು.

ಪಾಕಿಸ್ತಾನದ 448 ರನ್‌ಗಳಿಗೆ ಉತ್ತರವಾಗಿ ಬಾಂಗ್ಲಾದೇಶ ಮೊದಲ ಇನಿಂಗ್ಸ್‌ನಲ್ಲಿ 565 ರನ್‌ಗಳ ದೊಡ್ಡ ಮೊತ್ತ ಗಳಿಸಿ 117 ರನ್‌ಗಳ ಮುನ್ನಡೆ ಪಡೆಯಿತು. ಇದು ಪಾಕಿಸ್ತಾನ ವಿರುದ್ಧ ಬಾಂಗ್ಲಾದೇಶವು ಟೆಸ್ಟ್ ಇನಿಂಗ್ಸ್‌ನಲ್ಲಿ ಗಳಿಸಿದ ಅತಿ ದೊಡ್ಡ ಮೊತ್ತ. ಖುಲ್ನಾದಲ್ಲಿ 2015ರಲ್ಲಿ ಪಾಕಿಸ್ತಾನ ವಿರುದ್ಧ ಗಳಿಸಿದ್ದ 6 ವಿಕೆಟ್‌ಗೆ 555 ರನ್ ಆ ತಂಡದ ಈ ಹಿಂದಿನ ಗರಿಷ್ಠ ಮೊತ್ತ.

ಎಂಟು ಗಂಟೆ 42 ನಿಮಿಷ ಆಡಿ 341 ಎಸೆತ ಎದುರಿಸಿದ ರಹೀಂ 22 ಬೌಂಡರಿ, 1 ಸಿಕ್ಸರ್ ಬಾರಿಸಿದರು. ಇದು 89 ಟೆಸ್ಟ್‌ಗಳಲ್ಲಿ ರಹೀಂ ಅವರಿಗೆ 11ನೇ ಶತಕ.

ಏಳನೇ ವಿಕೆಟ್‌ಗೆ ಅವರು, ಮೆಹಿದಿ ಹಸನ್ ಮಿರಾಜ್ (77, 179ಎ) ಜತೆ 196 ರನ್ ಸೇರಿಸಿದರು. ಇದು ಪಾಕ್ ಎದುರು ಈ ವಿಕೆಟ್‌ಗೆ ದಾಖಲಾದ ಅತಿ ದೊಡ್ಡ ಜತೆಯಾಟ. 1976ರಲ್ಲಿ ನ್ಯೂಜಿಲೆಂಡ್‌ನ ವಾರೆನ್ ಲೀಸ್ ಮತ್ತು ರಿಚರ್ಡ್ ಹ್ಯಾಡ್ಲಿ 186 ರನ್ ಸೇರಿಸಿದ್ದು ಈ ಹಿಂದಿನ ದಾಖಲೆಯಾಗಿತ್ತು.

ಸ್ಕೋರುಗಳು

ಮೊದಲ ಇನಿಂಗ್ಸ್
ಪಾಕಿಸ್ತಾನ: 6 ವಿಕೆಟ್‌ಗೆ 448 ಡಿಕ್ಲೇರ್
ಬಾಂಗ್ಲಾದೇಶ: 167.3 ಓವರುಗಳಲ್ಲಿ 565 (ಶಾದ್ಮನ್ ಇಸ್ಲಾಂ 93, ಮುಷ್ಫಿಕುರ್ ರಹೀಂ 191, ಮೆಹಿದಿ ಹಸನ್ ಮಿರಾಜ್ 77; ನಸೀಮ್ ಶಾ 93ಕ್ಕೆ3)
ಎರಡನೇ ಇನಿಂಗ್ಸ್:
ಪಾಕಿಸ್ತಾನ: 10 ಓವರುಗಳಲ್ಲಿ 1 ವಿಕೆಟ್‌ಗೆ 23

ದಿನದಾಟ ಮುಗಿದಾಗ ಆತಿಥೇಯ ಪಾಕಿಸ್ತಾನ ಎರಡನೇ ಇನಿಂಗ್ಸ್‌ನಲ್ಲಿ 1 ವಿಕೆಟ್‌ಗೆ 23 ರನ್ ಗಳಿಸಿದ್ದು, ಒಂದಿಷ್ಟು ಆತಂಕ ಎದುರಿಸುತ್ತಿದೆ. ಪಾಕಿಸ್ತಾನ ವಿರುದ್ಧ ಆಡಿರುವ 13 ಟೆಸ್ಟ್‌ಗಳ ಪೈಕಿ 12ರಲ್ಲಿ ಬಾಂಗ್ಲಾ ಸೋತಿದೆ.

ಡಬ್ಲ್ಯುಟಿಸಿ ಅಂಕಪಟ್ಟಿಯಲ್ಲಿಯೂ ಪ್ರಗತಿ

ಪಾಕಿಸ್ತಾನದ ವಿರುದ್ಧದ ಮೊದಲ ಟೆಸ್ಟ್ ಗೆಲುವು ಸಾಧಿಸಿದ ಬಾಂಗ್ಲಾದೇಶ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ 2023-25 ಅಂಕಗಳ ಪಟ್ಟಿಯಲ್ಲಿ ಜಂಟಿ-ಐದನೇ ಸ್ಥಾನಕ್ಕೆ ಏರಿತು. ಮತ್ತೊಂದೆಡೆ, ಶಾನ್ ಮಸೂದ್ ನಾಯಕತ್ವದಲ್ಲಿ ಆಡಿದ ಎಲ್ಲ ನಾಲ್ಕು ಟೆಸ್ಟ್ ಪಂದ್ಯಗಳನ್ನು ಕಳೆದುಕೊಂಡಿರುವ ಪಾಕಿಸ್ತಾನ ಇದೀಗ ಎರಡನೇ-ಕೊನೆಯ ಸ್ಥಾನಕ್ಕೆ ಕುಸಿದಿದೆ. ಬಾಂಗ್ಲಾದೇಶ 2 ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿದೆ. ಅಂತಿಮ ಟೆಸ್ಟ್ ಆಗಸ್ಟ್ 30ರಿಂದ ಆರಂಭಗೊಳ್ಳಲಿದೆ. ಈ ಪಂದ್ಯವನ್ನು ಸೋತರೆ ಪಾಕ್ ತವರಿನಲ್ಲಿ ಸರಣಿ ಸೋಲಿನ ಮುಖಭಂಗ ಎದುರಿಸಲಿದೆ.

ಫೋಟೊಗೆ ಪೋಸ್ ಕೊಟ್ಟ ಸೂರ್ಯಕುಮಾರ್-ಮನು ಭಾಕರ್

ಗನ್ ಹಿಡಿದ ಸೂರ್ಯ ಬ್ಯಾಟ್ ಬೀಸಿದ ಮನು

ಮುಂಬೈ: ಪ್ಯಾರಿಸ್ ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಅವಳಿ ಪದಕ ಗೆದ್ದ ಮನು ಭಾಕರ್ ಅವರು ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರನ್ನು ಮುಂಬೈಯಲ್ಲಿ ಭೇಟಿಯಾಗಿದ್ದಾರೆ. ಉಭಯ ಕ್ರೀಡಾಪಟುಗಳು ವಿಭಿನ್ನ ಶೈಲಿಯಲ್ಲಿ ಫೋಟೊಗೆ ಪೋಸ್ ಕೊಟ್ಟಿರುವುದು ನೆಟ್ಟಿಗರ ಗಮನಸೆಳೆದಿದೆ. 'ಕ್ರಿಕೆಟ್ ಮೀಟ್ಸ್ ಶೂಟಿಂಗ್!' (Cricket Meets Shooting) ಎಂದು ನೆಟ್ಟಿಗರು ಈ ಫೋಟೊಗೆ ಕಮೆಂಟ್ ಮಾಡಿದ್ದಾರೆ.

ಒಲಿಂಪಿಕ್ಸ್ ಪದಕ ಗೆದ್ದ ಬಳಿಕ ಮೂರು ತಿಂಗಳ ವಿಶ್ರಾಂತಿ ಬಯಸಿರುವ ಮನು ಭಾಕರ್ ತಮ್ಮ ನೆಚ್ಚಿನ ಕಾರ್ಯ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಮುಂಬೈಗೆ ಆಗಮಿಸಿದ್ದ ವೇಳೆ ಕ್ರಿಕೆಟಿಗ ಸೂರ್ಯಕುಮಾರ್ ಭೇಟಿಯಾಗಿದ್ದಾರೆ. ಈ ವೇಳೆ ಸೂರ್ಯಕುಮಾರ್ ಗನ್ ಹಿಡಿದಂತೆ, ಮನು ಭಾಕರ್ ಬ್ಯಾಟ್ ಬೀಸಿದಂತೆ ನಗುಮುಗದಿಂದಲೇ ಫೋಟೊ ತೆಗೆಸಿಕೊಂಡಿದ್ದಾರೆ.

ಮನು ಭಾಕರ್ ಅವರು ಈ ಫೋಟೊವನ್ನು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದು, 'ಟೀಮ್ ಇಂಡಿಯಾದ ಮಿಸ್ಟರ್ 360 ಅವರೊಂದಿಗೆ ಹೊಸ ಕ್ರೀಡೆಯ ಕಲಿಕೆಯ ತಂತ್ರಗಳು' ಎಂದು ಬರೆದುಕೊಂಡಿದ್ದಾರೆ. ಒಲಿಂಪಿಕ್ಸ್ ಪದಕ ಗೆದ್ದಾಗ ಮನು ಭಾಕರ್‌ಗೆ ಸೂರ್ಯಕುಮಾರ್ ಎಕ್ಸ್‌ನಲ್ಲಿ ಪೋಸ್ಟ್ ಮಾಡುವ ಮೂಲಕ ಅಭಿನಂದನೆ ಸಲ್ಲಿಸಿದ್ದರು.

ಮುಂಬೈ ಇಂಡಿಯನ್ಸ್‌ಗೆ ಶ್ರೇಯಸ್ ಕೆಕೆಆರ್‌ಗೆ ಸೂರ್ಯ ನಾಯಕ

ಮುಂಬೈ: ಐಪಿಎಲ್ ಆಟ ಗಾರರ ಮೆಗಾ ಹರಾಜು ಪ್ರಕ್ರಿಯೆ ನಡೆಯುವ ಮುನ್ನವೇ ಕೆಲ ಫ್ರಾಂಚೈಸಿ ಗಳು ಸ್ಟಾರ್ ಆಟಗಾರರನ್ನು ತಮ್ಮ ತಂಡದತ್ತ ಸೆಳೆಯಲು ತೆರೆ ಮರೆಯಲ್ಲಿ ಭಾರೀ ಕಸರತ್ತು ಆರಂಭಿಸಿದ್ದಾರೆ.

ಹೌದು, ಭಾರತ ಟಿ20 ತಂಡದ ನಾಯಕ, ಪ್ರಸ್ತುತ ಮುಂಬೈ ಇಂಡಿಯನ್ಸ್ ತಂಡದ ಆಟಗಾರ ಸೂರ್ಯ ಕುಮಾರ್ ಯಾದವ್‌ಗೆ ಹಾಲಿ ಚಾಂಪಿಯನ್ ಕೆಕೆಆರ್ ತಂಡದಿಂದ ನಾಯಕತ್ವದ ಆಫರ್ ಬಂದಿದೆ ಎನ್ನಲಾಗಿದೆ.

ಮುಂಬೈ ಇಂಡಿಯನ್ಸ್ ಕೂಡ ತನ್ನ ನಾಯಕತ್ವದಲ್ಲಿ ಬದಲಾವಣೆಗೆ ಮುಂದಾಗಿದ್ದು, ತಂಡದ ಆಟಗಾರ ಸೂರ್ಯಕುಮಾರ್ ಅವರನ್ನು ಕೆಕೆಆರ್ ತಂಡಕ್ಕೆ ಬಿಟ್ಟುಕೊಟ್ಟು ಕೆಕೆಆರ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಅವರನ್ನು ಖರೀದಿಸಿ ನಾಯಕತ್ವ ನೀಡಲು ನಿರ್ಧರಿಸಿದೆ ಎನ್ನಲಾಗಿದೆ.

- **150 ಐಪಿಎಲ್ ಪಂದ್ಯಗಳಲ್ಲಿ 3594 ರನ್ ಬಾರಿಸಿರುವ ಸೂರ್ಯಕುಮಾರ್**
- **115 ಐಪಿಎಲ್ ಪಂದ್ಯಗಳಲ್ಲಿ 127 ರನ್ ಬಾರಿಸಿರುವ ಶ್ರೇಯಸ್ ಅಯ್ಯರ್**

ಬೆಂಚ್ ಪ್ರೆಸ್ ವಿಭಾಗದಲ್ಲಿ ರಾಷ್ಟ್ರೀಯ ದಾಖಲೆ ಬರೆದ ಮಂಗಳೂರಿನ ಪ್ರದೀಪ್ ಕುಮಾರ್ ಆಚಾರ್ಯ

ಚಾಂಪಿಯನ್‌ಶಿಪ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್

ಮಂಗಳೂರು: ಕೊಲ್ಕತ್ತಾದಲ್ಲಿ ನಡೆಯುತ್ತಿರುವ ಹಿರಿಯರ ರಾಷ್ಟ್ರೀಯ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ ಪ್ರದೀಪ್ ಕುಮಾರ್ ಆಚಾರ್ಯ, ಬೆಂಚ್ ಪ್ರೆಸ್ ವಿಭಾಗದಲ್ಲಿ 233.5 ಕೆಜಿ ಭಾರ ಎತ್ತುವ ಮೂಲಕ ಚಿನ್ನದ ಪದಕ ಗಳಿಸುವುದರೊಂದಿಗೆ ರಾಷ್ಟ್ರ ದಾಖಲೆಯನ್ನು ಬರೆದರು.

ಈ ದಾಖಲೆಯು ಮಹಾರಾಷ್ಟ್ರದ ನೀಲೇಶ್ ಗರಾಟೆ ಹೆಸರಲ್ಲಿತ್ತು. ಪ್ರದೀಪ್ ಕುಮಾರ್ ಆಚಾರ್ಯ 83 ಕೆಜಿ ದೇಹ ತೂಕ ವಿಭಾಗದಲ್ಲಿ ಭಾಗವಹಿಸಿದ್ದಾರೆ. ಇದೇ ಬರುವ ಅಕ್ಟೋಬರ್ 4 ರಿಂದ 13ರವರೆಗೆ ಸೌತ್ ಆಫ್ರಿಕಾದಲ್ಲಿ ನಡೆಯಲಿರುವ ಕಾಮನ್ವೆಲ್ತ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ ಇವರು ಮಂಗಳೂರಿನ ಹೆಸರಾಂತ ಕಶಾರ್ಪ್ ಫಿಟ್ನೆಸ್ ನಲ್ಲಿ ಜನರಲ್ ಮ್ಯಾನೇಜರ್ ಆಗಿ ಉದ್ಯೋಗದಲ್ಲಿದ್ದಾರೆ.

ಡಾಲರ್ಸ್ ಪೇಟೆಯಲ್ಲಿ ಬ್ಯಾಂಕ್ ದರೋಡೆ

ಕನ್ನಡದಲ್ಲೀಗ ಹೊಸ ಪ್ರತಿಭೆಗಳು ವಿಭಿನ್ನ ರೀತಿಯಾದ ಪ್ರಯತ್ನ ಮಾಡುತ್ತಿದ್ದಾರೆ. ಹಲವು ಉತ್ತಮ ಸಿನಿಮಾಗಳನ್ನು ಚಿತ್ರರಂಗಕ್ಕೆ ಕೊಡುಗೆಯಾಗಿ ನೀಡುತ್ತಿದ್ದಾರೆ. ಇದೇ ಭರವಸೆಯ ಮೂಲಕ ಮತ್ತೊಂದು ಹೊಸಬರ ಗುಂಪು ಚಿತ್ರರಂಗಕ್ಕೆ ಕಾಲಿಟ್ಟಿದೆ. ಡಾಲರ್ಸ್ ಪೇಟೆ ಮೂಲಕ ಮಾರ್ಫಿ, ಮದಗಜ ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿರುವ ಮೋಹನ್ ಎನ್ ಮುನಿನಾರಾಯಣಪ್ಪ ಸ್ವಾತಂತ್ರ ನಿರ್ದೇಶಕರಾಗಿ ಮೊದಲ ಹೆಜ್ಜೆ ಇಟ್ಟಿದ್ದಾರೆ. ಪೋಸ್ಟರ್ ಗಳ ಮೂಲಕ ನಿರೀಕ್ಷೆ ಹೆಚ್ಚಿಸಿರುವ ಈ ಚಿತ್ರದ ಬಿಡುಗಡೆ ದಿನಾಂಕ ಘೋಷಣೆಯಾಗಿದೆ.

ಸತ್ಯ ಘಟನೆ ಆಧರಿತ ಡಾಲರ್ಸ್ ಪೇಟೆ ಸಿನಿಮಾ ಸೆಪ್ಟಂಬರ್ 6ಕ್ಕೆ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ತಮಿಳುನಾಡಿನ ಬ್ಯಾಂಕ್‌ವೊಂದರ ಮ್ಯಾನೇಜರ್‌ನಿಂದ 13 ಕೋಟಿ ರೂ. 100 ಜನಕ್ಕೆ ಮಿಸ್ ಆಗಿ ಡೆಪಾಸಿಟ್ ಆಗುತ್ತದೆ. ಅದು ಹೇಗೆ, ಏನು ಅನ್ನುವದರ ಸುತ್ತ ಈ ಸಿನಿಮಾ ಸಾಗುತ್ತದೆ.

ಹೈಪರ್ ಲಿಂಕ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಸಿನಿಮಾದಲ್ಲಿ ಲೂಸಿಯಾ ಪವನ್ ಪತ್ನಿ ಸೌಮ್ಯ ಜಗನ್ ಮೂರ್ತಿ, ಮೆಟ್ರೋ ಸಾಗಾ ಖ್ಯಾತಿಯ ಆಕರ್ಷ್ ಕಮಲ, ವೆಂಕಟ್ ರಾಜ್, ಕುಶಾಲ್ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದು, ದಿಯಾ ಪೃಥ್ವಿ ಅಂಬರ್ ಗೆಸ್ಟ್ ಅಪಿಯರೆನ್ಸ್ ಚಿತ್ರದಲ್ಲಿದೆ. ಉಳಿದಂತೆ ದತ್ತು ಬಣಕರ್, ಕೌಶಿಕ್, ರಾಘು ರಾಮಕೊಪ್ಪ, ಹೊನ್ನವಳ್ಳಿ ಕೃಷ್ಣ, ಡ್ರಾಮಾ ಜೂನಿಯರ್ಸ್ ಮಹೇಂದ್ರ ಒಳಗೊಂಡ ಕಲಾಬಳಗ ಚಿತ್ರದಲ್ಲಿದೆ.

ಸೂರಜ್ ಜೋಯಿಸ್ ಸಂಗೀತ ನಿರ್ದೇಶನ, ಆನಂದ್ ಸುಂದರೇಶ ಛಾಯಾಗ್ರಹಣ, ಮಹೇಶ್ ತೊಗಟ್ಟ ಸಂಕಲನ, ಅರ್ಜುನ್ ರಾಜ್ ಮತ್ತು ನರಸಿಂಹ ಸಾಹಸ ನಿರ್ದೇಶನ, ರಮೇಶ್ ಎಸ್, ಮನೋಹರ ಸಹಬರವಣಿಗೆ ಸಿನಿಮಾಕ್ಕಿದೆ. ಪೆಂಟ್ರಿಕ್ಸ್ ಎಂಟರ್ಟೈನ್ಮೆಂಟ್ ಬ್ಯಾನರ್ ನಡಿ ಪೂಜಾ ಟಿ.ವೈ ಚಿತ್ರ ನಿರ್ಮಾಣ ಮಾಡಿದ್ದಾರೆ. ಬೆಂಗಳೂರು, ಮಂಗಳೂರು ಸುತ್ತಮುತ್ತ ಡಾಲರ್ಸ್ ಪೇಟೆ ಸಿನಿಮಾ ಚಿತ್ರೀಕರಣ ನಡೆಸಲಾಗಿದೆ.

ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಇದೇ ಸೆಪ್ಟೆಂಬರ್ 29 ರಂದು ತೆರೆಡಗೆ ಬರಲಿದೆ ಎಂಬ ಮಾಹಿರಿ ಇದೆ. ಈಗಾಗಲೇ ಸಿನಿಮಾದ ಚಿತ್ರೀಕರಣ ಮುಕ್ತಾಯವಾಗಿದ್ದು, ತೆರೆಗೆ ಬರಲು ಸಿದ್ಧವಾಗಿದೆ.

ಸದ್ದು ಮಾಡುತ್ತಿದೆ ಸೌಂಡ್ ಆಫ್ ಯುಐ

ರಿಯಲ್ ಸ್ಟಾರ್ ಉಪೇಂದ್ರ ನಟಿಸಿ ನಿರ್ದೇಶಿಸುತ್ತಿರುವ ಯುಐ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಚಿತ್ರ ಈ ಚಿತ್ರದ ಮ್ಯೂಸಿಕಲ್ ಜರ್ನಿಯ ಮೊದಲ ಝಲಕ್ ಸೌಂಡ್ ಆಫ್ ಯುಐ ಬಿಡುಗಡೆಯಾಗಿದೆ. ಈ ಮ್ಯೂಸಿಕ್ ಝಲಕ್ ನಲ್ಲಿ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಮೋಡಿ ಮಾಡಿದ್ದಾರೆ. ಮುಂದೆ ಬಿಡುಗಡೆಯಾಗಲಿರುವ ಹಾಡುಗಳ ಬಗ್ಗೆ ಕುತೂಹಲ ಹೆಚ್ಚಿಸಿದೆ.

ಯುಐ ಚಿತ್ರದ ಮ್ಯೂಸಿಕ್ ಗೆ ಸಂಬಂಧ ಪಟ್ಟ ಕೆಲಸಗಳು ಅಜನೀಶ್ ಲೋಕನಾಥ್ , ಸಿ.ಆರ್ ಬಾಬಿ ಹಾಗೂ ಉಪೇಂದ್ರ ಸಾರಥ್ಯದಲ್ಲಿ ಹಂಗೇರಿಯ ಬುಡಾಪೆಸ್ಟ್‌ನಲ್ಲಿ ನಡೆದಿದೆ ತೊಂಬತ್ತಕ್ಕೂ ಅಧಿಕ ನುರಿತ ಸಂಗೀತಗಾರರು ಲೈವ್ ನಲ್ಲೇ ಕಾರ್ಯ ನಿರ್ವಹಿಸಿರುವುದು ವಿಶೇಷ. ಚಿತ್ರದಲ್ಲಿ ಬಿಜಿಎಂ ಪ್ರಮುಖಪಾತ್ರ ವಹಿಸಿದೆ. ಹಂಗೇರಿಯಲ್ಲಿ ನಡೆದ ಈ ಮ್ಯೂಸಿಕ್ ಜರ್ನಿಯ ಒಂದು ಝಲಕ್ ಅನ್ನು ಚಿಕ್ಕ ಪ್ರೋಮೊ ಮೂಲಕ ಸೌಂಡ್ ಆಫ್ ಯುಐ ಹೆಸರಿನಲ್ಲಿ ಚಿತ್ರತಂಡ ರಿಲೀಸ್ ಮಾಡಿದೆ.

ಹಲವು ವರ್ಷಗಳ ನಂತರ ಉಪೇಂದ್ರ ಅವರು ನಿರ್ದೇಶಿಸಿರುವ ಯುಐ ಚಿತ್ರವನ್ನು ಲಹರಿ ಫಿಲಂಸ್ ಹಾಗೂ ವೀನಸ್ ಎಂಟರ್ ಪ್ರೈಸಸ್ ಲಾಂಛನದಲ್ಲಿ ಜಿ.ಮನೋಹರನ್ ಹಾಗೂ ಕೆ.ಪಿ.ಶ್ರೀಕಾಂತ್ ನಿರ್ಮಿಸಿದ್ದಾರೆ. . ಬಹು ನಿರೀಕ್ಷೆಯಿರುವ ಯುಐ ಚಿತ್ರ ವಿಶ್ವದಾದ್ಯಂತ ವಿಜಯಪತಾಕೆ ಹಾರಿಸಲಿದೆ.ಉಪೇಂದ್ರ ಅವರಿಗೆ ಜತೆಯಾಗಿ ರೀಷ್ಮಾ ನಾಣಯ್ಯ ನಟಿಸಿದ್ದಾರೆ.

ರೈತರ ಹೋರಾಟಕ್ಕೆ ದನಿಯಾದ ರಾಘು

ವಿಜಯ್ ರಾಘವೇಂದ್ರ, ಹೊಸ ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಆಕಾಶ ಪಿಕ್ಚರ್ಸ್ ಬ್ಯಾನರ್ ನಲ್ಲಿ ಪ್ರಕಾಶ್ ಸಿದ್ದಪ್ಪ ನಿರ್ಮಿಸುತ್ತಿರುವ ಹೊಸ ಚಿತ್ರವನ್ನು ರೋಮಿಯೋ, ರಾಗ ಸೇರಿದಂತೆ ಹಲವು ಸೂಪರ್ ಹಿಟ್ ಚಿತ್ರಗಳ ನಿರ್ದೇಶಕ ಪಿ.ಸಿ.ಶೇಖರ್ ನಿರ್ದೇಶಿಸುತ್ತಿದ್ದಾರೆ. ವಿಜಯ ರಾಘವೇಂದ್ರ, ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ರೈತರ ಸಮಸ್ಯೆಗಳು, ಅದರ ಹಿಂದಿನ ಹುನ್ನಾರ ಇವೆಲ್ಲವೂ ಚಿತ್ರದಲ್ಲಿದೆ.

ರೈತರ ಕುರಿತ ವಿಷಯ ನನ್ನ ಹೃದಯಕ್ಕೆ ತುಂಬಾ ಹತ್ತಿರವಾಗಿದೆ ಮತ್ತು ಪಿ.ಸಿ.ಶೇಖರ್ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದರು. ಈಗ ಅವರು ಅಲಯನ್ಸ್ ಯೂನಿವರ್ಸಿಟಿಯ ಫಿಲ್ಮ್ ಮೇಕಿಂಗ್ ಕೋರ್ಸ್‌ನ ಸಹಯೋಗದಲ್ಲಿ ಪಿಕ್ಚರ್ಸ್ ಬ್ಯಾನರ್ ನಲ್ಲಿ ಮೊದಲ ಚಿತ್ರವನ್ನು ನಿರ್ದೇಶಿಸುತ್ತಿರುವುದು ಸಂತೋಷದ ಸಂಗತಿ. ಅಲಯನ್ಸ್‌ನಲ್ಲಿ ಕಲಿತು ಈಗ ಬೇರೆ ಬೇರೆ ಉದ್ಯೋಗದಲ್ಲಿರುವ ಹಳೆ ವಿದ್ಯಾರ್ಥಿಗಳು ಚಿತ್ರ ನಿರ್ಮಾಣದಲ್ಲಿ ನಮ್ಮೊಂದಿಗಿದ್ದಾರೆ. ಸದ್ಯದಲ್ಲೇ ಚಿತ್ರೀಕರಣ ಆರಂಭಿಸುವ ಪ್ರಯತ್ನ ನಡೆಯುತ್ತಿದೆ.

-ಪ್ರಕಾಶ್ ಸಿದ್ದಪ್ಪ ನಿರ್ಮಾಪಕ

ರೈತ ಮತ್ತು ಸಾರ್ವಜನಿಕರ ನಡುವಿನ ಸಂಬಂಧದ ಜತೆಗೆ ದೇಶಕ್ಕೆ ರೈತನ ಮಹತ್ವವನ್ನು ತೋರಿಸುವ ಪ್ರಯತ್ನವನ್ನು ಈ ಚಿತ್ರದಲ್ಲಿ ಮಾಡಲಾಗುವುದು. ಕಥೆ ಬರೆಯುವಾಗ ವಿಜಯ ರಾಘವೇಂದ್ರರನ್ನು ಗಮನದಲ್ಲಿಟ್ಟುಕೊಂಡು ಕಥೆ ಬರೆದಿದ್ದೆ. ಅವರಿಗೆ ಕಥೆ ಹೇಳಿದಾಗ ಅವರು ಇಷ್ಟಪಟ್ಟು ನಟಿಸಲು ಒಪ್ಪಿದ್ದು ತುಂಬಾ ಖುಷಿ ತಂದಿದೆ. ಚಿತ್ರವು ಅದ್ದೂರಿ ತಾರಾಗಣ ಮತ್ತು ತಾಂತ್ರಿಕ ಸಿಬ್ಬಂದಿಯನ್ನು ಹೊಂದಿದೆ. ಇಷ್ಟು ವರ್ಷಗಳ ನನ್ನ ಸಿನಿ ಪಯಣದಲ್ಲಿ ಇದೊಂದು ವಿಭಿನ್ನ ಶೈಲಿಯ ಸಿನಿಮಾ.

- ಪಿ.ಸಿ.ಶೇಖರ್ ನಿರ್ದೇಶಕ

ಸೆಪ್ಟೆಂಬರ್ ನಲ್ಲಿ ಕಾಲಾಪತ್ಥರ್

ಭುವನ್ ಮೂವೀಸ್ ಲಾಂಛನದಲ್ಲಿ ಭುವನ್ ಸುರೇಶ್ ಹಾಗೂ ನಾಗರಾಜ್ ಬಿಲ್ಲಿನಕೋಟೆ ನಿರ್ಮಿಸಿರುವ, ವಿಕ್ಕಿ ವರುಣ್ ನಿರ್ದೇಶಿಸಿ, ನಾಯಕನಾಗೂ ನಟಿಸಿರುವ ಕಾಲಾಪತ್ಥರ್ ಸೆಪ್ಟೆಂಬರ್ ನಲ್ಲಿ ತೆರೆಗೆ ಬರಲಿದೆ.

ನಾನು ಕನ್ನಡ ಚಿತ್ರರಂಗಕ್ಕೆ ಬಂದು ಹದಿನೈದು ವರ್ಷಗಳಾಯಿತು. ಸೆಪ್ಟೆಂಬರ್ ಗೆ ಸೂರಿ ಅವರ ನಿರ್ದೇಶನದಲ್ಲಿ ನಾನು ನಾಯಕನಾಗಿ ನಟಿಸಿದ್ದ ಕೆಂಡಸಂಪಿಗೆ ಚಿತ್ರ ತೆರೆಕಂಡು ಒಂಬತ್ತು ವರ್ಷಗಳಾಗುತ್ತಿದೆ. ನಾನು ನಿರ್ದೇಶಿಸಿ, ನಾಯಕನಾಗೂ ನಟಿಸಿರುವ ಕಾಲಾಪರ್ ಕೂಡ ಸೆಪ್ಟೆಂಬರ್ ನಲ್ಲೇ ಬಿಡುಗಡೆಯಾಗುತ್ತಿರುವುದು ಖುಷಿಯಾಗಿದೆ ಎಂದು ಭುವನ್ ಸುರೇಶ್ ಹೇಳಿದರು. ಸತ್ಯ ಪ್ರಕಾಶ್ ಕಥೆ ಬರೆದಿದ್ದಾರೆ. ವಿಜಾಪುರದ ಬಳಿ ಹೆಚ್ಚು ಚಿತ್ರೀಕರಣವಾಗಿದೆ. ಆಲಮಟ್ಟಿಯ ಹಿನ್ನೀರಿನ ಜೈನಾಪುರ ಎಂಬ ಸ್ಥಳದಲ್ಲಿ ಚಿತ್ರೀಕರಣ ನಡೆಸಲಾಗಿದೆ.

ನನ್ನದು ಈ ಚಿತ್ರದಲ್ಲಿ ಶಿಕ್ಷಕಿಯ ಪಾತ್ರ. ಗಂಗ ನನ್ನ ಪಾತ್ರದ ಹೆಸರು. ನನ್ನ ಪಾತ್ರ ಹಾಗೂ ಚಿತ್ರ ಎರಡು ಚೆನ್ನಾಗಿದೆ. ನನಗೆ ಈಗಷ್ಟೇ ವಿಕ್ಕಿ ಅವರು ಚಿತ್ರದ ತುಣುಕು ತೋರಿಸಿದ್ದರು. ಅದನ್ನು ನೋಡಿದ ಮೇಲೆ ನಾನಂತೂ ಚಿತ್ರ ನೋಡಲು ಕಾತುರದಿಂದ ಕಾಯುತ್ತಿದ್ದೇನೆ.

- ಧನ್ಯಾ ರಾಮಕುಮಾರ್ ನಟಿ